

ಡಾ. ಎಸ್. ಎಲ್. ಭೈರಪ್ಪ
ಅವರ
ಕಾದಂ-ಕಥನಗಳು

ಸಂ. ಶ್ರೀನಿವಾಸ ಹಾವನೂರ

ಡಾ. ಎಸ್.ಎಲ್.ಭೈರಪ್ಪ ಅವರ ಕಾದಂ-ಕಥನಗಳು

ವಂಶವೃಕ್ಷ; ಸಾಕ್ಷಿ; ತಂತು; ದಾಟು ಮತ್ತು ಪರ್ವ
ಈ ಕಾದಂಬರಿಗಳಲ್ಲಿಯ ರಸವತ್ತಾದ ಕಥಾನಕಗಳು.

ಶಬ್ದಾಂಕನ : ಡಾ. ಶ್ರೀನಿವಾಸ ಹಾವನೂರ

ಪ್ರಸಾಧನ ಪ್ರಕಾಶನ,
ಮಂಗಳೂರು-೪
೧೯೯೯

Dr. S. L. Bhairappa avara Kaadam - Kathanagalu.
(Story Elements from S.L. Bhairappa's Novels : Vamshavraksha; Saakshi; Tantu; Daatu and Parva).
Compiled by Shrinivasa Havanur. Published by Prasadhana Prakashana, 'Prasadhana' Bharati Nagar, Bijai, Mangalore - 575 004.
Karnataka.
1999.
Price : Rs. 60 /-

ಪ್ರತಿಗಳು ದೊರೆಯುವ ಸ್ಥಳ :

ಡಾ. ಶ್ರೀನಿವಾಸ ಹಾವನೂರ, "ಆಶ್ರಯ", 36, ವಿನಾಯಕ ಲೇಔಟ್,
ವಿಜಯನಗರ, ಬೆಂಗಳೂರು - 560 040, ಫೋನ್ - 3384529

ಪ್ರಸಾಧನ ಪ್ರಕಾಶನ, "ಪ್ರಸಾಧನ " ಭಾರತಿ ನಗರ, ಬಿಜೈ,
ಮಂಗಳೂರು - 575 004. ಫೋನ್ - 212087

ಸಾಹಿತ್ಯ ಭಂಡಾರ, ಜಂಗಮ ಮೇಸ್ತ್ರಿ ಗಲ್ಲಿ, ಬಳೇಪೇಟೆ,
ಬೆಂಗಳೂರು - 560 053. ಫೋನ್- 2877618

ನವಕರ್ನಾಟಕ ಪಬ್ಲಿಕೇಶನ್ಸ್, ಎಂಬೆಸ್ಸಿ ಕಟ್ಟಡ, ಕ್ರೆಸೆಂಟ್ ರಸ್ತೆ,
ಕುಮಾರಾ ಪಾರ್ಕ್, ಬೆಂಗಳೂರು - 560 001.

ಅಕ್ಷರ ಸಂಯೋಜನೆ : "ಪ್ರಸಾಧನ್ " ಕಂಪ್ಯೂಟರ್ಸ್, ಮಂಗಳೂರು.
ಮುದ್ರಣ : ವೈಭವಿ ಗ್ರಾಫಿಕ್ಸ್, ಬೆಂಗಳೂರು.

ಪೀಠಿಕೆ

ಕೆಲವು ವರ್ಷಗಳ ಹಿಂದೆ 'ಕಸ್ತೂರಿ' ಮಾಸಪತ್ರಿಕೆಯಲ್ಲಿ ಡಾ. ಭೈರಪ್ಪ ಅವರ ಮೂರು ಕಾದಂಬರಿಗಳ ಕಥನಗಳನ್ನು ಪ್ರಕಟಿಸಿದ್ದೆ. ಅದಕ್ಕೆ ಇನ್ನೆರಡನ್ನು ಸೇರಿಸಿ ಈ ಸಂಕಲನವನ್ನು ಹೊರತರಲಾಗಿದೆ.

'ಭೈರಪ್ಪನವರ ಅಧ್ಯಕ್ಷತೆಯ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಇಂಥ ಸಂಕಲನವನ್ನು ಪ್ರಕಟಿಸಬೇಕು. ಅದರಿಂದ ಅವರ ಕಾದಂಬರಿಗಳನ್ನು, ಆಮೇಲೆ ಓದತಕ್ಕುದು ಎಂಬುದಕ್ಕೆ ಪ್ರಚೋದನೆ ದೊರೆಯುತ್ತದೆ' ಎಂಬುದಾಗಿ ಪ್ರೊ. ಜಿ. ಅಶ್ವತ್ಥನಾರಾಯಣರು ಸೂಚಿಸಿದರು. ಇನ್ನೊಬ್ಬ ಮಿತ್ರ ಡಾ. ನಾ. ದಾಮೋದರ ಶೆಟ್ಟಿ ಅವರು ದನಿಗೂಡಿಸಿ ಅದರ ಮುದ್ರಣ, ಪ್ರಕಾಶನ ಕಾರ್ಯದಲ್ಲಿ ಕೈಗೂಡಿಸಿದರು.

'ಕಾದಂ-ಕಥನ' ಎನ್ನುವುದಕ್ಕೆ ತುಸು ವಿವರಣೆ ಕೊಡಬೇಕು. ಇಲ್ಲಿಯವು ಮೂಲಕೃತಿಗಳ ಸಂಗ್ರಹ ರೂಪವೇನಲ್ಲ. ಕಾದಂಬರಿಕಾರರ ಶಬ್ದಗಳಲ್ಲಿಯೇ ಆ ಕೃತಿಗಳ ರಸವತ್ತಾದ ಭಾಗಗಳನ್ನು ಕಥನಿಸುವುದು ಇವುಗಳ ಆಶಯವಾಗಿದೆ. ಇಡಿಯಾಗಿ ಕಾದಂಬರಿಯನ್ನು ಓದುವುದಕ್ಕೆ ಇವು ಪ್ರವೇಶಿಕೆ ಇದ್ದಂತೆ.

ಬೆಂಗಳೂರು

ಇತಿ,

೧೮-೨-೧೯೯೯

ಶ್ರೀನಿವಾಸ ಹಾವನೂರ

ಪರಿವಿಡಿ

ಕಾತ್ಯಾಯನಿ

('ವಂಶವೃಕ್ಷ'ದಿಂದ)

(ಇಲ್ಲಿ ಕೊಟ್ಟಿರುವುದು "ವಂಶವೃಕ್ಷ"ದ ಪ್ರಧಾನ ಪಾತ್ರಗಳಲ್ಲಿ ಒಬ್ಬಳಾದ ಕಾತ್ಯಾಯನಿಯ ಜೀವನದ ಪೂರ್ವಾರ್ಧವನ್ನೊಳಗೊಂಡದ್ದು. ಉತ್ತರಾರ್ಧದಲ್ಲಿ ಅವಳ ಜೀವನದ ದುರಂತವನ್ನು ಕಾಣುತ್ತೇವೆ. ಆದರೆ ಇಲ್ಲಿ ಸಂಗ್ರಹಿಸಿರುವ ಅಂಶವೇ ಒಂದು ಪರಿಪೂರ್ಣ ಕಥಾನಕವೆನಿಸುವಂತಿದೆ.)

ಮನೆಯಲ್ಲಿ ವಾತ್ಸಲ್ಯದಿಂದ ಕಾಣುವ ಅತ್ತೆ ಮಾವಂದಿರು, ಮುದ್ದಾದ ಮಗು, ಮತ್ತು ಜೀವನದ ಇತರ ಸೌಕರ್ಯಗಳಿದ್ದರೂ ಕಾತ್ಯಾಯನಿಗೆ ಜೀವನವು ಬೇಸರವೆನಿಸುತ್ತಿತ್ತು. ಸತ್ತು ಹೋದ ಪತಿಯ ನೆನಪಿನ ದುಃಖವು ಈಗ ಮೊದಲಿನಷ್ಟು ಉತ್ಕಟವಾಗಿರಲಿಲ್ಲ. ಪತಿಯು ಸತ್ತ ಹೊಸದರಲ್ಲಿ ಕಾತ್ಯಾಯನಿಯ ತಂದೆ ಕೆಲವು ದಿನ ಅವಳನ್ನು ಶ್ರೀರಂಗಪಟ್ಟಣಕ್ಕೆ ಕರೆದುಕೊಂಡು ಹೋಗಿದ್ದರು. ಮನೆಯಲ್ಲಿ ತನಗಿಂತ ಕೇವಲ ಎಂಟು ವರ್ಷಕ್ಕೆ ದೊಡ್ಡವಳಾದ ಮಲತಾಯಿ, ಅಳಿಯ ಸತ್ತ ಮೇಲೆ ಮಗಳು ಮಡಿಯಾದರೂ ಒಳ್ಳೆಯದೇ ಎಂಬ ಅಭಿಪ್ರಾಯವನ್ನು ತಳೆದ ಲಾಯರ್ ತಂದೆ- ಈ ವಾತಾವರಣದಿಂದ ಅವಳಿಗೆ ಅಲ್ಲಿ ಹಾಯೆನಿಸಲಿಲ್ಲ.

ಒಮ್ಮೊಮ್ಮೆ ಅವಳಿಗೆ ತನ್ನ ಕಾಲೇಜು ಜೀವನ ನೆನಪಿಗೆ ಬರುವುದು. ಕಾಲೇಜಿನಲ್ಲಿ ಸೂಕ್ಷ್ಮಬುದ್ಧಿಯ ವಿದ್ಯಾರ್ಥಿನಿ ಎಂದು ಅಧ್ಯಾಪಕರ ಮೆಚ್ಚುಗೆ ಪಡೆದಿದ್ದಳು. ಸೀನಿಯರ್ ಇಂಟರ್‌ಮೀಡಿಯೇಟ್

ತರಗತಿಯಲ್ಲಿದ್ದಾಗ, ಒಮ್ಮೆ ಹುಡುಗಿಯರು ಆಡಿದ ಸಾವಿತ್ರಿ ಸತ್ಯವಾನ್ ನಾಟಕದಲ್ಲಿ, ಅವಳ ಸಾವಿತ್ರಿಯ ಪಾತ್ರವನ್ನು ನೋಡಿದ ಎಲ್ಲರೂ ಕಣ್ಣೀರಿಡುವಷ್ಟು ಉತ್ತಮವಾಗಿ ಅಭಿನಯಿಸಿದ್ದಳು. ರಂಗದ ಮೇಲೆ ಯಮನಿಂದ ಸೆಳೆಯಲ್ಪಟ್ಟ ಸತ್ಯವಾನನನ್ನು ಬಿಡದೆ ಉಳಿಸಿಕೊಂಡ ಅವಳು ನಿಜಜೀವನದಲ್ಲಿ ವಿವಾಹವಾದ ಎರಡು ವರ್ಷಕ್ಕೇ ಪತಿಯನ್ನು ಕಳೆದುಕೊಂಡಿದ್ದಳು. ಇಂಟರ್‌ಮೀಡಿಯೇಟ್ ತೇರ್ಗಡೆಯಾಗುವಷ್ಟರಲ್ಲಿ ಅವಳ ಮದುವೆಯಾಗಿ ಮುಂದಿನ ಓದು ನಿಂತುಹೋಗಿತ್ತು.

ಒಂದೊಂದು ದಿನ ಅವಳೊಬ್ಬಳೇ ಹಿತ್ತಿಲಿನ ಕೈತೋಟಕ್ಕೆ ಹೋಗಿ ಗಿಡಗಳಿಗೆ ಪಾತಿ ಮಾಡುವಳು. ಬಾವಿಯಿಂದ ನೀರು ಎಳೆದು ಗಿಡಗಳಿಗೆ ಹುಯ್ಯುವಳು. ಅವರ ಮನೆಯ ಹಿಂಬಾಗದ ಮಲ್ಲಿಗೆ ಜಾಜಿಯ ಬಳ್ಳಿಗಳು ತಂಪಾದ ಹೂವನ್ನು ಸಮೃದ್ಧವಾಗಿ ಬಿಡುತ್ತಿದ್ದುವು. ಕಾತ್ಯಾಯನಿ ಅವುಗಳಿಗೆ ಸಾಕೆನಿಸುವಷ್ಟು ನೀರು ಎರೆಯುವಳು. ಅವಳ ಪತಿ ಬದುಕಿದ್ದಾಗ ಅವರಿಬ್ಬರು ಮಲ್ಲಿಗೆಯ ಬಳ್ಳಿಗೆ ನೀರೆರೆಯುತ್ತಿದ್ದರು. ಸೊಂಪಾಗಿ ಬೆಳೆದು ಒಂದು ಗುಡಿಸಿಲಿನಂತೆ ಸುತ್ತುವರಿದು ಹಬ್ಬಿರುವ ಮಲ್ಲಿಗೆಯ ಸಂದಿನಲ್ಲಿ ಅವಳು ಹೂ ಕೊಯ್ಯುತ್ತಿದ್ದಾಗ ಅವನು ಅನೇಕ ಸಲ ಅವಳನ್ನು ಕೀಟಲೆ ಮಾಡುತ್ತಿದ್ದ. ಗಂಡನ ಕೀಟಲೆಗೆ ನುಸಿಕೋಪವನ್ನು ತೋರಿಸುತ್ತಿದ್ದರೂ ಅದು ಅವಳಿಗೆ ಪ್ರಿಯವಾಗಿತ್ತು. ಈಗ ಹಿತ್ತಿಲಿಗೆ ಬಂದರೆ ಅದೇ ನೆನಪು ಮರುಕಳಿಸುತ್ತಿತ್ತು.

ಈಗ ಅವಳಿಗೆ ಹೊಸದೊಂದು ಯೋಚನೆ ಮನಸ್ಸಿನಲ್ಲಿ ಬಂದಿತ್ತು. ನಂಜನಗೂಡಿನಿಂದ ಎಷ್ಟೋ ಜನ ಹುಡುಗಿಯರು ದಿನವೂ ಮೈಸೂರಿಗೆ ಹೋಗಿ ಕಾಲೇಜಿನಲ್ಲಿ ಓದುತ್ತಾರೆ. ತಾನು ಏಕೆ ಹೋಗಿ, ಬಿ.ಎ. ವರೆಗೆ ಓದಬಾರದು? ಈ ಯೋಚನೆಯ ಹಿಂದೆ ಮತ್ತೊಂದು ಆಶೆಯು ಅವಳ ಮನಸ್ಸಿನಲ್ಲಿ ಸುಳಿಯುತ್ತಿತ್ತು. ಅವಳ ಪತಿಯೂ ಬಿ.ಎ. ಪರೀಕ್ಷೆಗೆ ಕುಳಿತುಕೊಳ್ಳಲಾಗಲಿಲ್ಲ, ಅವರ ಆಶಯವನ್ನು ತಾನು ಪೂರ್ಣಗೊಳಿಸಬೇಕು, ಎಂದು. ಮನೆಯಲ್ಲಿ ಇನ್ನೂ ಗಂಡನ ಪುಸ್ತಕಗಳು ಮಹಡಿಯ ಮೇಲಿನ ಕಪಾಟಿನಲ್ಲಿದ್ದುವು.

ಪುನಃ ಕಾಲೇಜಿಗೆ ಹೋಗಿ ಓದುವ ಆಶೆ ಕ್ರಮೇಣ ಹೆಚ್ಚಿದಾಗ, ಒಂದು ದಿನ ಮಾವನವರೊಡನೆ ಅದರ ಪ್ರಸ್ತಾಪ ಮಾಡಿದಳು. ಅದಕ್ಕೆ ಅವರು ---

"ಮಗೂ, ಇನ್ನು ನೀನು ದಿನಾ ಸಕಾಲದಲ್ಲಿ ಊಟ ತಿಂಡಿ ಇಲ್ಲದೆ ಗೈಲಿನಲ್ಲಿ ತಿರುಗಿ ಹೋಗಿ ಓದೋ ಪ್ರಮೇಯವೇನು? ಮುಂದೆ ಚೀನಿ ದೊಡ್ಡೋನಾದ ಮೇಲೆ ಹೋಗಿ ಓದಿ ಬರಲಿ," ಎಂದರು.

"ಅವರು ಈ ಸಲ ಖಂಡಿತ ಬಿ.ಎ. ಮುಗಿಸುತ್ತಿದ್ದರು. ನಮ್ಮ ಅದೃಷ್ಟ ಹೀಗಾಯಿತು. ಅಷ್ಟನ್ನು ಅವರ ಹೆಸರಿನಲ್ಲಿ ನಾನಾದರೂ ಮಾಡಿದರೆ ಮನಸ್ಸಿಗೆ ಒಂದು ಪರಾ ಸಮೃದ್ಧಿ" ಎಂದು ಹೇಳಿ ಸುಮ್ಮನಾದಳು.

ಯಾವ ವಿಷಯವನ್ನೂ ಅಲಕ್ಷ್ಯದಿಂದ ತಳ್ಳಿ ಹಾಕುವುದು ಶ್ರೋತ್ರಿಯವರ ಸ್ವಭಾವವಲ್ಲ. ಸೊಸೆಯ ನೀರಸ ಜೀವನವನ್ನು ಇತ್ತೀಚಿನ ಕೆಲವು ದಿನಗಳಿಂದ ನೋಡುತ್ತಿದ್ದರು. ಕಾಲೇಜಿಗೆ ಹೋಗಿ ಬರುವುದರಿಂದಲಾದರೂ ಅವಳ ಮನಸ್ಸು ಬೇರೊಂದು ವಿಷಯದಲ್ಲಿ ಪ್ರವೃತ್ತವಾದರೆ ಒಳ್ಳೇಯದೇ ಎಂದು ಅವರೂ ಯೋಚಿಸಿದರು.

"ಇಷ್ಟೆಲ್ಲ ಆದ ಮೇಲೆ ಇನ್ನೆಂಥ ಕಾಲೇಜು? ಮನೇಲಿ ಮಗೂ ನೋಡ್ಕೊಂಡು ತೆಪ್ಪಗಿದ್ದರೆ ಆಗದೆ? ಮಡಿಯಾದರೂ ಆಗಿದ್ದರೆ ಮಾಡೋಕೆ ಕೈತುಂಬಾ ದೇವರ ಮನೆ ಕೆಲಸವಿರುತ್ತಿತ್ತು. ಏನೋ ಈಗಿನ ಕಾಲದ ಹುಡುಗಿ, ಬೇಡುತ ನೀವು ಅಂದಿರಿ. ನನಗೂ ಹಾಗೆ ಹೇಳೋಕೆ ಮನಸ್ಸು ಬರಲಿಲ್ಲ," ಎಂದು ಅತ್ತೆ ಭಾಗೀರತಮ್ಮ ಯಜಮಾನರಿಗೆ ಹೇಳಿದರು.

ಆಗ ಶ್ರೋತ್ರಿಗಳು "ಚಿಕ್ಕ ವಯಸ್ಸಿಗೆ ತಲೆ ತೆಗೆದು ಕೂರಿಸೋ ಕ್ರಮದಿಂದ ಯಾರಿಗೆ ತಾನೇ ಸಂತೋಷವಾಗುತ್ತೆ? ಅದು ಅಂತಃ ಪ್ರೇರಣೆಯಿಂದ ಹುಟ್ಟುವವರೆಗೆ, ಅದನ್ನು ಹೊರಗಿನಿಂದ ಯಾರೂ ಪ್ರೇರಿಸಬಾರದು" ಎಂದರು.

ಜೂನ್ ೨೫ ಕಾಲೇಜು ಆರಂಭವಾಗುವ ದಿನ ಶ್ರೋತ್ರಿಯರ ಗುರುಗಳೂ ಪ್ರಾಧ್ಯಾಪಕರಾದ ಡಾ. ಸದಾಶಿವರಾಯರು ಈಗಾಗಲೇ ಅರ್ಜಿಯ ಫಾರ್ಮನ್ನು ಕಳಿಸಿದ್ದರು. ಅದನ್ನು ತುಂಬಿ ಪೋಷಕರ ರುಜುವಿನ ಸ್ಥಳದಲ್ಲಿ

ಶ್ರೋತ್ರಿಯರ ಸಹಿಯನ್ನು ಹಾಕಿಸಿಕೊಂಡು, ಭಾಗೀರತಮ್ಮನವರು ಹೇಳಿದಂತೆ, ಅದನ್ನು ದೇವರ ಗೂಡಿನ ಮುಂದೆ ಇಟ್ಟು, ದೇವರಿಗೆ ಪ್ರದಕ್ಷಿಣೆ, ನಮಸ್ಕಾರಗಳನ್ನು ಹಾಕಿ, ಫಾರ್ಮನ್ನು ತನ್ನ ಹತ್ತಿರ ಇರಿಸಿಕೊಂಡು ಕಾತ್ಯಾಯನಿ ಹೊರಡಲು ಸಿದ್ಧಳಾದಳು.

ಆ ದಿನ ಬೆಳಗ್ಗಿನಿಂದ ಅವಳ ಮನಸ್ಸಿನಲ್ಲಿ ಒಂದು ವಿಧವಾದ ಸಂಭ್ರಮ, ತನಗೇ ತಿಳಿಯದ ಒಂದು ರೀತಿಯ ಆತಂಕ, ಬೆಳಿಗ್ಗೆ ಒಂಭತ್ತು ಗಂಟೆಗೆ ಮನೆಯನ್ನು ಬಿಟ್ಟರೆ, ಸಂಜೆ ಆರುವರೆಯವರೆಗೆ ಮನೆಯ ನೆಳಲಿಲ್ಲದೆ, ಮಗುವಿನ ಮುದ್ದು ಮಾತುಗಳನ್ನು ಕೇಳದೆ, ಕಾಲೇಜಿನಲ್ಲಿ ಕುಳಿತು ತಾನೇಕೆ ಕಲಿಯಬೇಕು, ಎಂಬ ಪ್ರಶ್ನೆಯು ಅವಳನ್ನು ಕಾಡುತ್ತಿತ್ತು. ಆ ದಿನ ಅವಳು ಒಬ್ಬಳೇ ಕುಳಿತು ಊಟ ಮಾಡುತ್ತಿದ್ದಳು. ಆಗ ಹೊರಗಿನಿಂದ ಆಟವಾಡುತ್ತಾ ಬಂದ ಚೀನಿ ಅವಳನ್ನು ಕೇಳಿತು: "ನಮ್ಮನ್ನು ಬಿಟ್ಟು ನೀನ್ಯಾಕೆ ಊಟ ಮಾಡ್ತೀಯಾ?"

"ಅಮ್ಮ ಮೈಸೂರಿಗೆ ಕಾಲೇಜು ಓದೋಕೆ ಹೋಗ್ತಾಳೆ ಮಗು" ಎಂದರು ಬಡಿಸುತ್ತಿದ್ದ ಭಾಗೀರತಮ್ಮ. ಕಾತ್ಯಾಯನಿ ಊಟ ಮುಗಿಸಿ ಅತ್ತೆ ಮಾವಂದಿರಿಗೆ ನಮಸ್ಕರಿಸಿ, ಹೊರಟು ನಿಂತಾಗ, ಚೀನಿ - " ನೀನು ಓಗಬ್ಯಾಡ ಕನೇ ಅಮ್ಮಾ" ಎಂದು ಅಳಲು ಪ್ರಾರಂಭಿಸಿ "ನನ್ನೂ ಕರ್ಕಂಡು ಓಗು!" ಎಂದು ಅವಳ ಸೀರೆಯ ಸೆರಗನ್ನು ಹಿಡಿದು ಎಳೆಯುತ್ತಾ ನಿಂತಿತು. ಶ್ರೋತ್ರಿಯರು ಮಗುವನ್ನು ಸಮಾಧಾನಪಡಿಸುತ್ತಾ, ಎತ್ತಿಕೊಂಡರು.

ನೆರೆಮನೆಯ ವಾಸಂತಿಯೂ ಸೀನಿಯರ್ ಬಿ.ಎ.ಗೆ ಓದುತ್ತಿದ್ದವಳು ಜೊತೆಯಾಗಿ ದೊರೆತುದರಿಂದ ಕಾತ್ಯಾಯನಿಗೆ ತುಸು ಹಗುರೆನಿಸಿತು.

ಚಾಮರಾಜಪುರ ಸ್ಟೇಷನ್ನಿಂದ ಇಳಿದು ಅವರಿಬ್ಬರೂ ಕಾಲೇಜ್ ಕಡೆಗೆ ನಡೆದರು. ಕಾಲೇಜಿನಲ್ಲಿ, ಹುಡುಗಿಯರು ವಿರಮಿಸುವ ಕೋಣೆಗೆ ಕಾತ್ಯಾಯನಿಯನ್ನು ಕರೆದೊಯ್ದು ವಾಸಂತಿ ಕೇಳಿದಳು, "ನೀವು ಯಾರನ್ನೋ ನೋಡಬೇಕು ಅಂದಿರಲ್ಲ?"

"ಡಾ. ಸದಾಶಿವರಾಯರು"

"ಓ, ಅವರೇ?" ಎನ್ನುತ್ತ ಡಾ. ರಾಯರು ಕೂಡುತ್ತಿದ್ದ

ಲೈಬ್ರೆರಿಯಲ್ಲಿಯ ಒಂದು ರೂಮಿನ ಬಳಿ ಕಾತ್ಯಾಯನಿಯನ್ನು ಬಿಟ್ಟು ಅವಳು ಹಿಂತಿರುಗಿದಳು.

ಜವಾನ ತೋರಿಸಿದ ಫ್ಲಾಪ್ ಡೋರನ್ನು ತೆರೆದು ನಿಶ್ಶಬ್ದವಾಗಿ ಕಾತ್ಯಾಯನಿ ಒಳಗೆ ಪ್ರವೇಶಿಸಿದಳು. ತಮ್ಮ ಕಾರ್ಯದಲ್ಲಿ ಮಗ್ನರಾಗಿದ್ದ ರಾಯರು, ಐದು ನಿಮಿಷದ ನಂತರ ಮುಖವೆತ್ತಿ "ಬನ್ನಿ, ಇವತ್ತು ೨೪ ಅಲ್ಲವೆ? ಎಷ್ಟು ಹೊತ್ತಾಯ್ತು ಬಂದು? ಕೂಗದೇ ಹಾಗೆಯೇ ನಿಂತುಕೊಂಡರೆ ನೀವು ನೀವೇ, ನಾನು ನಾನೇ" ಎನ್ನುತ್ತಾ ಅವಳಿಗೆ ಕುರ್ಚಿಯನ್ನು ತೋರಿಸಿ, ಜವಾನನನ್ನು ಕರೆದು "ಕಾಲೇಜಿಗೆ ಹೋಗಿ, ರಾಜಾರಾಯರನ್ನು ಕರೆದುಕೊಂಡು ಬಾ" ಎಂದರು, ಕಾತ್ಯಾಯನಿಯತ್ತ ತಿರುಗಿ "ಎಲ್ಲಿ ನಿಮ್ಮ ಅಪ್ಲಿಕೇಶನ್ ಫಾರಂ ಕೊಡಿ" ಎಂದು ಕೇಳಿದರು. ಅದನ್ನು ನೋಡಿದ ಮೇಲೆ "ಹಿಸ್ಟರಿ, ಸಂಸ್ಕೃತ, ಇಂಗ್ಲಿಷ್. ನಂಜುಂಡ ಶ್ರೋತ್ರಿಯೂ ಅದನ್ನೆ ಓದುತ್ತಿದ್ದ. ಉತ್ತಮ ಶಿಷ್ಯರನ್ನು ಉಳಿಸಿಕೊಳ್ಳೋ ಭಾಗ್ಯ ನನಗೂ ಇಲ್ಲ. ಈಗ ನನಗೆ ಬಿ.ಎ. ಕ್ಲಾಸು ಇಲ್ಲ. ನನ್ನ ಸ್ಟೂಡೆಂಟ್ ಆಗಿದ್ದೋರೆ ಒಬ್ಬರು ಹಿಸ್ಟರಿ ಹೇಳುತ್ತಾರೆ. ಇಂಗ್ಲೀಷಿನ ಒಂದೆರಡು ನನ್ನ ತಮ್ಮನೇ ಹೇಳುತ್ತಾನೆ. ಸಂಸ್ಕೃತಕ್ಕೆ ನರಸಿಂಹ ಶಾಸ್ತ್ರಿ ಅಂತ ಕಾಣುತ್ತದೆ" ಎಂದರು. ಅಲ್ಲಿಂದ "ಹಾಂ, ನೀವು ದಿನಾ ಬೆಳಿಗ್ಗೆ ಮನೆಯಿಂದ ಹೊರಡೋದು ಎಷ್ಟು ಹೊತ್ತಿಗೆ?" ಎಂದು ಅವಳನ್ನು ಕೇಳಿದರು.

"ಎಂಟೂ ಮುಕ್ಕಾಲಿಗೆ"

"ಎಂಟೂಮುಕ್ಕಾಲು, ಸಂಜೆ ಮನೆ ಸೇರೋದು ಸುಮಾರು ಆರು ಏಳು ಆಗುತ್ತೆ. ನಮ್ಮ ಮನೆ ಚಾಮರಾಜಪುರದಲ್ಲಿದೆ. ದಿನಾ ಒಂದೂವರೆ ಗಂಟೆಗೆ ವಿರಾಮದ ವೇಳೆಯಲ್ಲಿ ಬೇಗ ನಮ್ಮ ಮನೆಗೆ ಹೋಗಿ ಊಟ ಮಾಡಿಕೊಂಡು ಬಂದು ಬಿಡಿ"

"ಇಲ್ಲ. ನಾನು...... ಟಿಫಿನ್ ಕ್ಯಾರಿಯರ್‌ನಲ್ಲಿ ತಿಂಡಿ ತಂದಿರತೀನಿ...."

'ಅದನ್ನೂ ತನ್ನಿ. ಆದರೆ ಅದನ್ನು ಇಲ್ಲಿಗೆ ಬಂದು ನನಗೆ ಕೊಟ್ಟು

ನೀವು ಮನೆಗೆ ಹೋಗಿ ಊಟಮಾಡಿಕೊಂಡು ಬನ್ನಿ" ಎನ್ನುತ್ತಾ ಅವರೇ ಜೋರಾಗಿ ನಕ್ಕರು.

ಅಷ್ಟರಲ್ಲಿ ರಾಜ ಅಲ್ಲಿಗೆ ಬಂದ. ಆತ ತನ್ನ ತಮ್ಮ ಎಂಬುದಾಗಿ ರಾಯರು ಕಾತ್ಯಾಯನಿಗೆ ಅವನ ಪರಿಚಯ ಮಾಡಿಸಿ, "ಎಲ್ಲಿ, ನಿಮ್ಮ ಅಪ್ಲಿಕೇಶನ್ ಫಾರಂ, ಫೀಯ ಹಣ, ಎಲ್ಲವೂ ಅವನ ಕೈಯಲ್ಲಿ ಕೊಡಿ. ಈಗ ಇವನ ಜತೆ ನಮ್ಮ ಮನೆಗೆ ಹೋಗಿ ಬನ್ನಿ"

ದಾರಿಯಲ್ಲಿ ಕಾತ್ಯಾಯನಿ ಸಂಕೋಚದಿಂದ ನಡೆಯುತ್ತಿದ್ದಳು. ರಾಜ ಅವಳ ಬಗೆಗೆ ಮೊದಲೇ ತನ್ನ ಅಣ್ಣನಿಂದ ತಿಳಿದಿದ್ದ. ಅವಳ ಸಂಕೋಚವನ್ನು ದೂರ ಮಾಡುತ್ತಾ ತಾನಾಗಿ ಮಾತನಾಡಿಸುತ್ತ ಮನೆಗೆ ಕರೆದೊಯ್ದ.

ರಾಯರ ಹೆಂಡತಿ ನಾಗಲಕ್ಷ್ಮಿಗೆ ಶ್ರೋತ್ರಿಯರ ಮನೆಯ ವಿಷಯ ತಿಳಿದುದೇ ಆಗಿತ್ತು. ಈಗ ತನ್ನ ಮೈದುನನೊಟ್ಟಿಗೆ ಮನೆಗೆ ಬಂದ ಕಾತ್ಯಾಯನಿಯ ಬಗೆಗೆ ಅವಳಲ್ಲಿ ವಿಶೇಷ ಅನುಕಂಪ ಉಂಟಾಯಿತು. ರಾಜ ಕಾತ್ಯಾಯನಿಯನ್ನು ಕೇಳಿದ,

"ನೀವು ಬೆಳಿಗ್ಗೆ ಎಷ್ಟು ಹೊತ್ತಿಗೆ ಮನೆಯನ್ನು ಬಿಟ್ಟಿರಿ?"

"ಎಂಟೂ ಮುಕ್ಕಾಲಿಗೆ"

"ಹಾಗಾದರೆ ಈಗ ಊಟ ಮಾಡಿ. ನಮ್ಮ ಅತ್ತಿಗೆ ಆರಿದ ಅನ್ನ ಬಡಿಸುತ್ತಾಳೆ"

ನಾಗಲಕ್ಷ್ಮಿಯೂ ಅವಳನ್ನು ಒತ್ತಾಯಿಸಿ ಊಟಕ್ಕೆ ಕೂಡ್ರಿಸಿದಳು. ಇಬ್ಬರೂ ಒಳಗೆ ಕುಳಿತು ಎಷ್ಟೋ ಹೊತ್ತು ಮಾತನಾಡುತ್ತಿದ್ದರು. ಇಬ್ಬರಿಗೂ ಪರಸ್ಪರರನ್ನು ಕಂಡು ಮೆಚ್ಚಿಗೆಯಾಯಿತು.

ರಾಯರ ತಮ್ಮನ ಹಾಗೂ ನಾಗಲಕ್ಷ್ಮಿಯ ಈ ಹಾರ್ದಿಕ ಭಾವವನ್ನು ಕಂಡು ಕಾತ್ಯಾಯನಿಯ ಮನಸ್ಸಿನ ದುಗುಡು ಕಳೆಯಿತು.

ಕಾತ್ಯಾಯನಿಯ ಕಾಲೇಜ್ ವ್ಯಾಸಂಗ ಸುಸೂತ್ರ ಸಾಗಿದ್ದಿತು. ತನಗೆ ಪೀರಿಯಡ್ ಇಲ್ಲದ ವೇಳೆಯಲ್ಲಿ ಕಾತ್ಯಾಯನಿ ರಾಯರ ಮನೆಗೆ ಹೋಗುತ್ತಿದ್ದಳು. ಸಾಮಾನ್ಯವಾಗಿ ಕಾತ್ಯಾಯನಿಯ ತರಗತಿಗಳು ಮೂರು

ಗಂಟೆಗೆ ಮುಗಿದು ಹೋಗುತ್ತಿದ್ದವು. ಸಂಜೆ ಐದರವರೆಗೆ ಆ ಮನೆಯಲ್ಲಿಯೇ ಇರುತ್ತಿದ್ದಳು.

ಕೆಲವು ದಿನ ಮನೆಯಲ್ಲಿ ರಾಜ ಇರುತ್ತಿದ್ದ. ಮಾತುಗಾರನಾದ ಅವನು ಕಾತ್ಯಾಯಿನಿಯನ್ನು ಹರಟೆಗೆ ಎಳೆಯುತ್ತಿದ್ದ. ಅವನು ಅವಳಿಗೆ ಗುರುವೂ ಆಗಿದ್ದ. ಸಾಮಾನ್ಯ ಇಂಗ್ಲಿಷ್ ತರಗತಿಯಲ್ಲಿ, ಷೇಕ್ಸ್‌ಪಿಯರ್‌ನ ಮ್ಯಾಕ್‌ಬೆತ್ ನಾಟಕವನ್ನು ಹೇಳುತ್ತಿದ್ದ ರೀತಿಯು ಇಡೀ ಕಾಲೇಜಿನ ವಿದ್ಯಾರ್ಥಿಗಳನ್ನೆಲ್ಲ ಮರುಳು ಮಾಡಿತ್ತು. ಸ್ವತಃ ನಾಟಕ ರಂಗದಲ್ಲಿ ಪ್ರತಿಭೆಯಿದ್ದ ಅವನು ತರಗತಿಯಲ್ಲೂ ಪಾತ್ರಗಳಲ್ಲಿ ತಲ್ಲೀನನಾಗಿ ಮಾತನಾಡುತ್ತಿದ್ದ. ಆ ಪಾತ್ರಗಳ ಸಂದರ್ಭಕ್ಕನುಗುಣವಾಗಿ ಭಯ, ವಿಸ್ಮಯ, ವೀರ ಮೊದಲಾದ ಭಾವಗಳು ತುಂಬಿದ ಧ್ವನಿಯಲ್ಲಿ ಅವನು ನಾಟಕವನ್ನು ಓದುವ ಕ್ರಮ ಇಡೀ ತರಗತಿಯನ್ನು ಮಂತ್ರಮುಗ್ಧವಾಗಿ ಮಾಡುತ್ತಿದ್ದಿತು. ತನ್ನ ಮನೆಗೆ ಆಗಾಗ್ಗೆ ಬಂದು ಹೋಗುತ್ತಿದ್ದ ಕಾತ್ಯಾಯಿನಿಯ ಬಗೆಗೆ ಅವನಿಗೂ ಒಂದು ತರದ ಅವ್ಯಕ್ತ ಆಸ್ಥೆ ಮೂಡಿದ್ದಿತು.

ಕಾತ್ಯಾಯನಿ ಇಷ್ಟು ದಿನ ಅವರ ಮನೆಗೆ ಬರುತ್ತಿದ್ದರೂ ಒಂದು ದಿನವೂ ಅವಳು ಡಾ. ಸದಾಶಿವರಾಯರನ್ನು ಕಾಣಲಿಲ್ಲ. ಅವರು ಸದಾ ಪುಸ್ತಕ ಭಂಡಾರದ ತಮ್ಮ ಕೋಣೆಯಲ್ಲಿಯೆ ಇರುತ್ತಿದ್ದರು. ಆದರಿಂದ ನಾಗಲಕ್ಷ್ಮಿಯು ಏಕಾಂತ ಜೀವನವನ್ನು ಅನುಭವಿಸುತ್ತಿರುವುದನ್ನು ಅವಳು ಅರ್ಥ ಮಾಡಿಕೊಂಡಳು. ಕಾತ್ಯಾಯನಿ ಒಂದು ದಿನ ಹೇಳಿದಳು, "ನಿಮಗೂ ಮನೇಲಿ ಬೇಜಾರು. ನಿಮ್ಮ ಮೈದುನನಿಗೊಂದು ಮದುವೆ ಮಾಡಿಬಿಡಿ. ಮನೇಲಿ ನಿಮಗೊಬ್ಬರು ಜೊತೆ ಸಿಕ್ತಾರೆ."

"ಅದು ಸರಿ. ಆದರೆ ಆತ ಇಂಗ್ಲೆಂಡಿಗೆ ಹೋಗೋ ಮೊದಲು 'ಅಲ್ಲಿಂದ ಬಂದ ಮೇಲೆ ಮದುವೆಯಾಗ್ತೀನಿ' ಅಂತಿದ್ದ. ಈಗ 'ಮದುವೇನೇ ಬೇಡ. ಮದುವೆ ಆಗದೆ ಮನುಷ್ಯ ಬದುಕೋಕೇ ಆಗೋಲ್ಲವೆ' ಅಂತಾನೆ."

ಸದಾ ನಾಟಕರಂಗದಲ್ಲಿ ಅಭಿರುಚಿ ಇದ್ದ . ಕಾಲೇಜಿನ ವಿದ್ಯಾರ್ಥಿ-

ವಿದ್ಯಾರ್ಥಿನಿಯರಿಗೆಲ್ಲ, ಅಚ್ಚುಮೆಚ್ಚಿನ ಅಧ್ಯಾಪಕರಾಗಿ, ಒಳ್ಳೆಯ ಕೆಲಸದಲ್ಲಿ ಇರುವ ಇವರ ಮನೋಭಾವ ಹೀಗೇಕೆ, ಎಂದು ಕಾತ್ಯಾಯನಿ ಯೋಚಿಸಿದಳು. ಆದರೆ ಇದು ತನಗೆ ಸೇರಿದ ವಿಷಯವಲ್ಲವೆಂದು ಸುಮ್ಮನಾದಳು.

ಮತ್ತೊಂದು ದಿನ ರಾಜ ಅವಳನ್ನು ಕೇಳಿದ, "ಇಷ್ಟು ದಿನವಾಯಿತು. ನೀವು ಒಂದು ಸಲವಾದರೂ ನಾನು ಆಡಿಸೋ ನಾಟಕ ನೋಡಬಾರದೆ?"

"ನೋಡೋಕೆ ನನಗೂ ಆಸೆಯಿದೆ. ಆದರೆ ಹೊತ್ತಿಗೆ ಸರಿಯಾಗಿ ಮನೆಗೆ ಹೋಗಬೇಕು. ನಾಟಕಕ್ಕೆ ಉಳಿದರೆ ರಾತ್ರಿ ಹತ್ತು ಗಂಟೆಗೆ ಊರು ಸೇರಬೇಕಾಗುತ್ತೆ."

"ನಂಜನಗೂಡಿನಿಂದ ಬರುವ ಎಷ್ಟೋ ಹುಡುಗೀರು ನಾಟಕಕ್ಕೆ ಉಳೀತಾರೆ. ನಿಮ್ಮ ಸ್ನೇಹಿತೆ ವಾಸಂತಿ ಒಂದು ನಾಟಕದಲ್ಲಿ ಪಾರ್ಟ್ ಸಹ ಮಾಡಿದ್ರು."

"ಮನೆಯಲ್ಲಿ ಕೇಳ್ತೀನಿ" ಎಂದು ಕಾತ್ಯಾಯನಿ ಹೇಳಿದಳು.

ಉಳಿದ ಹುಡುಗಿಯರು ತಿಂಗಳಿಗೊಮ್ಮೆ ಕಾಲೇಜಿನ ನಾಟಕವನ್ನು ನೋಡಿಕೊಂಡು ರಾತ್ರಿ ತಡವಾಗಿ ಬಂದರೂ ಕಾತ್ಯಾಯನಿ ಸಂಜೆಗೆ ಬಂದು ಬಿಡುವುದು ಶ್ರೋತ್ರಿಯರಿಗೂ ಭಾಗಿರತಮ್ಮನಿಗೂ ತಿಳಿದಿತ್ತು. ತನ್ನ ಸ್ಥಿತಿಯ ಗಾಂಭೀರ್ಯವನ್ನು ಸೊಸೆಯು ಅರ್ಥಮಾಡಿಕೊಂಡಿರುವಳೆಂದು ಅವರು ಅವಳನ್ನು ಅದಕ್ಕಾಗಿ ಮೆಚ್ಚಿಯೂ ಇದ್ದರು.

ಒಂದು ದಿನ ವಾಸಂತಿ, ಅವರ ಮನೆಗೆ ಬಂದು ಕೇಳಿದಳು: "ಇವತ್ತು ಒಳ್ಳೆಯ ನಾಟಕವಿದೆ. ಇಂಗ್ಲಿಷ್‌ನದು. ಮ್ಯಾಕ್‌ಬೆತ್ ಅಂತ. ನಮ್ಮ ಪರೀಕ್ಷೆಗೂ ಅದೇ ಪುಸ್ತಕ ಓದಬೇಕು. 'ನೀವೂ ಬನ್ನಿ, ನಾವೆಲ್ಲ ರಾತ್ರಿ ಜತೇಲಿ ಬರೋಣ' ಅಂದರೆ ನಿಮ್ಮ ಸೊಸೆ ಬರೋಲ್ಲ ನೀವಾದರೂ ಹೇಳಿ."

ಭಾಗೀರತಮ್ಮನಿಗೆ ಇಷ್ಟವಿಲ್ಲದಿದ್ದರೂ ಶ್ರೋತ್ರಿಯರೇ

ಹೇಳಿದರು: "ಪರೀಕ್ಷೆಗೆ ಅನುಕೂಲವಾಗೋ ಹಾಗೆ ಇದ್ದರೆ, ನೀನೂ ಅವರ ಜೊತೆಗೆ ನೋಡಿಕೊಂಡು ಬಾ ಮಗು."

ಆ ದಿನ ಕಾತ್ಯಾಯಿನಿ ಮೊದಲ ಸಲ ಆ ಕಾಲೇಜಿನ ನಾಟಕವನ್ನು ನೋಡಿದಳು. ರಾಜನೇ ಮ್ಯಾಕ್‌ಬೆತ್ ಪಾತ್ರವನ್ನು ಧರಿಸಿ ವಿದೇಶೀಯ ಪ್ರಿನ್ಸಿಪಾಲರು ಅಲ್ಲದೆ ಎಲ್ಲರೂ ಮೆಚ್ಚುವಂತೆ ಅಭಿನಯಿಸಿದ.

"ಹೇಗಿತ್ತು ನಾಟಕ?" ಮರುದಿನ ರಾಜ ಕಾತ್ಯಾಯಿನಿಯನ್ನು ಕೇಳಿದ.

"ನಿಮ್ಮ ಪಾತ್ರ ಅದ್ಭುತವಾಗಿತ್ತು! ಕ್ಲಾಸಿನಲ್ಲಿ ಸಹಾ ಎಂದೂ ನೀವು ಹೀಗೆ ಮ್ಯಾಕ್‌ಬೆತ್‌ನಿಗೆ ಕಳೆಕಟ್ಟಿಸಿರಲಿಲ್ಲ."

"ನನ್ನ ನೀವು ನಿನ್ನೆ ಬಂದು ನಾಟಕ ನೋಡಿದಿರಲ್ಲ! ನನ್ನ ಶ್ರಮ ಸಾರ್ಥಕವಾಯಿತು."

ತನಗೆ ಇನ್ನೊಂದು ಪುರಸ್ಕಾರವನ್ನು ಕೊಟ್ಟು, ಅವನು ಹೇಳಿದ ಮಾತನ್ನು ಕೇಳಿ ಅವಳ ಮನಸ್ಸು ಉಲ್ಲಸಿತವಾದರೂ ಅವಳು ಸಂಕೋಚದಿಂದ ಸುಮ್ಮನಾದಳು.

ಕಾತ್ಯಾಯಿನಿಯ ಮೊದಲ ವರ್ಷದ ಕಾಲೇಜು ಮುಗಿಯಿತು. ಅವಳು ಕಾಲೇಜಿಗೆ ಹೋಗುತ್ತಿದ್ದ ಒಂಬತ್ತು ತಿಂಗಳ ಕಾಲ ಹೇಗೆ ಕಳೆಯಿತೆನ್ನುವುದೇ ತಿಳಿಯಲಿಲ್ಲ. ಬೇಸಿಗೆಯ ರಜೆ ಬಂದರೆ ದಿನವೂ ರೈಲಿನಲ್ಲಿ ತಿರುಗುವುದು ತಪ್ಪಿ ಹಾಯಾಗಿರಬಹುದೆಂದು ಯೋಚಿಸಿದ್ದ ಅವಳಿಗೆ ರಜೆ ಬಂದ ಮೇಲೆ ಬೇಸರವೆನಿಸಿತು.

ರಾಜನು ವಸ್ತುಸ್ಥಿತಿವಾದಿ ಸಾಹಿತ್ಯದಿಂದ ಪ್ರಭಾವಿತನಾದವ. ಮಾನವ ಕಲ್ಪಿತವಾದ ಸಮಾಜ, ಶಾಸ್ತ್ರಗಳು, ಕಟ್ಟುಕಟ್ಟಳೆ, ನೀತಿನಿಯಮಗಳೆಲ್ಲವೂ ಜೀವನದ ಮೂಲಭೂತ ಶಕ್ತಿಯನ್ನು ಸುರುಟಿಸುವ ಕೋಟಲೆಗಳು. ಈ ಕೋಟಲೆಗಳನ್ನು ಕತ್ತರಿಸಿ ಹಾಕಿ ಜೀವನದ ಮೂಲ ಚೇತನದ ದರ್ಶನ ಮಾಡಿಸುವುದೇ ಸಾಹಿತ್ಯದ ಗುರಿ ಎಂದು ಅವನು ನಂಬಿದ್ದ.

ಆ ವರ್ಷ ಚೈತ್ರ ಮಾಸದ ಪೂರ್ವಾರ್ಧದಲ್ಲಿ ಮೂರು ನಾಲ್ಕು ಹದ ಮಳೆಯಾಯಿತು. ನೆಲದಲ್ಲಿದ್ದ ದಗ್ಧತೆ ಕಡಿಮೆಯಾಗಿ ಭೂಮಿ ನಗುವಂತಾಯಿತು. ಮಳೆ ಬಂದ ಹದಿನೈದೇ ದಿನಗಳಲ್ಲಿ ಎಂತಹ ಪರಿವರ್ತನೆ! ರೈತರು ನೇಗಿಲಿನಿಂದ ಉಳುತ್ತಿದ್ದರು. ಹೊಲದ ಬದಿಗಳು ನವುರಾದ ಹಸುರಿನಿಂದ ಶೋಭಿಸುತ್ತಿದ್ದವು. ರಸ್ತೆಯ ಪಕ್ಕದಲ್ಲಿದ್ದ ಮರಗಳು ಹೊಸ ಕಳೆಯಿಂದ ಕೂಗುತ್ತಿದ್ದವು. ತನ್ನ ನಿತ್ಯದ ಸೈಕಲ್ಲ ಸವಾರಿಯಲ್ಲಿ ಇದನ್ನು ಕಂಡ ರಾಜನು ಇದು ನಿಸರ್ಗದ ಮೂಲ ಸ್ವರೂಪ. ಏಕೆಂದರೆ ಈ ಸ್ಥಿತಿಯಲ್ಲಿ ಚೈತನ್ಯವಿದೆ, ಎಂದುಕೊಂಡ. ಇನ್ನೂ ಸ್ವಲ್ಪ ಮುಂದೆ ಹೋಗುವುದರಲ್ಲಿ ಸುಮಾರು ಹತ್ತು ಹದಿನೈದು ಜನ ಆಳುಗಳು ರಸ್ತೆಯ ಮರಗಳನ್ನು ಹತ್ತಿ ಕೊಂಬೆಗಳನ್ನು ಕಡಿಯುತ್ತಿದ್ದರು. ಅದನ್ನು ನೋಡಿ ರಾಜನಿಗೆ ಕೆಡುಕೆನಿಸಿತು. ಅವನು ಸೈಕಲಿನಿಂದ ಇಳಿದು, ''ಇಷ್ಟೊಂದು ಸೊಂಪಾಗಿ ಬೆಳೆದಿರುವ ಮರಗಳು. ಇವನ್ನ ಯಾಕ ಕಡಿಸುತ್ತೀರಿ?' ಎಂದು ಕೆಳಗೆ ನಿಂತು ಕಡಿಯುವವರನ್ನು ನಿರ್ದೇಶಿಸುತ್ತಿದ್ದ ಮೇಸ್ತ್ರಿಯನ್ನು ಕೇಳಿದ.

"ಸೂಳೇಮಗಂದು ಸೊಂಪಾಗಿ ಬೆಳೆದೆ ಏನು ಮಾಡ್ತವೆ ? ಹೋಗಿ ಬರೋ ಬಸ್ಸುಗಳ ಟಾಪಿಗೆಲ್ಲ ಬಡೀತವೆ. 'ಇದೆಲ್ಲ ಕಟ್ ಮಾಡಿ' ಅಂತ ಸರ್ಕಾರಿ ಸಬ್ ಓವರ್ಸಿಯರ್ ಹುಕುಂ ಮಾಡಿದ್ದಾರೆ."

ಆ ದಿನವೆಲ್ಲ ರಾಜನಿಗೆ ಮನಸ್ಸಿನಲ್ಲಿ ಮೇಸ್ತ್ರೀಯ ಮಾತುಗಳೇ ಕೊರೆಯುತ್ತಿದ್ದವು. ಜನಸಂಪರ್ಕವಿದ್ದಲ್ಲಿಯೇ ಹಾಗೆ. ವಾಸ್ತವತೆಯ ಹಚ್ಚ ಹೊಸತನವನ್ನು ಹಾಳು ಮಾಡಿ ತಮಗೆ ಬೇಕಾದ ಕ್ರಮವನ್ನು ಹೇರಿಬಿಡುತ್ತಾರೆ. ಮನುಷ್ಯ ಜೀವನದ ಮೇಲೂ ಇದೇ ಆಘಾತ, ಇದೇ ಕಟ್ಟುಪಾಡು. ಇದಕ್ಕೆ ಸಿಕ್ಕಿ ಒದ್ದಾಡುವವರೆಷ್ಟು ಮಂದಿ! ಇದರಿಂದ ಬಿಡುಗಡೆ ಹೊಂದದೆ ವಸ್ತುಸ್ಥಿತಿಯ ಚೇತನವನ್ನು ಅನುಭವಿಸುವುದು ಸಾಧ್ಯವಿಲ್ಲ. . . . . .

ಆ ದಿನ ರಾತ್ರಿ ಮಲಗಿದಾಗ ಪ್ರಕೃತಿಯ ಸೊಬಗನ್ನು ಕಡಿದು ಮನುಷ್ಯನನ್ನು ತನ್ನ ದಾರಿಯನ್ನು ಹದಗೊಳಿಸುವುದನ್ನೂ ವ್ಯಕ್ತಿಯ ಸ್ವಚ್ಛಂದ

ಆನಂದವನ್ನು ತುಳಿದು ನಾಗರಿಕತೆಯು ತಲೆ ಎತ್ತಿ ನಿಲ್ಲುವುದನ್ನೂ ಹೋಲಿಸಿ, ಅವನ ಮನಸ್ಸು ಒಂದು ನಾಟಕವನ್ನು ರಚಿಸುತ್ತಿತ್ತು. ಆ ನಾಟಕಕ್ಕೆ ಸ್ಫುಟವಾದ ಪಾತ್ರ ಧಾರಿಗಳಿರಲಿಲ್ಲ. ರೂಪುಗೊಂಡ ಕತೆ ಇರಲಿಲ್ಲ. ಇಡೀ ಪ್ರಕೃತಿಯೇ ಆ ನಾಟಕದ ನಾಯಕಿ. ಸಮಗ್ರ ಮಾನವ ವರ್ಗವೇ ಆ ನಾಯಕಿಯನ್ನು ಕೊಲೆಮಾಡುವ ನಾಯಕನಾಗಿ ನಿಂತಿತ್ತು. ಅದನ್ನೇ ಯೋಚಿಸುತ್ತ ಮಲಗಿದ ಅವನು ಬೆಳಗಿನ ಜಾವದಲ್ಲಿ ಒಂದು ಕನಸ್ಸನ್ನು ಕಂಡ. ಅದರಲ್ಲಿ ಒಬ್ಬ ಸುಂದರ ಯುವತಿ. ಸುಮಾರು ೨೨-೨೩ ವರ್ಷಗಳ, ಮನಸ್ಸನ್ನು ಅಪಹರಿಸುವಂತಹ ನಿಲುವಿನ ತರುಣಿ. ಅವಳ ಮೈ ಆರೋಗ್ಯದ ಶುಭ್ರ ಕಾಂತಿಯಿಂದ ಬೆಳಗುತ್ತಿದೆ. ಅವಳು ನಡೆಯುತ್ತಿದ್ದರೆ ರಕ್ತ ಚಿಮ್ಮುವ ಹಾಗೆ ಪಾದಗಳು ಕೆಂಪಾಗುತ್ತವೆ. ಅವಳದು ಗಂಭೀರವಾದ ಮುಖ. ಆಕೆಯ ಸುಕುಮಾರ ಅಂಗಾಂಗಗಳಲ್ಲೆಲ್ಲ ಚಿಮ್ಮುವ ಸ್ತ್ರೀ ಚೈತನ್ಯ. ಅವಳ ಮೈಮೇಲೆ ಒಂದೂ ಆಭರಣವಿಲ್ಲ. ಆಕೆ ಪೂರ್ಣ ನಗ್ನಳಾಗಿ ಒಂದು ಹೂವಿನ ಗಿಡದ ಕೆಳಗೆ, ಕುಳಿತಿದ್ದಾಳೆ. ಸಾಮಾನ್ಯ ಸ್ತ್ರೀಗೆ ನಗ್ನತೆಯ ಅರಿವಿನಿಂದ ಆಗುವ ಲಜ್ಜೆಯ ಭಾರವು ಅವಳ ಅಂಗಸೌಷ್ಠವವನ್ನು ಸಂಕುಚಿಸುತ್ತಿಲ್ಲ......

ಬೆಳಗ್ಗೆ ಎದ್ದ ಮೇಲೆ, ಅವನ ನಾಟಕ ಕಲ್ಪನೆಯು ನಿರ್ದಿಷ್ಟ ಸ್ವರೂಪವನ್ನು ತಾಳಿದ್ದಿತು. ರಜೆಯಲ್ಲಿ ಅದನ್ನು ಬರೆದು ಮುಗಿಸಿಬಿಟ್ಟನು. ಇಂಗ್ಲಿಷ್‌ನಲ್ಲಿದ್ದ ಆ ನಾಟಕವನ್ನು ಆ ವರ್ಷದ ನಾಟಕ ಸಂಘದ ಆರಂಭ ನಾಟಕವನ್ನಾಗಿ ಆಡಿಸಬೇಕೆಂದು ನಿಶ್ಚಯಿಸಿದನು. ರಜೆ ಕಳೆದು ಕಾಲೇಜು ಬಾಗಿಲು ತೆರೆಯುವ ದಿನ ಬೆಳಗ್ಗೆ ರಾಜನು ಮನೆಯ ಅಂಗಳದಲ್ಲಿ ಕುಳಿತು ಆ ನಾಟಕವನ್ನು ತಿದ್ದುತಿದ್ದ. ಆಗ ಹೊರಬಾಗಿಲನ್ನು ತೆರೆದು ಯಾರೋ ಬಂದಂತಾಯಿತು. ಬಂದಿದ್ದವಳು ಕಾತ್ಯಾಯನಿ.

"ಕೂತುಕೊಳ್ಳಿ. ಅತ್ತಿಗೆ ಪಕ್ಕದ ಮನೆಗೆ ಅರಸಿನ ಕುಂಕುಮಕ್ಕೆ ಹೋಗಿದ್ದಾಳೆ. ಒಂದೆರಡು ನಿಮಿಷದಲ್ಲಿ ಬಂದುಬಿಡ್ತಾಳೆ."

ಕಾತ್ಯಾಯನಿ ಹತ್ತಿರದಲ್ಲೇ ಇದ್ದ ಮತ್ತೊಂದು ಕುರ್ಚಿಯ ಮೇಲೆ ಕುಳಿತಳು. ರಜದಲ್ಲಿ ಅವಳು ಏನು ಮಾಡುತ್ತಿದ್ದಳೆಂದು ರಾಜ ಕೇಳಿದ.

ಇಬ್ಬರೂ ಉಭಯಕುಶಲೋಪರಿಯನ್ನು ಕೇಳಿಯಾದ ಮೇಲೆ, ರಾಜ ಹೇಳಿದ.

"ನೋಡಿ. ನಿಮ್ಮಿಂದ ಒಂದು ಕೆಲಸ ಆಗಬೇಕು!"

"ನನ್ನಿಂದಲೇ?" ಆಶ್ಚರ್ಯದಿಂದ ಕೇಳಿದಳು ಕಾತ್ಯಾಯನಿ.

"ಹೌದು. ನಾನೊಂದು ನಾಟಕ ಬರೆದಿದೀನಿ."

"ನಿಜವಾಗ್ಲೂ? ನೀವು ಬರೀ ನಾಟಕ ಆಡೀಸ್ತೀರಾ, ಆಡ್ತೀರಾ ಅಂತ ತಿಳಿದಿದ್ದೆ."

"ಇಲ್ಲ. ಕೆಲವನ್ನು ಬರೆದಿದ್ದೀನಿ. ಈ ಹೊಸ ನಾಟಕದಲ್ಲಿ ನೀವು ಪಾರ್ಟ್ ಮಾಡಬೇಕು."

ಕಾತ್ಯಾಯನಿ ಸಂಭ್ರಾಂತಳಾಗಿ ಹೇಳಿದಳು, "ಏನು ಮಾತು ಸರ್! ನಾನು ಸತ್ತೇ ಹೋದೇನು! ಯಾರಾದರೂ ಏನೆಂದಾರು?"

"ಯಾರೂ ಏನೂ ಅನ್ನೋದಿಲ್ಲ. ಎಷ್ಟು ಜನ ಹುಡುಗಿಯರು ನಮ್ಮ ನಾಟಕ ಸಂಘದಲ್ಲಿ ಪಾರ್ಟು ಮಾಡೋಲ್ಲ! ನಾನೇ ಬರೆದ ನಾಟಕ ಇದು. ನೀವಾದರೆ ನನ್ನ ಮುಖ್ಯ ಪಾತ್ರವನ್ನು ಸ್ಪಷ್ಟವಾಗಿ ನಿರೂಪಿಸಬಲ್ಲಿರಿ ಅನಿಸುತ್ತೆ."

ಅವನ ಹಸ್ತಪ್ರತಿಯ ಕಡೆಗೆ ದೃಷ್ಟಿ ಹಾಯಿಸಿ, ಕಾತ್ಯಾಯನಿ ಹೇಳಿದಳು: "ನೀವು ಬರೆದಿರೋದು ಇಂಗ್ಲಿಷ್ ನಾಟಕ. ನನ್ನ ಕೈಲಿ ಆಗೋಲ್ಲ."

"ಕನ್ನಡ ನಾಟಕವಾಗಿದ್ದರೆ ಇತರ ವಿದ್ಯಾರ್ಥಿನಿಯರ ಕೈಲಾದರೂ ಮಾಡಿಸುತ್ತಿದ್ದೆ. ನಾಟಕದಲ್ಲಿ ಪಾರ್ಟ್ ಕೊಡಿ ಎಂತ ಎಷ್ಟೋ ಜನ ಹುಡುಗಿಯರು ತುಕ್‌ತಾರೆ. ಆಪ್ಷನಲ್ ಇಂಗ್ಲೀಷಿನ ವಿದ್ಯಾರ್ಥಿನಿ, ನೀವೇ ಅದನ್ನು ಮಾಡಬೇಕು," ಎನ್ನುತ್ತ.... ಟೈಪ್ ಆದ ನಾಟಕದ ಪ್ರತಿಯನ್ನು ಕಾತ್ಯಾಯನಿಯ ಕೈಯಲ್ಲಿರಿಸಿದನು.

ಮರುದಿನ ಅವಳು ಅವನೆಡೆಗೆ ಹಿಂತಿರುಗಿ ಬಂದಾಗ ಅವಳ ಮುಖವು ಸ್ವಲ್ಪ ಕಠೋರವಾಗಿತ್ತು. ಆದರೂ ಗುರುವಿನೆದುರು

ಮಾತನಾಡುವಾಗ ಅಳುಕಿನಿಂದಲೇ ಕೇಳಿದಳು:

"ನೀವು ನನ್ನನ್ನು ನೋಡಿ ಇದನ್ನ ಬರೆದಿರಾ?"

"ಖಂಡಿತಾ ಹಾಗೆ ಭಾವಿಸಬೇಡಿ. ಇದು ನನ್ನ ಮನಸ್ಸಿನಲ್ಲಿ ಹುಟ್ಟಿದ ರೀತಿಯೇ ಬೇರೆ. ಇದೊಂದು ರೂಪಕ. ಇದರಲ್ಲಿ ಬರುವ ಪಾತ್ರಗಳು ಕೇವಲ ಸೂಚ್ಯ ಪ್ರತಿಮೆಗಳು" ಎಂದು ಅವನು ಆ ನಾಟಕದ ವಸ್ತುವು ತನ್ನಲ್ಲಿ ಮೂಡಿಬಂದುದರ ಹಿನ್ನೆಲೆಯನ್ನು ವಿವರಿಸಿದ.

ನಾಲ್ಕೇ ಪಾತ್ರಗಳ ನಾಟಕ ಅದು. 'Primordial' (ಮೂಲತತ್ತ್ವ) ಎಂದು ಹೆಸರಿಸಿದ್ದ ಆ ನಾಟಕದಲ್ಲಿ ಪ್ರಕೃತಿಯೇ ನಾಯಕಿ, ಪುರುಷನೇ ನಾಯಕ.

ಆಗಸ್ಟ್ ತಿಂಗಳ ಮೊದಲನೆಯ ದಿನ ಸಂಜೆ ನಾಟಕವು ಪ್ರಾರಂಭವಾಯಿತು. ಕಾಲೇಜಿನ ಬಯಲು ನಾಟ್ಯಗೃಹವು ತುಂಬಿಹೋಗಿದ್ದಿತು.

ತೆರೆ ಎದ್ದಾಗ, ಶುದ್ಧ ಹಸಿರು ವನದ ನಡುವೆ 'ಪ್ರಕೃತಿ'ಯು ಸಂಚರಿಸುತ್ತಾ ಪುಷ್ಪಸಂಚಯ ಮಾಡುತ್ತಾಳೆ. ಆದರಿಂದ ಒಂದು ದೊಡ್ಡ ಹೂಮಾಲೆಯನ್ನು ಕಟ್ಟುತ್ತಾಳೆ. ಅಷ್ಟರಲ್ಲಿ ರಂಗದ ಮೇಲೆ 'ಪುರುಷ'ನ ಪ್ರವೇಶವಾಗುತ್ತದೆ. ಪುರುಷಸನ್ನಿಧಿಯಿಂದ ಆಕರ್ಷಿತಳಾದ ಅವಳು ತನ್ನ ಪ್ರೇಮಸಲ್ಲಾಪದಿಂದ ಅವನನ್ನು ಸಮೀಪಿಸಿ ಆ ಮಾಲೆಯನ್ನು ಅವನ ಕೊರಳಿಗೆ ಹಾಕುವುದರಲ್ಲಿದ್ದಾಳೆ. ಅಷ್ಟರಲ್ಲಿ ಸಿಡಿಲಿನ ಗರ್ಜನೆಯಾಗಿ ಇಡೀ ಪ್ರದೇಶವು ಕತ್ತಲೆಯಿಂದ ತುಂಬಿಬಿಡುತ್ತದೆ.

ಮುಂದಿನ ದೃಶ್ಯ ದೇವರಾಜನ ನ್ಯಾಯಾಸ್ಥಾನ. ಸರಪಳಿಯಿಂದ ಬಂಧಿತಳಾದ ಪ್ರಕೃತಿಯು ಒಂದು ಪಾರ್ಶ್ವದಲ್ಲಿ ನಿಂತಿದ್ದಾಳೆ. ದೇವಗುರು ಬೃಹಸ್ಪತ್ಯಾಚಾರ್ಯರು, ಅವಳ ಮೇಲಿನ ಆರೋಪವನ್ನು ವಿವರಿಸುತ್ತಿದ್ದಾರೆ:

"ಮೊದಲು ಒಮ್ಮೆ ನೀನು ಬೇರೊಬ್ಬ ಪುರುಷನ ಸಂಸರ್ಗದಲ್ಲಿದ್ದೆ. ಜ್ಞಾನೋದಯವಾದ ಮೇಲೆ ಅವನು ಮುಕ್ತಿಯನ್ನು ಪಡೆದು ನಿನ್ನಿಂದ

ದೂರ ಹೊರಟುಹೋದ. ಈಗ ಇನ್ನೊಬ್ಬ ಪುರುಷನಿಗೆ ನೀನು ಮಾಲೆ ಹಾಕಹೊರಟಿರುವೆ. ಇದು ಧರ್ಮನಿಷಿದ್ಧ."

"ಚಿರನೂತನಳೂ ಚಿರಚೇತನಳೂ ಆದ ಪ್ರಕೃತಿಗೆ ಧರ್ಮದ ಕಟ್ಟನ್ನು ಹಾಕುವುದು ಅಧರ್ಮವಲ್ಲವೆ ದೇವಗುರು? ನಾನು ಕೇಳುವ ಒಂದು ಪ್ರಶ್ನೆಗೆ ಉತ್ತರ ಹೇಳುವಿರಾ?"

"ಅದೇನು ಕೇಳು."

"ಪ್ರಕೃತಿಯ ಸಂಸರ್ಗದಿಂದಲ್ಲವೆ ಪುರುಷನ ಮುಕ್ತಿ? ನನಗೆ ವೈಧವ್ಯದ ಮೈಲಿಗೆಯನ್ನು ತಗಲಿಸಿ ಕೂರಿಸಿದರೆ ಇನ್ನೂ ಮುಕ್ತಿಯನ್ನು ಪಡೆಯದ ಅನಂತಕೋಟಿ ಪುರುಷರುಗಳ ಗತಿ ಏನು? ಅವರಿಗೆ ದೊರೆಯಬೇಕಾದ ಮುಕ್ತಿಯನ್ನು ತಡೆಯುವ ನಿಮ್ಮ ಧರ್ಮವು ಕೃತಕವಾದುದಲ್ಲವೆ?"

ದೇವಗುರುವಿಗೆ ಉತ್ತರ ತೋಚದೆ ಅವರು ಸುಮ್ಮನಾಗುತ್ತಾರೆ. ಆಗ ಪ್ರಕೃತಿಯೇ ಹೇಳುತ್ತಾಳೆ, "ವಸ್ತುತತ್ತ್ವದ ಮೂಲ ಗುಣವನ್ನು ಕೃತಕವಾಗಿ ತಡೆಹಿಡಿಯುವ ಧರ್ಮ, ನೀತಿ, ರಾಜಶಾಸನ ಇವೆಲ್ಲ ಅಸತ್ಯದ ಮುಖಗಳು. ಪ್ರಕೃತಿ ಚಿರಯೌವನೆ. ಅವಳ ಸುಂದರ ಸ್ವರೂಪವನ್ನು ತುಳಿಯಲೆತ್ನಿಸುವ ಧರ್ಮವು ತನಗೆ ತಾನೇ ನಾಶವಾಗುತ್ತದೆ!" ಹೀಗೆ ಆಕೆ ಉಚ್ಚಸ್ವರದಿಂದ ಹೇಳುತ್ತಲು ಪುನಃ ಸಿಡಿಲಿನ ಗರ್ಜನೆಯಾಗಿ ರಂಗದ ಮೇಲೆ ಕತ್ತಲೆ ಕವಿಯುತ್ತದೆ.

ಮೂರನೆಯ ದೃಶ್ಯ. ಪ್ರಕಾಶಮಾನವಾದ ರಂಗಸ್ಥಳದಲ್ಲಿ ದೇವರಾಜ, ಗುರುಗಳು ಹೆಳವರಾಗಿ ಕೆಳಗೆ ಬಿದ್ದಿದ್ದಾರೆ. ಪ್ರಕೃತಿಯು ಇನ್ನಷ್ಟು ಶೋಭಾಯಮಾನವಾಗಿ ನಲಿಯುತ್ತಿರುವಾಗ ಪುರುಷನು ಪ್ರವೇಶಿಸಿ, "ಪ್ರಕೃತೀ, ನೀನು ಚಿರಸುಮಂಗಲಿ" ಎನ್ನುತ್ತಾನೆ. ಪ್ರಕೃತಿಯು ಅವನಿಗೆ ಮಾಲೆ ಹಾಕುತ್ತಾಳೆ. ಹೆಳವರಾಗಿದ್ದ ದೇವರಾಜ, ದೇವಗುರುಗಳತ್ತ ಕೃಪಾದೃಷ್ಟಿಯನ್ನು ಬೀರುತ್ತಾಳೆ. ಆಗ ಅವರಿಬ್ಬರೂ ಮೇಲೆದ್ದು ಅವಳ ಕಾಲಿಗೆ ಎರಗುತ್ತಾರೆ. ನಿಧಾನವಾಗಿ ತೆರೆ ಬೀಳುತ್ತದೆ.

ಪ್ರೇಕ್ಷಕವರ್ಗದವರೆಲ್ಲರೂ ಕಿವಿ ಕಿವುಡಾಗುವಂತೆ ಚಪ್ಪಾಳೆ

ತಟ್ಟಿದರು. ರಂಗಸ್ಥಳದಿಂದ ಹಿಂಭಾಗಕ್ಕೆ ಬಂದ ಕಾತ್ಯಾಯನಿಯ ಎರಡೂ ಕೈಗಳನ್ನು ಬಿಗಿಯಾಗಿ ಹಿಡಿದು, ರಾಜ " ಅದ್ಭುತವಾಗಿತ್ತು! ನನ್ನ ಕಲ್ಪನೆಯನ್ನು ನೀವು ಸಮರ್ಪಕವಾಗಿ ನಿರೂಪಿಸಿದಿರಿ" ಎಂದ. "ನಿಮ್ಮ ಶಿಕ್ಷಣವೇ ಅದು" ಎಂದು ಆಕೆ ಉಲ್ಲಸಿತಳಾಗಿ ಉತ್ತರವಿತ್ತಳು.

ಅಷ್ಟರಲ್ಲಿ ರಂಗಸ್ಥಳದ ಮೇಲೆ ಮೇಜು, ಕುರ್ಚಿಗಳನ್ನಿಡಲಾಗಿದ್ದಿತು. ಅಧ್ಯಕ್ಷತೆ ವಹಿಸಿದ್ದ ಉಪಕುಲಪತಿಗಳು ಪ್ರಿನ್ಸಿಪಾಲರ ಸಂಗಡ ಬಂದು, ಕುರ್ಚಿಯ ಮೇಲೆ ಕುಳಿತರು. ರಾಜ ಮತ್ತೊಂದು ಕುರ್ಚಿಯ ಮೇಲೆ ಕುಳಿತ.

ಉಪಕುಲಪತಿಗಳು ಎದ್ದು ನಿಂತು ಮಾತನ್ನು ಆರಂಭಿಸಿದರು: "ನಾನು ಜೀವಶಾಸ್ತ್ರದ ಪ್ರೊಫೆಸರನಾಗಿದ್ದವನು. ಪ್ರಕೃತಿ ಚಿರನೂತನವಳು ಎಂಬ ಮಾತನ್ನು ಹೊಸದೊಂದು ಅರ್ಥದಲ್ಲಿ ಇಂದು ನಾನು ಕಂಡುಕೊಂಡೆ. ಇದನ್ನು ಬರೆದ ರಾಜಾರಾಯರನ್ನು ನಿಮ್ಮೆಲ್ಲರ ಪರವಾಗಿ ಅಭಿನಂದಿಸುತ್ತೇನೆ. ಮುಖ್ಯ ಪಾತ್ರವನ್ನು ಮಾಡಿದ ಮಿಸ್, ಮಿಸ್....." ಎಂದು ರಾಜನ ಕಡೆ ತಿರುಗಿದರು. ಅವನು ಹೆಸರು ಹೇಳಿದ ನಂತರ, "ಮಿಸ್ ಕಾತ್ಯಾಯನಿ ಪಾತ್ರವನ್ನು ಅದ್ಭುತವಾಗಿ ಮಾಡಿದರು. ಒಟ್ಟಿನಲ್ಲಿ ನಾಟಕ ಚೆನ್ನಾಗಿತ್ತು" ಎಂದು ಹೇಳಿದರು.

ಸಭೆ ಚದುರಿದಾಗ ರಾತ್ರಿ ಎಂಟೂವರೆಯಾಗಿತ್ತು. ರಾಜ ಕಾತ್ಯಾಯನಿಗೆ ಹೇಳಿದ: "ನಿಮಗೆ ಜೊತೆ ಸಿಕ್ಕದೆ ಇರಬಹುದು. ನಿಮ್ಮನ್ನು ಚಾಮರಾಜಪುರ ಸ್ಟೇಷನ್ನಿಗೆ ಮುಟ್ಟಿಸಿ ಬರತೀನಿ."

ದಾರಿಯಲ್ಲಿ ಕಾತ್ಯಾಯನಿ ಏನೂ ಮಾತಾಡಲಿಲ್ಲ. ಈ ದಿನ ಪಾತ್ರವನ್ನು ಮಾಡಲೇಬಾರದಾಗಿತ್ತು ಎಂದು ಅವಳು ಯೋಚಿಸುತ್ತಿದ್ದಳು. ರಂಗದ ಮೇಲೆ ಇದ್ದಷ್ಟು ವೇಳೆಯೂ ಅವಳು ತನ್ನನ್ನು ತಾನು ಮರೆತು ಅಭಿನಯಿಸುತ್ತಿದ್ದಳು. ಈಗ ಅವಳಿಗೆ ಅತೀವ ಸಂಕೋಚವಾಗಿದ್ದಿತು. "ಸ್ಟೇಷನ್‌ನಲ್ಲಿ ನಂಜನಗೂಡಿಗೆ ಹೋಗುವ ವಿದ್ಯಾರ್ಥಿಗಳು ಇರತಾರೆ. ಏನಾದರೂ ತಿಳಿದುಕೊಂಡಾರು. ನೀವು ಮನೆಗೆ ಹೋಗಿ."

*   *   *

ನಾಟಕದಲ್ಲಿ ಪಾತ್ರವಹಿಸಿದ ಮೇಲೆ ಕಾತ್ಯಾಯನಿಯ ಹೆಸರು ಕಾಲೇಜಿನಲ್ಲೆಲ್ಲ ಪ್ರಚುರವಾಯಿತು. ಹುಡುಗಿಯರೆಲ್ಲರೂ ತಾವಾಗಿ ಬಂದು ಅವಳ ಪರಿಚಯ ಮಾಡಿಕೊಳ್ಳತೊಡಗಿದರು. ಕಾತ್ಯಾಯನಿ ಮಾತ್ರ ಮೊದಲಿನಂತೆಯೇ ಗಂಭೀರಳಾಗಿದ್ದಳು. ಆದರೆ ಆ ನಾಟಕವು ಅವಳ ಮನಸ್ಸಿನ ಸ್ವಾಸ್ಥ್ಯವನ್ನು ಕದಡಿಸಿಬಿಟ್ಟಿದ್ದಿತು. ಅಭ್ಯಾಸದ ಕಡೆಗೆ ಮೊದಲಿನಂತೆ ಗಮನವುಳಿಯಲಿಲ್ಲ. ಪುಸ್ತಕವನ್ನು ತೆರೆದು ಓದುತ್ತ ಕುಳಿತಾಗ ನಾಟಕದ ಪ್ರತಿಯೊಂದು ದೃಶ್ಯವೂ, ಎಳೆಎಳೆಯಾಗಿ ಬಿಡಿಸಿ, ಗಾಳಿಯಲ್ಲಿ ತೂರಿಬಿಟ್ಟ ಅರಳೆಯಂತೆ, ಅವಳ ತೋಟಕ್ಕೆ ಹೋದರಂತೂ ಅಲ್ಲಿಯ ಹಚ್ಚ ಹಸುರು ತನ್ನ ಮೂಲಧರ್ಮವನ್ನು ತೋರುತ್ತ ಸದಾ ನಗುವಂತಿದ್ದಿತು. "ಹೌದು, ಪ್ರಕೃತಿಯು ಚಿರನೂತನಳೂ ಚಿರಚೇತನಳೂ ಆಗಿದ್ದಾಳೆ," ಎಂದು ಅವಳು ಅಂದುಕೊಳ್ಳುತ್ತಿದ್ದಳು. ಆಗ ಸಹಿಸಲಾರದ ಅವರ್ಣನೀಯ ಚೈತನ್ಯವೊಂದು ಅವಳ ವ್ಯಕ್ತಿತ್ವವನ್ನು ಆವರಿಸಿ ಅವಳ ಶರೀರದಲ್ಲಿ ಕಂಪನವನ್ನುಂಟುಮಾಡುತ್ತಿದ್ದಿತು.

ಕಾಲೇಜಿನಲ್ಲಿ ಪೀರಿಯಡ್ ನಡೆದಿರುವಾಗಲೂ ಅವಳ ಮನಸ್ಸು ಅಭ್ಯಾಸದತ್ತ ಹರಿಯುತ್ತಿರಲಿಲ್ಲ. ಅದರಲ್ಲಿ ರಾಜಾರಾಯರ ಪಾಠವಿದ್ದರಂತೂ ತೀರಿಹೋಯಿತು. ಕಲ್ಪಿಸಿಕೊಳ್ಳುವವರ ಮನಸ್ಸನ್ನು ರಾಗರಂಜಿತಗೊಳಿಸುವಂತೆ ಭಾವಮಗ್ನರಾಗಿ ಅವರು ವಿವರಿಸುತ್ತಿದ್ದಾಗ, ಕಾತ್ಯಾಯನಿಯು ನಟ್ಟ ದೃಷ್ಟಿಯಿಂದ ಅವರೆಡೆಗೆ ನೋಡುತ್ತಿದ್ದಳು. ಅವಳೊಬ್ಬಳೇ ಅಲ್ಲ, ಇಡೀ ತರಗತಿಯೇ ಹಾಗೆ ನೋಡುತ್ತಿದ್ದಿತು. ಬೇರೊಂದು ಕ್ಷಣದಲ್ಲಿ ರಾಜಾರಾಯರು ಪಾಠ ಹೇಳುತ್ತ, ಎಲ್ಲ ವಿದ್ಯಾರ್ಥಿಗಳ ಕಡೆಗೂ ದೃಷ್ಟಿಯನ್ನು ಬೀರುತ್ತಿದ್ದರೂ ಕಾತ್ಯಾಯನಿಯನ್ನು ವಿಶೇಷ ಗಮನದಿಂದ ವೀಕ್ಷಿಸುತ್ತಿದ್ದರು. ಅದು ಕಾತ್ಯಾಯನಿಗೆ ಅರ್ಥವಾಗುತ್ತಿದ್ದಿತು. ಆ ನೋಟವನ್ನು ಎದುರಿಸಲಾರದೆ ಅವಳು ತನ್ನ ದೃಷ್ಟಿಯನ್ನು ಪುಸ್ತಕದ ಕಡೆಗೆ ತಿರುಗಿಸುತ್ತಿದ್ದರೂ ಅವಳಿಗೆ ಅರಿವಾಗದ ಮಧುರ ಶಕ್ತಿಯೊಂದು ಅವಳು ತನ್ನ ತಲೆಯನ್ನು ಮೃದುವಾಗಿ ಮೇಲೆ

ಎತ್ತಿ ಅವರನ್ನು ನೋಡುವಂತೆ ಮಾಡುತ್ತಿತ್ತು.

ರಾಜಾರಾಯನ ಮನಸ್ಸು ಕಾತ್ಯಾಯನಿಯಲ್ಲಿ ಸಂಪೂರ್ಣ ಮುಳುಗಿ ಹೋಗಿತ್ತು. ಅವಳು ಒಬ್ಬ ಅವಿವಾಹಿತ ತರುಣಿಯಾಗಿದ್ದರೆ ಅವನು ಅಷ್ಟರಲ್ಲಿ ಅವಳ ಸಂಗಡ ತನ್ನ ಮನದಿಂಗಿತವನ್ನು ಬಿಚ್ಚಿ ಹೇಳಿಬಿಡುತ್ತಿದ್ದ. ಮನಸ್ಸಿನ ತೊಳಲಾಟ ಅತಿಯಾಗುತ್ತಲೂ ಒಂದು ದಿನ ಕಾಲೇಜಿನಲ್ಲಿ ಅವಳನ್ನು ಕೇಳಿದ:

"ನಾಳೆ ದಿನ ನೀವು ಕಾಲೇಜಿಗೆ ಬರುತ್ತೀರಿ, ಅಲ್ಲವೆ?"

"ಹೂಂ..... ಊಂಹುಂ. ನಾಳೆ ರಜ ಅಲ್ಲವೆ?"

"ಆದರೂ ಪರವಾಗಿಲ್ಲ. ನಾನು ನಿಮ್ಮ ಕೈಲಿ ಒಂದು ಬಹಳ ಮುಖ್ಯವಾದ ವಿಷಯ ಮಾತನಾಡಬೇಕು. ನಾಳೆ ಬನ್ನಿ, ನನ್ನ ಸಂಘದ ರೂಮಿನಲ್ಲಿ ಇರುತ್ತೇನೆ."

"ಏನು ವಿಷಯ ಅಂತ ಈಗಲೇ ಕೇಳಬಹುದೆ?"

"ಇಲ್ಲೆಲ್ಲ ನಿಂತು ಹೇಳುವಂಥ ಲಘು ಸಂಗತಿಯಲ್ಲ" ಎಂದು ನಗೆ ತಂದುಕೊಂಡು ಹೇಳಿದ.

ಮರುದಿನದ ಆ ಸಮಯ ಬಂದಿತು. ಆ ಉದ್ವಿಗ್ನತೆ ಅವನ ಚಿತ್ತವನ್ನು ತುಂಬಿತ್ತು. ಮಾತನ್ನು ಹೇಗೆ ಪ್ರಾರಂಭಿಸಬೇಕು ಎಂಬ ನಿರ್ಧಾರವೇ ಆಗಿರಲಿಲ್ಲ. ಅಷ್ಟರಲ್ಲಿ ಕಾತ್ಯಾಯನಿ ಒಳಗೆ ಬಂದಳು. ಕುಳಿತುಕೊಂಡಳು.

ಎರಡು-ಮೂರು ನಿಮಿಷ ಇಬ್ಬರೂ ಮೌನ. ಅನಂತರ ಅವನೇ ಮೊದಲು ಮಾಡಿದ. "ನೀವು ದಿನವೂ ಬರುವ ರೈಲು ಇಲ್ಲಿಗೆ ಎಷ್ಟು ಹೊತ್ತಿಗೆ ಬರುತ್ತೆ?"

"ಹತ್ತು ಗಂಟೆಗೆ." ಅಲ್ಲಿಗೆ ಆ ಮಾತು ಮುಗಿಯಿತು. ಮತ್ತೊಂದು ಮಾತಿನ ಎಳೆಗೆ ತಡಕಾಡುತ್ತಾ ಅವನು "ನೀವು ಈಗ ಮೊದಲಿಗಿಂತ ಇಳಿದುಹೋಗಿದ್ದೀರಿ" ಎಂದ.

ಅವಳು ತಲೆ ಎತ್ತಿ ಅವನನ್ನು ನೋಡಿದಳು. ತನ್ನ ಮಾತಿನ

ಅಸಂಬದ್ಧತೆಗೆ ಅವನಿಗೇ ನಗು ಬಂತು. ಅವಳ ಮುಖದಲ್ಲೂ ಸಣ್ಣ ನಗೆ ಪಸರಿಸಿತು. ಪುನಃ ಗಾಂಭೀರ್ಯವನ್ನು ಸಾಧಿಸಿ "ಸುತ್ತು ಮಾತಾಡೋದು ಬೇಡ, ನಾನು ಯಾವ ಮಾತನ್ನು ಹೇಳೋಕೆ ನಿಮ್ಮನ್ನ ಕರೆದೆ ಗೊತ್ತಾ?"

"ಇಲ್ಲ."

"ನಾನು ನಂಬುವುದಿಲ್ಲ. ಪರವಾಗಿಲ್ಲ; ಹೇಳುವೆ. ನಾನು ನೀವು ಈಗ ಬರೀ ಗುರು ಶಿಷ್ಯೆಯರಾಗಿಲ್ಲ. ನಾವು ಬಾಯಿಬಿಟ್ಟು ಮಾತನಾಡದಿದ್ದರೂ ಈ ವಿಷಯ ನಿಮಗೂ ಗೊತ್ತಿದೆ ಅಲ್ಲವೆ?"

ಅವಳು ಮಾತಾಡದೇ ಮೌನವಾಗಿ ಕುಳಿತಿದ್ದಳು. ರಾಜ ಕೇಳಿದ· "ನಿಮಗಾಗಿ ನನ್ನ ಮನಸ್ಸು ಹಾತೊರೆಯುತ್ತಿದೆ. ನನ್ನ ಜೀವನದಲ್ಲಿ ಮದುವೆಯೇ ಬೇಡ ಅಂತ ನಾನು ಯೋಚಿಸುತ್ತಿದ್ದೆ. ಆದರೆ ಈಗ ಆ ನನ್ನ ನಿರ್ಧಾರ ಕುಸಿದುಬಿದ್ದು ಹೋಗಿದೆ."

ಆ ಮಾತನ್ನು ಕೇಳಿ, ಕಾತ್ಯಾಯನಿ ಸೂಕ್ಷ್ಮವಾಗಿ ಬೆದರಿದಳು. ಅದು ಅನಿರೀಕ್ಷಿತವಲ್ಲದಿದ್ದರೂ ಅವಳ ಮನಸ್ಸು ಸಂಭ್ರಮ, ವಿಸ್ಮಯ ಹರ್ಷಗಳಿಂದ ಪುಳಕಿತವಾಯಿತು. ಜೊತೆಯಲ್ಲಿಯೇ ತನ್ನ ಮಗು, ಅತ್ತೆಮಾವಂದಿರು, ತನ್ನ ಪತಿಯ ನೆನಪು ಎಲ್ಲವೂ ಏಕಕಾಲದಲ್ಲಿ ಅವಳ ಸ್ಮೃತಿಯಲ್ಲಿ ಹೊಡೆದು ಎದ್ದವು. ತಾನಿರುವ ದ್ವಂದ್ವ ಪರಿಸ್ಥಿತಿಯ ವೈಚಿತ್ರ್ಯವು ಇದುವರೆಗೆ ಇಷ್ಟು ಸ್ಪಷ್ಟವಾಗಿ ಅವಳ ಚಿತ್ತಕ್ಕೆ ಗೋಚರಿಸಿರಲಿಲ್ಲ.

"ಯಾಕೆ ಸುಮ್ಮನಾದಿರಿ?" ಎಂದು ರಾಜ ಕೇಳಿದ.

"ನನ್ನ ಪರಿಸ್ಥಿತಿ ನಿಮಗೆ ಪೂರ್ತಿ ಅರ್ಥವಾಗಿದೆಯೇ?"

"ಆಗಿದೆ. ನಿಮಗೊಂದು ಮಗು ಇರುವುದೂ ನನಗೆ ಗೊತ್ತಿದೆ. ನಿಮ್ಮ ಮೊದಲ ಮಗುವೂ ನನ್ನ ಮಗುವಿದ್ದಂತೆ, ನಾನೇನು ಅದನ್ನು ಅಲಕ್ಷಿಸುವುದಿಲ್ಲ."

ಕಾತ್ಯಾಯನಿ ಹೇಳಬೇಕೆಂದಿದ್ದ ದ್ವಂದ್ವದ ಒಂದು ಅಂಶಕ್ಕೆ ಮಾತ್ರ

ರಾಜ ತಾನಾಗಿಯೇ ಉತ್ತರಕೊಟ್ಟಿದ್ದ. ಅದಕ್ಕೇ ಹೇಳಿದಳು,

"ನನ್ನ ಅತ್ತೆ ಮಾವ ಇದ್ದಾರೆ. ಅವರ ವಂಶಗೌರವ, ಊರಿನಲ್ಲಿ ಅವರ ಸ್ಥಾನಮಾನ, ಮೊದಲಾದುವನ್ನೂ ನಾನು ಯೋಚಿಸಬೇಕು."

ರಾಜನು ಅವಳ ಕೈಹಿಡಿದ, "ಕಾತ್ಯಾಯನೀ, ಈ ಪ್ರಶ್ನೆ ಹೊಸತಲ್ಲ. ಈ ಸ್ಥಾನಮಾನದ ಪ್ರಶ್ನೆಯು ಮನುಷ್ಯ ಜೀವನದಲ್ಲಿ ಬರುವ ಎಲ್ಲ ವಿರೋಧಗಳ ಮೂಲ. ಹಾಗೆಂದು ಮನಸ್ಸಿನ ಮೂಲಧರ್ಮಕ್ಕೆ ಯಾರೂ ಅನ್ಯಾಯ ಮಾಡಿಕೋಬಾರದು. ನೀನು ಅಷ್ಟನ್ನು ಅರ್ಥ ಮಾಡಿಕೊಂಡರೆ ಸಾಕು.... ನನ್ನ ಮಾತಿಗೆ ಉತ್ತರ ಕೊಡು," ಎಂದು ಅವಳ ಕೈಯನ್ನು ಹಿಸುಕಿ ಕೇಳಿದ.

"ನಿಮ್ಮನ್ನು ಬಿಟ್ಟು ನಾನು ಬದುಕಲಾರೆ," ಎಂದು ಅವಳು ನುಡಿದಳು.

ಆ ಮಾತು ಹೊರಬಂದ ಮೇಲೆ ಅವರ ಮನಸ್ಸಿನಲ್ಲಿಯ ಝಂಝಾವಾತದ ಎರಡು ಸುಳಿಗಳು ಒಂದರಲ್ಲಿ ಇನ್ನೊಂದು ಬೆರೆತು ಹೋದಂತೆ ಇಬ್ಬರೂ ಸಮಾಧಾನ ಹೊಂದಿದರು. ಮುಂದೆ ಸುಮಾರು ಒಂದು ಗಂಟೆಯ ವರೆಗೂ ಮಾತನಾಡುತ್ತಾ ಕುಳಿತಿದ್ದರು.

ಆ ಸಂಜೆಯಲ್ಲಿ ಕಾತ್ಯಾಯನಿಯ ಮನಸ್ಸು ಪ್ರಫುಲ್ಲವಾಗಿದ್ದಿತು. ಆದರೆ, ಮನೆಗೆ ಬಂದು ರಾತ್ರಿಯ ಊಟ ಮಾಡಿ ಮಲಗಿದಾಗ ಅವಳ ಮನಸ್ಸು ಹೊಯ್ದಾಡಹತ್ತಿತು. ಅಭ್ಯಾಸದ ಕಾರಣದಿಂದ ಮಗುವನ್ನು ಅಜ್ಜಿಯ ಹತ್ತಿರ ಬಿಟ್ಟು, ಮಹಡಿಯ ಮೇಲೆ ತಾನೊಬ್ಬಳೇ ಮಲಗುತ್ತಿದ್ದಳು. ಆ ಗಳಿಗೆಗೆ ತಾನು ಕಾಲೇಜಿಗೆ ಹೋದ ಮೊದಲನೆಯ ದಿನದ ನೆನಪಾಯಿತು. ತನ್ನ ಗತಿಸಿದ ಪತಿಯು ಮುಗಿಸದಿದ್ದ ಪರೀಕ್ಷೆಯನ್ನು ಪೂರ್ಣ ಮಾಡುವುದಕ್ಕಾಗಿ ತಾನು ಕಾಲೇಜಿಗೆ ಹೊರಟ ಕಾರಣವು ಅವಳ ಮನಸ್ಸನ್ನು ಕುಕ್ಕಿತು. ಯಾವ ಶಂಕೆಯಿಲ್ಲದೆ, ಅವಳ ಅತ್ತೆ ಮಾವ ಅವಳನ್ನು ಕಾಲೇಜಿಗೆ ಕಳಿಸಿದ್ದರು. ಫೀಜು, ಪುಸ್ತಕ, ರೈಲಿನ ಟಿಕೆಟ್ ಮೊದಲಾಗಿ ಬೇಕಾದಷ್ಟು ಹಣವನ್ನು ಮಾವನವರು ಅವಳ

ಕೈಗೆ ಕೊಡುತ್ತಿದ್ದರು. ಇತ್ತೀಚೆಗೆ ಮನೆಯ ಹಣಕಾಸಿನ ಜವಾಬ್ದಾರಿಯನ್ನೂ ಕ್ರಮೇಣ ಅವಳ ಮೇಲೆಯೇ ಬಿಡುತ್ತಿದ್ದರು. ನಾಲ್ಕು ವರ್ಷ ತುಂಬುವ ಮಗು ಮುಂದಿನ ವರ್ಷ ಶಾಲೆಗೆ ಹೋಗಬೇಕು. ಈ ಪರಿಸ್ಥಿತಿಯೆಲ್ಲ ಕಣ್ಣಿಗೆ ಕಟ್ಟಿ, ತನ್ನ ಸಂಸಾರವನ್ನು ಬಿಟ್ಟು ಈಗ ಮತ್ತೊಂದು ಮದುವೆ ಮಾಡಿಕೊಂಡು ಹೊರಟು ಹೋಗುವುದೆ? ತನ್ನ ಗತಿಸಿದ ಪತಿ, ಅತ್ತೆ ಮಾವ, ಮಗು ಎಲ್ಲರಿಗೂ ಅದೆಂಥ ಅಪರಾಧವೆಸಗುತ್ತಿದ್ದೇನೆ ಎಂದು ಯೋಚಿಸಿದಳು. --- ರಾತ್ರಿ ಬಲು ಹೊತ್ತು ಹೀಗೆಯೇ ನರಳಿ ನಾಳೆಯಿಂದ ರಾಜಾರಾಯರನ್ನು ಭೇಟಿಯಾಗಬಾರದೆಂದೂ ನಾಗಲಕ್ಷ್ಮನನ್ನು ನೋಡಲು ಹೋಗಬಾರದೆಂದೂ ತೀರ್ಮಾನಿಸಿದಳು.

ಮಾಡಿದ್ದ ನಿರ್ಧಾರದಂತೆ ಇಡಿಯ ಒಂದು ವಾರ ಕಾತ್ಯಾಯನಿ ರಾಜನನ್ನು ನೋಡಲಿಲ್ಲ. ಅವನ ತರಗತಿಗೂ ಹೋಗಲಿಲ್ಲ. ಆಕಸ್ಮಾತ್ ಹುಡುಗಿಯರ ಕೋಣೆಗೆ ಯಾರ ಕೈಯಿಂದಲಾದರೂ ಹೇಳಿ ಕಳಿಸಿಯಾರೆಂದು ಅವಳು ಅಲ್ಲಿಯೂ ಇರುತ್ತಿರಲಿಲ್ಲ. ಆ ಒಂದು ವಾರ ಅವಳು ವಿಚಿತ್ರವಾದ ಹಿಂಸೆಯನ್ನು ಅನುಭವಿಸುತ್ತಿದ್ದಳು. ತನ್ನ ಸಹಜ ಮನೋಧರ್ಮವನ್ನು ಅದಮ್ಯವಾಗಿ ಹತ್ತಿಕ್ಕಿಕೊಂಡಷ್ಟೂ ಅದು ದುಸ್ಸಹವಾಗತೊಡಗಿತು. ಒಂದು ದಿನ ಇಡೀ ರಾತ್ರಿ ಅವಳಿಗೆ ನಿದ್ರೆ ಬರಲಿಲ್ಲ. ಧರ್ಮಕರ್ಮದ ವಿಷಯ ಯೋಚಿಸಿ ಯೋಚಿಸಿ ಅವಳ ತಲೆ ಬರಡಾಗಿದ್ದಿತು. ಬೆಳಗಿನ ಮೂರು ಗಂಟೆಗೆ ಅವಳು ಒಂದು ನಿರ್ಧಾರಕ್ಕೆ ಬಂದು ಮುಟ್ಟಿದಳು. ಉಳಿದ ಎರಡು ಗಂಟೆಗಳನ್ನು ಪ್ರಯಾಸದಿಂದ ಕಳೆದಳು; ಹಾಸಿಗೆ ಬಿಟ್ಟು, ಎದ್ದವಳೇ ಸ್ನಾನ ಮಾಡಿದಳು. ಹಿತ್ತಲಿಗೆ ಹೋಗಿ, ಜಾಜಿಯ ಹೂವನ್ನು ಕುಯ್ದು, ಒಂದು ಉದ್ದನೆಯ ಮಾಲೆಯನ್ನು ಮಾಡಿದಳು. ಬಾಳೆ ಎಲೆಯಲ್ಲಿ ಅದನ್ನು ಸುತ್ತಿ ಅದನ್ನು ಕರವಸ್ತ್ರದಲ್ಲಿ ಇಟ್ಟುಕೊಂಡಳು.

ಕಾಲೇಜಿನಲ್ಲಿ ನೇರವಾಗಿ ಅಧ್ಯಾಪಕರ ಕೋಣೆಯ ಬಾಗಿಲಿಗೆ ಹೋಗಿ, 'ರಾಜಾರಾಯರನ್ನು ಕರೆ' ಎಂದು ಜವಾನನಿಗೆ ಹೇಳಿದಳು. ಹೊರಗೆ ಬಂದು ಅವಳ ಮುಖವನ್ನು ನೋಡಿದ ರಾಜ ಸಂಭ್ರಮದಿಂದ

"ಇಷ್ಟು ದಿನ..... " ಹೇಳುವ ಮೊದಲೇ ಅವಳು "ಈವೊತ್ತು ರಜಕ್ಕೆ ಬರೆದುಹಾಕಿ. ಎಲ್ಲಾದರೂ ಯಾರೂ ಇಲ್ಲದ ಕಡೆ ಹೋಗೋಣ, ತುಂಬಾ ಮಾತನಾಡಬೇಕು" ಎಂದಳು.

ರಾಜ ತನ್ನ ಸೈಕಲನ್ನು ತಳ್ಳಿಕೊಂಡು ಬಂದ. ಇಬ್ಬರೂ ಹುಣಸೂರು ರಸ್ತೆಯನ್ನು ಹಿಡಿದರು. ಅವರು ಅರ್ಧ ಗಂಟೆ ನಡೆದರೂ ಜನರು ರಸ್ತೆಯಲ್ಲಿ ಹೋಗುತ್ತಲೇ ಇದ್ದರು. ಕೊನೆಗೆ ರಾಜ ಹೇಳಿದ, "ನೀನು ಸೈಕಲ್ ಮೇಲೆ ಕುಳಿತುಕೋ. ಬೇಗ ಹೋಗಬಹುದು."

"ಸೈಕಲ್ ಮೇಲೆ ಕುಳಿತು ನನಗೆ ರೂಢಿ ಇಲ್ಲ. ಬಿದ್ದು ಬಿಟ್ಟರೆ?"

"ನನ್ನ ಹಿಡಿತದಲ್ಲಿರುವ ತನಕ ನೀನು ಬೀಳುವ ಪ್ರಶ್ನೆಯೇ ಇಲ್ಲ," ಎಂದು ರಾಜ ಅವಳ ಮುಖ ನೋಡಿ ನಕ್ಕನು. ಯಾರಾದರೂ ಕಂಡರೆ ಎಂಬ ಸಂಕೋಚದಿಂದ ಅವಳು ಹಿಂಜರಿದರೂ ಅವಳ ಕೈಹಿಡಿದು ಮೊದಲು ಅವಳನ್ನು ಫ್ರೇಮಿನ ಮೇಲೆ ಕೂರಿಸಿ ಸೈಕಲ್ ಹತ್ತಿದ. ಅವಳ ಎರಡೂ ಭುಜಗಳನ್ನು ಬಳಸಿ ಅವನು ಸೈಕಲಿನ ಹ್ಯಾಂಡಲ್ ಹಿಡಿದಿದ್ದ. ತನ್ನ ಮೈಯನ್ನು ಬಗ್ಗಿಸಿ, ಪೆಡಲ್ ತುಳಿಯುವಾಗ ಅವಳು ಅವನ ಎದೆಗೆ ಒರಗಿದಂತಾಗುತ್ತಿತ್ತು. ಹೀಗೆಯೇ ನಾಲ್ಕು ಮೈಲು ದೂರ ಹೋದ ಮೇಲೆ ಒಂದು ತೋರೆ ಸಿಕ್ಕಿತು. ನಿರ್ಜನವಾದ ಆ ಸ್ಥಳದಲ್ಲಿ, ರಾಜ ಸೈಕಲ್ ಮಲಗಿಸಿ, "ಇಲ್ಲಿ ಕೂರೋಣ" ಎಂದ.

ಕಾತ್ಯಾಯನಿ ಹುಲ್ಲಿನ ಮೇಲೆ ಕುಳಿತಳು. ರಾಜ ಬಂದು ಅವಳ ಪಕ್ಕದಲ್ಲಿ ಕುಳಿತುಕೊಳ್ಳುತ್ತ "ಈಗ ಹೇಳು, ನೀನು ಯಾಕೆ ಇಷ್ಟು ದಿನ ನನ್ನನ್ನು ತಪ್ಪಿಸಿದೆ?"

ಒಂದು ನೀಳವಾದ ನಿಟ್ಟುಸಿರು ಬಿಟ್ಟು ಅವಳು ಹೇಳಿದಳು. "ನನ್ನ ಮನಸ್ಸಿನೊಳಗೇ ಹಿಂಸಾತ್ಮಕವಾದ ಒಂದು ದ್ವಂದ್ವ ನಡೆಯುತ್ತಿತ್ತು. ನಿನ್ನೆ ರಾತ್ರಿ ಅದನ್ನು ತುಳಿದು ಮೇಲೆದ್ದು ಬಂದೆ." ಮಾತಾಡುತ್ತಲೇ ಅವಳು ಸಾವರಿಸಿಕೊಳ್ಳುತ್ತಿದ್ದ ಕರವಸ್ತ್ರದ ಕಡೆಗೆ ಅವನ ಗಮನ ಹರಿಯಿತು. ಅದರಲ್ಲಿ ಸುತ್ತಿ ತಂದಿದ್ದ ವಸ್ತುವನ್ನು ಹಾಸಿಗೆಯಿಂದ

ತಿಳಿದುಕೊಂಡನಾದರೂ, "ಅದರಲ್ಲಿರುವುದೇನು?" ಎಂದು ಕೇಳಿದ.

"ನಿಮಗಾಗಿಯೇ ಇದನ್ನು ತಂದೆ," ಎಂದು ಅವಳು ಅದನ್ನು ಬಿಚ್ಚಿ ಮಾಲೆಯನ್ನು ಕೈಲಿ ಹಿಡಿದು ನಿಂತಳು. ಅದನ್ನು ಅವಳು ಅವನ ಕೊರಳಿಗೆ ಹಾಕುವವಳಿದ್ದಳು. ಅವಳು ಕುಳಿತಿದ್ದ ಭಂಗಿ, ಉಟ್ಟ ಸೀರೆ, ಕೈಯ ಮಾಲೆ ಅವನ ಕಣ್ಣನ್ನು ಮಿಂಚಿನಂತೆ ಹಿಡಿದುವು.

"ಸ್ವಲ್ಪ ತಡೆದು ಹಾಕೋಪಂತೆ," ಎಂದು ಅವಳನ್ನೆ ದಿಟ್ಟಿಸಿ ನೋಡತೊಡಗಿದ.

ಕಾತ್ಯಾಯನಿ ಸುಂದರ ಯುವತಿ. ಸುಮಾರು ಇಪ್ಪತ್ತಮೂರು ವರ್ಷಗಳ, ಮನಸ್ಸನ್ನು ಅಪಹರಿಸುವಂತಹ ನಿಲುವಿನ ತರುಣಿ. ಅವಳ ಮೈ ಆರೋಗ್ಯದ ಕಾಂತಿಯಿಂದ ಬೆಳಗುತ್ತಿತ್ತು. ಅವಳು ನಡೆಯುತ್ತಿದ್ದರೆ ರಕ್ತ ಚಿಮ್ಮುವ ಹಾಗೆ ಕಂಪಾಗುವ ಪಾದಗಳು, ಬೆಳದಿಂಗಳು ಘನರೂಪಗೊಂಡಂತಹ ಮೈಬಣ್ಣ, ಮೈಮೇಲೆ ಒಂದೂ ಆಭರಣವಿಲ್ಲ. ಗಂಭೀರವಾದರೂ ಮೃದುವಾದ ಮುಖ.

"ಆಶ್ಚರ್ಯ. ಹಿಂದೆ ನಾನು 'ಮೂಲ ತತ್ವ' ನಾಟಕ ಬರೆಯುವ ಮೊದಲು ಒಂದು ಕನಸು ಬಿದ್ದಿತ್ತು ಅಂತ ಹೇಳಿದ್ದೆನಲ್ಲ- ಅದರಲ್ಲಿ ನೀನು ಇದೇ ಸುಂದರ ಭಂಗಿಯಲ್ಲಿ, ಇದೇ ಮೋಹಕ ಭಂಗಿಯಲ್ಲಿ ಕಾಣಿಸಿದ್ದೆ. ಹೀಗೆಯೇ ಕೈಯಲ್ಲಿ ಮಾಲೆ ಇದ್ದಿತು."

"ಅಂದರೆ ನಿಮ್ಮ ನಾಟಕಕ್ಕೆ ನಾನೇ ಸ್ಫೂರ್ತಿಯೇ?"

"ಹೌದು," ಎನ್ನುತ್ತಿದ್ದಾಗಲೇ ಕಾತ್ಯಾಯನಿ ಆ ಮಾಲೆಯನ್ನು ಅವನ ಕೊರಳಿಗೆ ಹಾಕಿದಳು. ಅವಳ ಕಣ್ಣು ಮುಚ್ಚಿದುವು. ಅವನು ಮೃದುವಾಗಿ ಅವಳ ಭುಜವನ್ನು ತನ್ನ ತೊಡೆಗಳಿಗೆ ಒರಗಿಸಿ, ತನ್ನ ತೋಳುಗಳಲ್ಲಿ ಭದ್ರವಾಗಿ ಅಪ್ಪಿ ಹಿಡಿದನು. ಅವನ ಕೊರಳಲ್ಲಿದ್ದ ಜಾಜಿಯ ಮಾಲೆ ಅವರಿಬ್ಬರನ್ನೂ ಅಸಾಧಾರಣ ಮನಃಸ್ಥಿತಿಗೆ ಏರಿಸಿದ್ದಿತು. ತರುಣಿಯ ಸ್ಪರ್ಶದ ಹೊಸ ಅನುಭವದಿಂದ ಅವನು ಕಂಪಿಸುತ್ತಿದ್ದ. ಪುರುಷಸನ್ನಿಧಿಯಿಂದ ಪ್ರಕೃತಿಯು ಉನ್ಮತ್ತಳಾಗಿ, ಅವಳ ಚೈತನ್ಯವು

ತನ್ನ ಮೂಲ ಶಕ್ತಿಯಿಂದ ನರ್ತಿಸುತ್ತಿತ್ತು.

ಕಾಲ ದೇಶಗಳನ್ನು ಮರೆತ ಸುಪ್ತ ಸ್ಥಿತಿಯಲ್ಲಿ ಅವರಿಬ್ಬರೂ ಯಾರ ಆತಂಕವಿಲ್ಲದೆ ತಮ್ಮ ಮೂಲ ಮನಃಸ್ಥಿತಿಯನ್ನು ಪಡೆದಿದ್ದರು. ಆ ಹಸುರಿನ ರಾಜ್ಯದಲ್ಲಿ ಅವರ ಧ್ವನಿ ಸನ್ನಿಧಿಯನ್ನು ಹೀಯಾಳಿಸುವ ಕಟ್ಟುಪಾಡು ಇರಲಿಲ್ಲ.

ಕಾತ್ಯಾಯನಿ ಆ ದಿನ ಕಣ್ಣುತುಂಬ ನಿದ್ದೆ ಮಾಡಿದಳು. ರಣಾಂಗಣವಾಗಿದ್ದ ಅವಳ ಮನೋರಂಗವು ಈಗ ಸುಂದರವಾದ ನೃತ್ಯರಂಗವಾಗಿದ್ದಿತ್ತು. ಆ ದಿನದಿಂದ ಅವಳು ನಿತ್ಯವೂ ರಾಜನ ಮುಖ ಕಾಣುತ್ತಿದ್ದಳು. ಆತ್ಯಂತಿಕ ಏಕಾಂತವನ್ನು ಬಯಸಿ ಒಂದು ದಿನ ಅವರು ಒಮ್ಮೆ ಬೃಂದಾವನದ ತನಕ ಹೋಗಿ ಬಂದರು.

ನವರಾತ್ರಿಯ ರಜ ಕಳೆಯಿತು. ಡಿಸೆಂಬರ್ ತಿಂಗಳ ರಜೆಯು ಬಂದು ಹೋಯಿತು. ಫೆಬ್ರವರಿ ತಿಂಗಳ ಕೊನೆಯಲ್ಲಿ ಒಂದು ದಿನ ರಾಜ ಕಾತ್ಯಾಯನಿಗೆ ಹೇಳಿದ:

"ಇನ್ನು ನಿಧಾನ ಮಾಡುವುದು ಬೇಡ. ನಿಮ್ಮ ಮನೆಗೆ ಹೇಳಿ ಒಪ್ಪಿಗೆ ಪಡೆದುಕೊಂಡು ಬಾ."

ಹಾಗೆ ಮಾಡಲು ಕಾತ್ಯಾಯನಿಯೂ ಉತ್ಸುಕಳಾಗಿದ್ದಳು. ಆ ವಿಚಾರ ಕಳೆದ ಮೂರು ತಿಂಗಳಿನಿಂದಲೂ ಇತ್ತು. ಬಾಯಿಬಿಟ್ಟು ಮನೆಯಲ್ಲಿ ಹೇಳುವುದು ಹೇಗೆ? ಅದರಿಂದ ಶ್ರೋತ್ರಿಯರ ಸಂಸ್ಕಾರಕ್ಕೆ ಸಿಡಿಲು ಹೊಡೆದ ಹಾಗೆ ಆಗುವುದು ಎಂದು ಅವಳಿಗೆ ತಿಳಿದಿತ್ತು. ಇನ್ನೂ ಅದು ತನ್ನ ಮನೆಯೇ! ಐದು ವರ್ಷದ ಹಿಂದೆ, ಆ ಮನೆಯ ಹೊಸಲಿನ ಹತ್ತಿರ ಅಕ್ಕಿಯನ್ನು ತುಂಬಿದ ಸೇರನ್ನು ಉರುಳಿಸಿ, ಸಂಪತ್ತು ಉಕ್ಕಿ ಹರಿಯುವ ಸಂಕೇತದೊಡನೆ ಅವಳು ಆ ಸಂಸಾರವನ್ನು ಪ್ರವೇಶಿಸಿದ್ದಳು. ಶ್ರೋತ್ರಿಯ ಮನೆತನದ ವಂಶವೃಕ್ಷದಲ್ಲಿ ಅವಳ ಹೆಸರು ಅಳಿಸಲಾಗದಂತೆ ಸೇರಿ ಹೋಗಿದ್ದಿತು. ಈಗ ಅವಳು ಅದನ್ನು ಅಳಿಸಲು ಸಿದ್ಧಳಾಗಿದ್ದಳು.

"ಮನೆಯಲ್ಲಿ ಹೇಳಿದೆಯಾ?" ಎಂದು ರಾಜ ಅವಳನ್ನು ಪ್ರತಿದಿನವೂ ಕೇಳುತ್ತಿದ್ದ. ಒಂದು ದಿನ ಅವನು "ಇಷ್ಟು ಧೈರ್ಯವಿಲ್ಲದ

ನೀನು ಇಷ್ಟು ದೂರ ಯಾಕೆ ನನ್ನನ್ನು ಓಡಿಸಿ ನಡೆದೆ?" ಎಂದು ಕೋಪದಿಂದ ಕೇಳಿದ್ದ. ಮನೆಯಲ್ಲಿ ಕೇಳದೇ ಒಂದು ದಿನ ಇದ್ದಕ್ಕಿದ್ದಂತೆ ಮಗನನ್ನು ಮೈಸೂರಿಗೆ ತಂದು, ಅಲ್ಲಿಂದಲೇ ತನ್ನ ನಿರ್ಧಾರವನ್ನು ತಿಳಿಸಿ ಅವರಿಗೆ ಕಾಗದ ಬರೆಯುವ ವಿಚಾರವೂ ಅವಳ ತಲೆಯಲ್ಲಿ ಸುಳಿಯಿತು. ಇದು ತೀರ ಕ್ಷುದ್ರ ಮಾರ್ಗವೆಂದು ಸುಮ್ಮನುಳಿದಳು.

ಮಾರ್ಚ್ ತಿಂಗಳಲ್ಲಿ ಕಾಲೇಜಿನ ಪಾಠ ಪ್ರವಚನಗಳಿಗೆ ರಜೆ ಬಂದು, ಹದಿನೈದು ದಿನಗಳ ನಂತರ ಪರೀಕ್ಷೆ ಪ್ರಾರಂಭವಾಗುವವರೆಗೂ ಅವಳು ಮೈಸೂರಿಗೆ ಬರುವಂತಿರಲಿಲ್ಲ. ಆ ದಿನ ರಾಜ, "ನೀನಾಗಿಯೇ ಮನೆಯಲ್ಲಿ ಹೇಳದಿದ್ದರೆ ನಾನು ಅವರಿಗೆ ಕಾಗದ ಬರೆದು ತಿಳಿಸುತ್ತೇನೆ. ನೀನು ಇವತ್ತು ನಂಜನಗೂಡಿಗೆ ಹೋಗಲೇ ಬೇಡ," ಎಂದನು.

"ಇವತ್ತು ರಾತ್ರಿ ಖಂಡಿತ ಹೇಳ್ತೀನಿ. ನಾಳೆ ಕ್ಲಾಸ್ ಇಲ್ಲದಿದ್ದರೂ ನಾನು ಬರುತ್ತೀನಿ. ನೀವು ಬನ್ನಿ," ಎಂದು ಆಶ್ವಾಸನೆಯಿತ್ತಳು.

ನಿಲ್ದಾಣದಿಂದ ಮನೆಯನ್ನು ಸೇರುವ ವೇಳೆಗೆ, ಅವ್ಯಕ್ತಭಯದಿಂದ ಅವಳು ಕಂಪಿಸುತ್ತಿದ್ದಳು. ಅವಳ ಮೈ ಮುಖಗಳು ಬೆವೆತವು. ತನ್ನ ನಡಿಗೆಯ ತೋಲನ ತನಗೇ ತಿಳಿಯದೆ ಅವಳು ದಾರಿಯಲ್ಲಿ ತೂರಿಕೊಂಡು ಮನೆ ತಲುಪಿದಳು.

"ಯಾಕೆ ಮಗು, ಇಷ್ಟೊಂದು ಬೆವರಿದ್ದೀಯಾ? ಆಗಲೇ ಚೈತ್ರ ಮಾಸ ಬರುತ್ತಾ ಇದೆ. ಹೊರಗೆ ಕಾಲಿಡೋಕೆ ಆಗದಷ್ಟು ಬಿಸಿಲು, ಸೆಕೆ. ಬೇಗ ಪರೀಕ್ಷೆ ಮುಗಿಸಿ ಬಿಡಬಾರದೆ ಸರ್ಕಾರದೋರು" ಎಂದರು, ಮನೆಯಲ್ಲಿಯೇ ಇದ್ದ ಶ್ರೋತ್ರಿಯರು.

"ಅಮ್ಮ, ಯಾಕೆ ಇಷ್ಟೊತ್ತಾಯಿತು?" ಎಂದು ಕೇಳಿದ ಚೀನಿಯನ್ನು ಆಕೆ ತಬ್ಬಿಕೊಂಡಳು.

ರಾತ್ರಿ ಊಟವಾದ ಮೇಲೆ ಮಾವನವರೊಂದಿಗೆ ಈ ವಿಷಯವನ್ನು ಪ್ರಸ್ತಾಪಿಸಲೆಂದರೆ, ಅವಳು ಕುಸಿದುಹೋಗಿದ್ದಳು. ಕೊನೆಗೆ ಅವಳಿಗೆ ಒಂದು ಯೋಚನೆ ಹೊಳೆಯಿತು. ತಾನು ಹೇಳಬೇಕೆಂದಿರುವುದನ್ನೆಲ್ಲ

ಒಂದು ಕಾಗದದಲ್ಲಿ ಬರೆಯುವುದು. ನಾಳೆ ಅದನ್ನು ಮಾವನವರ ಕೈಯಲ್ಲಿ ಕೊಟ್ಟು, ಮೈಸೂರಿಗೆ ಹೋಗುವುದು. ಸಂಜೆ ಹಿಂತಿರುಗಿ ಬಂದಾಗ ಅವರೇ ಮಾತನ್ನು ಪ್ರಾರಂಭಿಸುತ್ತಾರೆ, ಆಗ ತಾನು ಮಾತನಾಡುವುದು ಸುಲಭ.

ಮಧ್ಯರಾತ್ರಿ ಕಳೆದು ಬೆಳಗು ಮುಂಜಾನೆ ಮೂರು ಗಂಟೆಯವರೆಗೂ ಅವಳ ಉದ್ದವಾದ ಹಾಳೆಗಳಲ್ಲಿ ಹದಿನಾರು ಪುಟಗಳನ್ನು ತುಂಬಿದ್ದಳು. ಮನುಷ್ಯನ ಮೂಲ ಸ್ವಭಾವವನ್ನು ತುಳಿದು ಮಾಡಿರುವ ಸಮಾಜದ ಕೃತಕತೆಯನ್ನು ಅವುಗಳಲ್ಲಿ ಅವಳು ವಿವರಿಸಿದ್ದಳು; ಸ್ತ್ರೀಪುರುಷರ ಸಹಜ ಸುಖಜೀವನಕ್ಕೆ ಆಚಾರ ವಿಚಾರಗಳು ಹೇಗೆ ತೊಡಕಾಗಿವೆ ಎನ್ನುವುದನ್ನು ವಿಶ್ಲೇಷಿಸಿ, ಧರ್ಮದ ಮೂಲವೇನು ಎಂಬ ಪ್ರಶ್ನೆ ಜಿಜ್ಞಾಸೆಗಳನ್ನು ಮಾಡಿದ್ದಳು. ಕೊನೆಯಲ್ಲಿ "ಇದನ್ನು ನೀವು ಸಮಾಜದ ಕುರುಡು ತೆರೆಯನ್ನು ಸರಿಸಿ ಮಾನವೀಯ ಅಂತಃಕರಣ ದೃಷ್ಟಿಯಿಂದ ನೋಡಬೇಕಾಗಿ ಪ್ರಾರ್ಥಿಸುತ್ತೇನೆ. ನಿಮ್ಮ ಮಗಳೇ ಪ್ರೀತಿಯ ಕರೆಗೆ ಓಗೊಟ್ಟು ನನ್ನಂತೆ ತೀರ್ಮಾನಿಸಿದ್ದರೆ, ತಂದೆಯಾದ ನೀವು ಹೇಗೆ ಅನುಭೂತಿಯನ್ನು ತೋರಿಸಿದ್ದಿರೋ ಹಾಗೆಯೇ ನೋಡಿ. ನಾನು ನಿಮ್ಮ ನಂಬಿಕೆಗೆ ದ್ರೋಹ ಮಾಡಿಲ್ಲ. ನಿಮ್ಮ ಅಪ್ಪಣೆಯನ್ನು ಪಡೆದು, ನಿಮ್ಮ ಪವಿತ್ರ ಆಶೀರ್ವಾದವನ್ನು ಹೊತ್ತೇ ನನ್ನ ಹೊಸಬಾಳನ್ನು ಜೀವಿಸಲು ಹೋಗುತ್ತಿದ್ದೇನೆ. ನೀವು ಆಶೀರ್ವದಿಸಬೇಕಾಗಿ ನಿಮ್ಮ ಚರಣಗಳಲ್ಲಿ ತಲೆಯಿಟ್ಟು ಬೇಡಿಕೊಳ್ಳುತ್ತಿದ್ದೇನೆ."

ಅವಳು ಎದ್ದಾಗ ಬೆಳಗ್ಗಿನ ಏಳುವರೆ ಗಂಟೆ. ಲಘುಬಗೆಯಿಂದ ಸ್ನಾನಮಾಡಿ, ಊಟಮುಗಿಸಿ, ತಿಂಡಿಯ ಕ್ಯಾರಿಯರ್‌ನ ಪುಸ್ತಕಗಳನ್ನು ತೆಗೆದುಕೊಂಡಳು. ನಿನ್ನೆ ಬರೆದಿಟ್ಟಿದ್ದ ಲಕೋಟೆಯನ್ನು ಎತ್ತಿಕೊಳ್ಳುವಾಗ ಕೈ ನಡುಗುತ್ತಿತ್ತು. ಅದೇ ತಾನೇ ದೇವರ ಪೂಜೆಯನ್ನು ಮುಗಿಸಿ ಶ್ರೋತ್ರಿಯರು ಹೊರ ಬರುತ್ತಿದ್ದರು. ಆವೇಶ ಬಂದವಳಂತೆ ಅವಳು ಹೋಗಿ ಅವರ ಪಾದಗಳಿಗೆ ನಮಸ್ಕರಿಸಿದಳು.

"ಇದೇನು ವಿಶೇಷ ಮಗು? ಪರೀಕ್ಷೆ ಇನ್ನೂ ಹದಿನೈದು ದಿನವಿಲ್ಲವೇ–

"ಇಲ್ಲ, ಈ ಕಾಗದಾನ ನೋಡಿ" ಎಂದು ಹೇಳಿ, ಲಕೋಟೆಯನ್ನು ಅವರ ಕೈಲಿಟ್ಟು, ಹೊರಟು ಹೋದಳು.

ಆ ಸಂಜೆಯು ಅವಳ ಸ್ಥೈರ್ಯ ಇಚ್ಛಾ -ಶಕ್ತಿಗಳನ್ನು ಪರೀಕ್ಷಿಸುವ ಮಹತ್ವದ ಘಳಿಗೆ. ಮನೆಯನ್ನು ಪ್ರವೇಶಿಸಿದಾಗ ಶ್ರೋತ್ರಿಯರು ಯಾರೋ ರೈತರೊಡನೆ ಮಾತಾನಾಡುತ್ತಿದ್ದರು. ಅವಳಿಗೆ ಎಂದಿನಂತೆ ಅತ್ತೆಯನ್ನು ಮಾತನಾಡಿಸುವ ಧೈರ್ಯವಾಗಲಿಲ್ಲ. ನೇರವಾಗಿ ಮಹಡಿಯೇರಿ ಹೋದಳು. ರಾತ್ರಿಯಾದರೂ ಕೆಳಗೆ ಇಳಿಯಲೇ ಇಲ್ಲ.

ಎಂಟೂವರೆಗೆ ದೇವರ ಪೂಜೆ ಮುಗಿದ ಮೇಲೆ, ಮಾವನವರೇ ಅವಳನ್ನು ಊಟಕ್ಕೆ ಕೂಗಿದರು. ಕೆಳಗಿಳಿದು ಬಂದಳು. ಅತ್ತೆಯು ಮೂವರಿಗೂ ಬಡಿಸುತ್ತಿದ್ದರು. ವಾತಾವರಣ ಸ್ತಬ್ಧವಾಗಿತ್ತು. ಸರಿಯಾಗಿ ಊಟಮಾಡದೆ ಅನ್ನವನ್ನು ಚೆಲ್ಲುತ್ತಿದ್ದ ಚೀನಿಯನ್ನು ಮೃದು ಮಾತುಗಳಿಂದ ಮುದ್ದಿಸುತ್ತಾ ಅತ್ತೆ ಊಟಕ್ಕೆ ಬಡಿಸುತ್ತಿದ್ದರು. ಊಟ ಮುಗಿದ ಮೇಲೂ ಶ್ರೋತ್ರಿಯರು ಏನು ಹೇಳುವ ಲಕ್ಷಣ ತೋರಲಿಲ್ಲ. ಕಾತ್ಯಾಯನಿಯು ಅಶಾಂತಿಯಿಂದ ಚಡಪಡಿಸುತ್ತಿದ್ದಳು. ಕೊನೆಗೆ ತಾನೇ ಮಹಡಿಯ ಮೇಲಿನ ಅವರ ಅಧ್ಯಯನದ ಕೋಣೆಗೆ ಹೋಗಿ, ಅವರೆದುರು ತುಸು ದೂರದಲ್ಲಿ ಕುಳಿತಳು. ಅನಂತರ ಅವಳೇ ಕೇಳಿದಳು.

"ನನ್ನ ಕಾಗದ ಓದಿದೀರಾ?"

"ಓದಿದೆ."

"ನೀವು ಅಪ್ಪಣೆ ಕೊಡಬೇಕು."

ಒಂದು ನಿಮಿಷ ಮೌನವಾಗಿದ್ದು ಅನಂತರ ತಮ್ಮ ಶಾಂತವಾದ ಸಾಮಾನ್ಯ ಧ್ವನಿಯಿಂದ ಶ್ರೋತ್ರಿಯರು ಹೇಳಿದರು: "ನನ್ನ ಅಪ್ಪಣೆ ಪಡೆಯುವ ಪ್ರಶ್ನೆ ಇಲ್ಲಿ ಬರೋಲ್ಲ. ನಿನಗೆ ತಿಳಿದ ಹಾಗೆ ಮಾಡುವ ಸ್ವಾತಂತ್ರ್ಯ ನಿನಗಿದೆ."

ಶ್ರೋತ್ರಿಯರ ಮಾತಿನಲ್ಲಿ ಭರ್ತ್ಸನೆಯ ಧ್ವನಿಯಿರಲಿಲ್ಲ. ಆದರೂ ಅದು ಅವಳನ್ನು ಕುಟುಕಿತು. "ನೀವು ಹಾಗೆಂದರೆ ಹೇಗೆ? ಮನೆಯ

ಯಜಮಾನರು, ನಿಮ್ಮ ಅನುಮತಿ ಇಲ್ಲದೆ ನಾನು ಏನೂ ಮಾಡಲಾರೆ."

"ನಾನು ಮನೆಯ ಯಜಮಾನ ಅಂತ ನೀನು ಈಗಲೂ ಒಪ್ತೀಯಾ? ಎಲ್ಲಿಯವರೆಗೆ ಈ ಸಂಸಾರದಲ್ಲಿ ಒಬ್ಬಳು ಅಂತ ನಿನ್ನ ಮನಸ್ಸಿನಲ್ಲಿ ಇರುತ್ತೋ ಅಲ್ಲಿಯವರೆಗೆ ನಿನ್ನ ಕೆಲಸ ಕಾರ್ಯಗಳ ಮೇಲೆ ನನ್ನ ಅಧಿಕಾರ ಇರುವುದು ಸಹಜ. ನಿನ್ನ ಮಾರ್ಗವು ಬೇರೆಯಾಗುವ ಯೋಚನೆ ಯಾವಾಗ ನಿನ್ನ ಸಂಕಲ್ಪದಲ್ಲಿ ಬರುತ್ತೋ ಆ ದಿನದಿಂದಲೇ ನಿನ್ನ ಮೇಲಿನ ನನ್ನ ಯಜಮಾನಿಕೆ ತನಗೆ ತಾನೇ ಅಳಿದು ಹೋಗುತ್ತೆ, ಅಲ್ಲವೆ?"

ಕಾತ್ಯಾಯನಿ ಏನೆಲ್ಲ ವಾದಗಳಿಗೆ ಸಿದ್ಧತೆ ಮಾಡಿಕೊಂಡಿದ್ದಳು. ತನ್ನ ನಿಶ್ಚಯದ ಔಚಿತ್ಯವನ್ನು ಸಿದ್ಧಪಡಿಸಲು ಹತ್ತಾರು ವಾದಗಳನ್ನು ಯೋಚಿಸಿಕೊಂಡಿದ್ದಳು. ಈಗ ಅವೆಲ್ಲ ಮರೆತು ಹೋದುವು. ಆದರೂ ಹೇಳಿದಳು, "ಈ ಸಮಾಜದಲ್ಲಿ ಹೆಣ್ಣಿನ ಬಾಳಿನಲ್ಲಿ ಏನಾದರೂ ಅಪಘಾತವಾದರೆ ಅದನ್ನು ಪುನಃ ರೂಪಿಸುವ ಸಾಧ್ಯತೆಯೇ ಇಲ್ಲ. ಹೆಣ್ಣಿನ ಅಂತಃಕರಣವನ್ನು ಅರ್ಥಮಾಡಿಕೊಳ್ಳುವ ಸಹಾನುಭೂತಿ ಈ ಜಗತ್ತಿಗೆ ಮೊದಲಿನಿಂದಲೂ ಇಲ್ಲ. ಅಲ್ಲದೆ --"

ಅವಳ ಮಾತನ್ನು ಅರ್ಧಕ್ಕೆ ತಡೆದು ಶ್ರೋತ್ರಿಯರು ಹೇಳಿದರು: "ಸಮಾಜದ ವಿಷಯ ಬಿಡು. ಇದು ಸದ್ಯ ನಿನ್ನೊಬ್ಬಳ ಪ್ರಶ್ನೆ. ನಿನ್ನ ನಿಶ್ಚಯಕ್ಕೆ ನಾನು ಎದುರು ಬರುವುದಿಲ್ಲ. ಆದರೆ ನಮ್ಮ ನಿಶ್ಚಯ, ಸಂಕಲ್ಪಗಳು ನಮ್ಮನಮ್ಮ ಧರ್ಮ, ಹೊಣೆ ಮೊದಲಾದುವುಗಳಿಗೆ ಅನುಗುಣವಾಗಿರಬೇಕಲ್ಲವೇ?"

"ಯೋಗ್ಯವಾದ ಕಾಲದಲ್ಲಿ ಸಂಸಾರಿಯಾಗಿರುವುದೇ ಮನುಷ್ಯರಿಗೆ ಸಹಜ ಧರ್ಮವಲ್ಲವೇ?"

"ಸಹಜವೆನ್ನುವುದೆಲ್ಲವೂ ಧರ್ಮವಲ್ಲ," ಅವರು ಆ ಸ್ಥಿತಿಯಲ್ಲೂ ನಕ್ಕು ಹೇಳಿದರು.

"ಸಂಸಾರವನ್ನು ಅನುಭವಿಸುವುದೇ ಜೀವನದ ಪರಮ ಗುರಿಯಲ್ಲ. ಸಂತಾನೋತ್ಪತ್ತಿಗಾಗಿ ಗೃಹಸ್ಥ ಜೀವನ. ವಂಶ ಬೆಳೆದ ಮೇಲೆ ಅಕಸ್ಮಾತ್

ಗ್ರಹವು ನಷ್ಟವಾದರೆ ಪುನಃ ಅದಕ್ಕೆ ತಿರುಗಿ ಹೋಗುವುದು ಧರ್ಮವಲ್ಲ."

ಮುಂದೆ ಯಾವ ಮಾತನಾಡಬೇಕೆಂದು ಅವಳಿಗೆ ತಿಳಿಯಲಿಲ್ಲ. ಹತ್ತು ನಿಮಿಷ ತಡೆದು ಶ್ರೋತ್ರಿಯರು ಹೇಳಿದರು:

"ವಾದವಿವಾದದಿಂದ ಇಂತಹ ವಿಷಯ ದಡ ಮುಟ್ಟುವುದಿಲ್ಲ. ಸ್ವಸುಖದ ಕುಬ್ಜತನವನ್ನು ಮೀರಿ ಎತ್ತರವಾಗಿ ಬೆಳೆದು ನಿಂತು ನೋಡಿದಾಗಲೇ ಧರ್ಮಾಧರ್ಮಗಳು ಸ್ಪಷ್ಟವಾಗಿ ಕಣ್ಣಿಗೆ ಕಾಣುವುವು."

ಶ್ರೋತ್ರಿಯರು ಮೇಲೆ ಎದ್ದರು. ಆ ಕೋಣೆಯ ಬಾಗಿಲಿಗೆ ಬಂದು ಪುನಃ ಹೇಳಿದರು: "ಈ ವಿಷಯದಲ್ಲಿ ಪೂರ್ಣಸ್ವಾತಂತ್ರ್ಯ ನಿನ್ನದೇ. ಹೊರ ಜಗತ್ತು ಬಲವಂತದಿಂದ ವ್ಯಕ್ತಿಯ ಮೇಲೆ ಹೇರುವ ಕಟ್ಟಳೆಗಳು ಧರ್ಮದ ಪೂರ್ಣ ರೂಪವಲ್ಲ ಅನ್ನೋದರಲ್ಲಿ ನನಗೂ ವಿಶ್ವಾಸವಿದೆ."

ಕಾತ್ಯಾಯನಿಯು ಅಲ್ಲಿಂದ ಎದ್ದು, ತಾನು ಮಲಗುತ್ತಿದ್ದ ಸ್ಥಳಕ್ಕೆ ಬಂದಳು. ಪ್ರಚಂಡವಾಗಿ ತುಂಬಿ ಉಕ್ಕುತ್ತಿದ್ದ ಅವಳ ಸಹಜ ಚೇತನವು ಈಗ ಬತ್ತಿಹೋದಂತೆ ಆಗಿತ್ತು. ಗಾವುದ ಗಾವುದ ದೂರವನ್ನು ಹಾರಿ ರೆಕ್ಕೆ ಸೋತು ಒಂದು ಕಡೆ ಮುದುರಿ ಕೂರುವ ಹಕ್ಕಿಯಂತೆ ಅವಳು ಹಾಸಿಗೆಯ ಮೇಲೆ ಮೈ ಮುದುರಿಕೊಂಡು ಮಲಗಿದಳು.

ಮರುದಿನ ಮೈಸೂರಿನತ್ತ ಹೊರಟ ಗಾಡಿಯಲ್ಲಿ ಅವಳು ಕುಳಿತಿದ್ದಳು. ಡಬ್ಬಿಯ ಕಿಟಕಿಯಿಂದ ಚಾಮುಂಡಿ ಬೆಟ್ಟ ಕಾಣುತ್ತಿತ್ತು. ಇದ್ದಕ್ಕಿದ್ದಂತೆಯೇ ಅವಳಿಗೆ ತನ್ನ ಮಾವನವರ ನೆನಪಾಯಿತು. ಅವರ ದೇಹಾಕೃತಿಯು ಬೆಟ್ಟದಷ್ಟೆ ಭವ್ಯ. ಅರುವತ್ತನ್ನು ಮೀರಿದ ಈ ವಯಸ್ಸಿನಲ್ಲೂ ಅವರ ಎತ್ತರ, ಮೈಕಟ್ಟು, ನಡೆಯುವಾಗ ಅವರು ಇಡುತ್ತಿದ್ದ ಸ್ಥಿರವಾದ ಪಾದಗಳು, ಅವರು ದೇವರ ಪೂಜೆ ಮಾಡುವಾಗ ಕಣ್ಮುಚ್ಚಿ ಕುಳಿತಿರುವ ಭಂಗಿ ಇವುಗಳಿಗೆ ಬೆಟ್ಟವೇ ತಕ್ಕ ಹೋಲಿಕೆ ಎಂದು ಅವಳು ಯೋಚಿಸಿದಳು. ಅವರ ಮನೋನಿಗ್ರಹದ ಶಕ್ತಿ, ಸಂಯಮ ಮತ್ತು ಜೀವನದ ಸಮಸ್ಯೆಗಳನ್ನು ಎದುರಿಸುತ್ತಿದ್ದ ಸ್ಥೈರ್ಯಗಳು ಬೆಟ್ಟದ ಸ್ಥಿರತೆಯನ್ನೇ ಹೋಲುತ್ತಿದ್ದುವು. ಅವಳ ಗಂಡ ಸತ್ತಾಗ ಎಲ್ಲರು ಅಳುತ್ತಿದ್ದರೂ ಕೈಗೆ ಬಂದ ಒಬ್ಬನೇ ಮಗನನ್ನು ಕಳೆದುಕೊಂಡು ಕೂಡ

ಅವರು ಸ್ಥೈರ್ಯದಿಂದಲೇ ಆ ದುಃಖವನ್ನು ನುಂಗಿಕೊಂಡಿದ್ದರಲ್ಲವೆ.?

ಚಾಮರಾಜಪುರ ಸ್ಟೇಶನ್ ಬಂದಿತ್ತು. ಗಾಬರಿಯಿಂದ ಅವಳು ಕಿಟಕಿಯ ಹೊರಗೆ ನೋಡಿದಳು. ರಾಜ ಬಂದಿರಲಿಲ್ಲ. ಸ್ಟೇಷನ್ನಿನ ಹೊರಗೆ ಬಂದಾಗ ಬೆಟ್ಟವು ಇನ್ನೂ ಕಣ್ಣಿಗೆ ಬೀಳುತ್ತಿದ್ದಿತು. ಅದನ್ನು ಹತ್ತೋಣ ಎನ್ನುವ ಬಯಕೆ ಅವಳಲ್ಲಿ ಅಕಾರಣವಾಗಿ ಮೂಡಿತು.

ಚಾಮುಂಡಿಪುರವನ್ನು ದಾಟಿ, ಬೆಟ್ಟದ ಪಾದವನ್ನು ತಲುಪಿದಳು. ಮಧ್ಯಾಹ್ನದ ಸಮಯ ಸ್ವಲ್ಪ ಎತ್ತರ ಏರುವುದರೊಳಗೆ ಅವಳಿಗೆ ದಣಿವಾಯಿತು. ಅವಳು ಒಂದು ಕಲ್ಲಿನ ಮೇಲೆ ಸುಮ್ಮನೆ ಕುಳಿತಳು. ಕೆಳಗೆ ದಕ್ಷಿಣ ಭಾಗದಲ್ಲಿ ಮೈಸೂರು ನಗರ ಸುತ್ತುವರಿದು ಹಬ್ಬಿತ್ತು. ಅದರ ದೊಡ್ಡ ಸೌಧಗಳು, ಹೆಮ್ಮೆಯಿಂದ ಮೆರೆಯುವ ಅರಮನೆ, ರಾಜಮಹಲುಗಳೆಲ್ಲ ಸಣ್ಣವಾಗಿ ಕಾಣುತ್ತಿದ್ದುವು.

ತುಸು ಹೊತ್ತಿಗೆ ಪುನಃ ಮೇಲೇರತೊಡಗಿ, ಬೆಟ್ಟದ ನೆತ್ತಿಯ ಮೇಲೆ ಬಂದಳು. ಅಲ್ಲಿಯೇ ಇದ್ದ ದೇವಾಲಯಕ್ಕೆ ಹೋಗಿ ಭಕ್ತಿಯಿಂದ ನಮಸ್ಕರಿಸಿ ಹೊರಗೆ ಬಂದು ಮರದಡಿಯಲ್ಲಿ ಕುಳಿತಳು. ಮನಸ್ಸಿನಲ್ಲಿ ಈಗ ಯಾವ ದ್ವಂದ್ವವೂ ಇರದೆ, ಮರಳಿನ ಪಾತ್ರದಲ್ಲಿ ಪ್ರವಹಿಸುವ ತೊರೆಯಂತೆ ಪ್ರಶಾಂತವಾಗಿತ್ತು. ಶಾಂತಿಯಲ್ಲಿ ಅವಳು ಒಂದು ತೀರ್ಮಾನವನ್ನು ಮುಟ್ಟಿದಳು.

ಸಂಜೆ ಮನೆಗೆ ಬಂದು, ದೇವರ ಪೂಜೆಗೆ ಸಿದ್ಧವಾಗುತ್ತಲಿದ್ದ ಶ್ರೋತ್ರಿಯರ ಕಾಲುಮುಟ್ಟಿ ನಮಸ್ಕರಿಸಿ ಹೇಳಿದಳು: "ಯಾವುದೋ ಘಳಿಗೆಯಲ್ಲಿ ನಾನು ಏನೂ ಯೋಚನೆ ಮಾಡಿದ್ದೆ. ಅದು ತಪ್ಪು ಅಂತ ತಿಳಿದು ಕ್ಷಮಿಸಿ."

"ಎಲ್ಲರಿಗೂ ಒಂದೊಂದು ಕ್ಷಣ, ಅಲ್ಲದ ಯೋಚನೆ ಬರುತ್ತೆ. ಅದಕ್ಕಾಗಿ ಯೋಚಿಸಬೇಡ. ನೀನಿನ್ನು ಓದಿಕೊಳ್ಳಮ್ಮ." ಎಂದು ಶಾಂತರಾಗಿಯೇ ಹೇಳಿದರು.

"ನಿನ್ನೆ ರಾತ್ರಿ, ನಾನು ಆಡಿದ ಮಾತು ಆ ಕ್ಷಣದ ಉದ್ವೇಗದ

ಅಮ್ಮನಿಗೆ ಹೇಳಿದಿರಾ?"

"ಇಲ್ಲ . ಹೇಳಲಿಲ್ಲ. ಹೇಳೋದೂ ಇಲ್ಲ. ಆ ಕಾಗದ ದಿವಾನ್‌ಖಾನೆ ಗೂಡಿನಲ್ಲಿದೆ. ನೀನೇ ಹರಿದು ಹಾಕಿ ಬಿಡು."

ರಾಜನನ್ನು ಎದುರಿಸಲು ಧೈರ್ಯವಿಲ್ಲದೆ, ಕಾತ್ಯಾಯನಿ ಮೈಸೂರಿಗೆ ಹೋಗದೆ ಉಳಿದಳಾದರೂ ಪರೀಕ್ಷೆಯ ದಿನಗಳಲ್ಲಿ ಒಂದು ದಿನ ಅವನನ್ನು ಸಂಧಿಸಲೇ ಬೇಕಾಯಿತು. ಇಬ್ಬರೂ ಕಾಲೇಜಿನ ಪಶ್ಚಿಮಭಾಗದಲ್ಲಿ ಒಂದು ಮರದ ಹತ್ತಿರ ಬಂದಾಗ, "ನೀವು ನನ್ನನ್ನು ಮರೆತು ಬಿಡಿ" ಎಂದು ಹೇಳಿದಳು. ಅವಳ ಧ್ವನಿ ಭಾರವಾಗಿತ್ತು.

"ಯಾಕೆ ಹೀಗೆ ಹೇಳ್ತೀಯಾ? ಅದಕ್ಕಾದ್ರೂ ಏನು?"

"ಅದಾವುದನ್ನೂ ಕೇಳಬೇಡಿ. ನೀವೊಬ್ಬ ಅನರ್ಹಳನ್ನು ಪ್ರೀತಿಸಿದಿರಿ. ಬೇರೆ ಒಬ್ಬ ಹುಡುಗೀನ ಮದುವೆ ಮಾಡಿಕೊಂಡು ಸುಖವಾಗಿರಿ. ನಾನು ನಿಮಗಿಂತ ವಯಸ್ಸಿನಲ್ಲಿ ವೃದ್ಧೆ ಎನಿಸುತ್ತೆ." ಹೇಳುತ್ತ, ಅವಳ ಕಣ್ಣು ತುಂಬಿಬಂದವು. "ಇನ್ನು ಹೆಚ್ಚು ಮಾತನಾಡುವುದು ಬೇಡ. ನಾವಿಬ್ಬರೂ ಇನ್ನು ಭೇಟಿಯಾಗುವ ಸಂಭವವಿಲ್ಲ" ಎಂದು ಗದ್ಗದ ಧ್ವನಿಯಿಂದ ನುಡಿದು ಹೊರಟು ಬಿಟ್ಟಳು.

ರಾಜ ಸಂಭ್ರಾಂತನಾಗಿ ನಿಂತು ಅವಳೆಡೆಗೆಯೇ ನೋಡುತ್ತಿದ್ದ. ಕಳೆದ ಆರು ತಿಂಗಳಿನಿಂದ ಅವನ ಬಾಳಿನ ಅರ್ಥವನ್ನು ಹೆಚ್ಚಿಸಿದ ಕಾತ್ಯಾಯನಿ, ಈಗ ಕೈಬಿಟ್ಟು ಹೊರಟು ಹೋಗಿದ್ದಳು. ಅವನ ಮನಸ್ಸು, ಬುದ್ಧಿ, ಭಾವನೆಗಳನ್ನು ತುಂಬಿದ್ದ ಅವಳನ್ನು ಮರೆಯುವುದೇ? ಈ ಜನ್ಮದಲ್ಲಂತೂ ಸಾಧ್ಯವಿಲ್ಲ. ಅವಳನ್ನು ಪಡೆಯುವ ಮಾರ್ಗವೂ ಅವನಿಗೆ ತೋಚುವುದಿಲ್ಲ. ಇನ್ನೂ ಇಪ್ಪತ್ತು ನಾಲ್ಕು ತುಂಬದ, ಸುಪುಷ್ಟ, ಸುಂದರ ತರುಣಿ. "ನಾನು ನಿಮಗಿಂತ ವೃದ್ಧೆ ಎನಿಸುತ್ತದೆ" ಎಂದು ಹೇಳಿದ ಮಾತು ಅವನನ್ನು ದಿಗ್ಭ್ರಮೆಗೊಳಿಸಿತು.

ಪರೀಕ್ಷೆಯ ಕೊನೆಯ ಪೇಪರನ್ನು ಮುಗಿಸಿ ಬಂದ ಕಾತ್ಯಾಯನಿ, "ಇವತ್ತಿನಿಂದ ದಿನಾ ಮೈಸೂರು ಸುತ್ತೋದು ತಪ್ಪಿತು." ಎಂದು ಅತ್ತೆಯ ಸಂಗಡ ಹೇಳಿದಳು.

"ಹೌದು ಕಣೇ. ಸದ್ಯ ನೀನು ಪಾಸಾಗಿ ಬಿಟ್ಟರೆ ಅವನ ಹೆಸರು ಉಳಿಯುತ್ತೆ" ಎಂದು ಭಾಗೀರತಮ್ಮ ಮಗನನ್ನು ನೆನೆಸಿಕೊಂಡರು.

ಈಗ ಕಾತ್ಯಾಯನಿ ಮೊದಲಿಗಿಂತ ಹೆಚ್ಚಾಗಿ ಮಗುವಿನೊಡನೆ ಕಾಲ ಕಳೆಯುತ್ತಿದ್ದಳು. ಚೀನಿ ಆಗಲೇ ಐದು ವರ್ಷದ ಹುಡುಗ. ಈ ಸಲದ ಚೈತ್ರ ವೈಶಾಖ ಮಾಸದಲ್ಲಿ ಒಂದು ಸರಿಯಾದ ಮುಹೂರ್ತ ನೋಡಿ, ಅವನಿಗೆ ಚೌಲಕರ್ಮವಾಗಬೇಕು. ಬೆಳ್ಳಿಯ ರೂಪಾಯಿಯಿಂದ ಜೇನುತುಪ್ಪವನ್ನು ನೆಕ್ಕಿಸಿ, ಅಕ್ಕಿಯ ತಟ್ಟೆಯ ಮೇಲೆ ಶ್ರೀ ಓನಾಮವನ್ನು ಬರೆಸುವ ಶಾಸ್ತ್ರವು ಕ್ರಮಬದ್ಧವಾಗಿ ನಡೆಯಬೇಕು. ಮೊಮ್ಮಗನ ಚೌಲಕ್ಕೆ ಉಂಡೆ, ಚಕ್ಕುಲಿಗಳನ್ನು ದೊಡ್ಡ ಪ್ರಮಾಣದಲ್ಲೇ ಮಾಡಬೇಕೆಂದು ಭಾಗೀರತಮ್ಮ ಯೋಚಿಸಿದ್ದಾರೆ.

ಪರೀಕ್ಷೆ ಮುಗಿದ ಕೆಲದಿನಗಳು ಕಾತ್ಯಾಯನಿಗೆ ಬೇಸರವಾಗುತ್ತಿತ್ತು. ಮೊದಲಿಗಿಂತ ಹೆಚ್ಚಾಗಿ ಮನೆಗೆಲಸದಲ್ಲಿ ಕಾಲ ಕಳೆಯಲು ಅವಳು ಪ್ರಯತ್ನಿಸುತ್ತಿದ್ದಳು. ಆದರೆ ಭಾಗೀರತಮ್ಮ, ಮತ್ತು ಅವರ ಮನೆಯಲ್ಲೇ ಬೆಳೆದ ವಿಧವೆ ಲಕ್ಷ್ಮೀ ಇಬ್ಬರೂ ಮನೆಯ ಕೆಲಸದಲ್ಲಿ ಸದಾ ನಿರತರಾಗಿದ್ದಾಗ, ಅವಳಿಗೆ ಕೆಲಸವೇ ಇರುತ್ತಿರಲಿಲ್ಲ. ಬೆಳಿಗ್ಗೆ ಸ್ನಾನಮಾಡಿ ದೇವರ ತೀರ್ಥವನ್ನು ತೆಗೆದುಕೊಳ್ಳುತ್ತಿದ್ದಳು. ಮಾವನವರ ಸೂಚನೆಯಂತೆ ಭಗವದ್ಗೀತೆಯನ್ನು ಓದಲೆಂದಳು. ಓದಿದ್ದು ಬುದ್ಧಿಗೆ ತಿಳಿಯುವುದು. ಆದರೆ ಮನಸ್ಸಿಗೆ ಹಿಡಿಯುತ್ತಿರಲಿಲ್ಲ. ಒಂದು ತಿಂಗಳು ಪ್ರಯತ್ನಪಟ್ಟರೂ ಬೇಸರ ಕಳೆಯಲಿಲ್ಲ. ಬದಲು, ಚಿತ್ತದ ಅಶಾಂತಿ ಹೆಚ್ಚಾಗುತ್ತಿತ್ತು. ರಾತ್ರಿಯ ಹೊತ್ತು ಮಹಡಿಯನ್ನು ಬಿಟ್ಟು ಅವಳು ಕೆಳಗೆ ಅತ್ತೆಯ ಹತ್ತಿರ ಮಲಗಲು ಪ್ರಾರಂಭಿಸಿದಳು. ಚೀನಿಯು ರೂಢಿವಶದಿಂದ ಅಜ್ಜಿಯ ಜೊತೆಯಲ್ಲೇ ಮಲಗುತ್ತಿದ್ದ. ಕಾತ್ಯಾಯನಿಗೆ ರಾತ್ರಿ ನಿದ್ದೆ ಬರುತ್ತಿರಲಿಲ್ಲ. ಸದಾ ರಾಜನ ನೆನಪಾಗುವುದು. ಅವರು ಈಗ ಏನು ಮಾಡುತ್ತಿರಬಹುದು? ತನ್ನನ್ನು ಹೀಗೆಯೇ ನೆನೆಸಿಕೊಳ್ಳುತ್ತಿರುವರೆ? ಅವರಿಗೆ ಅದೆಷ್ಟು ಕೋಪ ಬಂದಿದೆಯೊ?

ದಿನಗಳೆದಂತೆ ಅವಳಿಗೆ ಬೇಸರ ಹೆಚ್ಚಿತು. ಬಾಳಿನ ಅರ್ಥ

ಕಾಣದಾಯಿತು. ಊಟ-ತಿಂಡಿಗಳ ರುಚಿ ಇಲ್ಲದಾಯಿತು. ಸದಾ ಆಸೆಯು ಉರಿಯುತ್ತಿದ್ದ ಅವಳ ದೇಹವು ಜ್ವಾಲೆಗೆ ಸಿಕ್ಕಿದ ಕೋಮಲ ಲತೆಯಂತೆ ಬಾಡಿಹೋಯಿತು. ಮೈಯ ಶಕ್ತಿ ಕ್ಷೀಣಿಸತೊಡಗಿತು. ಶರೀರದ ಶಕ್ತಿ ಕ್ಷೀಣವಾದಷ್ಟೂ ಆಸೆಯ ಶಕ್ತಿ ಪ್ರಚಂಡವಾಗುತ್ತಿತ್ತು. ಆಗಂತೂ ಕೂತಲ್ಲಿ, ನಿಂತಲ್ಲಿ ರಾಜನದೇ ಕನವರಿಕೆ. ಅವರೊಡನೆ ತಾನು ತಿರುಗಲು ಹೋಗುತ್ತಿದ್ದುದು, ಅವರ ಮೈಗೆ ಮೈ ತಗುಲಿಸಿ ಕೂರುತ್ತಿದ್ದುದು, ಆ ಬೃಂದಾವನದ ಪ್ರವಾಸ, ಸಲ್ಮೆಯ ಮಾತುಗಳು ಎಲ್ಲ ನೆನಪಾಗುತ್ತಿದ್ದುವು.

ಒಂದು ದಿನವಂತೂ ಬೆಳಗಿನಿಂದಲೆ ಈ ಮಾನಸಿಕ ವೇದನೆ ಉಲ್ಬಣಿಸಿತು. ಊಟ-ಉಡಿಗೆ, ಮಾತು, ಕೆಲಸ ಯಾವುದರಲ್ಲಿಯೂ ಆಸಕ್ತಿ ಇರಲಿಲ್ಲ. ರಾತ್ರಿಯೆಲ್ಲ ಅವಳು ಹೊರಳಾಡುತ್ತಿದ್ದಳು. ನಡುರಾತ್ರಿಯ ಎರಡು ಗಂಟೆಯ ವೇಳೆಯಲ್ಲಿ ಅವಳನ್ನು ಸೀಳಿಕೊಂಡು ಒಂದು ತೀರ್ಮಾನವು ಎದ್ದು ನಿಂತಿತು. ನಾಳೆಯ ದಿನವೇ ಮೈಸೂರಿಗೆ ಹೊರಟು ಹೋಗಬೇಕು ಎಂದು.

ಆದರೆ ಮಾವನವರಿಗೆ ಹೇಳುವ ಬಗೆ ಹೇಗೆ? ಅವರೆದುರು ನಿಂತು ಮಾತನಾಡುವುದಕ್ಕೆ ಭಯವಾಗುತ್ತಿತ್ತು. ಅದು ಹಾವನ್ನು ಕಂಡರೆ ಆಗುವಂತಹ ಭಯವಲ್ಲ. ದೇವರನ್ನು ಸ್ಮರಿಸಿದಾಗ ತಪ್ಪಿತಸ್ಥನಿಗೆ ಆಗುವಂತಹ ಭಯ.

ಮರುದಿನ ಎದ್ದ ತಕ್ಷಣ ಅವಳು ಅತ್ತೆಗೆ ಹೇಳಿದಳು, "ಮರೆತಿದ್ದೆ. ನನ್ನ ಒಬ್ಬ ಮೇಡಂನ ಮದುವೆ. ಈ ಹೊತ್ತು ಅವರು ಊಟಕ್ಕೆ ಕರೆದಿದ್ದರು. ನಾನು ಮೈಸೂರಿಗೆ ಹೋಗಿ ಬರ್‍ತೀನಿ."

ಮಾವನವರು ಪೂಜೆಗೆ ಕುಳಿತಿದ್ದರು. ಭಾಗೀರತಮ್ಮ "ಹೋಗಿ ಬಾ" ಎಂದರು. ಕಾತ್ಯಾಯನಿ ಶುಭ್ರವಾದ ಸೀರೆಯುಟ್ಟಳು. ಹೊರಗೆ ಬರುತ್ತಿದ್ದಾಗ ಚೀನಿ "ಅಮ್ಮಾ, ಎಲ್ಲಿಗೆ ಹೋಗ್ತೀಯಾ? ನಾನು ಬರ್‍ತೀನಿ" ಎಂದು ಕೇಳಿತು. ಅವಳ ಯೋಚನೆಯೇ ಬೇರೆ. ಮೊದಲು ತಾನು ಹೋಗದೆಯೇ ಮಗುವನ್ನು ಕರೆದೊಯ್ಯುವುದು ಹೇಗೆ? ಮಗುವಿನ ಎರಡೂ ಕೆನ್ನೆಗಳನ್ನು ಮುದ್ದಿಸಿ, "ನೀನು ಆಮೇಲೆ ಬರುವೆಯಂತೆ"

ಎಂದು ಹೇಳಿ ಹೊರಟು ಬಿಟ್ಟಳು.

ಗಾಡಿಯಿಂದಿಳಿದು, ರಾಜನ ಮನೆಗೆ ಹೋಗಿ ಬಾಗಿಲು ತಟ್ಟಿದಳು. ಷಫಿ ಬಂದು ಬಾಗಿಲು ತೆರೆದ. "ಚಿಕ್ಕಪ್ಪ ಎಲ್ಲಿ?" ಎಂದು ಕೇಳಿದಾಗ, ಅವನು ರೂಮು ತೋರಿಸಿದ. ಅದರ ಬಾಗಿಲು ತೆರೆದು ಒಳಗೆ ಪ್ರವೇಶಿಸಿದಾಗ, ರಾಜನನ್ನು ಕಂಡು ದಿಗ್ಭ್ರಮೆಯಾಯಿತು. ಅವನು ಇಳಿದು ಹೋಗಿ ಅಸ್ಥಿಪಂಜರದ ರಚನೆಯಾಗಿದ್ದ. ಒಳಗೆ ಬಂದ ಅವಳನ್ನು ಅವನು ಸಂಶಯದ ನೋಟದಿಂದ ನೋಡುತ್ತಿದ್ದ. ಆಕೆ ಕೋಣೆಯ ಬಾಗಿಲು ಮುಚ್ಚಿ, ಅವನ ಬಳಿ ಸಾರಿ "ಈಗ ನಂಬಿ; ನಾನು ಇನ್ನು ಅಲ್ಲಿಗೆ ಹೋಗುವುದಿಲ್ಲ" ಎಂದಳು.

ಕಾತ್ಯಾಯನಿಯ ಮಾತನ್ನು ರಾಜ ತಕ್ಷಣ ನಂಬಲಿಲ್ಲ. ವಿಸ್ಮಯಪೂರಿತ ದೃಷ್ಟಿಯಿಂದ ಅವನು ಅವಳ ಮುಖವನ್ನು ದಿಟ್ಟಿಸಿದ. ಆಗ ಅವಳೇ "ನನ್ನನ್ನು ನೋಡಿ. ಹೀಗೆ ಉಟ್ಟ ಬಟ್ಟೆಯಲ್ಲಿ ಬಂದಿದ್ದೇನೆ, ನೀವು ಹೇಳಿದ ರೀತಿ ಮದುವೆಯಾಗೋಣ. ಸಿವಿಲ್ ಮದುವೆ, ದೇವಸ್ಥಾನ, ಯಾವುದೂ ಸರಿ, ಅಥವಾ ಯಾವುದೂ ಬೇಡ. 'ನೀನು ಸುಮ್ಮನೆ ನನ್ನ ಜತೆ ಇರು' ಎಂದರೂ ಸರಿ. "ಹೇಗಾದರೂ ನನ್ನ ಪುರುಷ ನೀವು" ಎಂದು ಅವನನ್ನು ತನ್ನ ತೋಳುಗಳಿಂದ ಅಪ್ಪಿದಳು.

ಸಂಜೆಯ ಆರು ಗಂಟೆಗೆ ಕಾತ್ಯಾಯನಿ ಹಿಂತಿರುಗದಿದ್ದುದನ್ನು ನೋಡಿ, ಅವಳು ರಾತ್ರಿ ಹತ್ತರ ಗಾಡಿಗೆ ಬರಬಹುದೆಂದು ಮನೆಯಲ್ಲಿ ಎಲ್ಲರೂ ನಿರೀಕ್ಷಿಸಿದ್ದರು. ರಾತ್ರಿಯ ವೇಳೆ ಒಬ್ಬಳೇ ಬರುವಳೆಂದು ಶ್ರೋತ್ರಿಯರು ಸ್ಟೇಷನ್ನಿಗೆ ಹೋದರು. ಆ ಗಾಡಿಗೂ ಸೊಸೆ ಹಿಂದಿರುಗಲಿಲ್ಲ. ಆಕಸ್ಮಾತ್ ಅವಳು ಮೈಸೂರಿಗೆ ಅವರಲ್ಲಿಗೇ ಹೋಗಿಬಿಟ್ಟಳೇ ಎಂಬ ಯೋಚನೆ ಮೂಡಿತಾದರೂ, ನಿರಾಧಾರವಾಗಿ ಹಾಗೆ ಶಂಕಿಸುವುದು ತರವಲ್ಲೆಂದು ಮನೆಗೆ ಹಿಂತಿರುಗಿ 'ಈ ಗಾಡೀಲೂ ಬರಲಿಲ್ಲ. ಮದುವೆ ಮನೆ ಜನರು, ಇದ್ದು ಹೋಗು ಅಂತ ಬಲವಂತ ಮಾಡಿರಬೇಕು" ಎಂದರು.

ಮರುದಿನವೂ ಕಾತ್ಯಾಯನಿ ಬರಲಿಲ್ಲ. ಬದಲಿಗೆ ಬಂದು

ಲಕೋಟೆಯನ್ನು ಅಂಚೆಯವನು ಕೊಟ್ಟುಹೋದನು. ಅದರ ಮೇಲೆ ಬರೆದಿದ್ದ ವಿಳಾಸವು ಕಾತ್ಯಾಯನಿಯ ಅಕ್ಷರದ್ದೆಂದು ಅದನ್ನು ನೋಡಿದ ತಕ್ಷಣ ಶ್ರೋತ್ರಿಗಳು ಗುರುತಿಸಿದರು. ಅವರ ಅಂತಃಪ್ರಜ್ಞೆಗೆ ಎಲ್ಲ ಸಂಗತಿಯೂ ತಟ್ಟನೆ ಹೊಳೆಯಿತು. ತಕ್ಷಣ ಲಕೋಟೆಯನ್ನು ಒಡೆಯದೆ ಒಂದೆರಡು ನಿಮಿಷದಲ್ಲಿ ಚಿತ್ತದ ತೋಲನವನ್ನು ತಂದುಕೊಂಡು ಆ ಮೇಲೆ ಒಡೆದು ಓದಿದರು.

ನಾಲ್ಕು ದೊಡ್ಡ ಪುಟಗಳ ಕಾಗದ. "ನಿಮ್ಮ ಉತ್ತುಂಗ ವ್ಯಕ್ತಿತ್ವದ ಸ್ಫೂರ್ತಿಯಿಂದ ನಾನೂ ಸಂಯಮವನ್ನು ಸಾಧಿಸಲು ಯತ್ನಿಸಿದೆ. ಅದು ಸಾಧ್ಯವಾಗಲಿಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ವೈಶಿಷ್ಟ್ಯ, ಶಕ್ತಿ ಮತ್ತು ಪರಿಮಿತಿಗಳಿರುತ್ತವೆ. ಇಲ್ಲಿಗೆ ಹೊರಟು ಬರುವ ಮುಂಚೆ ನಿಮ್ಮೆದುರು ನಿಂತು ಈ ವಿಷಯ ಹೇಳುವ ಧೈರ್ಯ ಬರಲಿಲ್ಲ. ಇನ್ನು ಎರಡು ಮೂರು ದಿನಗಳಲ್ಲಿ ಒಂದು ಸಾಮಾಜಿಕ ಸಮಾರಂಭದಲ್ಲಿ ನಮ್ಮ ಮದುವೆ ಆಗಲಿದೆ. ಅದಕ್ಕೆ ನೀವು ಬನ್ನಿ ಎಂದು ಕರೆಯುವ ಉದ್ಧಟತನ ನನಗಿಲ್ಲ. ಆದರೆ ನನ್ನ ಹೊಸ ಬಾಳಿನಲ್ಲಿ ಶಾಂತಿ ಸಮಾಧಾನಗಳು ದೊರೆಯಲೆಂದು ನೀವು ಆಶೀರ್ವದಿಸಬೇಕಾಗಿ ನಿಮ್ಮ ಚರಣಗಳಲ್ಲಿ ತಲೆಯಿಟ್ಟು ಪ್ರಾರ್ಥಿಸುತ್ತೇನೆ."

ಕಾಗದವನ್ನೋದಿ ಶ್ರೋತ್ರಿಯರು ಮೂಕರಾಗಿ ಕುಳಿತರು. ಅವಳ ಬಗೆಗೆ ಅವರು ಕೋಪಗೊಳ್ಳಲಿಲ್ಲ. ಪ್ರಕೃತಿ ಸ್ತರದ ಸೆಳೆತದಿಂದ ಮೇಲೆದ್ದು ತನ್ನನ್ನು ತಾನು ರಕ್ಷಿಸಿಕೊಳ್ಳಲಾರದ ಅಭಾಗಿನಿಯೊಬ್ಬಳ ಚಿತ್ರವು ಅವರ ಕಣ್ಣ ಮುಂದೆ ಸುಳಿಯಿತು. ಮನಸ್ಸು ಕನಿಕರದಿಂದ ತುಂಬಿ ಹೋಯಿತು.

ಆದರೆ ಅನಾದಿ ಕಾಲದಿಂದ ಬೆಳೆದು ಬಂದ ಶ್ರೋತ್ರಿಯ ವಂಶದಲ್ಲಿ ಹಿಂದೆ ಎಂದೂ ಹೀಗೆ ಆಗಿರಲಿಲ್ಲ. ಅವರ ಮನೆಯಲ್ಲಿ ಬರೆದಿಟ್ಟಿದ್ದ ವಂಶವೃಕ್ಷದಲ್ಲಿ, ಒಬ್ಬ ಹೆಂಡತಿ ಇದ್ದರೂ ಮತ್ತೊಬ್ಬಳನ್ನು ಮದುವೆಯಾದವರಿದ್ದರು. ಗಂಡನನ್ನು ಕಳೆದುಕೊಂಡ ವಿಧವೆಯರೂ ಇದ್ದರು. ಬೇರೊಂದು ವಂಶದಿಂದ ಕನ್ಯಾದಾನವಾಗಿ ಕೊಡಲ್ಪಟ್ಟು ಈ ವಂಶದಿಂದ ಪರಿಗ್ರಹಿಸಲ್ಪಟ್ಟ ಎಲ್ಲ ಹೆಂಗಸರೂ ಇದೇ ವಂಶದವರಾಗಿ

ಬದುಕಿ ಸತ್ತಿದ್ದರು. ಮಹಾನದಿಗೆ ಸೇರುವ ಉಪನದಿಯೇ ಪುನಃ ತನ್ನತನವನ್ನು ಉಳಿಸಿಕೊಂಡು ಬೇರೊಂದು ಮಹಾನದಿಗೆ ಹರಿದು ಸೇರುವುದು ಹೇಗೆ ಅಸಾಧ್ಯವೋ ಅಂತಹ ದುಸ್ಸಾಧ್ಯ ಕೆಲಸವನ್ನು ಕಾತ್ಯಾಯನಿ ಮಾಡಿದ್ದಳು.

ಇನ್ನು ಭಾಗೀರತಮ್ಮನಿಗೆ ನಿಜ ಸಂಗತಿ ಹೇಳದೆ ಗತ್ಯಂತರವಿಲ್ಲ. ಲಕ್ಷ್ಮಿಯನ್ನು ಕೂಡಿಸಿಕೊಂಡು ಪತ್ರವನ್ನು ಓದಿಹೇಳಿದರು.

"ಈ ವಿಷಯ ನಿಮಗೆ ಮುಂಚೆ ಗೊತ್ತಿದ್ರೂ ನನಗೆ ಒಂದೂ ಹೇಳಲಿಲ್ಲವಲ್ಲಾ? ಛೀ. ಉಮ್ಮೇ ಮರಳಿ ಹಾಗೆ ಏನು ತಿಳಿಯದೋಳ ಹಾಗಿದ್ದು ಕೊನೆಗೆ ಸೇರಿದ ಮನೆಗೆ ಮಸಿ ಬಳಿದು ಹೋಗಿಬಿಟ್ಳು. ಆ ಲೌಡಿ ಕಾಲೇಜಿಗೆ ಹೋಗೋದು ಬೇಡ ಅಂತ ನಾನು ಅಂದಾಗ, ನೀವು ಅವಳ ಜೊತೆಯಲ್ಲಿ ಕುಣಿದಿರಿ. ಗಂಡನ ಹೆಸರು ಉಳಿಸೋಕೆ ಅಂತ ಕಾಲೇಜಿಗೆ ಹೋಗಿ ಗಂಡನ ವಂಶಾನ ಜಾಲಾಡು ಕೆಲಸ ಮಾಡಿದಳು. ಏನಿಲ್ಲ, ಮೈಸೂರಿಗೆ ಹೋಗೋಣ ನಡೀರಿ. ಅವಳನ್ನು ಕಟ್ಕೊಂಡೋನಿಗೂ ಮುಖಕ್ಕೆ ಮಂಗಳಾರತಿ ಮಾಡಿ ಅವಳ ತಲೆ ಮೇಲೆ ನಾಲ್ಕು ಬಿಗಿದು ಮುಂದಲೆ ಹಿಡಿದು ಎಳೆದುಕೊಂಡು ಬರೋಣ."

ಶ್ರೋತ್ರಿಯರು ಮೌನವಾಗಿ ಹೆಂಡತಿಯ ಸಲಹೆಯನ್ನು ಯೋಚಿಸುತ್ತಿದ್ದರು. ಭಾಗೀರತಮ್ಮನೇ ಕೇಳಿದರು, "ಯಾಕೆ ಸುಮ್ಮನೆ ಕುಳಿತಿರಿ?"

"ನಾವು ಮೈಸೂರಿಗೆ ಹೋಗೋದರಿಂದ ಯಾವ ಪ್ರಯೋಜನವೂ ಇಲ್ಲ. ಅವಳು ತಿಳಿಯದ ಮಗುವಲ್ಲ. ಅವಳ ಮನಸ್ಸಿನಲ್ಲೇನು ಈ ವಿಷಯದಲ್ಲಿ ಕದನ ತಳಮಳ ನಡೆದಿಲ್ಲ. ಬಲವಂತದಿಂದ ಏನು ಮಾಡಿದರೂ ಅದು ಹೆಚ್ಚು ದಿನ ನಿಲ್ಲೋದಿಲ್ಲ. ಅವರವರ ಪೂರ್ವಜನ್ಮದ ಕರ್ಮಕ್ಕೆ ತಕ್ಕ ಹಾಗೆ ನಡೀತಾರೆ."

"ಯಾವಾಗಲೂ ನಿಮ್ದು ವೇದಾಂತವೇ ಆಯಿತು. ನೀವು ಧರ್ಮರಾಯರು. ಮನೆಯಲ್ಲಿರಿ. ಲಕ್ಷ್ಮೀನ್ನ ಕರಕೊಂಡು ನಾನು ಹೋಗಿ ಅವಳ ರಟ್ಟೆ ಹಿಡಿದು ಎಳೆದುಕೊಂಡು ಬರ್ತೀನಿ" ಎಂದು ಭಾಗೀರತಮ್ಮ

ಕೂಗಿದರು. "ಲಕ್ಷ್ಮೀ, ಇವಳಿಗೆ ಸಮಾಧಾನ ಹೇಳು" ಎಂದು
ಶ್ರೋತ್ರಿಯರು ಅಲ್ಲಿಂದ ಎದ್ದರು. ಅವರ ಮುಖಕಾಂತಿಯು ಕದಡಿ
ಹೋಗಿತ್ತು.

ಕಾತ್ಯಾಯನಿಯು ಬರೆದಂತೆ ಶ್ರೀಪ್ರಕಾಶ ಭೋಜನ ಮತ್ತು ವಸತಿ
ಗೃಹದ ಹಜಾರದಲ್ಲಿ ಇಪ್ಪತ್ತು ಮೂವತ್ತು ಜನರ ಸಮಕ್ಷಮ ರಾ
ಮತ್ತು ಕಾತ್ಯಾಯನಿಯರು ಪರಸ್ಪರ ಮಾಲೆಗಳನ್ನು ಹಾಕಿದರು.
ಪುರೋಹಿತರೊಬ್ಬರು ಬಂದು ಮಾಂಗಲ್ಯಧಾರಣೆ ಮಾಡಿಸಿದರು.
ನಾಗಲಕ್ಷ್ಮಿಯೂ ಬಂದಿದ್ದಳು. ಡಾ. ರಾಯರು ಮಾತ್ರ ಇರಲಿಲ್ಲ. ತಮ್ಮ
ಆಪ್ತ ಕಾರ್ಯದರ್ಶಿನಿಯನ್ನು ಕಟ್ಟಿಕೊಂಡು, ಕೆಲವು ಅಪೂರ್ವ ಗ್ರಂಥಗಳ
ಪರಿಶೀಲನೆಗೆಂದು ಕಲಕತ್ತೆಗೆ ಹೊರಟು ಹೋಗಿದ್ದರು.

ಹಾಲ್‌ನಲ್ಲಿ ಜಮಖಾನೆಯನ್ನು ತೆಗೆದು ಕಸ ಗುಡಿಸಿ ಎಲ್ಲರಿಗೂ
ಎಲೆ ಹಾಕಿದ್ದರು. ಮಿತ್ರರ ಆಶಯದಂತೆ ನವದಂಪತಿಗಳು
ಜೊತೆಯಾಗಿಯೇ ಊಟಕ್ಕೆ ಕುಳಿತರು. ನಿಧಾನವಾಗಿ ಸಾಗುತ್ತಿದ್ದ
ಊಟದಲ್ಲಿ ಮಿತ್ರರು ತಮ್ಮ ತಮ್ಮಲ್ಲೇ ಮಾತನಾಡಿಕೊಳ್ಳುತ್ತಿದ್ದರು.
"ರಾಜಾರಾವ್ ಲಕೀ; ಹೊಡೆದು ಬಿಟ್ರು. ವಿಡೋ ಆದರೇನಂತೆ -
ಬಲು ನೀಟಾಗಿದ್ದಾಳೆ ಹುಡುಗಿ. ಇಷ್ಟು ಲವ್ಲಿಯಾಗಿದ್ದಾರೆ ನಾಲ್ಕನೇ
ಸಲ ವಿಡೋ ಆದವಳನ್ನಾದರೂ ಮದುವೆ ಮಾಡಿಕೋಬಹುದು." ಎಂದು
ಒಬ್ಬರು ನುಡಿದ ತಕ್ಷಣ, ಮತ್ತೊಬ್ಬರು, "ಹಾಗಂತ ನೀವು ಮಾಡಿಕೊಂಡರೆ
ಅವಳು ಐದನೇ ಸಲ ಮತ್ತೆ ವಿಡೋ ಆದಾಳು, ಎಚ್ಚರಿಕೆ!" ಎಂದು
ಉತ್ತರ ಕೊಟ್ಟರು.

ಮದುವೆಯಾದ ಸುಮಾರು ಹದಿನೈದು ದಿನಗಳು ನವದಂಪತಿಗಳು
ಈ ಪ್ರಪಂಚವನ್ನೇ ಮರೆತಿದ್ದರು. ಅವರಿಗೆ ಹೊರಗೆ ತಿರುಗುವುದು ಬೇಡ.
ನಾಟಕ, ಸಿನಿಮಾ ಯಾವುದೂ ಬೇಡ. ತಮ್ಮೀರ್ವರ ಮಿಲನದಲ್ಲಿರುವ
ಅದ್ವೈತ ಅನುಭವವನ್ನು ಅನಂತ, ಅಮರ, ನಿರಂತರ ಎಂದು ರಾ
ವರ್ಣಿಸುತ್ತಿದ್ದ. ವಸ್ತುಸ್ಥಿತಿವಾದಿಯೂ ಈಗ ಅಮರದ ಮಾತನ್ನು
ನಂಬುತ್ತಿದ್ದ.

ಉಟ್ಟ ಸೀರೆಯಲ್ಲಿ ಬಂದ ಅವಳನ್ನು ರಾಜನು ಅಂಗಡಿಗೆ ಕರೆದುಕೊಂಡು ಹೋಗಿ, ವರ್ಣ ವಿನ್ಯಾಸಗಳಿಂದ ಕೂಡಿದ ಹೊಸ ಸೀರೆಗಳನ್ನು ತಂದಿದ್ದ. ಕಾತ್ಯಾಯನಿ ಹೊಸ ಸೀರೆಯುಟ್ಟು ತನ್ನನ್ನು ತಾನು ಅಲಂಕರಿಸಿಕೊಳ್ಳುವಳು. ಕನ್ನಡಿಯಲ್ಲಿ ನೋಡಿಕೊಂಡಾಗ ಅವಳಿಗೆ ತನ್ನ ಸ್ತ್ರೀತ್ವವು ಈಗ ಸಾರ್ಥಕವಾಗುತ್ತಿದೆ ಎನಿಸುವುದು. ಅವಳನ್ನು ತನ್ನ ತೋಳುಗಳಲ್ಲಿ ಹಿಡಿದು ಅವಳ ಅಂಗಸೌಷ್ಠವವನ್ನು ಮೆಚ್ಚಿ ಮಾತನಾಡಿದಾಗಲೆಲ್ಲ, ಅವಳು ಸಾರ್ಥಕತೆಯ ಭಾವದಿಂದ ತುಂಬಿ ಹೋಗುತ್ತಿದ್ದಳು. ಅವಳು ತನ್ನ ಪುರುಷನಿಗೆ ಮೌನವಾಗಿ ತನ್ನನ್ನು ಅರ್ಪಿಸಿಕೊಳ್ಳುವಳು.

ಕೆಲದಿನಗಳಾದ ಮೇಲೆ ಕಾತ್ಯಾಯನಿ ಅಡಿಗೆ ಮನೆಗೆ ಹೋಗಿ ನಾಗಲಕ್ಷ್ಮೀ ಕೆಲಸದಲ್ಲಿ ನೆರವಾಗುವಳು. ಪೃಥ್ವಿಯನ್ನು ನೋಡಿದಾಗಲೆಲ್ಲ ಅವಳಿಗೆ ಚಿನ್ನುವಿನ ನೆನಪಾಗುವುದು. ತನ್ನ ಹೊಟ್ಟೆಯಲ್ಲಿಯೇ ತನ್ನ ರಕ್ತಮಾಂಸಗಳನ್ನು ಹೊತ್ತು ಹುಟ್ಟಿದ ಮಗು ಅದು. 'ಅಮ್ಮ ನಾನೂ ಬರ್ತೀನಿ ಕರಕೊಂಡು ಹೋಗು' ಎಂದು ಕೂಗಿದ ಮಗುವಿಗೆ ಅವಳು 'ನೀನು ಆಮೇಲೆ ಬರುವಿಯಂತೆ' ಎಂದು ಹೇಳಿ ಬಂದಿದ್ದಳು. ಈಗ ಮಗುವಿನ ನೆನಪು ಅವಳನ್ನು ಕಾಡಲು ಪ್ರಾರಂಭವಾಯಿತು. ಒಂದು ರಾತ್ರಿ ಮಲಗಿದ್ದಾಗ ಕಾತ್ಯಾಯನಿ "ಮಗೂನ ಕರಕೊಂಡು ಬರೋದಕ್ಕೆ ನಿಮ್ಮ ಅಭಿಪ್ರಾಯವೇನು?" ಎಂದು ರಾಜನನ್ನು ಕೇಳಿದಳು.

"ನಾನು ಹಿಂದೆಯೇ ಹೇಳಿರಲಿಲ್ಲವೇ? ಕರೆದುಕೊಂಡು ಬಾ. ಅದು ನಮ್ಮದೇ ಮಗು."

ಈ ಉತ್ತರವನ್ನು ಕೇಳಿ ಕಾತ್ಯಾಯನಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. 'ನೀವೆಷ್ಟು ಒಳ್ಳೆಯವರು!" ಎನ್ನುತ್ತಾ ತನ್ನ ಎರಡು ತೋಳುಗಳಿಂದ ಅವನನ್ನು ಅಪ್ಪಿಕೊಂಡಳು.

ಶ್ರೋತ್ರಿಯರಿಗೆ ಮುಂಚೆಯೇ ತಿಳಿಸಿಹೋಗುವುದೆಂದು ಅವಳು ಅವರಿಗೆ ಕಾಗದ ಬರೆದಳು.

ಇಪ್ಪತ್ತನೆಯ ತಾರೀಕು ಬೆಳಿಗ್ಗೆ, ಮನೆಯಲ್ಲಿ ಊಟಮಾಡಿಕೊಂಡು, ಕಾತ್ಯಾಯನಿ ಹೊರಟು ನಿಂತಳು. ರಾಜನು ಸ್ಟೇಶನ್ ವರೆಗೆ ಅವಳನ್ನು ಕಳಿಸಲು ಬಂದು "ಸಂಜೆ ಆರರ ಗಾಡಿಗೆ ನಾನು ಸ್ಟೇಷನ್‌ನಲ್ಲಿ ಕಾಯುತೀನಿ." ಎಂದು ಹೇಳಿದ.

ಗಾಡಿ ಹೊರಟಿತು. ಅವಳು ನಂಜನಗೂಡನ್ನು ಬಿಟ್ಟು ಸುಮಾರು ಒಂದುವರೆ ತಿಂಗಳ ನಂತರ ಈ ದಿನ ಪುನಃ ಹೋಗುತ್ತಿದ್ದಾಳೆ. ಪ್ರಾಯಶ ಇದೇ ಅಲ್ಲಿಗೆ ಅವಳ ಕೊನೆಯ ಯಾತ್ರೆ. ದಾರಿಯುದ್ದಕ್ಕೂ ಮ ಹನಿಯುತ್ತಲಿದ್ದಿತ್ತು. ಕಂಬಳಿಮಠವನ್ನು ದಾಟಿ ಗಾಡಿಯು ನಿಧಾನವಾಗಿ ಸೇತುವೆಯ ಮೇಲೆ ಹೋಗುತ್ತಿದ್ದಾಗ ಅರ್ಧಭಾಗ ತುಂಬಿ ಹರಿಯುತ್ತಿದ್ದ ಕಪಿಲೆಯು ಸರಿಯಾಗಿ ಕಂಡಿತ್ತು. ಹೊಳೆಯ ಎಡಭಾಗದಲ್ಲಿ ಉದ್ದಕ್ಕೂ ಹರಡಿದ್ದ ದೊಡ್ಡ ಮರಗಳ ತೋಪುಗಳು. ಇದ್ದಕ್ಕಿದ್ದಂತೆಯೇ ಅವಳಿಗೆ ನೆನಪಾಯಿತು. ಇಂಥದೇ ಜ್ಯೇಷ್ಠ ಮಾಸದಲ್ಲಿ, ಇಂಥದೇ ಸೋನೆಮಳೆಯ ದಿನ ಅವಳ ಪ್ರಥಮ ಪತಿಯನ್ನು ಕಪಿಲೆಯು ಕಬಳಿಸಿಕೊಂಡು ಹೋಗಿದ್ದಳು. ಆ ದಿನ ತಾನು ಅತ್ತು ಹರಿಸಿದ ಕಣ್ಣೀರಿನ ಕಾಂಡವ ಅವಳ ಸ್ಮೃತಿಯಲ್ಲಿ ಮರುಕಳಿಸಿತು.

ಗಾಡಿಯಿಂದ ಇಳಿಯುವಾಗ ಕಾತ್ಯಾಯನಿಯ ಎದೆಯ ಬಡಿತ ಜೋರಾಗಿತ್ತು. ತನ್ನನ್ನು ಯಾರಾದರೂ ದಾರಿಯಲ್ಲಿ ಗುರುತಿಸಿದರೆ? ತನ್ನ ಹೊಸ ಜೀವನದ ವಿಷಯ ಇಷ್ಟರಲ್ಲಿ ಈ ಪಟ್ಟಣಕ್ಕೆಲ್ಲ ಗೊತ್ತಾಗಿದೆ. ಯಾರಿಗೆ ತಾನೇಕೆ ಹೆದರುವುದು. ಆದರೆ ಮನೆಯಲ್ಲಿ ಆಕಸ್ಮಾತ್ ಮಗುವನ್ನು ಕೊಡುವುದಿಲ್ಲ ಎಂದು ಹೇಳಿದರೆ ತಾನೇನು ಮಾಡುವುದು? ಅತ್ತೆ ಖಂಡಿತ ಕೋಪಗೊಂಡಿರುತ್ತಾರೆ. ಮಾವನವರು ಮಾತ್ರ ಸಾರಾಸಾರ ವಿಚಾರಕ್ಕೆ ಮಣಿಯುತ್ತಾರೆ......

ಕಾತ್ಯಾಯನಿಯು ಮನೆಯೊಳಕ್ಕೆ ಪ್ರವೇಶಿಸಿದಳು. ನೇರವಾಗಿ ಅಡಿಗೆಯ ಮನೆಗೆ ಹೋಗಲು ಧೈರ್ಯವಾಗದೆ, ಅವಳು ದಿವಾನಖಾನೆಯ ಒಂದು ಕುರ್ಚಿಯ ಮೇಲೆ ಕುಳಿತಳು. ಒಳಗಿನಿಂದ ರಾಗವಾಗಿ ಹೇಳುತ್ತಿದ್ದ ಮಂತ್ರ ಕೇಳಿಸುತ್ತಿತ್ತು.

ಕಾಶ್ಯಪ ಗೋತ್ರೋತ್ಪನ್ನಸ್ಯ ಮಮ ಪಿತುಃ

ನಂಜುಂಡ ಶರ್ಮಣಃ

ವಸುರೂಪಸ್ಯ ಪ್ರತಿಸಾಂವತ್ಸರಿಕ ಶ್ರಾದ್ಧ ನಿಮಿತ್ತಂ ...... ಪ್ರಾಚೀನಾವೀತಿ.

ಕಾತ್ಯಾಯನಿಯ ಎದೆ ಧಸ್ಸೆಂದಿತು. ಈ ದಿನವೇ ತನ್ನ ಮೊದಲ ಪತಿಯ ಶ್ರಾದ್ಧ. "ನಾನು ಎಂತಹ ದಿನ ಇಲ್ಲಿಗೆ ಬಂದೆ! ಯಾವುದನ್ನು ಯೋಚಿಸದೆ ಇದೇ ದಿನವನ್ನು ನಾನೇ ಗೊತ್ತು ಮಾಡಬೇಕೆ?" ಕಾತ್ಯಾಯನಿಯು ಅಲ್ಲಿಂದ ಎದ್ದು ಹೋಗುವವಳಿದ್ದಾಗ ಆಕಸ್ಮಾತ್ ಅಲ್ಲಿಗೆ ಬಂದ ಲಕ್ಷ್ಮೀ ನೋಡಿದಳು. ಕುಶಲವನ್ನು ಕೇಳಿದಳು. ಕಾತ್ಯಾಯನಿ ಕೂಡ್ರಲೇ ಬೇಕಾಯಿತು.

ಒಳಗೆ ಮಂತ್ರತಂತ್ರಗಳು ನಡೆಯುತ್ತಿದ್ದವು. ಎಲ್ಲರೂ ಒಳಗೆ ಇದ್ದರು. ತುಸು ತಡೆದ ಮೇಲೆ ಚೀನಿ ಅಲ್ಲಿಂದ ಹೊರಗೆ ಬಂದ ಉಪನಯನವಾಗಿರದಿದ್ದರೂ ಅವನು ಒಂದು ಒದ್ದೆಯ ಲಂಗೋಟಿಯನ್ನು ಕಟ್ಟಿಕೊಂಡು ತಂದೆಯ ಶ್ರಾದ್ಧದಲ್ಲಿ ತಾನೂ ಭಾಗವಹಿಸಿದಂತಿತ್ತು.

ದಿವಾನಖಾನೆಯಲ್ಲಿ ಕುಳಿತಿದ್ದ ಕಾತ್ಯಾಯನಿಯನ್ನು ನೋಡಿದ. ಆವಳ ಹೊಸ ವೇಷದಲ್ಲಿ ಪಕ್ಕನೇ ಗುರುತು ಹಿಡಿಯಲಿಲ್ಲವೇನೋ! ಆದರೆ ಮರುಕ್ಷಣವೇ "ಅಮ್ಮ, ಇಷ್ಟು ದಿನ ನೀನು ಎಲ್ಲಿ ಹೋಗಿದ್ದೆ.?" ಎಂದು ಕೇಳಿದ. ಕಾತ್ಯಾಯನಿ, ಅವನಿಗೆ ಹತ್ತಿರ ಬರುವಂತೆ ಕೈ ಸನ್ನೆ ಮಾಡಿದಳು. ಅವನು ತುಸು ಮುಂದೆ ಬಂದು, "ನಿಂಗೊತ್ತಿಲ್ಲಾ, ಇವತ್ತು ಅಣ್ಣನ ತಿಥಿ. ನಂದು ಮಡಿ. ನಿನ್ನ ಮುಟ್ಟಿಸ್ಕೊಳ್ಳೊಲ್ಲಾ. ಅಲ್ಯಾಕೆ ಕೂತಿದ್ದೀಯ. ಒಳಗೆ ಬಾ" ಎಂದು ಕರೆಯುತ್ತಾ ಒಳಗೆ ಓಡಿದ. ಕಾತ್ಯಾಯನಿಗೆ ಪೆಚ್ಚಾಯಿತು.

ಬ್ರಾಹ್ಮಣರ ಊಟ ಮುಗಿದು ಒಬ್ಬೊಬ್ಬರೇ ಹೊರಬಂದರು. ಇವಳನ್ನು ಒಮ್ಮೆ ಕ್ರೂರಾಗಿ ನೋಡಿ ಹೊರಟರು. ತುಸು ಸಮಯದ ನಂತರ ಶ್ರೋತ್ರಿಯರು ಅಲ್ಲಿಗೆ ಬಂದು ಅವಳನ್ನು "ಎಲೆ ಹಾಕಿದೆ;

ಊಟ ಮಾಡು ಬಾ" ಎಂದು ಕರೆದರು.

"ನನ್ನ ಊಟ ಆಗಿದೆ. ನೀವು ಮಾಡಿ."

'ಪರವಾಗಿಲ್ಲ ಬಾ. ಇಷ್ಟು ಹೊತ್ತಿಗೆ ಅದು ಅರಗಿರುತ್ತೆ" ಎಂದು ಅವಳು ಏಳುವ ತನಕ ಅಲ್ಲಿಯೇ ನಿಂತರು.

ಒಳಗೆ ಹೋಗಿ ನೋಡುತ್ತಾಳೆ, ಅಲ್ಲಿ ತನ್ನ ತಂದೆ ಶ್ರೀಕಂಠಯ್ಯನವರಿದ್ದಾರೆ! ಅವಳಿಗೆ ಆಶ್ಚರ್ಯವಾಯಿತು. ಇವರೇಕೆ ಈಗ ಬಂದಿದ್ದಾರೆ? ತನ್ನನ್ನು ಒಮ್ಮೆ ಕರೆದುಕೊಂಡು ಹೋಗಲೆಂದು ಬಂದುದೆಷ್ಟೋ ಅಷ್ಟೆ. ಒಂದು ಸಾರ್ತಿ ಕಾಗದವನ್ನೂ ಬರೆಯುವವರಲ್ಲ. ಈಗ ಮೊಮ್ಮಗನ ಕಾರಣದಿಂದಾಗಿ ಇವರೇ ಅವರನ್ನು ಕರೆಸಿಕೊಂಡಿರಬಹುದೆ?

ಶ್ರೋತ್ರಿಯರು, ಶ್ರೀಕಂಠಯ್ಯ ಮತ್ತು ಚೀನಿ ಒಂದೇ ಸಾಲಿನಲ್ಲಿ ಕುಳಿತಿದ್ದರು. ಕಾತ್ಯಾಯನಿಗೆ ಬೇರೊಂದು ಎಲೆಯನ್ನು ಹಾಕಿದ್ದರು. ಕತ್ತನ್ನು ಹಿಸುಕಿ ಹಾಕುವಂತಹ ಮೌನದಲ್ಲಿ ಭಾಗೀರತಮ್ಮ ಬಡಿಸುತ್ತಿದ್ದರು. ಪಾಯಸ, ವಡೆ, ಅಂಬೋಡೆ, ಉಂಡೆ, ಹೆಚ್ಚಿದ ಮಾವಿನ ಹಣ್ಣು ಮೊದಲಾಗಿ ಎಲೆ ತುಂಬಿ ಹೋಗಿತ್ತು. ಕಾತ್ಯಾಯನಿ ಬರೀ ಎರಡು ತುತ್ತು ಸಾರನ್ನವನ್ನು ತಿಂದಳು. ಅವಳನ್ನು ಯಾರೂ ಬಲವಂತ ಮಾಡಲಿಲ್ಲ. ಅವರುಗಳೆಲ್ಲ ಮೊಸರನ್ನಕ್ಕೆ ಬರುವ ವೇಳೆಗೆ ಚೀನಿ ತೂಕಡಿಸುತ್ತಿತ್ತು. ತನ್ನ ತಂದೆಗೆ ವರ್ಷಕ್ಕೊಂದು ಅನ್ನವನ್ನಿಕ್ಕುವ ದಿನ, ಬೆಳಗಿನಿಂದೂ ಉಪವಾಸವಿತ್ತು. ಬಾಯಿಗೆ ಎರಡು ತುತ್ತು ಅನ್ನ ಬಿದ್ದ ಕೂಡಲೇ ಅಲ್ಲಿಯೇ ತೂಕಡಿಸಲು ಪ್ರಾರಂಭಿಸಿತ್ತು.

ಕೈತೊಳೆದ ಮೇಲೆ ಕಾತ್ಯಾಯನಿ ದಿವಾನಖಾನೆಯಲ್ಲಿ ಮೊದಲಿನ ಸ್ಥಳದಲ್ಲಿಯೇ ಕುಳಿತುಕೊಂಡಳು. ಅರ್ಧಗಂಟೆ ಅಲ್ಲಿ ಯಾರೂ ಬಾರದಿದ್ದಾಗ, ಒಂದೊಂದು ನಿಮಿಷವೂ ಅವಳನ್ನು ಹಿಸುಕಿ ಸಾಯಿಸುವಷ್ಟು ಭಾರವಾಗಿತ್ತು. ಕೊನೆಗೆ ಶ್ರೋತ್ರಿಯರೇ ಬಂದು, ಅವಳ ಮುಂದೆ ಇದ್ದ ಮಂಚದ ಒಂದು ಬದಿಗೆ ಕುಳಿತುಕೊಂಡರು. "ನಿನ್ನ ಕಾಗದ ಬಂತು" ಎಂದರು.

"ನಾನು ಏನ್ನಾನೂ ಅವರಲ್ಲಿ ಬರೆದಿದೀನಿ" ಎಂದಳು ಕಾತ್ಯಾಯನಿ. ಅಷ್ಟರಲ್ಲಿ ಒಳಬಾಗಿಲಿನಿಂದ ಅಲ್ಲಿಗೆ ಬಂದು ನಿಂತ ಭಾಗೀರತಮ್ಮ "ನೀನು ಬರೀದೆ ಏನ್ ಮಾಡ್ತೀಯಾ? ನೀನಂತೂ ಈ ಕೆಲ್ಸ ಮಾಡಿ ಹೆತ್ತೋರಿಗೂ ಸಾಕಿಕೊಂಡೋರಿಗೂ ಮರ್‍ಯಾದೆಯನ್ನು ತಂದೆ. ಇನ್ನು ಮಗೂನನ್ನೂ ಕರಕೊಂಡು ಹೋಗಿ ನಿನ್ನ ಹಾಗೆ ಹೊಲಗೆಡಿಸಬಂದೆಯಾ?"

ಅಷ್ಟರಲ್ಲಿ ಶ್ರೀಕಂಠಯ್ಯನವರೂ ಅಲ್ಲಿಗೆ ಬಂದು ಮಂಚದ ಮೇಲೆ ಕುಳಿತುಕೊಂಡರು. ಭಾಗೀರತಮ್ಮ ಪುನಃ ಬಾಯಿಬಿಟ್ಟರು. "ಇಷ್ಟೆಲ್ಲಾ ಮರ್‍ಯಾದೆ ಬಿಟ್ಟು ಸಾಲದು ಅಂತ ಈಗ ಮಗೂನು ಕರಕೊಂಡು ಹೋಗಿ, ನಿನ್ನ ಕಟ್ಟಿಕೊಂಡಿರೋನ್ನ ತೋರಿಸಿ 'ಇವನೇ ನಿನ್ನ ಹುಟ್ಟಿಸಿದ ಅಪ್ಪ, ಕಣೋ, ಮರಿ.' ಅಂತ ಹೇಳೋಕೆ ಬಂದೆಯಾ? ಏನಾದರೂ ತಗ್ಗು ಇದೆಯೋ ನಿನ್ಗೆ? ನಿನ್ನ ತಂದೆಯೇ ಬಂದಿದ್ದಾರೆ. ಅವರು ನಿನ್ನ ನಡತೇನ ಒಪ್ಪಲಿ. ಆ ಮೇಲೆ ಮುಂದಿನ ಮಾತು."

ಶ್ರೀಕಂಠಯ್ಯನವರು "ಇನ್ನು ನೀನು ನನ್ನ ಕಡೆ ತಿರುಗಿ ಮಾತನಾಡು" ಎಂದು ಮಗಳಿಗೆ ಹೇಳುವ ರೀತಿಯಲ್ಲಿ ಕೆಮ್ಮಿದರು. ಮಗಳನ್ನುದ್ದೇಶಿಸಿ, ಇಂಗ್ಲೀಷಿನಲ್ಲಿ ಮಾತನಾಡಲು ಪ್ರಾರಂಭಿಸಿದರು. ಧರ್ಮಶಾಸ್ತ್ರದ ಮೇಲೆ ಉಪನ್ಯಾಸವನ್ನೇ ಕೊಟ್ಟು, ಮಕ್ಕಳ ಅಧಿಕಾರ ಹುಟ್ಟಿಸಿದ ಅಪ್ಪನ ವಂಶಕ್ಕೆ ಸೇರಿದ್ದು. ಬೇರೆ ಮದುವೆಯಾಗಿ ಹೊರಟುಹೋದ ತಾಯಿಗೆ ಎಂದಿಗೂ ಅಲ್ಲ- ಎಂಬ ಕಾನೂನಿನ ಅಂಶವನ್ನೂ ಹೇಳಿದರು. ಕೊನೆಗೆ ಅವಳಿಂದ ತಮ್ಮ ಪವಿತ್ರವಾದ ವಂಶಕ್ಕೆ ಬಂದ ಕಳಂಕವನ್ನೂ ಪ್ರಸ್ತಾಪಿಸಿ, ಬೈಗಳಿಗೇ ಇಳಿದರು. "ಯೂ ಆರ್ ಎ ಡಿಸ್‌ಗ್ರೇಸ್ ಟು ದಿ ಫ್ಯಾಮಿಲಿ, ಬೆಟರ್ ಇಫ್ ಸಚ್ ಎ ಅನ್‌ವರ್ದಿ ಡಾಟರ್ ಇಸ್ ನಾಟ್ ಬಾರ್ನ್...." ಶ್ರೋತ್ರಿಗಳಿಗೆ ಇಂಗ್ಲಿಷ್ ತಿಳಿಯದಿದ್ದರೂ, ಬೀಗರ ಮಾತಿನ ಧಾಟಿಯನ್ನು ಅರ್ಥ ಮಾಡಿಕೊಂಡು ಅವರನ್ನು ತಡೆಯಲು ಯತ್ನಿಸಿದರು.

ಅಷ್ಟರಲ್ಲಿ, ಕಾತ್ಯಾಯನಿಗೆ ದುಃಖ ಒತ್ತರಿಸಿ ಬಂತು. ಮಗಳು

ಬದುಕಿದ್ದಾಳೆಂಬುದೇ ಇಲ್ಲವೆ ಎಂದು ವಿಚಾರಿಸಿರದ ತಂದೆ, ಈಗ ಇಲ್ಲಿಗೆ ಬಂದು ಪೋಲೀಸರು ಕಳ್ಳರನ್ನು ಎಳೆಯುವ ಹಾಗೆ ಎಳೆಯುತ್ತಿದ್ದಾರೆ ಅವಳಿಗೆ ತನ್ನ ತಾಯಿ ಬದುಕಿದ್ದರೆ ಎನ್ನಿಸಿತು. ಒಳಗಿನಿಂದ ಒತ್ತರಿಸಿ ಬಂದ ದುಃಖದಿಂದ ಅವಳು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದಳು.

"ನೀವಿಬ್ಬರೂ ಒಳಗೆ ಹೋಗಿ" ಎಂದು ಶ್ರೋತ್ರಿಯರು ಹೇಳಿದಾಗ "ನಾನು ಹೋಗೋದಿಲ್ಲ. ನಿಮ್ಮೊಬ್ಬರ ಮೊಮ್ಮಗನೇ ಅಲ್ಲ ಅವನು. ನನ್ನ ಹೊಟ್ಟೆ ಸಂಕಟ ನಿಮಗೇನು ಗೊತ್ತು? ನನ್ನ ಮಗನ ಹೊಟ್ಟೇಲಿ ಹುಟ್ಟಿದ ಬಳ್ಳಿ ಅದು. ಸಾಕಿ ಸಲಹಿದೋಳು ನಾನು" ಎಂದು ಭಾಗೀರತಮ್ಮ ಗಳಗಳನೆ ಅಳಲು ಸುರು ಮಾಡಿದರು.

"ಕೊನೇ ಮಾತೇನಿದ್ದರೂ ನನಗೆ ಬಿಡಿ" ಎಂದು ಅಧಿಕಾರವಾಣಿಯಲ್ಲಿ ನುಡಿಯುತ್ತಾ, ಶ್ರೋತ್ರಿಯರು ಅವರಿಬ್ಬರನ್ನೂ ಒಂದೊಂದು ಕೈಯಲ್ಲಿ ಹಿಡಿದು ಬಾಗಿಲಿನಿಂದ ಒಳಗೆ ಕಳಿಸಿದರು. ಈ ಬದಿಯಿಂದ ಬಾಗಿಲು ಚಿಲಕವನ್ನು ಹಾಕಿಕೊಂಡರು.

ಕಾತ್ಯಾಯನಿ ಇನ್ನೂ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಒಂದು ಕುರ್ಚಿಯನ್ನು ಎಳೆದುಕೊಂಡು ಅವಳ ಹತ್ತಿರವೇ ಕುಳಿತು ಶ್ರೋತ್ರಿಯರು ಹೇಳಿದರು, "ಇಂಥ ವಿಷಯದಲ್ಲಿ ಅಳೋದ್ರಿಂದ ಏನೂ ಪ್ರಯೋಜನವಿಲ್ಲ ಮಗೂ. ಈಗ ಕೋಪದಿಂದ ಮಾತಾಡೋರು ಯಾರೂ ಇಲ್ಲ. ಏನಿದ್ದರೂ ನನ್ನ ಕೈಲಿ ಮಾತನಾಡು."

ಕಾತ್ಯಾಯನಿ ತಲೆಯೆತ್ತಿ ಶ್ರೋತ್ರಿಯರ ಮುಖ ನೋಡಿದಳು. ಎಂದಿನಂತೆ ಶಾಂತವಾದ ಮುಖದಿಂದ ಅವರು ಕುಳಿತಿದ್ದರು. ಐದು ನಿಮಿಷದಲ್ಲಿ ಅವಳ ಅಳುವು ಶಾಂತವಾಯಿತು. ಆಮೇಲೆ ಸೆರಗಿನಿಂದ ಕಣ್ಣುಗಳನ್ನೊರಿಸಿಕೊಂಡು ಹೇಳಿದಳು, "ಹೆತ್ತ ತಾಯಿಗೆ ತನ್ನ ಮಗುವನ್ನು ಬಿಟ್ಟಿರೋದು ಎಷ್ಟು ಕಷ್ಟ, ಅಂತ ನಿಮಗೆ ಗೊತ್ತಿದೆ. ನಿಮಗೂ ಮನೇಲಿ ಬೇಜಾರಾಗುತ್ತೆ ನಿಜ. ಆದರೂ ಚೀನಿ ಇಲ್ಲದೆ ನಾನು ಹೇಗೆ ಇರಲಿ? ಅವನನ್ನು ಕಳಿಸಿಕೊಡಿ."

"ಮಗೂ, ನಿನ್ನ ವಿಚಾರ ಸರಿ. ಮಗುವಿನ ಬಗೆಗೆ ತಾಯಿಗೆ ಹೃದಯವಿದೆ. ಅದೇ ಹೃದಯ ನಮಗಿಲ್ಲವೆ? ನಿನಗಿದ್ದ ಪತಿ ಸತ್ತುಹೋದ. ಈಗ ಹೊಸ ಪತಿ ಸಿಕ್ಕಿದ್ದಾರೆ. ಸತ್ತುಹೋದ ಮಗನ ಸ್ಥಾನದಲ್ಲಿ ನಮಗೆ ಹೊಸ ಮಗ ಸಿಕ್ಕುತ್ತಾನೆಯೆ?"

ಕಾತ್ಯಾಯನಿ ಉತ್ತರ ತಿಳಿಯದೆ ಸುಮ್ಮನಿದ್ದಳು.

"ಸತ್ತ ಮಗ ನಮಗೆ ಸೇರಿದವನು. ಅವನ ಮಗ ಹೇಗೆ ನಿಮ್ಮಿಬ್ಬಳಿಗೇ ಸೇರುತ್ತಾನೆ? ನನ್ನ ದೃಷ್ಟಿಯಲ್ಲಿ ಮಕ್ಕಳು ಪ್ರತ್ಯೇಕವಾಗಿ ತಾಯಿಗೂ ಸೇರಿದುವಲ್ಲ, ತಂದೆಗೂ ಸೇರಿದುವಲ್ಲ, ಅವು ವಂಶದ ಆಸ್ತಿ. ವಂಶದಲ್ಲಿ ತಾವೂ ಒಬ್ಬರಾಗಿ ಸೇರಿರುವ ವರೆಗೆ ಆ ವಂಶದ ಎಲ್ಲ ವಸ್ತುಗಳ ಮೇಲೂ ಯಾರಿಗೂ ಅಧಿಕಾರವಿರುತ್ತೆ."

"ನಾನು ಹಕ್ಕು, ಅಧಿಕಾರ ಮಾತು ಹೇಳಲಿಲ್ಲ, ತಾಯಿಯ ಕರುಳಿನ ಕೂಗನ್ನಷ್ಟೆ ಹೇಳಿದೆ."

"ಮಕ್ಕಳು ತಂದೆತಾಯಿಗಳಿಗೆ ಮಕ್ಕಳಾದಂತೆ ಅಜ್ಜಅಜ್ಜಿಯರಿಗೆ ಮೊಮ್ಮಕ್ಕಳು ಅನ್ನೋದನ್ನ ನೀನು ಒಪ್ತೀಯಾ?"

ಕಾತ್ಯಾಯನಿಗೆ ನೆನಪಾಯಿತು. ಹಿಂದೆ ಚೀನಿ ಆರು ತಿಂಗಳ ಮಗುವಾಗಿದ್ದಾಗ, ಒಂದು ದಿನ ಅವಳು, ಅವಳ ಪತಿ ಸರಸವಾಡುತ್ತಿದ್ದರು. "ಮಗು ನಂದು" ಎಂದು ಅವನು ಹೇಳುತ್ತಿದ್ದ. 'ಇಲ್ಲ, ನಂದು' ಎಂದು ಇವಳು ವಾದಿಸುತ್ತಿದ್ದಳು. ಅಷ್ಟರಲ್ಲಿ ಹೊರಗಿನಿಂದ ಬಂದ ಶ್ರೋತ್ರಿಯರು ನಗುತ್ತ, "ಮಕ್ಕಳು ತಂದೆಯವ್ವೂ ಅಲ್ಲ, ತಾಯಿಯವ್ವೂ ಅಲ್ಲ, ಅವು ತಾತನ ಮೊಮ್ಮಕ್ಕಳು" ಎಂದಿದ್ದರು.

ಅವರ ತೀರ್ಪನ್ನು ಆಗ ಅವಳು ಒಪ್ಪಿದ್ದಳು. ಈಗ ಒಪ್ಪಲು ಸಿದ್ಧಳಿರಲಿಲ್ಲ. ಅಂತೆಯೇ ಹೇಳಿದಳು, "ನನ್ನ, ನಿಮ್ಮ ಜೀವನದೃಷ್ಟಿಯೇ ಬೇರೆ. ವಂಶಕ್ಕಾಗಿ ವ್ಯಕ್ತಿ ಅಂತ ನೀವು ಭಾವಿಸಿದರೆ, ವ್ಯಕ್ತಿಯ ಜೀವನಕ್ಕೆ ನಾನು ಮಹತ್ವ ಕೊಡತೇನಿ."

"ಮಗೂ, ನಿನ್ನನ್ನು ನೋಯಿಸಬೇಕು ಅಂತ ನಾನು ಇಷ್ಟೆಲ್ಲ ಮಾತಾಡಲಿಲ್ಲ. ಆದದ್ದಾಯಿತು. ಮಗು ಚಿಕ್ಕದಿರುವುದರಿಂದ ಸರಕಾರದ

ಕಾನೂನಿನ ಪ್ರಕಾರ ನೀನೇ ಕರೆದುಕೊಂಡು ಹೋಗಬಹುದು. ಆದರೆ ಕಾನೂನಿನಲ್ಲಿ ಧರ್ಮ ಸಿಕ್ಕುವುದಿಲ್ಲ. ಶ್ರೋತ್ರಿಯರ ಸಂಸಾರದ ಗೌರವವು ಕೋರ್ಟಿನ ಕಟ್ಟೆ ಹತ್ತೋಕೆ ನಾನು ಅವಕಾಶ ಕೊಡೋದಿಲ್ಲ ! ಕೊನೆಯ ಮಾತನ್ನು ನಾನು ಹೇಳ್ತೀನಿ, ಕೇಳ್ತೀಯಾ?"

"ಹೇಳಿ."

ಈಗ ಅವರ ಧ್ವನಿಯು ದೃಢವಾಯಿತು. "ಕೊನೆಯ ನಿರ್ಣಯದ ಸ್ವಾತಂತ್ರ್ಯ ನಿನ್ನದೇ. ಮಗುವನ್ನು ಕೈಯೆತ್ತಿ ನಿನಗೆ ಕೊಡುವ ಅಧಿಕಾರ ನನಗಿಲ್ಲ. ವಂಶದ ಒಂದು ಕೊಂಬೆಯನ್ನು ಛೇದಿಸಿ ದಾನ ಮಾಡುವ ಅಧಿಕಾರವು ಮತ್ತೊಂದು ಕೊಂಬೆಗಿಲ್ಲ. ಮಗೂನ ಇಲ್ಲಿ ಬಿಟ್ಟು ಹೋಗು ಅಂತ ನಾನು ನನಗಾಗಲೀ ಅಥವಾ ಒಳಗೆ ಅಳುತ್ತ ಕುಳಿತಿರೋ ಮುದುಕಿಯ ಪರವಾಗಿಯಾಗಲಿ ಭಿಕ್ಷೆ ಬೇಡುವುದಿಲ್ಲ. ಮುಪ್ಪಿನ ವಯಸ್ಸಿನಲ್ಲಿ ಅದು ನಮ್ಮನ್ನು ಒಪ್ಪಮಾಡಲಿ ಅನ್ನೋ ಆಸೆಯೂ ನನಗೆ ಇಲ್ಲ. ಮಗು ಮಹಡಿ ಮೇಲೆ ಮಲಗಿದೆ. ಮಗೂನ ಕರಕೊಂಡೇ ಹೋಗಬೇಕು ಅಂತ ನಿನ್ನ ಆತ್ಮ ಹೇಳಿದರೆ ಎತ್ತಿಕೊಂಡು ಹೊರಟುಹೋಗು. ಮಧ್ಯೆ ಅವಳಾಗಲೀ, ನಿನ್ನ ತುಂಡೆಯಾಗಲೀ ನಿನ್ನನ್ನು ತಡೆಯದ ಹಾಗೆ ನಾನು ನೋಡಿಕೊಳ್ತೀನಿ."

ಇಷ್ಟು ಹೇಳಿದವರೆ ಶ್ರೋತ್ರಿಯರು ಮೇಲೆದ್ದು, ಬಾಗಿಲನ್ನು ತೆರೆದುಕೊಂಡು ಒಳಗೆ ಹೋದರು. ಬಾಗಿಲಲ್ಲಿಯೆ ಕಾತರಳಾಗಿ ನಿಂತಿದ್ದ ಭಾಗೀರತಮ್ಮ "ಏನ್ ಮಾಡಿದಿರಿ?" ಎಂದು ಕೇಳಿದಳು. "ನೀನು ಯಾವ ಮಾತೂ ಆಡಕೂಡದು." ಎಂದು ಅವಳಿಗೆ ಹೇಳಿ, ಶ್ರೋತ್ರಿಯರು ಬಾಗಿಲನ್ನು ಪುನಃ ಮುಚ್ಚಿದರು.

ತಮ್ಮಿಬ್ಬರ ಮಾತು ಹೀಗೆ ಮುಕ್ತಾಯವಾದದ್ದು ಕಾತ್ಯಾಯನಿಗೆ ಅನಿರೀಕ್ಷಿತವಾದುದು ಮಾತ್ರವಲ್ಲ, ಅವಳ ಶಕ್ತಿಗೆ ಮೀರಿದ ಭಾರವನ್ನು ಹಾಕಿ, ಅದನ್ನು ಹೊರು ಎಂದು ಹೇಳಿದಂತಾಯಿತು; ಅವಳು ಹಾಗೆಯೇ ಮೂಕಳಾಗಿ ಕೂತಿದ್ದಳು. ಮೇಲೆ ಏಳಲು ಕಾಲುಗಳಲ್ಲಿ ತ್ರಾಣವಿರಲಿಲ್ಲ. ಯಾವುದೇ ನಿರ್ಣಯವನ್ನೂ ತಲುಪಲು ಮನಸಿನಲ್ಲಿ ಶಕ್ತಿ ಇರಲಿಲ್ಲ.

ಆದರೆ ಎದುರಿಗೇ ಮಹಡಿಗೆ ಹೋಗುವ ಮೆಟ್ಟಿಲುಗಳು ಕಾಣಿಸುತ್ತಿದ್ದುವು. ಅವಳು ಎದ್ದು ನಿಧಾನವಾಗಿ ಹೆಜ್ಜೆಯಿಡುತ್ತ ಮೇಲೆ ಏರಿದಳು.

ಅಲ್ಲಿಯೇ, ಕಳೆದ ಎರಡು ವರ್ಷಗಳಿಂದ ಅವಳು ಓದಿ ಮಲಗುತ್ತಿದ್ದೆಡೆಯಲ್ಲಿಯೇ, ಒಂದು ಹುಲಿ ಚರ್ಮದ ಮೇಲೆ ಚೀನಿ ಮಲಗಿತ್ತು. ಅದರ ಮೇಲೆ ಹೊದಿಸಿದ್ದ ತಾತನ ನೀಲಿಯ ಶಾಲು ಅರ್ಧಭಾಗ ಸರಿದು ಹೋಗಿ, ಮಗುವಿನ ಹೊಟ್ಟೆಯ ಮತ್ತು ಎದೆಯ ಪಾರ್ಶ್ವಗಳು ಕಾಣುತ್ತಿದ್ದುವು. ಕಾತ್ಯಾಯನಿ ಮಗನ ಹತ್ತಿರ ಕುಳಿತು ಅವನ ಮುಖವನ್ನೇ ದಿಟ್ಟಿಸಿ ನೋಡಿದಳು. ಅವಳಿಗೆ ತನ್ನ ಮೊದಲ ಪತಿಯ ನೆನಪಾಯಿತು. ಅವರದೇ ಮುಖ ಮೈಕಟ್ಟುಗಳು, ಮಲಗಿ ನಿದ್ರಿಸುವ ಭಂಗಿಯೂ ಅದೇ, ವಿಶಾಲವಾದ ಹಣೆ, ದೊಡ್ಡ ಮುಖ, ಅದೇ ನೀಳವಾದ ಮೂಗು. ಈ ಮಗು ಯಾರದು ಎಂದು ಅವಳ ಅಂತರ್ಯವು ಪ್ರಶ್ನಿಸುತ್ತಿತ್ತು. ಶ್ರೋತ್ರಿಯ ವಂಶಕ್ಕೂ ಈ ಶಿಶುವಿಗೂ ಯಾವ ಸಂಬಂಧವೂ ಇಲ್ಲವೆನ್ನುವ ಮಾತನ್ನು ಅವಳ ಅಂತಃಸ್ಸಾಕ್ಷಿಯೇ ಒಪ್ಪಲಿಲ್ಲ. ಈ ವಂಶಕ್ಕೆ ಸೇರಿ ಬಂದ ತನ್ನ ಕ್ಷೇತ್ರದಲ್ಲಿ ಶ್ರೋತ್ರಿಯ ವಂಶದ ಬೀಜವೊಂದು ಮೊಳೆತು ವೃಕ್ಷವಾಗುತ್ತದೆ. ಅದು ಎಲ್ಲಿ ಹೋದರೂ ತನ್ನ ಬೀಜದ ಗುಣವನ್ನೇ ಪ್ರಕಟಿಸುತ್ತದೆ.

ಆದರೆ? ಆದರೆ ತಾನು ಅದಕ್ಕಾಗಿ ಎರೆದಿರುವ ರಕ್ತ, ಮಾಂಸ, ತನ್ನ ಎದೆಯ ಶಕ್ತಿಯನ್ನು ಹೀರಿ, ಅದು ಕುಡಿದಿರುವ ಹಾಲು. ತಾನು ಅದರ ಮೇಲೆ ಸುರಿದಿರುವ ಆಶೆ, ಬಯಕೆ, ಪ್ರೀತಿ ಇವುಗಳಿಗೆ ಬೆಲೆ ಇಲ್ಲವೆ? ದೇವರೇ! ಇಂತಹ ಪರಿಸ್ಥಿತಿಯನ್ನೇಕೆ ತಂದೆ? ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವಿನ ಮೇಲಿನ ನನ್ನ ಅಧಿಕಾರವನ್ನು ನಾನೇ ಇವೆಲ್ಲ ವಾದಗಳಿಂದ ಸಿದ್ಧ ಮಾಡಬೇಕಾಯಿತೆ? ಅವಳ ಕರುಳಿನಲ್ಲಿ ಯಾರೋ ನಿಷ್ಕರುಣೆಯಿಂದ ನೂರು ಸುತ್ತಿನ ಅಲುಗನ್ನು ಹಾಕಿ ತಿರುಗಿಸಿದಂತಾಯಿತು. ಎದೆಯಲ್ಲಿ ಕ್ರೂರ ಯಾತನೆಯಾಯಿತು. ಒಳಗಿನಿಂದ ಒತ್ತರಿಸಿಕೊಂಡು ... ದು ಸುಡುವಷ್ಟು ಬಿಸಿಯಾದ ಕಣ್ಣೀರು ಹರಿದು ಬಂತು. ಬಿಕ್ಕಿ ಬಿಕ್ಕಿ ಅತ್ತಳು. ಆ ಶಬ್ದಕ್ಕೆ ಮಗುವಿನ ನಿದ್ರಾ

ಉಸಿರಿನ ಕ್ರಮ ತಪ್ಪಿ, ಮಗ್ಗುಲಾಯಿತು. ಅದರ ಮೈಮೇಲೆ ಹೊದಿಸಿದ್ದ ಶಾಲು ಈಗ ಪಕ್ಕಕ್ಕೆ ಬಿದ್ದು ಹೋಯಿತು. ತಾಯಿಯು ತನ್ನ ಅಳುವನ್ನು ಹತ್ತಿಕ್ಕಿ ಬಾಯಿಯನ್ನು ಮುಚ್ಚಿಕೊಂಡಳು. ಮಗುವಿನ ಮೈ ಈಗ ಪೂರ್ಣವಾಗಿ ಕಾಣುತ್ತಿತ್ತು. ಹೌದು. ಆ ಮೈಮಾಟ ತನ್ನ ಮೊದಲ ಪತಿ ನಂಜುಂಡ ಶ್ರೋತ್ರಿಯದೇ. ಮನಸ್ಸು ಅವಳ ಹಿಡಿತವನ್ನು ಮೀರಿ ಗತಕಾಲಕ್ಕೆ ಹೋಗುತ್ತಿತ್ತು! ಅವಳು ನಿಧಾನವಾಗಿ ಬಾಗಿ ಮಗುವಿನ ನೆತ್ತಿಯ ಮೇಲೆ ಒಮ್ಮೆ ಮುತ್ತಿಟ್ಟಳು. ಕಠಿನವಾದ ನಿರ್ಧಾರವೊಂದು ಅವಳ ಮುಖದ ಮೇಲೆ ಮೂಡಿತು. ಎದ್ದು ನಿಂತಳು. ಇನ್ನೊಮ್ಮೆ ಮಹಾಪ್ರವಾಹದಂತೆ ಒಳಗಿನಿಂದ ಅಳು ನುಗ್ಗಿ ಬರುತ್ತಿತ್ತು. ಅದು ಶಬ್ದವಾಗಿ ಹೊರಬರುವ ಮುನ್ನವೇ ಸೀರೆಯ ಸೆರಗನ್ನು ಬಾಯಿಗೆ ಕೊಟ್ಟುಕೊಂಡು, ಅವಳು ಬೇಗ ಬೇಗ ಮಹಡಿಯ ಮೆಟ್ಟಲುಗಳನ್ನು ಇಳಿದಳು. ಅಳುವು ಬಾಯಿಯಿಂದ ಹೊರನುಗ್ಗಿ ಬರುವುದರೊಳಗೆ, ಅವಳು ಮನೆಯ ಬಾಗಿಲಿನಿಂದ ಹೊರಗೆ ಬಂದಿದ್ದಳು.

ಹೊರಗಡೆ ಇನ್ನೂ ಸಣ್ಣ ಸೋನೆಯು ಹನಿಯುತ್ತಲೇ ಇತ್ತು. ಕಾತ್ಯಾಯನಿ ಕೊಚ್ಚೆಯಾದ ಮಾರ್ಗದಲ್ಲಿ ತನ್ನ ಚಪ್ಪಲಿಯ ಕಾಲುಗಳನ್ನಿಡುತ್ತಾ, ಸ್ಟೇಷನ್ನಿಗೆ ಬಂದು ತಲುಪಿದಳು. ಒಂದು ಬೆಂಚಿನ ಮೇಲೆ ಕುಳಿತಳು. ಎಷ್ಟು ಹೊತ್ತು ಕುಳಿತಿದ್ದಳೋ? ಕತ್ತಲೆ ಕವಿಯುತೊಡಗಿತು. ಆರು ಗಂಟೆಗೆ ಬರಬೇಕಾದ ಗಾಡಿ ಬಂದಿರಲಿಲ್ಲ. ಟಿಕೀಟು -ಕಿಟಕಿಯ ಹತ್ತಿರ ಹೋದಾಗ, ದಾರಿಯಲ್ಲಿ ಒಂದು ಗೂಡ್ಸ್ ಗಾಡಿಯು ಕಂಬಿ ತಪ್ಪಿದೆಯೆಂದೂ ನಾಳೆಯ ವರೆಗೆ ಈ ಮಾರ್ಗದಲ್ಲಿ ರೈಲು ಸಂಚಾರ ನಿಂತು ಹೋಗಿದೆಯೆಂದೂ ತಿಳಿಯಿತು.

ಕಾತ್ಯಾಯನಿ ನಿರ್ವಿಣ್ಣಳಾದಳು. ಊರಲ್ಲಿ ಮರಳಿ ಹೋಗುವುದಂತೂ ಸಾಧ್ಯವಿರಲಿಲ್ಲ. ಸುಮ್ಮನೆ ನಡೆದು ಕಪಿಲಾ ನದಿಯ ದಡಕ್ಕೆ ಬಂದಳು. ಸೋನೆಹನಿಯಿಂದ ಅವಳ ಸೀರೆ ಒದ್ದೆಯಾಗಿತ್ತು. ಅವಳು ಅದನ್ನೇ ತಲೆಗೆ ಮುಸುಕು ಹಾಕಿಕೊಂಡಳು. ಒಂದು ಮೆಟ್ಟಿಲಿನ ಮೇಲೆ ಕುಳಿತಳು.

ಹೊರಗೆಲ್ಲ ಕತ್ತಲೆ, ಆದರೆ ಹಿಂದಿನ ಸ್ಮೃತಿಗಳ ಮಾರ್ಗ ಸ್ಪಷ್ಟವಾಗಿ ಕಾಣುತ್ತಿತ್ತು. ಐದು ವರ್ಷದ ಹಿಂದೆ, ಇದೇ ದಿನ, ಅವಳ ಪತಿ ನಂಜುಂಡ ಇದೇ ಹೊಳೆಯಲ್ಲಿ ಮುಳುಗಿದ್ದ. ಅವನ ವ್ಯಕ್ತಿತ್ವಕ್ಕೆ ಅವಳು ಮನಸೋತಿದ್ದಳು. ಅವಳು ಅವನನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದಳು. ತನ್ನನ್ನು ಒಂಟಿಯಾಗಿ ಬಿಟ್ಟು ಅವನು ಹೊಳೆಯ ಪಾಲಾದ ದಿನ ಅವಳು ಪಟ್ಟ ದುಃಖವನ್ನು ಯಾರು ತಾನೇ ಅಳೆಯಬಲ್ಲರು? ನದಿಯಲ್ಲಿ ಬಿದ್ದು ತನಗೂ ಸಾಯುವ ಅದಮ್ಯ ಆಶೆಯುಂಟಾಯಿತು. ಇದೇ ಅವಳ ಮನಸ್ಸನ್ನು ಶ್ರೋತ್ರಿಯರು ಪ್ರಾಯಶಃ ಗುರುತಿಸಿರಬೇಕು. ಅಂತೆಯೇ ಅವರು ತನ್ನ ಹತ್ತಿರ ಕುಳಿತು ತಲೆಯನ್ನು ನೇವರಿಸುತ್ತಾ "ಈ ಮಗುವಿಗಾದರೂ ನೀನು ಬದುಕಬೇಕು" ಎಂದಿದ್ದರು.

ಈಗ ತಾನಿಲ್ಲದೆಯೂ ಮಗು ಬದುಕುತ್ತದೆ. ಆಗಲೇ ತಾನು ಜೀವನವನ್ನು ಕೊನೆಗಾಣಿಸಿದ್ದರೆ ಇಷ್ಟು ಸಮಸ್ಯೆಯೇ ಏಳುತ್ತಿರಲಿಲ್ಲ. ಜನರ ದೃಷ್ಟಿಯಲ್ಲಿ ತಾನು ನಿಕೃಷ್ಟಳು, ಈಗಲಾದರೂ ಏನಾಯಿತು? ತಾನು ನದಿಯ ಪಾಲಾಗುವುದೇ ಒಳ್ಳೆಯದು.

ಹಿಂದಿನಿಂದ ಅವಳ ಮೇಲೆ ಪ್ರಕಾಶ ಬಿದ್ದಂತಾಯಿತು. ತಿರುಗಿ ನೋಡಿದಳು, ಟಾರ್ಚಿನ ಬೆಳಕು. ಅದರ ಹಿಂದೆಯೇ "ಇಲ್ಲೇಕೆ ಕೂತಿದ್ದೀಯಾ?" ಎಂಬ ಮಾತು. ರಾಜನ ದನಿ ಅದು. ಅವಳು ಎದ್ದು ನಿಂತಳು. ಅವನು ಹತ್ತಿರ ಬಂದು ಅವಳ ಕೈ ಹಿಡಿದಾಗ, ಅವಳ ತಲೆ ಸುತ್ತಿದಂತಾಯಿತು. ರಾಜನು "ನಾನು ಎಲ್ಲೆಲ್ಲಿಯೋ ಹುಡುಕಿದೆ. ಎಕ್ಸಿಡೆಂಟ್ ಮೂಲಕ ತಿರುಗಿ ಬರಲಿಕ್ಕೆ ಗಾಡಿ ಇಲ್ಲವೆಂದು ತಿಳಿದ ಕೂಡಲೇ ಸೈಕಲ್ ತಗೊಂಡು ಬಂದೆ" ಎಂದನು.

ಅವಳು ಬಿಕ್ಕಳಿಸಿ ಅಳುತ್ತಾ "ನನ್ನ ಹುಡುಕಿಕೊಂಡು ನೀವು ಯಾಕೆ ಬಂದಿರಿ? ನಾನೊಬ್ಬಳು ಪಾಪಿ" ಎಂದಳು.

೨. ಮಂಡಿ ಸಾಹುಕಾರ

('ಸಾಕ್ಷಿ' ಕಾದಂಬರಿಯಿಂದ)

(ಜಿಪುಣತನದ ಇಲ್ಲವೆ ಧನಲೋಭದ ವ್ಯಕ್ತಿಗಳು – ಸಾವಿರಾರು ಜನ – ನಮ್ಮ ಕಣ್ಣಿಗೆ ಬೀಳುತ್ತಲೇ ಇರುತ್ತಾರೆ. ಆದರೆ ಅವರ ಯೋಚನೆ, ಅವರ ನಿತ್ಯ ಜೀವನ – ಇವನ್ನು ಸಾಹಿತ್ಯ ಕೃತಿಯಲ್ಲಿ ಪದರು ಪದರಾಗಿ ಬಿಡಿಸಿ, ಅಂಥವರನ್ನು ಎಂದಿಗೂ ಮರೆಯಲಾಗದಂತೆ ಚಿತ್ರಿಸಿದ್ದುದು ಪ್ರಾಯಶಃ ಬೇರೆಲ್ಲಿಯೂ ಕಾಣಸಿಗದು.

ಇದಕ್ಕೆ ತದ್ವಿರುದ್ಧವಾದ ನಡವಳಿಕೆ ಅವರ ಅಳಿಯ ರಾಮಕೃಷ್ಣಯ್ಯನದು. ಅಷ್ಟೆ 'ಅತಿ' ಎನಿಸಬಹುದಾದ ಅಪರಿಗ್ರಹ ವೃತ್ತಿಯದು.

ಇವೆರಡು ಸ್ವಭಾವಗಳಲ್ಲಿಯ ಘರ್ಷಣೆ ಈ ಕಥಾನಕದಲ್ಲಿ ಬಂದಿದೆ.)

ಒಂದು

ಮಧ್ಯಾಹ್ನಾನಂತರ ನಾಲ್ಕು ಗಂಟೆಯ ಹೊತ್ತಿಗೆ ತಿಮ್ಮಪ್ಪ ಗೌಡರು ಇವರ ಮನೆಗೆ ಬಂದರು. ಮನೆಯಲ್ಲಿ ಒಬ್ಬಳೇ ಇದ್ದ ಸುಕನ್ಯೆ ಸಡಗರದಿಂದ ಮಂದಲಿಗೆ ಹಾಕಿ ಕೊಟ್ಟಳು. ತಿಮ್ಮಪ್ಪ ಗೌಡರೆಂದರೆ ಅವಳಿಗೆ ತನ್ನ ತೌರೂರಾದ ತಿಪಟೂರಿನವರೇ ಒಬ್ಬರು ಬಂದಂತಹ ಅಕ್ಕರೆಯಾಗುತ್ತಿತ್ತು.

"ನೋಡವ್ವ, ನಿಂಗೆ ಒಂದು ಮಾತು ಹೇಳಾಣ ಅಂತ ಬಂದೆ. ಹೇಳೂದೋ ಬ್ಯಾಡದೋ ಧರ್ಮಸೂಕ್ಷ್ಮ ನಂಗೇ ತಿಳೀತಿಲ್ಲ. ಏನು ಮಾಡ್ಲಿ ಹೇಳು," ಎನ್ನುತ್ತಾ ಗೌಡರು ಮುಖ ಚಿಕ್ಕದು ಮಾಡಿಕೊಂಡರು. "ನಿಮಗೆ ತಿಳಿಯದ್ದು ನಂಗೆ ತಿಳಿಯುತ್ತೆಯೇ ಗೌಡರೇ? ಇಷ್ಟು ದೂರ ನಡಕೊಂಡು ಬಂದಿದೀರಿ. ಹೇಳಿ ಬಿಡಿ," ಎನ್ನುತ್ತಾ ಇವಳು ಅವರ ಎದುರಿಗೇ ತುಸು ದೂರದಲ್ಲಿ ಕಂಬ ಒರಗಿ ಕೂತಳು.

"ನಿಮ್ಮಪ್ಪಾಜಿಗೂ ವಯಸ್ಸಾಯ್ತು. ಬುದ್ಧಿ ಪಸಿ ಹಂಗಂಗೇ."

"ಏನಾದರೂ ಅಂದರಾ ನಮ್ಮ ವಿಷಯ?" ಇವಳು ಗುರಿ ಮಾಡಿ ಕೇಳಿದಳು.

ಹಿಂಗೇ, ಅವರ ಬುದ್ಧಿ ಗೊತ್ತದಲ್ಲ, ನಿಮ್ಮ ಮಾವಾರ ತಿಥಿಗೇ ಬಂದು ಇಲ್ಲಿ ನಾಕು ದಿಸ ಇದ್ದರು, ನಿಮಗೇ ಗೊತ್ತಲ್ಲ. ಆಗ ಸುತ್ತಾ ಹಳ್ಳಿಗಳನ್ನೆಲ್ಲ ತಿರುಗಿದಾರೆ. ಸರಿಯಾದ ತೆಂಗಿನ ತ್ವಾಟ ಇದ್ರೆ ತಗಾಬೇಕು ಅಂತ. ತಗಳ್ಳಲಿ, ಅವರ ದುಡ್ಡು ಕೊಟ್ಟು ಪದಾರ್ಥ ಕೊಂಡರೆ ತೈಪ್ಪೇನು? ಆದರೆ ಅದಲ್ಲ ನಾನು ಹೇಳಾದು. ನಮ್ಮ ಮನೆಗೂ ಬಂದಿದ್ದರು. ಅವರದ್ದು ಲೆಕ್ಕಾಚಾರ ಅಂದರೆ ಲೆಕ್ಕಾಚಾರ ತಾನೆ. ನಿಮ್ಮ ಹುಡುಗನ್ನ ಮೂರು ವರ್ಷ ಓದಾಕ್ ಬುಟ್ಟಿದ್ರಲ್ಲ ಅವರ ಮನ್ಲಿ, ಅವನಿಗೆ ಏಟೇಟು ಕರ್ಚಾಗದೆ ಅಂತ ಲೆಕ್ಕ ಬರೆದು ಮಡೀಕಂಡವರಂತೆ, ಒಂದು ಖಾತೆ ಪುಸ್ತಕದಾಗೆ. ಅಕ್ಕಿ ಎಷ್ಟು, ಬ್ಯಾಳಿ ಎಷ್ಟು ಯಾವ ಯಾವತ್ತು ತರಿಸಿದ ಬದನೇ ಕಾಯಿ ಎಷ್ಟು, ವಗ್ಗರಣೆ ಎಣ್ಣೆ ಎಷ್ಟು? ಮೈ ಸೋಪು ಎಷ್ಟು? ಬಟ್ಟೆ ಸೋಪು ಎಷ್ಟು? ನಿಮ್ಮ ಹುಡುಗ ಪುಸ್ತಕ ಕೊಡತಾರಂತಲ ಓದಿ ಜ್ವಾನವಾಗಿ ಅವರಿಗೇ ವಾಪಾಸು ಕೊಡಾದು. ಒಂದು ಸಲಿಗೆ ಎಲ್ಲ ಪುಸ್ತಕ ಓದಿಕೊಟ್ಟರೆ ಇನ್ನೆಲ್ಲ. ಹಂಗೆ ತಂದು ತಂದು ನಡುರಾತ್ರಿ ಕಳೆದರೂ ಮಡೀಕಂಡೇ ಓದತಿತ್ತಂತೆ, ಓದಾಕ್ ದೀಪ ಉರಿಸಬೇಕಲ್ಲ, ಆ ಕರೆಂಟು ದುಡ್ಡೆಷ್ಟು ಅಂತ. ಲೆಕ್ಕ ಅಂತ ಲೆಕ್ಕ. ಅವ್ರೊತ್ತಿನಿಂದ ಅಯ್ತಾ ರೂಪಾಯಿ ಆಸೆ ಕಾಸಿಗೆ ಇವತ್ತಿವರೆಗಿಂಟು ಬಡ್ಡಿ ಎಷ್ಟು, ಎಲ್ಲಾ ಲೆಕ್ಕ ತೆಗೆದಿಟ್ ಹಾಕಿ ಮಡಗ್ಯವ್ರಂತೆ. ಅದನ್ನೇ [illegible] ಹೇಳದನ್ನ, ಎಲ್ಲ ಸಾವಿರದ ಮುನ್ನೂರ–

ಮೇಲೆ ಇವರು ಒಂದು ದಿನವೂ ಮಾವನ ಮನೆಗೆ ಹೋಗಿಲ್ಲ. ಅವರು ಕರೆಯದೆ ನಾನೇ ತೌರೆಂದು ಅಲ್ಲಿಗೆ ಹೋಗಿದ್ದಾಗ ಕೂಡ ಅಲ್ಲಿಗೆ ಬಂದಿಲ್ಲ. ನೀನು ಬಾ ಅಂತ ಅವರೂ ಅಳಿಯನನ್ನು ಕರೆದಿಲ್ಲ. ಆದರೆ ನಿನ್ನ ತಂದೆ ಇಂಥೋರು ಅಂತ ಒಂದು ಕೊಂಕು ಮಾತೂ ಇವರ ನಾಲಿಗೆಯಿಂದ ಇದುವರೆಗೆ ಬಂದಿಲ್ಲ. ಇದು ಜ್ಞಾಪಕಕ್ಕೆ ಬಂದಾಗ ನನ್ನ ಪ್ರಸ್ತಾಪದ ಬಗೆಗೆ ನನಗೇ ಅಂಜಿಕೆಯಾದರೂ ಆ ಮಾತನ್ನು ಅಲ್ಲಿಗೆ ಬಿಡದೆ ಮಾರನೆ ದಿನ ನಾನೇ ಮತ್ತೆ ಮಾತು ತೆಗೆದು, "ಅಜ್ಜನ ಮನೇಲಿ ಬಿಡುಕ್ಕೆ ಅಧಿಕಾರವಿಲ್ಲವೆ ನಮಗೆ? ಗಣೇಶ ಪರೀಕ್ಷೆ ಪಾಸು ಮಾಡಿದಾನೆ, ಈ ಊರು ಹೈಸ್ಕೂಲು ಚೆನ್ನಾಗಿಲ್ಲ ಅಂತ ಅವರಿಗೆ ಗೊತ್ತಿದ್ದರೆ ಖಂಡಿತ ಕಳಿಸು ಅಂತ ಕಾಗದ ಬರೀತಿದ್ದರು. ಕೆಲವರು ಬಾಯಿ ಬಿಟ್ಟು ಆಡ್ತಾರೆ, ಕೆಲವರು ಒಳಗೇ ಇಟ್ಟುಕೊಂಡಿರ್ತಾರೆ. ನಿಮ್ಮ ಹಾಗೇ ಅವರದ್ದೂ ಮೌನ ಸ್ವಭಾವ. ಆದರೆ ಮೊಮ್ಮಗ ಅಂದರೆ ತುಂಬ ಪ್ರೀತಿ ಇದೆ ಅಂತ ನಂಗೆ ಗೊತ್ತು."

ಇವರು ಸುಮ್ಮನಾದರು. ಒಪ್ಪಿಕೊಂಡಿದ್ದಾರೆ ಅಂತ ನಾನು ಅರ್ಥ ಮಾಡಿಕೊಂಡು ಮುಂದಿನ ಮಾತನಾಡುವ ಮೊದಲೇ ಹ್ಯಾಗ ಹೇಳಿಬಿಟ್ಟರು? "ಬೆಳೆಯೂ ಹುಡುಗನ್ನ ಅಲ್ಲಿ ಬಿಟ್ಟು ಅವರ ಸ್ವಭಾವ ಇವನಿಗೆ ಬಂದರೆ ನಮ್ಮ ಮನೆ ಪದ್ಧತಿಗೆ ಹೊರತಾಗಿ ಬಿಟ್ಟಾನು. ಚೆನ್ನರಾಯಪಟ್ಟಣದಲ್ಲೇ ಓದಲಿ."

ಈ ಮಾತು ಅರ್ಥವಾಗುಕ್ಕೆ ನನಗೆ ಎರಡು ನಿಮಿಷ ಬೇಕಾಯಿತು. ಅರ್ಥವಾದ ಮೇಲೆ ನಾಲಿಗೆ ಕಟ್ಟಿದ ಹಾಗಾಯಿತು. ನನ್ನ ಅಪ್ಪನ ಸ್ವಭಾವದ ವಿಷಯದಲ್ಲಿ ಯಾವತ್ತೂ ಒಂದು ಮಾತೂ ಆಡದವರು ಇವತ್ತು ಆಡಿದರೆಂಬ ನೋವೂ ಆಯಿತು. ಇವರ ಮೇಲೆ ಸಿಟ್ಟೂ ಬಂತು. ಅವತ್ತೆಲ್ಲ ನಾನು ಸುಮ್ಮನೇ ಇದ್ದೆ. ಸಂಜೆಯ ಹೊತ್ತಿಗೆ ನನಗೇ ಅರ್ಥವಾಯಿತು. ಅವರನ್ನು ಹೀಯಾಳಿಸುವುದು ಇವರ ಅರ್ಥವಲ್ಲ. ಅವರ ಜೊತೆಗೆ ಬಿಟ್ಟಾ ಆ ಗುಣ ನಮ್ಮ ಮಗನಿಗೆ ಬಂದರೆ? ನನಗೂ ಅಂಜಿಕೆಯಾಯಿತು. ಆ ರಾತ್ರಿ ಎಲ್ಲ ಯೋಚಿಸಿದ ಮೇಲೆ ಒಂದು

ಸಮಾಧಾನ ಕಂಡಿತು. ಗಣೇಶ ನೋಡುಕ್ಕೆ ಈ ಕಡೆ ತಾತನ ಹಾಗೇ ಇದಾನೆ. ಎಲ್ಲಿ ಬಿಟ್ಟರೂ ಅವನ ಸ್ವಭಾವ ಬದಲಾಯಿಸುಲ್ಲ. ಒಂದಿಷ್ಟು ಬಿಪ್ಪ, ಹಾಸಿಗೆ ಇದ್ದಷ್ಟು ಕಾಲು ಚಾಚುವುದು ಹುಡುಗರು ಕಲಿತರೆ ತಪ್ಪೇನು? ನಮ್ಮಪ್ಪನಲ್ಲಿ ಇನ್ನಾವ ಕೆಟ್ಟ ಗುಣವಿದೆ? ಬೀಡಿಯೆ, ಸಿಗರೇಟೆ, ಜೂಜೆ, ಕುಡಿತವೆ, ಹೆಂಗಸೆ? ಅವರನ್ಯಾಕೆ ಹೀನಾಯವಾಗಿ ಕಾಣಬೇಕು?

ನಾಳೆ ಬೆಳಿಗ್ಗೆ ಮತ್ತೆ ಇವರ ಹತ್ತಿರ ಮಾತು ತೆಗೆದೆ. ಕಣ್ಣೀರು ಹಾಕಿದೆ. ಗಟ್ಟಿಯಾಗಿ ಅತ್ತೆ. "ಅವನನ್ನು ನಾನು ಹೆರಲಿಲ್ಲ. ಹಾಲು ಕುಡಿಸಲಿಲ್ಲ. ಎತ್ತಿ ಆಡಿಸಲಿಲ್ಲ. ಸಾಕಲಿಲ್ಲ. ಅವನು ಪೂರ್ತಿ ನಿಮ್ಮ ಮಗ. ಅವನ ವಿದ್ಯಾಭ್ಯಾಸದ ವಿಷಯಕ್ಕೆ ನಾನೇನು ಹೇಳಬೇಕಾಗಿಲ್ಲ. ಆ ಅಜ್ಜನಿಂದ ಅವನನ್ನು ತೊರೆಸಿಬಿಟ್ಟರೆ ನಿಮಗೆ ಸಂತೋಷವಾಗುತ್ತೆ, ಅಂತಲ್ಲಾ ಅಂದೆ. ಮದುವೆಯಾದ ಅಷ್ಟು ವರ್ಷದಲ್ಲಿ ನಾನು ಹಾಗೆ ಎದುರು ನಿಂತು ವಾದಿಸಿ ಕಣ್ಣೀರಿನ ಪ್ರತಿಭಟನೆ ಮಾಡಿದ್ದು ಅದೇ ಮೊದಲು. ಇವರು "ನಿನ್ನಿಷ್ಟ ಬಂದ ಹಾಗೆ ಮಾಡಿಕೊ. ನನ್ನ ಮಾತಿಲ್ಲ," ಎಂದುಬಿಟ್ಟರು.

ಇಲ್ಲಿಯ ಸ್ಕೂಲಿನಿಂದ ದಾಖಲಾತಿ ಪಡೆದು, ಗಣೇಶನನ್ನು ಕರೆದುಕೊಂಡು ನಾನೊಬ್ಬಳೇ ಹೊರಟೆ. ಹೋದರೆ ಆ ಮನೇಲಿ ಒಂದು ಮುರುಕು ಬೆಲ್ಲವಾಗಲಿ, ಒಂದು ಚಮಚ ಸಕ್ಕರೆಯಾಗಲಿ ಇಲ್ಲ. ಒಂದು ಹಿಡಿ ಅಕ್ಕಿಯೂ ಇಲ್ಲ. ಸಣ್ಣ ಡಬ್ಬದಲ್ಲಿ ಅಚ್ಚೇರಿನಷ್ಟು ತೊಗರಿಬೇಳೆ; ಒಂದು ಕುಕ್ಕೆಯಲ್ಲಿ ಐದಾರು ಸೇರು ರಾಗಿ ಹಿಟ್ಟು. ಅವರಿಗೆ ಸಕ್ಕರೆ ಕಾಯಿಲೆ. ಸಿಹಿ ಇರುವ ಯಾವ ಪದಾರ್ಥವನ್ನೂ ತಿನ್ನಕೂಡದು ಅಂತ ಡಾಕ್ಟರು ಹೇಳಿದ್ದರಂತೆ. ಗೋದಿ ಅಥವಾ ರಾಗಿ ತಿನ್ನಬೇಕು. ಗೋದಿ ಇಲ್ಲಿ ಬೆಳೆಯೂ ಪದಾರ್ಥವಲ್ಲ. ದಿಲ್ಲಿ, ಕಾನ್ಪುರಗಳ ಕಡೆ ಬೆಳೆದು ರೈಲಿನಲ್ಲಿ ಬಂದು ಬಿಕ್ರಿಯಾಗಬೇಕಾದರೆ ಅದರ ಬೆಲೆ ಹೆಚ್ಚು. ರಾಗಿಯಾದರೆ ಇಲ್ಲೇ ಬೆಳೆಯುವ ವಸ್ತು, ಅದ್ದರಿಂದ ಅದರ ರೊಟ್ಟಿ, ಅದರ ಮುದ್ದೆ ಮಾತ್ರ ತಿನ್ನುತ್ತಿದ್ದರು.

ನಾನೇ ಒಳಗೆ ಅಪ್ಪ ಒಬ್ಬರನ್ನೇ ಕೂರಿಸಿಕೊಂಡು ಹೇಳಿದೆ: "ಇಲ್ಲಿ

ನೀವೂ ಒಪ್ಪಿರೀ. ನಮ್ಮೂರಲ್ಲಿ ಹಾಲ ಕ್ರಾಂತಿ ಸರಿಯಾಗಿ ನಡೆಯಲ್ಲ. ಗಣೇಶ ನಿಮಗೆ ಯಾವುದಕ್ಕೂ ಭಾರವಾಗಲ್ಲ. ಅವನಿಗೆ ಯಾಕೋ ರಾಗಿ ಅಂದರೆ ಇಷ್ಟವಿಲ್ಲ. ಮೊದಲಿನಿಂದಲೂ ಅಷ್ಟೆ. ಜಂಬಗಿಂಬವಿಲ್ಲ. ಆದರೆ ರಾಗಿ ಮುದ್ದೆಯನ್ನು ಕಳಿತ ಬಾಳೆಹಣ್ಣಿನಷ್ಟು ಮೃದುವಾಗಿ ಮಾಡುತ್ತಾನೆ. ರೊಟ್ಟೀನೂ ಅಷ್ಟೆ. ಬಟ್ಟೆ ಮೇಲೆ ತಟ್ಟಿ, ಗರಿಗರಿ ಉಬ್ಬುರೊಟ್ಟಿ ಮಾಡೋಕ್ಕೆ ಬರುತ್ತೆ. ಅಡಿಗೆ ಜವಾಬ್ದಾರಿ ಪೂರ್ತಿ ಅವನಿಗೆ ಬಿಟ್ಟು ಬಿಡಿ. ಚೆನ್ನಾಗಿ ನಿಮ್ಮ ಬಟ್ಟೆ ಒಗೆಯುತಾನೆ. ಅಂಗಡಿಗೆ ಹೋಗಿ ಬರ್ತಾನೆ. ಕೈ ಶುದ್ಧ. ಒಂದು ಪೈಸಾನೂ ಮುಟ್ಟಲ್ಲ, ಹೇಳಲ್ಲ. ಅವನಾಯಿತು. ಅವನ ಕೆಲಸವಾಯಿತು. ನಿಮಗೂ ಜೊತೆ ಇದ್ದ ಹಾಗಾಯ್ತು....."

ಅಂತೂ ಇವನನ್ನು ಇಲ್ಲಿ ಬಿಟ್ಟು, ಜೋಳ್‌ದ ರೊಟ್ಟಿ ಮೊಸರನ್ನದ ಊಟ ಮಾಡಿಟ್ಟು, ಅದರ ಜೊತೆಗೆ ಗಣ ಪತಿಗೆ ಹಣ ಒಡೆ ಗಾಡಿಗೆ ಗಂಟಿಗೆ ಹಿಂತಿರುಗಿದೆ. ಹೊರಡುವ ಮೊದಲು ಗಣೇಶನನ್ನು ಮನೆಯ ಹಿಂದುಗಡೆ ಕರೆದು ಕೈ ಹಿಡಿದು ಆಶೀರ್ವಾದಿಸಿಕೊಂಡು ಹೇಳಿದ. "ನೋಡು, ಅಪ್ಪನ ಸೇವೆಯನ್ನು ಭಕ್ತಿಯಿಂದ ಮಾಡಬೇಕು. ಯಾವತ್ತೂ ಅವರು ಏನಾದರೂ ಎದುರು ಮಾತಾಡಬಾರದು. ಎಲ್ಲಾ ಜೊತೆಗೆ ಪ್ರೇತಿ ಹುಡುಗರ ಜೊತೆ ಸೇರಿ ಆಟಕ್ಕೆ ಹೋಗಕೂಡದು. ಚೆನ್ನಾಗಿ ಓದಿ ಫಸ್ಟ್‌ಕ್ಲಾಸ್ ಬರಬೇಕು."

ಗಣೇಶ ಅಪ್ಪನ ಮನೆಯಲ್ಲಿ ಮೂರು ವರ್ಷ ಮಾತ್ರ ಇದ್ದ. ಕಾಲೇಜಿಗೆ ಸೇರುವಾಗ "ನನ್ನನ್ನು ಇಲ್ಲಿರು ಅಂತ ಇನ್ನು ಬಲವಂತ ಮಾಡಿದರೆ ನಾನು ಎಲ್ಲಾದರೂ ಓಡಿ ಹೋಗಿ ಬಿಡ್ತೀನಿ." ಅಂತ ಹಟ ಹಿಡಿದು ಹಾಸನದ ಕಾಲೇಜಿಗೆ [illegible] ಸೇರಿದ. ಶಿವಮೊಗ್ಗ ಸೇರಿದ ಮೊದಲ ನಾಲ್ಕು ತಿಂಗಳಾದ ಮೇಲೆ ನವರಾತ್ರಿ ರಜಕ್ಕೆ ಬಂದಾಗಲೇ ನನ್ನ ಕೈಲಿ ಮುನಿಸಿಕೊಂಡವನ ಹಾಗೆ ಮೌನಿಯಾಗಿದ್ದ. "ಯಾಕೋ ಏನೂ ಮಾತೇ ಆಡಲ್ಲ" ಅಂದರೆ "ಏನಿದೆ ಆಡಕ್ಕೆ?" ಅಂದ. ತೀರ ಬಲವಂತ ಮಾಡಿದ್ದಕ್ಕೆ "ಹಳ್ಳಿಲಿನಲ್ಲಿ ಪಾಠ ಚೆನ್ನಾಗಿಯೇ ನಡೆಯುತ್ತೆ"

ಅಂತ ಮಾತು ತಿರುಗಿಸಿದ. ತಾತನ ವಿಷಯ ಕೇಳಿದ್ದಕ್ಕೆ "ಚೆನ್ನಾಗಿದ್ದಾರೆ" ಎಂದು ಒಂದು ಮಾತಿನಲ್ಲಿ ಮುಗಿಸಿದ. "ನಿನ್ನ ಕಂಡರೆ ಪ್ರೀತಿಯಾಗಿಲ್ಲವೇನೋ? ನೀನೊಬ್ಬ ಮೊಮ್ಮಗನನ್ನು ಬಿಟ್ಟರೆ ಅವರಿಗೆ ಇನ್ನ್ಯಾರಿದ್ದಾರೆ?" ಅಂದಿದ್ದಕ್ಕೆ "ನಿಂಗೆ ಗೊತ್ತಿಲ್ಲ ಬಿಡಮ್ಮಾ" ಅಂತ ಹಂಡೆಗೆ ನೀರು ಸೇದಿ ತುಂಬಲಿಕ್ಕೆ ಹೋದ. ವಾಪಾಸು ತಿಪಟೂರಿಗೆ ಹೊರಡುವಾಗ ಸ್ನಾನ ಮಾಡಿಕೊಂಡು ಹುರಿಟ್ಟು, ಅವಲಕ್ಕಿ ಮೊಸರುಬುತ್ತಿಯನ್ನು ಗಾಡಿಗೆ ಇಟ್ಟುಕೊಂಡವನು ನನ್ನ ಹತ್ತಿರ ಬಂದು "ಅಮ್ಮ, ಅಲ್ಲಿ ಅಕ್ಕಿ ಸಿಕ್ಕುವುದಿಲ್ಲ. ನಮ್ಮ ಗದ್ದೆಯಲ್ಲಿ ಬಂದಿದ್ದರ ನಾಲ್ಕು ಸೇರು ಭತ್ತ ಹಾಕಿ ಕಳಿಸು. ಹ್ಯಾಗೂ ಗಾಡಿ ಹೋಗುತ್ತೆ" ಅಂದ. ನನಗೆ ಅದು ಅತಿ ಯೋಗ್ಯವಾದ ಮಾತು ಅನ್ನಿಸಿತು. "ಹುರಿಟ್ಟು ಅವಲಕ್ಕಿ ಸರಿ ತಿನ್ನು. ಅಕ್ಕಿ ತೆಗೆದುಕೊಂಡು ಹೋದರೆ ಅಪ್ಪ ಏನಂದಾರು?" ಅಂತ ಸಿಟ್ಟಿನ ಧ್ವನಿಯಲ್ಲಿ ಹೇಳಿದ್ದಕ್ಕೆ ಸುಮ್ಮನೆ ಗಾಡಿ ಹತ್ತಿ ಹೋಗಿದ್ದ.

ಮುಂದಿನ ಸಲ, ಬೇಸಿಗೆ ರಜಕ್ಕೆ ಬಂದಿದ್ದಾಗ ಅವನೇ ಅಂದ: "ನವರಾತ್ರಿ ರಜಕ್ಕೆ ಬಂದಿದ್ದಾಗ ಗಾಡೀಲಿ ನಾಲ್ಕು ಸೇರು ಭತ್ತ ಕಳಿಸು ಅಂತ ಕೇಳಿದ್ದಕ್ಕೆ ನೀನು ಬಯ್ದು ಕಳಿಸಿದೆ. ನಾನು ಯಾಕೆ ಕೇಳಿದೆ ಅಂತ ಅರ್ಥ ಮಾಡ್ಕೊಳ್ಳಿಲ್ಲ." ತಾತನ ಹತ್ರ ಇರೋ ತೊಂದರೆ ಹೇಳಿದನ್ನ, ವಿಸ್ತರಿಸಿದ ಕಣ್ಣು, ಒಂದು ಸಲ ಬತ್ತದ ಮೇಲೆ ಧುಮುಕುವ ಕಾಲುವೆಗೆ ಹರಿಯುವ ನೀರಿನ ಹಾಗೆ ಅವನು ತಡೆಯಿಲ್ಲದೆ ಎಲ್ಲಾ ಹೇಳಿಬಿಟ್ಟ. "ಅಜ್ಜ, ಒಂದು ಸಲಕ್ಕೆ ಎರಡು ಸೇರು ಅಕ್ಕಿ ತರಿಸುತ್ತಿದ್ದರು; ಅಂದರೆ, ಹುಡುಗರ ಮುಂದೆ ಒಂದು ರೂಪಾಯಿ ಹಾಕಿ ಅಕ್ಕಿ ತಗಂಡು ಬಾ ಅನ್ನುತ್ತಿದ್ದರು. "ಇಲ್ಲಿಬಾ. ಮುಂದಿಗೆ ಹೋಗ್ತಾ ನನ್ನ ಜೊತೆ ಬಾ, ನಾನು ಕೊಡುತ್ತೀನಿ ಅಂತಿದ್ದರು." ಅವರ ಹಿಂದೆ ಹುಡುಗ ಕೈಚೀಲ ಹಿಡಿದುಕೊಂಡು ಹೋಗಬೇಕು. ದಾರಿಯ ಉದ್ದಕ್ಕೂ ರಸ್ತೆಯ ಅಂಗಡಿಯಲ್ಲಿದ್ದ ನಾಲ್ಕೈದು ಬಗೆ ಅಕ್ಕಿಗಳನ್ನು ಪರೀಕ್ಷಿಸಿ ಅವುಗಳಲ್ಲಿ ಅಗ್ಗವಾದ್ದನ್ನ ಅಳೆದು ಚೀಲಕ್ಕೆ ಹಾಕಿಸುತ್ತಿದ್ದರು. ಒಂದು ಸಲಕ್ಕೆ ಎರಡೇ ಸೇರು. ಅದು ಮುಗಿದ ಮೇಲೆ ಮತ್ತೆ ಬೇರೆ ಸೇರು ಬೇಕು ಅಂತ ಅಜ್ಜನಿಗೆ ಹೇಳಬೇಕು. ಅವರು

ಅಂಗಡಿಗೆ ಕರಕಂಡು ಹೋಗಿ ಕೊಡಿಸಬೇಕು. ಹುಡುಗನಿಗೆ ಕಳಪೆ ಅಕ್ಕಿ ತಿನ್ನಕ್ಕೆ ಅಸಹ್ಯವಾಗುತ್ತಿತ್ತು. ಆಗರೆ ಅವರೇನೂ ಭೇದ ಮಾಡ್ತಿರಲಿಲ್ಲ. ಅವರು ತಿನ್ನುವ ರಾಗೀನೂ ಹೀಗೆಯೇ, ಇಂಥದನ್ನೇ ಆಯ್ತಿದ್ದರು. ಒಂದು ಸಲಕ್ಕೆ ಎರಡು ಕೆಜಿ. ಅವರ ರಾಗಿ ಆರೇಳು ದಿನ ಬಂದರೆ ಇವನ ಅಕ್ಕಿ ನಾಲ್ಕು ದಿನದಲ್ಲಿ ಮುಗೀತಿತ್ತು. ಅಕ್ಕಿ ತೀರಿದೆ ಅಂತ ಮತ್ತೆ ಹೇಳಬೇಕಾದರೆ ಜೀವ ಹೋಗುವಂಥ ನಾಚಿಕೆ. "ಹಾಳು ಮಾಡಿಬಿಟ್ಟೆ, ಏನು? ಇಲಿಗಿಲಿಗೆ ತಿನ್ನಿಸಿದೆಯಾ? ಡಬ್ಬದ ಮುಚ್ಚಳ ಸರಿಯಾಗಿ ಮುಚ್ಚಿಟ್ಟಿದ್ದೆ ತಾನೆ?" ಹಾಗೆಯೇ ಬೇಳೆ ಕಾಳು, ಪ್ರತಿಯೊಂದರಲ್ಲೂ. ಅವರೋ ಸ್ನಾನಕ್ಕೆ ಸಾಬೂನು ಉಪಯೋಗಿಸದವರು. ನುಣ್ಣನೆ ಬೆಣಚು ಕಲ್ಲಿನಲ್ಲಿ ಉಜ್ಜಿ ಮೈ ಕೊಳೆ ತೆಗೆಯುವವರು. ಇವನಿಗೆ ಸೋಪಿನ ಅಭ್ಯಾಸ. ಯಾವಾಗಲೂ ಮಿತವ್ಯಯದ ಬುದ್ಧಿವಾದ. "ಅವರ ಮನೆಯ ಕಸಗುಡಿಸಿ ಸಾರಿಸಿ ಅವರ ಬಟ್ಟೆ ಒಗೆದು ಅಡಿಗೆ ಮಾಡಿದ್ದಕ್ಕಾದರೂ ನನಗೆ ಖರ್ಚು ಮಾಡುವ ಅಕ್ಕಿ ಬೇಳೆ ಸಾಬೂನುಗಳು ಸರಿಹೋಗಬೇಕು. ಆದರೂ ಮಿತವ್ಯಯದ ಬುದ್ಧಿವಾದ. ಅವರು ಉಳಿಸುವ ನೋಟಿನ ಕಂತೆಗಳು ಕೊನೆಗೆ ಏನಾಗುತ್ತೆ? ಆ ಮನೇಲಿರೂದೇ ಹಿಂಸೆ. ಓಡಿ ಹೋಗಿಬಿಡಾಣ ಅನ್ನಿಸುವಷ್ಟು ಹಿಂಸೆ. ಯಾಕೆ ಅಲ್ಲಿ ನನ್ನ ಕೂಡಿ ಹಾಕಿದೀಯ ನೀನು?" ಎಂದ. ತಾತನ ಬುದ್ಧಿವಾದ: "ಗಣೇಶ, ಮನುಷ್ಯ ಹೊಳೆಗೆ ಕಲ್ಲು ಎಸೆದರೂ ಎಣಿಸಿ ಎಸೀಬೇಕು. ಇನ್ನು ದುಡ್ಡು ಖರ್ಚುಮಾಡುವಾಗ ಲೆಕ್ಕ ಇಟ್ಟುಕೊಳ್ಳದಿದ್ದೋನು ಉದ್ಧಾರವಾಗ್ತಾನೆಯೇ? ನೀನು ನನ್ನ ಮೊಮ್ಮಗ. ನೀನು ತಿಂದದ್ದಕ್ಕೆ ನಾನು ಬ್ಯಾಡ ಅನ್ನುಲ್ಲ. ಆದರೆ ನೀನು ಇರೂದರಿಂದ ತಿಂಗಳಿಗೆ ಒಟ್ಟು ಎಷ್ಟು ಹೆಚ್ಚಿಗೆ ಖರ್ಚಾಗುತ್ತೆ – ನೀನೇ ಲೆಕ್ಕ ಬರೆದಿಡು ಗೊತ್ತಾಗುತ್ತೆ" ಅಂತಿದ್ದರಂತೆ. ಒಂದು ದಿನ ಕೇಳಿದ ಮಾತಲ್ಲ, "ಬರೆದಿಡ್ತಿದೀಯಾ? ಎಲ್ಲಿ, ತಗಂಡು ಬಾ ನೋಡಾಣ" ಅಂತ ಆಗಾಗ್ಗೆ ತಗಾದೆ. ಗೋಡೆಗೆ ಹದ್ದಿದ್ದ ಮರದ ಕಪಾಟಿನ ಬೀಗ ತೆಗೆದು ಅವರ ದಪ್ಪ ಡೈರಿಯಲ್ಲಿ ಆ ದಿನದ ಖರ್ಚು ಬರೆಯದೆ ಇದ್ದರೆ

'ನಾಲ್ಕಾಣೇದು' ಅನ್ನಬೇಕು. 'ಬಾಕೀ ದುಡ್ಡು ಎಲ್ಲಿದೆ?' 'ಒಳಗೆ ಗೂಡಿನಲ್ಲಿಟ್ಟಿದೀನಿ ಎಪ್ಪತ್ತೈದು ಪೈಸೆ. ಇಪ್ಪತ್ತೈದು ಪೈಸಕ್ಕೆ ಒಂದು ಬೆಂಕಿ ಪೆಟ್ಟಿಗೆ ತಂದೆ.' 'ಬೆಂಕಿಪೆಟ್ಟಿಗೆಯಾ? ತಡಿ, ನೋಡಿ ಹೇಳ್ತೀನಿ,' ಅಂತ ಡೈರಿಯ ಹಿಂದಿನ ಪಾನುಗಳನ್ನು ವಿವರವಾಗಿ ಹುಡುಕಿ 'ಐದನೆ ತಾರೀಖು ಅಂದರೆ ಹತ್ತು ದಿನದ ಹಿಂದೆ ಬೆಂಕಿಪೆಟ್ಟಿಗೆ ತಂದಿದ್ದೆ. ನಲವತ್ತು ಕಡ್ಡೀದು. ಯಾಕೆ ಸುಮ್ಮಸುಮ್ಮನೆ ಕಡ್ಡಿ ಹಾಳು ಮಾಡ್ತೀ? ಬೆಳಿಗ್ಗೆ ನೀರೊಲೆ ಹಚ್ಚುಕ್ಕೆ ಒಂದು. ಅದರಲ್ಲೇ ಬೆಳಗಿನ ತಿಂಡಿ ಅಡಿಗೆಗೆ-ಅಡಿಗೆ ಒಲೆಗೆ ಉರಿ ತಂದರೆ ಆಯಿತು. ಇನ್ನು ಸಂಜೆಗೆ ಒಂದು ಕಡ್ಡಿ. ಅಂದರೆ ಇಪ್ಪತ್ತು ದಿನ ಬರಬೇಕಲ್ಲವೆ?' ಇವನು ಉತ್ತರ ಹೇಳದೆ ಇದ್ದರೆ 'ಕೇಳ್ತೀ?' ಅನ್ನೂ ತಗಾದೆ. 'ನಲವತ್ತು ಪೂರ್ತಿ ಇರುಲ್ಲ, ಕೆಲವು ಕಡ್ಡಿ ಹತ್ತಿದ ತಕ್ಷಣ ಆರಿಹೋಗಿಬಿಡುತ್ತೆ. ನಾನೇನು ಮಾಡಲಿ? ಒಂದು ತೊಟ್ಟು ಸೀಮೆಎಣ್ಣೆ ಹಾಕಿದರೆ ತಕ್ಷಣ ಹತ್ತಿಕೊಳ್ಳುತ್ತೆ. ನೀವು ಒಲೆ ಹೊತ್ತಿಸುಕ್ಕೆಲ್ಲ ಹಾಗೆ ಎಣ್ಣೆ ದಂಡ ಮಾಡಬೇಡ ಅಂತೀರಿ,' ಅಂತ ಇವನು ತಪ್ಪನ್ನ ಅವರ ಮೇಲೆ ತಿರುಗಿಸಿದ್ದಕ್ಕೆ 'ಸಂಪಾದನೆ ಮಾಡೂ ಕಷ್ಟ, ಅನುಭವ ಬಂದ ಮೇಲೆ ನಿನಗೇ ಗೊತ್ತಾಗುತ್ತೆ,' ಅಂದರಂತೆ. "ನಾನ್ಯಾಕಮ್ಮ ಅಲ್ಲಿ ಗೋಳುಗುಟ್ಕಂಡಿರಬೇಕು?' ಅಂತ ಮಗ ತಗಾದೆ ಮಾಡಿದರೆ ಒಳ ವಿಷಯ ಹ್ಯಾಗೆ ಬಿಡಿಸಿ ಹೇಳೋದು? ಹೇಳಬಾರದು ಅಂತ ಅಲ್ಲ. ಅವನಿಗೆ ತಿಳಿದಿರಕೂಡದು ಅಂತ ಅಲ್ಲ, ಅವನಿಗಲ್ಲದೆ ಬೇರೆ ಯಾರಿಗೆ ತಿಳಿದಿರಬೇಕು? ಆದರೂ ಬಾಯಿ ಬಿಟ್ಟು ಹೇಳುಕ್ಕೆ ನನಗೇ ನಾಚಿಕೆ ಅನ್ನಿಸಿ "ಅದು ಅವರ ಸ್ವಭಾವ. ಅದೆಲ್ಲ ಸಹಿಸ್ಕಬೇಕಪ್ಪ. ಅವರಿಗೆ ಮೊಮ್ಮಗ ಅಂತ ನಿನ್ನ ಮೇಲೆ ಪ್ರೀತಿ ಬೆಳೀಬೇಕು. ಅವರಿಗಾದರೂ ನೀನಲ್ಲದೆ ಬೇರೆ ಯಾರಿದಾರೆ? ಇರೋಳೊಬ್ಬಳು ಮಗಳು, ಮಗಳ ಮಗ ನೀನು. ಅವರು ಹಾಗೆ ಮಾಡ್ತಾರೆ ಅಂತ ನೀನು ದೂರ ದೂರವೇ ಆದರೆ.....' ಅನ್ನುವ ಹೊತ್ತಿಗೆ ನನಗೆ ನಾಚಿಕೆಯಾಗಿ, ಆದರೆ ಆ ವಯಸ್ಸಿನ ಹುಡುಗನಿಗೆ ಹೇಗೆ ಅರ್ಥವಾಗಬೇಕು? ಆದರೂ ಹೈಸ್ಕೂಲು ಮುಗಿದದ್ದೇ ತಡ ಹಟ ಮಾಡಿ ಅಲ್ಲಿಂದ ಹೊರಟುಬಿಟ್ಟ.

ಕಾಫಿಯನ್ನು ಕುಡಿದು ಗೌಡರ ಮುಂದಿಟ್ಟು ಅವರು ಎರಡು ಸಲ ಒರಸಿದ ಮೇಲೆ ಮುದುಡಿದ ಧ್ವನಿಯಲ್ಲಿ ಕೇಳಿಕೊಂಡನು: "ಗೌಡರೇ, ಈಗ ನೀವು ನನ್ನ ಕೈಲಿ ಹೇಳಿದ ಮಾತನ್ನ ನಮ್ಮ ಮನೆಯೋರ ಕೈಲಿ ಖಂಡಿತ ಹೇಳಬಾರದು. ನಮ್ಮಪ್ಪನ ಸ್ವಭಾವ ನಿಮಗೆ ಗೊತ್ತಿಲ್ಲದ್ದೆ? ಇವರ ಕಿವಿಗೆ ಬಿದ್ದು ಸುಮ್ಮ ಸುಮ್ಮನೆ ಮನಸ್ಸಿಗೆ ಬೇಜಾರಾಗಿ, ಯಾಕೆ ಅವೆಲ್ಲ ಅಂತ?"

"ಅಯ್ತು ಬಿಡಪ್ಪ, ಹೇಳಾಕಿಲ್ಲ," ಎಂದು ಅವರು ಆಶ್ವಾಸನೆಯಿತ್ತರು.

ಹದಿನೈದು ದಿನ ಕಳೆದಿತ್ತು. ಮಧ್ಯಾಹ್ನ ರಾಮಕೃಷ್ಣಯ್ಯ ಮನೆಗೆ ಬಂದು ಕೈಕಾಲು ತೊಳೆದು ಸಂಧ್ಯಾವಂದನೆ ಮಾಡಿ ಊಟಕ್ಕೆ ಕೂತಾಗ ಬಡಿಸುತ್ತಿದ್ದ ಹೆಂಡತಿಗೆ ಹೇಳಿದ: "ಗಣೇಶ ತಿಪಟೂರಿನಲ್ಲಿದ್ದನಲ್ಲ, ಅವರ ಮನೇಲಿದ್ದಕ್ಕೆ ಅವರಿಗೆ ಎರಡು ಸಾವಿರದ ಮುನ್ನೂರೆಂಬತ್ತೈದು ರೂಪಾಯಿ ಬಿಲ್ಲಾಗಿದೆಯಂತೆ. ಮೇಲಿನೊಂದಿಷ್ಟು ಬಾಕಿ ಎರಡು ಸಾವಿರದೈನೂರು ರೂಪಾಯಿ ಕೊಟ್ಟು ಋಣ ವಿಮುಕ್ತ ಮಾಡಿಕೊಂಡು ಬರಬೇಕು ಅಂತ ಮಾಡಿದೀನಿ."

"ತಿಮ್ಮಪ್ಪಗೌಡರು ಆಗಲೇ ಕೊಟ್ಟುಬಿಟ್ರಾ?" ತಕ್ಷಣ ಅವಳ ಬಾಯಿಂದ ಹೊರಟುಬಿಟ್ಟಿತು.

"ಯಾವ ತಿಮ್ಮಪ್ಪಗೌಡರು?" ಅವನು ಕೇಳಿದ. ಅವಳು ಉತ್ತರ ಹೇಳಲಿಲ್ಲ. ಒಂದು ನಿಮಿಷದಲ್ಲಿ ಅವನಿಗೆ ಅರ್ಥವಾಯಿತು. "ಹಾಗಾದರೆ ತಿಮ್ಮಪ್ಪಗೌಡರ ಕೈಲೂ ಇವರು ಅಂದಿದಾರೆ. ಗೌಡರು ನಿನ್ನ ಕೈಲಿ ಹೇಳಿದಾರೆ. ಸಂಗ ಹೇಳಿದೋರು ಗೋವಿನ ಹಳ್ಳಿ ಹನುಮಂತಪ್ಪ, ಚಿಕ್ಕೇನಹಳ್ಳಿ ದೊಂಬಪ್ಪ, ಬ್ಯಾಲದಕೆರೆ ಚೆನ್ನೇಗೌಡರು. ಇಲ್ಲಿ ತಿಥಿಗೆ ಬಂದಿದ್ದಾಗ ಇವರ ಊರುಗಳಿಗೆಲ್ಲ ಹೋಗಿದ್ದರಂತೆ. ಆಗ ಅಂದದ್ದು. 'ಈಗ ಎರಡೂವರೆ ಸಾವಿರ ಸಾಲವಿದೆ. ತಿಪಟೂರಿಗೆ ಎರಡೂವರೆ ಕೊಡಬೇಕು. ಕೇರಿನಮನೆ ಸಿದ್ದಯ್ಯ ಎಂಟು ಸಾವಿರಕ್ಕೆ ಗದ್ದೆ ತಗಾತೀನಿ ಅಂತ ಕೇಳ್ತಾದಾನೆ. ಕೊಟ್ಟು ಇವೆರಡನ್ನೂ ತೀರಿಸಿಬಿಡ್ತಾನೆ. ಉಳಿದ

ಸಾಲದ ಸಾವಿರದಲ್ಲಿ ಕ್ರಮವಾಗಿ ಪ್ರತಿ ವರ್ಷಕ್ಕೂ ಬಡ್ಡಿ ತೀರಿಸದೆ ಇದ್ದರೆ ಕಷ್ಟವಾಗುತ್ತೆ." ಎಂದು ಹೇಳಿ ಅವರು ಪರಿಹಾರ ಮಾಡಿಕೊಟ್ಟಿದ್ದರು.

ತನ್ನ ತಂದೆ ತಿಮ್ಮಪ್ಪಗೌಡರ ಕೈಲಿ ಮಾತ್ರವಲ್ಲ, ಈ ಸುತ್ತಿನಲ್ಲಿ ಬಡ್ಡಿ ಮುಂದಿಗೆ ಹೋಗುವ ಎಲ್ಲರ ಕೈಲೂ ಹೇಳುತ್ತಿದ್ದಾರೆಂದು ಅವನಿಗೆ ಅರ್ಥವಾಯಿತು. ಆ ದುಡ್ಡನ್ನು ವಾಪಸು ಕೊಡುವ ಗಂಡನ ತೀರ್ಮಾನದಿಂದ ಕೋಪಬಂತು. ಆದರೆ ಅದನ್ನು ಪ್ರಕಟಿಸುವ ಧೈರ್ಯವಾಗಲಿಲ್ಲ. ಅವನ ಸ್ವಭಾವ ಗೊತ್ತು: ಅವರು ಹಾಗಂದರು ಅಂತ ವಾಪಸ್ ಅವರ ಹತ್ತಿರ ಹೋಗಿ ದುಡ್ಡು ಕೊಡಬೇಕು? ಅವರ ಮನಸ್ಸಿಗೆ ಬಂದದ್ದು ಮಾಡಿದರು. ಮಾಡಿದ್ದನ್ನ ಬಂದರು. ಅಲ್ಲಿಗೆ ಮುಗಿಯಿತಲ್ಲ? ಇಲ್ಲದ ಪ್ರತಿಷ್ಠೆ, ಇಲ್ಲದ ಹಟ ಇವರದು ಎಂದು ಒಳಗೇ ಉರಿದುಕೊಂಡಳು. ಮಾತನಾಡದಿದ್ದರೆ ಅವರು ಹೇಳಿದ್ದನ್ನು ಒಪ್ಪಿಕೊಂಡ ಹಾಗಾಗುತ್ತದೆಂದು ಹಟದಿಂದ ಮಾತನಾಡಿದಳು: "ಗದ್ದೆ ಮಾರಿ ತಿನ್ನೊ ಅನ್ನಕ್ಕೆ ಏನು ಮಾಡೂದು?"

ಅವನು ಯಾವಾಗಲೂ ಮಾತನಾಡುವುದು ಹೀಗೇನೇ. ಗಂಭೀರವಾಗಿ ಆಲೋಚಿಸುವಂತಹ ವಿಷಯದಲ್ಲಿ, ಸಾಧಾರಣ ಉತ್ತರವಾಗಲಿ, ಕೇಳಿದ ಪ್ರಶ್ನೆಗಳಿಗೆ ಅವನು ಹೇಳುವ ಉತ್ತರಕ್ಕೂ ನಡುವೆ ಎರಡು ಮೂರು ನಿಮಿಷಗಳಷ್ಟಾದರೂ ಮೌನದ ಅಂತರವಿರುವುದು ಅವನ ಅಭ್ಯಾಸವೇ ಆಗಿತ್ತು. ಆದರೆ ಈಗ ಹೆಚ್ಚು ವಿಳಂಬ ಮಾಡದೆ, ತಾನಾಗಲೇ ಈ ಬಗ್ಗೆ ಆಲೋಚಿಸಿದ್ದೇನೆಂಬ ಮಟ್ಟಿಗೆ ಹೇಳಿದ. "ಹೊಲದಲ್ಲಿ ಬರೂ ರಾಗಿ ಸಾಕು ವರ್ಷಕ್ಕೆ ತಿನ್ನೋಕ್ಕೆ. ಮೇಲೆ ಒಂದು ತುತ್ತು ಅನ್ನ ಬೇಕುಬೇಕೆಂದರೆ ಕೊಳ್ಳೋದು."

ಈ ಉತ್ತರದಿಂದ ಅವಳ ಸಿಟ್ಟು ಆರಲಿಲ್ಲ. ಅವರು ಅಂದರು ಅಂತ ನೀವ್ಯಾಕೆ ಕೊಡಬೇಕು, ಎನ್ನುವ ಮಾತನಾಡಲು ಮನಸ್ಸು ಹಾತೊರೆಯುತ್ತಿತ್ತು. ಆದರೆ ಅದಕ್ಕೆ ಧೈರ್ಯ ಬರಲಿಲ್ಲ. ಕೊನೆಗೆ ಒಂದು ಮಾತು ಕೇಳಿದಳು: "ಅವರನ್ನು ಬಿಟ್ಟು ಊರಿನ ಗದ್ದೆ ನೆಟ್ಟಿ ಸಾಲ ಎಂಬುದೂ ಹೋಗಿದೆ ಎಂದು ಬಿಟ್ಟರು." "ಹಾಗಾದರೆ ಕಾಲದಿಂದ ಇಷ್ಟು ವರ್ಷ ಅನ್ನದಾನ

ಮಾಡಿದ ಮನೆ ಇದು. ಅಂಥಾದ್ದರಲ್ಲಿ ಮಗನಿಗೆ ಕಂಡೋರ ಮನೆ ಅನ್ನ ತಿನ್ನಿಸಿದ ಋಣ ಯಾಕೆ ಅನ್ನೂ ಅಹಂಕಾರ ನಿಮಗೆ. ಅದಕ್ಕೇ ದುಡ್ಡು ಕೊಡೂ ಮಾತಾಡ್ತೀರ."

ನಾಲ್ಕು ದಿನ ಕಳೆಯಿತು. ಗಂಡ ಒಂದೂ ಮಾತನಾಡುತ್ತಿಲ್ಲ, ಅದೇನೂ ಕೋಪದ ಚಿಹ್ನೆ ಎಂದು ಅರ್ಥಮಾಡಿಕೊಳ್ಳುವಂತಿಲ್ಲ. ಏಕೆಂದರೆ ಅವನು ಇರುವುದೇ, ಅಪ್ಪ ಸತ್ತ ಮೇಲಂತೂ ವಿಶೇಷವಾಗಿ ಇರುವುದೇ ಹೀಗೆ ಎಂದುಕೊಂಡಳು. ಐದನೆಯ ದಿನ ಅವನು ಬೆಳಿಗ್ಗೆ ಎದ್ದವನೇ ಬೇಗ ತಿಂಡಿ ಬೇಕೆಂದು ಹೇಳಿ ಸ್ನಾನ ಮುಗಿಸಿ ರೊಟ್ಟಿ ಚಟ್ನಿ ತಿಂದು ಹೊರಗೆ ಹೋದ. ಬಂದಾಗ ಸಂಜೆ. ಬಂದವನೇ ಹೇಳಿದ: "ಗದ್ದೆ ರಿಜಿಸ್ಟರ್ ಮಾಡಿಸುಕ್ಕೆ ಚನ್ನರಾಯಪಟ್ಟಣಕ್ಕೆ ಹೋಗಿದ್ದೆ. ನಾಳೆ ಬೆಳಿಗ್ಗೆ ಬಸ್ಸಿನಲ್ಲಿ ನಾವಿಬ್ಬರೂ ಚನ್ನರಾಯಪಟ್ಟಣಕ್ಕೆ ಹೋಗಾಣ. ಅಲ್ಲಿಂದ ತಿಪಟೂರಿಗೆ ಬಸ್ ಹತ್ತಿ ಹೋಗಿ ಹಣ ಕೊಟ್ಟು ಸಂಜೆ ಬಸ್ಸಿಗೆ ಚನ್ನರಾಯಪಟ್ಟಣಕ್ಕೆ ವಾಪಸ್ಸು ತಲುಪೋಣ."

"ನನ್ನ ಒಂದು ಮಾತು ಕೇಳದೆ ಮಾರಿ ಬಿಟ್ಟಿರಾ?" ಅವಳಿಗೆ ಗಂಡ ಮೋಸ ಮಾಡಿದನೆನ್ನಿಸಿತು.

"ಅವತ್ತೇ ಹೇಳಿದ್ದೆ. ಈಗ ಕೇಳಿದ್ದರೂ ನೀನು ಏನಂತಿದ್ದೆ ಅಂತ ಗೊತ್ತಿತ್ತು," ಅವನು ತಡವಿಲ್ಲದೆ ಆದರೆ ಶಾಂತವಾಗಿ ಹೇಳಿದ.

"ಮೆಜಾರಿಟಿಗೆ ಬಂದ ಗಂಡು ಮಗನಿರುವಾಗ ಅವನ ರುಜುವಿಲ್ಲದೆ ಪತ್ರ ಹ್ಯಾಗೆ ಸಿಂಧುವಾಗುತ್ತೆ?"

"ಅವನನ್ನೂ ಚನ್ನರಾಯಪಟ್ಟಣಕ್ಕೆ ಕರೆಸಿದ್ದೆ," ಎಂದು ಹೇಳಿದ ಅವನು ಕೈಕಾಲು ತೊಳೆಯಲು ಬಚ್ಚಲು ಮನೆಗೆ ಹೋದ.

ಹಾಗಾದರೆ ಅಜ್ಜನಿಗೆ ಹಣ ಕೊಡುಕ್ಕೆ ಅವನೂ ಒಪ್ಪಿದಾನೆಯೆ? ಎಂಬ ಅನುಮಾನ ಅವಳಿಗೆ ಬಂದು ತಾನು ಈ ಮನೆಯಲ್ಲಿ ಒಂಟಿಯಾದಂತೆನ್ನಿಸಿತು. ಮುಖವನ್ನು ಒರೆಸಿಕೊಳ್ಳುತ್ತಾ ಹಿಂತಿರುಗಿದ ಅವನನ್ನು, "ತಾತನಿಗೆ ದುಡ್ಡು ಕೊಡುಕ್ಕೆ ಗಣೇಶ ಒಪ್ಪಿದನೆ?" ಎಂದು ನನಗೆ ತಿಳಿದು ಹತ್ತು ಹನ್ನೆರಡು ದಿನ ಆಯ್ತು. ಚಲಪತಿ ಶೆಟ್ಟರ ಹತ್ರ

ಕೇಳಿದಳು.

ಅವಳ ಪ್ರಶ್ನೆ ಅವನ ಕಿವಿಯೊಳಕ್ಕೆ ಹೋಯಿತೋ ಇಲ್ಲವೋ ಎಂಬ ಮಟ್ಟಿಗೆ ಅವನ ಮನಸ್ಸು ಎಲ್ಲೋ ಇದ್ದಂತಿತ್ತು. ಮುಖಿ ಕುತ್ತಿಗೆಗಳನ್ನೆಲ್ಲ ಒರೆಸಿಕೊಂಡ ಮೇಲೆ ಜಂತೆಯನ್ನು ನೋಡುತ್ತಾ ತುಸು ಹೊತ್ತು ಕುಳಿತಿದ್ದ ನಂತರ ಅವನು ಹೇಳಿದ: "ಇದು ಗಣೇಶನನ್ನು ಕೇಳಬೇಕಾದ ಪ್ರಶ್ನೆಯಲ್ಲ."

ಅವಳಿಗೆ ಮತ್ತೆ ಏನೂ ಹೊಳೆಯಲಿಲ್ಲ. ನೀರಿನ ಕೊಟ್ಟಿಗೆಗೆ ಹೋದಳು. ಒತ್ತಿಬಂದ ಅಳುವನ್ನು ಮುಕ್ತವಾಗಿ ಕಣ್ಣಿನ ಮೂಲಕ ಹೊರಹಾಕಿದಳು. ಆದರೆ ತಾನು ಅಳುವುದು ಗಂಡನಿಗೆ ಕೇಳಿದರೆ ಅವಮಾನವೆಂಬ ಭಾವನೆಯಿಂದ ನಿಯಂತ್ರಿಸಿಕೊಂಡೇ ಅತ್ತಳು. ಅನಂತರ ಮುಖ ತೊಳೆದು ಒಳಗೆ ಬಂದಳು. ತಿಪಟೂರಿಗೆ ನಾನು ಬರುವುದಿಲ್ಲ, ಕೊಡಬೇಕನ್ನುವವರು ನೀವು, ಬೇಕಾದರೆ ನೀವೇ ಹೋಗಿ ಕೊಟ್ಟು ಬನ್ನಿ ಎನ್ನುವ ಇನ್ನೊಂದು ಆಲೋಚನೆ ಬಂತು. ಹಾಗೆ ಹೇಳಿದರೆ ಇವರು ಒಬ್ಬರೇ ಹೋಗುತ್ತಾರೆ, ಅಪ್ಪ ಖಂಡಿತ ದುಡ್ಡು ಇಸಕೊತಾರೆ. ನಾನಾದರೂ ಜೊತೆಗಿದ್ದರೆ ಮಗಳು ಅನ್ನುವ ಅಂತಃಕರಣವೋ ನಾಚಿಕೆಯೋ ಆಗಿ ಬೇಡ ಅಂತ ಒಂದು ಮಾತು ಅನ್ನಬಹುದು ಎಂಬ ಸಾಧ್ಯತೆ ಹೊಳೆದು ಹೊರಡುವುದೇ ಸರಿ ಎಂದು ನಿರ್ಧರಿಸಿದಳು. ರಾತ್ರಿ ದೇವರಿಗೆ ದೀಪ ಹಚ್ಚುವಾಗ ಇನ್ನೊಂದು ಸಹಾಯ ಗೋಚರಿಸಿತು. ಗುಡ್ಡದ ರಂಗಸ್ವಾಮಿಗೆ ಒಂದು ಹರಕೆ ಮಾಡ್ಕತ್ತೀನಿ. ದಾರೀಲಿ ಹೋಗ್ತಾ ಅವನಿಗೆ ನಮಸ್ಕಾರ ಮಾಡಿ ಹೋಗ್ತೀನಿ, ನಮ್ಮಪ್ಪನಿಗೆ ಬ್ಯಾಡ ಅನ್ನೋ ಮನಸ್ಸು ಕೊಡು ಅಂತ, ಅಪ್ಪ ಬ್ಯಾಡ ಅಂದರೆ ಇವರಿಗೂ ಮುಖದ ನೀರು ಇಳುಕಿದ ಹಾಗಾಗುತ್ತೆ ಎಂದು ದೇವರ ನೆರವಿನ ಭಾವದಿಂದ ಪುಟಗೊಂಡು ಹೊರಗೆ ಬಂದು ಗಂಡನಿಗೆ ಹೇಳಿದಳು: "ಬಸ್ಸೇನೋ ಬಳಸಾದರೂ ಅನುಕೂಲ. ಬಸ್ಸು ಹಾಕುಕ್ಕೆ ಮೊದಲು ಗಾಡೀಲಿ ಹೋಗ್ತಿರಲಿಲ್ಲವೆ? ಈಗಲೂ ಕೊಬ್ಬರಿಯೋರೆಲ್ಲ ಗಾಡೀಲೇ ಹೋಗಲ್ಲವೆ? ಹೊನ್ನನಿಗೆ ಹೇಳಿ ಗಾಡಿ ಕಟ್ಟಿಸಿ, ದಾರೀಲಿ ನಾನು ಗುಡ್ಡ

ಹತ್ತಿ ದೇವರಿಗೆ ಒಂದು ದೀಪ ಹಚ್ಚಿ ಹೋಗಬೇಕು. ಮನೆ ದೇವರು ಅದು."

ರಾಮಕೃಷ್ಣಯ್ಯ ಹೊನ್ನನ ಮನೆಗೆ ಹೋದ.

ಸುಕನ್ಯೆ ಕೋಳಿ ಕೂಗುವ ಮೊದಲೇ ಎದ್ದು ಸ್ನಾನ ಮಾಡಿ ಕಾಯಿ ತುರಿದು ಚಟ್ನಿ ತಿರುವಿ ರಾಗಿಹಿಟ್ಟು ಕಲಸಿ ರೊಟ್ಟಿ ತಟ್ಟತೊಡಗಿದಳು. ರಾಮಕೃಷ್ಣಯ್ಯ ಸಂಧ್ಯಾವಂದನೆ ಮುಗಿಸಿದ. ಹೊನ್ನ ಕಮಾನುಗಾಡಿ ಹೊಡೆದುಕೊಂಡು ಹೊತ್ತು ಹುಟ್ಟುವ ಹೊತ್ತಿಗೆ ಬಂದ. ರಾತ್ರಿ ತಮ್ಮ ಮನೆ ಮತ್ತು ದನದ ನಿಗಾ ನೋಡಿಕೊಳ್ಳುವಂತೆ ಸುಬ್ಬಣ್ಣಯ್ಯನವರ ಮನೆಗೆ ಹೇಳಿ ಬೀಗದ ಕೈ ಕೊಟ್ಟು ಇಬ್ಬರೂ ಗಾಡಿ ಹತ್ತಿ ಕುಳಿತರು. ಇದು ಸುಕನ್ಯೆಗೆ ಚೆನ್ನಾಗಿ ಗೊತ್ತಿರುವ ದಾರಿ. ಕೆರೆ ಏರಿಯನ್ನು ದಾಟಿದ ಮೇಲೆ:

"ರಂಗನಗುಡ್ಡದ ಪಾದದ ಹತ್ತಿರದಿಂದ ಹೋಗಾಣ" ಎಂದಳು.

"ಏ, ಬ್ಯಾಡ ಕಣವ್ವಾ, ಬಲಕ್ಕೆ ಲಾಟ್ ಕುಂಡ್ ಹ್ಯಾಗದೆ. ಕುತುಕಲು ಪಾದೀಲಿ ಗುಡ್ಡದ ಬುಡ ಸವರಬೇಕು. ಅತ್ಲಾಗೆ ಇಳೀಬೇಕು. ಎತ್ತು ಸೋಲ್ತಾವೆ" ಹೊನ್ನ ಎಂದ.

"ನಾನು ಕಾಯಿ ತಂದಿದೀನಿ. ಗುಡ್ಡ ಹತ್ತಿ ದೇವರಿಗೆ ಒಡೀಬೇಕು ಅಂತ."

"ನಿಧಾನವಾದರೂ ಪರವಾಗಿಲ್ಲ, ಹಾಗೇ ಹೊಡಿ ಹೊನ್ನ, ದೇವರಪೂಜೆ," ರಾಮಕೃಷ್ಣಯ್ಯ ಬಾಯಿ ಹಾಕಿದ್ದರಿಂದ ಅವನು ಎಡಕ್ಕೆ ತಿರುಗಿಸಿದ. ನಡುವೆ ಮೂರು ಸಲ ಇಬ್ಬರೂ ಇಳಿದು ರಾಮಕೃಷ್ಣಯ್ಯ ಚಕ್ರ ಹೊಡೆಯಬೇಕಾದಂತಹ ಹಳ್ಳಗಳು. ಎತ್ತಿಗೆ ನಿಜವಾಗಿಯೂ ದಣಿವಾಗುವ ದಾರಿ. ಪಾದದ ಹತ್ತಿರ ಕೂರಿಸಿ ಹೊನ್ನ ಅಲ್ಲೇ ಉಳಿದ. ಅವಳ ಜೊತೆಗೆ ರಾಮಕೃಷ್ಣಯ್ಯ ಗುಡ್ಡ ಹತ್ತಿದ. ಅವಳಿಗೆ ಏರುವಾಗ ಉಸಿರು ಹತ್ತಿಬರುತ್ತಿತ್ತು.

ಅವಳು ಕಾಯಿ ಒಡೆದು ತಾನು ತಂದಿದ್ದ ಹೂವನ್ನು ಹೊಸಲಿಗೆ

ಇಟ್ಟು ಪ್ರದಕ್ಷಿಣೆ ನಮಸ್ಕಾರ ಹಾಕಿ ಕಣ್ಣು ಮುಚ್ಚಿಕೊಂಡು ಕುಳಿತಳು. 'ರಂಗನಾಥ, ನೀವು ಮನಸ್ಸು ಮಾಡಿದರೆ ಯಾರ ಮನಸ್ಸನ್ನು ಬೇಕಾದರೂ ಬದಲಾಯಿಸಬಹುದು. ಅಪ್ಪನಿಗೆ ಈ ದುಡ್ಡನ್ನು ಬ್ಯಾಡ ಅಂತ ವಾಪಾಸು ಕೊಡುವ ಬುದ್ಧಿ ಕೊಡು. ನಾನು ನಿನಗೆ ಹರಕೆ ಹೊತ್ತಿದೀನಿ. ಹರಕೆ ಹೊತ್ತಿದೀನಿ, ಹರಕೆ ಹೊತ್ತಿದೀನಿ' ಎಂದು ಪ್ರಾರ್ಥಿಸಿದಳು. 'ನೀನು ಹರಕೆ ಒಪ್ಪಿಕೊಂಡಿದ್ದೀಯ ಅಂತ ನನಗೆ ಬಲಗಡೆಯಿಂದ ಪ್ರಸಾದ ಕೊಡು' ಎಂದು ಕಣ್ಣು ಮುಚ್ಚಿ ಬೇಡಿ, ಕಣ್ಣು ತೆರೆದು ದೇವರನ್ನೇ ದಿಟ್ಟಿಸುತ್ತ ಕುಳಿತಳು. ಹೊರಗೆ ಮೊರೆಯುವ ಬೀಸುಗಾಳಿ. ಆದರೆ ಗುಡಿಯೊಳಗೆ ಹಣತೆಯ ಕುಡಿ ಕೂಡ ಅಲುಗಾಡದಂತಹ ನಿಶ್ಚಲತೆ. ಅವಳು ದೇವರ ಇಂಗಿತವನ್ನು ತಿಳಿದೇ ಹೊರಡುವ ನಿಶ್ಚಯ ಮಾಡಿದಳು. ಗಂಡನಂತೂ ನಡುವೆ ವಿಘ್ನ ಮಾಡಿ ಏಳು ಅನ್ನುವುದಿಲ್ಲವೆಂಬ ಅವನ ಸ್ವಭಾವ ಅರಿವಿತ್ತು. ಕೊನೆಗೊಮ್ಮೆ ದೇವರ ಬಲಭಾಗದಿಂದಲೇ- ಬಲಭುಜಕ್ಕೆ ಮುಡಿಸಿದ್ದ – ಕಣಗಲೆ ಹೂವೇ ಕೆಳಕ್ಕೆ ಉದುರಿತು. ಅವಳಿಗೆ ಭಯಭಕ್ತಿ ಆಶ್ವಾಸನೆಗಳಿಂದ ಕಣ್ಣಲ್ಲಿ ನೀರು ತುಂಬಿ ಬಂತು. ಎದ್ದು ಮತ್ತೊಮ್ಮೆ ಪ್ರದಕ್ಷಿಣೆ ನಮಸ್ಕಾರ ಮಾಡಿ ಹೊರಟಳು.

ಅವಳು ಮೆಟ್ಟಿಲು ಇಳಿಯುತ್ತಿದ್ದಾಗ ರಾಮಕೃಷ್ಣಯ್ಯ, "ಒಂದು ನಿಮಿಷ ತಡಿ" ಎಂದ. ಭುರ್ರೋ ಎಂದು ಬೀಸುತ್ತಿದ್ದ ಗಾಳಿ ಗುಡ್ಡದ ಮೇಲಿನ ಆಲದ ಮರದ ಎಲೆಗಳನ್ನು ಪಟಪಟನೆ ಆಡಿಸುತ್ತಿದ್ದುದರಿಂದ ಮಾತು ಸರಿಯಾಗಿ ಕೇಳುತ್ತಿರಲಿಲ್ಲ. ಅವಳ ಹತ್ತಿರ ಬಂದು ಎದುರಿಗೆ ನಿಂತು ಹೇಳಿದ: "ಅವತ್ತು ಹೇಳಿದೆಯಲ್ಲ ಅನ್ನದಾನ ಮಾಡಿದ ಮನೆತನ ಅನ್ನೂ ಅಹಂಕಾರದಿಂದ ಮಗನ ಅನ್ನದ ದುಡ್ಡು ವಾಪಾಸು ಕೊಡುಕ್ಕೆ ಹೊರಟಿದೀರಿ ಅಂತ. ಅವತ್ತಿನಿಂದ ಒಂದೇ ಸಮನೆ ನನ್ನ ಮನಸ್ಸನ್ನೇ ಬಿಡಿಸಿ ನೋಡಕತ್ತಿದೀನಿ. ಈಗ ಕೂಡ ಈ ಬೆಟ್ಟದ ಎತ್ತರದಲ್ಲಿ ಅದೇ ಯೋಚನೆ ಮಾಡ್ತಿದ್ದೆ. ಆ ಅಹಂಕಾರದಿಂದ ನಾನು ಹೊರಟಿಲ್ಲ. ಅವರಿಗೆ ಖರ್ಚಿನ ನಷ್ಟವಾಗಿದೆ. ಅದಕ್ಕೆ ಮನಶ್ಶಾಂತಿ ಇಲ್ಲವಾಗಿದೆ. ಅದಕ್ಕೇ ಅಷ್ಟು ಜನದ ಕೈಲಿ ಹೇಳಿಕೊಂಡಿದಾರೆ. ಅವರ ಮನಸ್ಸಿಗೆ ಹಿತವಾಗಲಿ

ಅಂತ ನಾನು ಹೊರಟಿರೂದು."

ಭಕ್ತಿಪರವಶಳಾಗಿದ್ದ ಅವಳ ಬುದ್ಧಿಗೆ ಅವನ ಮಾತು ಹೋಗಲಿಲ್ಲ. "ಎಲ್ಲರಿಗಿಂತ ರಂಗನಾಥ ದೊಡ್ಡೋನು. ಎಲ್ಲರ ಮನಸ್ಸನ್ನೂ ಆಡಿಸೋನು ಅವನು," ಎನ್ನುತ್ತಾ ಇಳಿಯತೊಡಗಿದಳು. ಅವಳ ಹಿಂದೆ ಅವನು ಇಳಿದ.

ಅವಳು ಉತ್ಸಾಹದಿಂದ ಬೇಗ ಬೇಗ ಇಳಿಯುತ್ತಿದ್ದಳು. ಅವನ ನಡಿಗೆಯೇ ನಿಧಾನವಾಗಿತ್ತು. ಅನ್ನದಾನ ಮಾಡಿದ ಮನೆತನದ ಹಿರೇಮಗ, ಈಗ ಯಜಮಾನ ಅನ್ನೂ ಅಹಂಕಾರದಿಂದ ತಾನು ಮಗನ ಅನ್ನದ ದುಡ್ಡು ವಾಪಸ್ಸು ಕೊಡುಕ್ಕೆ ಹೋಗುತ್ತಿಲ್ಲ ಎಂಬ ಮಾತನ್ನು ಮತ್ತೆ ಬಿಡಿಸಿ ನೋಡಿಕೊಂಡ. ದುಡ್ಡು ಕೊಡಬೇಕೆಂಬ ತೀರ್ಮಾನ ತನ್ನ ಮನಸ್ಸಿನಲ್ಲಿ ಹುಟ್ಟಿದ ದಿನದಿಂದ ಇದುವರೆಗೆ ಎಂದಾದರೂ ತನ್ನಲ್ಲಿ ಅಂಥ ಅಹಂಕಾರದ ತುಲನೆ ಹುಟ್ಟಿದೆಯೇ? ಎಂದು ಜ್ಞಾಪಿಸಿಕೊಂಡ. ಇಲ್ಲವೆನ್ನಿಸಿತು. ಆದರೆ ಅಹಂಕಾರವೆನ್ನುವುದು ಯಾವ ಅವ್ಯಕ್ತ ರೂಪದಲ್ಲಿ ಕೆಲಸ ಮಾಡುತ್ತದೆಂಬುದನ್ನು ಅರ್ಥಮಾಡಿಕೊಳ್ಳುವುದೇ ಬಹು ಕಷ್ಟದ ಕೆಲಸವೆಂದು ವೇದಾಂತದ ಪುಸ್ತಕದಲ್ಲಿ ಓದಿದ ನೆನಪಾಯಿತು. ನೋವು ಕೂಡ ಅಹಂಭಾವದ ಆಧಾರವಿಲ್ಲದೆ ಹುಟ್ಟುವುದಿಲ್ಲ. ತಿರಸ್ಕಾರವಂತೂ ಸ್ವಯಂ ಔನ್ನತ್ಯಭಾವವಿಲ್ಲದೆ ಬರುವುದಿಲ್ಲ. ಮಂಡಿ ನಾಗಪ್ಪನವರ ವಿಷಯದಲ್ಲಿ ತನಗೆ ತಿರಸ್ಕಾರವಿದೆ ಎಂಬುದು ತನಗೇ ಗೊತ್ತಿದೆ, ಯಾರೊಡನೆಯೂ ಇವಳೊಡನೆಯೂ, ಒಮ್ಮೆಯೂ ಅದನ್ನು ಆಡಿ ತೋರಿಸಿಲ್ಲವಾದರೂ, ಆದ್ದರಿಂದ ತಾನೀಗ ಹೋಗಿ ಅವರಿಗೆ ದುಡ್ಡು ಕೊಡುವುದು ಸರಿಯೇ? ಎಂದು ಮತ್ತೆ ಕೇಳಿಕೊಂಡ. ಹಿಂದೆಯೇ ನಗೆ ಹುಟ್ಟಿತು. ಹೀಗೆ ಆತ್ಮ ಪಕ್ವತೆಯ ಜಿಜ್ಞಾಸೆ ಮಾಡುತ್ತಾ ಹೊರಟರೆ ಯಾವ ಕೆಲಸ ಮಾಡುಕ್ಕೂ ಸಾಧ್ಯವಿಲ್ಲ. ಆತ್ಮಗೌರವ ಉಳಿಸಿಕಳುಕ್ಕೂ. ಆತ್ಮಗೌರವಕ್ಕೂ ಅಹಂಕಾರಕ್ಕೂ ಇರುವ ವ್ಯತ್ಯಾಸವನ್ನು ನಿರ್ಧರಿಸುವ ಅಂಶಗಳಾವುವು? ಎಂಬ ಪ್ರಶ್ನೆ ಹುಟ್ಟಿತು. ಉತ್ತರ ಹೊಳೆಯಲಿ, ಹೊಳೆಯದಿರಲಿ ಗಾಡಿ ತಲುಪಿದ ತಕ್ಷಣ ತಾನು ಅವರಿಗೆ ಕೋಟಿನ

ಜೇಬಿನಲ್ಲಿರುವ ಹಣವನ್ನು ಕೊಡೂದು ಖಾತ್ರಿ ಎಂದು ತನ್ನ ಮನಸ್ಸನ್ನು ತಾನೇ ಅರ್ಥ ಮಾಡಿಕೊಂಡ. ಗಣೇಶನನ್ನು ತನ್ನ ಅಪ್ಪನ ಮನೇಲಿ ಬಿಡಬೇಕು ಅನ್ನುವ ಇವಳ ತಟವಟಕ್ಕೆ ಈಗ ತಕ್ಕ ಶಾಸ್ತಿಯಾಯಿತು. ಹಾಗೆಂದು ಬಾಯಿಬಿಟ್ಟು ಹೇಳುವುದು ತನ್ನ ಸ್ವಭಾವವಲ್ಲ. ಅವಳಿಗೂ ಇದರ ಅರಿವಾಗಿದೆ. ವಾಸ್ತವವಾಗಿ ಅವರಿಗೆ ಯಾರ ಮೇಲೂ ಪ್ರೀತಿ ಇಲ್ಲ. ಒಂದು ಸಲ ತವರೂರಿನಿಂದ ಬಂದವಳೇ ನನ್ನ ಕೈಲಿ ಹೇಳಿಕೊಂಡು ಅಳುತ್ತಾ 'ತಾನಿರುವಾಗ ಮಗಳು ಉಟ್ಟು, ತೊಟ್ಟು ಉಂಡು ತಿಂದು ಸಂತೋಷಪಡಬೇಕು, ಅನ್ನುವ ವಿವೇಕ ಅವರಿಗೇಕೆ ಇಲ್ಲ. ತಾನು ಸತ್ತ ಮೇಲೆ ಕೂಡ ಮಗಳಿಗೆ ಸೇರಬೇಕು ಅನ್ನೂ ಅಪೇಕ್ಷೆಯಾದರೂ ಇದೆಯೋ ಇಲ್ಲವೋ? ಮಗಳಿಗಲ್ಲದೆ ಬೇರೆ ಯಾರಿಗೆ ಸೇರಬಹುದು?

ತಾವಾಗಿಯೇ ಕೈ ಎತ್ತಿ ಇನ್ನೊಬ್ಬರಿಗೆ ದಾನಧರ್ಮಕ್ಕೆ ಕೊಡೂದು ಅವರಿಗೆ ಸಾಧ್ಯವೇ ಇಲ್ಲದಾಗ? 'ಇಂಥ ಅಪ್ಪಂದಿರು ಬದುಕಿರೊದಕ್ಕಿಂತ ಬೇಗ ಸತ್ತರೆ ಮಕ್ಕಳಿಗೆ ಸುಖ ಅನುಭವಿಸುವ ವಯಸ್ಸಿರುವಾಗಲೇ ಒಂದಿಷ್ಟು ಸುಖವಾದರೂ ಸಿಕ್ಕುತ್ತೆ,' ಅಂದಾಗ ನಾನೇ 'ಅವರಿಂದ ಬಯಸೂದು ನಿನ್ನ ತಪ್ಪು. ಅವರು ದುಡಿದದ್ದನ್ನು ನೀನು ಅನುಭವಿಸಬೇಕು ಅನ್ನೊ ಆಶೆಯನ್ನ ಯಾಕೆ ಇಟ್ಟುಕೊಂಡಿದಿ? ಇಲ್ಲಿ ನಮಗಿರೂದು ಮಾತ್ರ ನಮ್ಮದು ಅಂದುಕೊಂಡಿರು. ಆಶೆಯಿಂದಲೇ ನಿನ್ನ ಮನಸ್ಸಿನಲ್ಲಿ ಕೆಟ್ಟ ಯೋಚನೆ ಬರುತ್ತೆ' ಅಂತ ಸಮಾಧಾನ ಹೇಳಿದ್ದಕ್ಕೆ ನನ್ನ ಮೇಲೆ ಹೇಗೆ ರೇಗಿದಳು! ಎಂಬುದೆಲ್ಲ ನೆನಪಿಗೆ ಬಂತು. ಇವೆಲ್ಲವನ್ನೂ ಯಾಕೆ ಜ್ಞಾಪಿಸಿಕೊಳ್ಳಬೇಕು, ಎಂದು ಅವನ ಮನಸ್ಸೇ ಇದ್ದಕ್ಕಿದ್ದಂತೆ ತಡೆಹಾಕ ಬಯಸಿತು. ಗಾಡಿಯಲ್ಲಿ ತನ್ನ ಪಕ್ಕದಲ್ಲೇ ಇಟ್ಟುಕೊಂಡಿದ್ದ ಅಧ್ಯಾತ್ಮ ಪ್ರಕಾಶನದ ಪುಸ್ತಕವನ್ನು ಎತ್ತಿಕೊಂಡು ಗುರುತಿಟ್ಟಿದ್ದ ಹಾಳೆಯನ್ನು ಬಿಡಿಸಿ ಅದರ ಮೇಲೆ ದೃಷ್ಟಿ ಹರಿಸಿದ.

ಗಾಡಿ ನಿಧಾನವಾಗಿ ತಿಪಟೂರು ಸೇರುವ ಹೊತ್ತಿಗೆ ಬೀದಿಯ ದೀಪಗಳು ಹೊತ್ತಿದ್ದವು. ನಾಗಪ್ಪನವರು ಮನೆಯಲ್ಲೇ ಇದ್ದರು. ಸುಕನ್ಯೆ ಒಳಗೆ ನಡೆದಳು. ಎಂದೂ ಬರದಿದ್ದ ಅಳಿಯನನ್ನು ಕಂಡು ಅವರಿಗೆ

ಆಶ್ಚರ್ಯ. "ಈಗ ಬಂದಿರಾ?" ಎಂದು ಕುಶಲ ವಿಚಾರಿಸಿ ಚಾಪೆ ಹಾಕಿಕೊಟ್ಟರು. ಗಂಡ ಮಾತು ತೆಗೆಯುವ ಮೊದಲು ಅಪ್ಪನನ್ನು ಒಳಗೆ ಕರೆದು 'ಇವರು ತಂದಿರುವ ದುಡ್ಡನ್ನು ಇಸಕೋಬೇಡಿ ಎಂದು ಕೇಳಿಕೊಳ್ಳುವ ಚಡಪಡಿಕೆಯಿಂದ ಅವಳು ಒಳ ಬಾಗಿಲಲ್ಲೇ ನಿಂತಳು. ಅಪ್ಪನು ಅಳಿಯನ ಚಾಪೆಯ ಹತ್ತಿರವೇ ನಿಂತಿದ್ದಾರೆ, ಬಂದ ಅಳಿಯನೊಡನೆ ಸಂಭಾಷಣೆ ನಡೆಸುವಂತೆ. "ನಾನು ಬಂದಮೇಲೆ ನಿಮ್ಮ ಕಡೆ ಏನಾದರೂ ಒಂದು ಹದ ಮಳೆ ಆಯಿತೊ?" ಎಂದರು. "ನಿಮ್ಮ ಆಶೀರ್ವಾದದಿಂದ ಒಂದು ಸಣ್ಣ ಹದ ಆಯಿತು" ಎಂದ ರಾಮಕೃಷ್ಣಯ್ಯ. ಮೇಲೆದ್ದು ಬಾಗಿ ಅವರ ಎರಡು ಕಾಲುಗಳನ್ನೂ ಮುಟ್ಟಿ, ನಮಸ್ಕರಿಸಿ "ಒಂದು ಕಲಸಕ್ಕೆ ಅಂತ ಬಂದೆ," ಎಂದ. ನಾಗಪ್ಪನವರಿಗೆ ಗಾಬರಿ. ಕಾಲುಮುಟ್ಟಿ ಕೇಳಬೇಕೆಂದರೆ! ಅಷ್ಟರಲ್ಲಿ ಅಳಿಯ ಕೋಟಿನ ಒಳಜೇಬಿನಿಂದ ನೋಟಿನ ಮಡಿಕೆ ತೆಗೆದು ಅವರ ಮುಂದೆ ಹಿಡಿದು, "ಗಣೇಶನನ್ನು ಮೂರು ವರ್ಷ ನಿಮ್ಮ ಮನೇಲಿ ಬಿಟ್ಟಿದ್ದೆ. ಊಟೋಪಚಾರಕ್ಕಾಗಲೀ ಸೋಪು ಹಲ್ಲುಪುಡಿಗಳಿಗಾಗಲಿ ಒಂದು ಕಾಸೂ ಕೊಡಲಿಲ್ಲ. ಇವಳ ಯಜಮಾನಿಕೇಲಿ ಕಳಿಸಿದ್ದರಿಂದ ನಾನು ಅದೆಲ್ಲ ವಿಚಾರಿಸುಕ್ಕೆ ಹೋಗಲಿಲ್ಲ. ಬರೀ ಸ್ಕೂಲು ಫೀಜು, ಒಂದಿಷ್ಟು ಪುಸ್ತಕಕ್ಕೆ ಮಾತ್ರ ಕೊಟ್ಟಿದ್ದೆ. ಅದರ ಬಾಬ್ತು ಇದನ್ನ ಸ್ವೀಕರಿಸಿ ನನ್ನನ್ನ ಋಣಮುಕ್ತನಾಗಿ ಮಾಡಬೇಕು," ಎಂದ. ನಾಗಪ್ಪನವರು ಅರ್ಧ ನಿಮಿಷ ಸುಮ್ಮನೆ ನಿಂತಿದ್ದರು. ಸುಕನ್ಯೆ ಉಸಿರು ಹಿಡಿದು ಮನಸ್ಸಿನಲ್ಲಿ ರಂಗನಾಥಾ ರಂಗನಾಥಾ ಎಂದುಕೊಳ್ಳುತ್ತಿದ್ದಳು. ಅನಂತರ ಅವರು ಕೈ ನೀಡಿ ನೋಟಿನ ಮಡಿಕೆಯನ್ನು ಇಸಕೊಂಡು ಸರಸರನೆ ಬ್ಯಾಂಕಿನ ಸರಾಫರು ಎಣಿಸುವಷ್ಟು ವೇಗದಿಂದ ಎಣಿಸಿ "ಎರಡೂವರೆ ಇದೆ" ಎಂದರು.

"ಎರಡು ಸಾವಿರದ ಮುನ್ನೂರ ಎಂಭತ್ತೈದು ನಿಮ್ಮ ಲೆಕ್ಕ. ಅದರಲ್ಲಿ ಎಷ್ಟೋ ಅಂಶಗಳು ಮರೆತಿರಬಹುದು ಅಂತ ನಾನು ಉಂಡೆಯಾಗಿ ಎರಡೂವರೆಗೆ ಒಟ್ಟು ಮಾಡಿದೆ. ಪೂರ್ತಿ ಸಂದಾಯವಾಯಿತು ಅಂತ ನೀವು ನುಡಿದರೆ ನಾನು ಕೃತಾರ್ಥನಾದೆ."

"ಆಯಿತಲ್ಲ.... ಇನ್ನು ನುಡಿಯೂದೇನು?" ಎಂದ ಅವರು ಗುರಿ

ಇಷ್ಟುಂತೆ ಮಡಿಚಿದ ಮಧ್ಯದ ಒಂದು ನೋಟಿನ ಭಾಗದಲ್ಲಿ ಹಿಡಿದು ಅದನ್ನು ಹುಡುಕಿ ತೆಗೆದು ತೋರಿಸಿ ಹೇಳಿದರು:

"ಇಂಥ ನೋಟು ನೋಡಿ..... ಸ್ವಲ್ಪ ಒಂದು ಥರಾ ಇದೆ. ಇದೊಂದು ಬೇರೆ ಕೊಡ್ತೀರಾ?"

"ಬೇರೆ ದುಡ್ಡು ತಂದಿಲ್ಲ ನಾನು."

"ಹೋಗಲಿ, ನಾನು ಬ್ಯಾಂಕಿಗೆ ಕಳಿಸುತೀನಿ. ಇನ್ನು ಮೇಲೆ ನೂರು ರೂಪಾಯಿಯ ನೋಟು ಇಸಕೋಬೇಕಾದರೆ ನೀವು ಹುಷಾರಾಗಿ ಇರಬೇಕು. ಈಗೆಲ್ಲಾ ಖೋಟಾನೋಟು ಮಾಡೋರು ಹೆಚ್ಚಾಗಿದ್ದಾರೆ. ನಾನಂತೂ ಇಸಕುವಾಗಲೇ ಹಿಡಿದು ಹಾಕ್ತೀನಿ. ಇದು," ಎಂದು ಅದನ್ನು ಮತ್ತೊಮ್ಮೆ ಮಿಣುಕು ಕ್ಯಾಂಡಲಿನ ವಿದ್ಯುತ್ ಬೆಳಕಿನಲ್ಲಿ ಹಿಂದೆ ಮುಂದೆ ತಿರುಗಿಸಿ ನೋಡಿ, "ಪರವಾಗಿಲ್ಲ, ಖೋಟಾ ಅಲ್ಲ. ಆದರೂ ಇನ್ನು ಮುಂದೆ ನೀವು ಹುಷಾರಾಗಿರಬೇಕು. ಕಾಲ ಕೆಟ್ಟಿದೆ," ಎಂದು ನೋಟುಗಳನ್ನು ಮಡಿಸಿ ತಮ್ಮ ಷರಟನ್ನು ಎತ್ತಿ ಒಳ ಅಂಗಿಯ ಹೊಟ್ಟೆ ಜೇಬಿಗೆ ತೂರಿಸಿಕೊಂಡರು.

ರಂಗನ ಗುಪ್ಪದ ದೇವರನ್ನು ನೆನೆಯುತ್ತಿದ್ದ ಸುಕನ್ಯೆ ಈ ಪಾವತಿ ನಡೆಯುತ್ತಿರುವುದನ್ನು ತಾನು ಒಳಬಾಗಿಲಿನಲ್ಲಿ ನಿಂತು ನೋಡುತ್ತಿದ್ದೇನೆಂದು ತೋರಿಸಿಕೊಳ್ಳಲು ನಾಚಿಕೆಯಾಗಿ ಒಳಗೆ ನಡೆದು ಏನಾದರೂ ಅಡಿಗೆ ಮಾಡಲೆಂದು ಅಡಿಗೆಮನೆಯ ಡಬ್ಬಗಳನ್ನು ಹುಡುಕತೊಡಗಿದಳು. ಒಂದು ಡಬ್ಬದಲ್ಲಿದ್ದ ಮೂರು ನಾಲ್ಕು ಸೇರಿನಷ್ಟು ರಾಗಿ ಹಿಟ್ಟನ್ನು ಬಿಟ್ಟರೆ, ಅದೂ ತುಂಬ ದಿನದ್ದಾಗಿ ಮುಗ್ಗುಲು ವಾಸನೆ ಬರುತ್ತಿತ್ತು. ಬೇರೆ ಏನೂ ಇಲ್ಲ, ಅಕ್ಕಿ ಇಲ್ಲ. ಸಕ್ಕರೆ ಇಲ್ಲ. ಬೆಲ್ಲವಿಲ್ಲ. ಹಾಲು ಮೊಸರು ಮಜ್ಜಿಗೆಗಳಿಲ್ಲ. ಒಂದು ತೆಂಗಿನಕಾಯಿಯೂ ಇಲ್ಲ. ಅಷ್ಟರಲ್ಲಿ ಅಡಿಗೆ ಮನೆಯೊಳಗೆ ಬಂದ ಅಪ್ಪ,

"ಎರಡೂವರೆ ಸಾವಿರ ಹೇಗೆ ಹೊಂದಿಸಿದಿರಿ?" ಎಂದರು.

"ಗದ್ದೆ ಮಾರಿಬಿಟ್ಟರು, ನಂಗೆ ಹೇಳಲೂ ಇಲ್ಲ, ಕೇಳಲೂ ಇಲ್ಲ."

"ಎಷ್ಟು ರೇಟು ಎಕರೆಗೆ?"

"ಮೂರೆಕರೆಗೆ ತುಸು ಕಮ್ಮಿ, ಎಂಟು ಸಾವಿರಕ್ಕೆ."

"ಅಂದರೆ ಎಕರೆಗೆ ಮೂರುಸಾವಿರ ಬಿತ್ತು. ಮಾರ್ತಾ ಮಾರ್ತಾ ಸರಿಯಾಗಿ ರೇಟು ಏರಿಸಿ ಕಾಂಪಿಟಿಶನ್ ಹತ್ತಿಸ್ಸಿಯಲ್ಲವೆ ಮಾರೂದು? ಅಷ್ಟು ಚೀಪ್ ಅಂತ ನಂಗೆ ಹೇಳಿದ್ದರೆ ನಾನೇ ತಗಾತಾ ಇದ್ದೆ. ನಿಮ್ಮ ಕಡೆ ಆಸ್ತಿ ಮಾರಾಟಕ್ಕಿದ್ದರೆ ನಂಗೆ ಕಾಗದ ಬರಿ. ತಗಾತೀನಿ. ಎಷ್ಟಾದರೂ ಸರಿ. ನಂಗೆ ಕೊಟ್ಟದ್ದು ಎರಡೂವರೆ. ಉಳಿದ ಐದೂವರೆ ಏನು ಮಾಡಿದ?"

"ಒಂದಿಷ್ಟು ಸಾಲವಿತ್ತು. ಅದನ್ನು ತೀರಿಸಿ ಉಳಿದಿದ್ದ ಗಣೇಶನ ಓದಿಗೆ ಅಂತ ಇಟ್ಟಿದಾರೆ."

"ವಿವೇಕವಿಲ್ಲದೆ ಸಂಸಾರ ಮಾಡಿದರೆ ಸಾಲ ಆಗೇ ಆಗುತ್ತೆ. ನಾನು ಬುದ್ಧಿ ಹೇಳ್ತೀನಿ, ತಡಿ."

"ಅಪ್ಪ, ನಿಮ್ಮ ದಮ್ಮಯ್ಯ, ನೀವು ಅವರಿಗೆ ಬುದ್ಧಿ ಹೇಳೂದೊಂದು ಬಾಕಿ ಇಲ್ಲ" ಎನ್ನುವಾಗ ಅವಳ ಕಣ್ಣಿನಲ್ಲಿ ನೀರು ಬಂತು. ಒಂದು ಸಲ ಬಿಕ್ಕಿಯೂ ಬಿಟ್ಟಳು.

"ಅಳಬ್ಯಾಡ ಮಗು. ನೀನು ಸ್ವಲ್ಪ ಬಿಗಿಯಾದರೆ ಅವನಿಗೆ ವಿವೇಕ ಬರುತ್ತೆ. ಅವನಿಗೆ ಬೇರೆ ಯಾವ ಚಟವೂ ಇಲ್ಲ, ಅಲ್ಲವೆ?" ಎಂದು ನಾಗಪ್ಪನವರು ಸಮಾಧಾನ ಹೇಳತೊಡಗಿದರು.

ಚಾಪೆಯ ಮೇಲೆ ನಿಂತಿದ್ದ ರಾಮಕೃಷ್ಣಯ್ಯ ಹೊರಗೆ ಬಂದ. ಭುಸುಗುಟ್ಟುತ್ತಿದ್ದ ಎತ್ತುಗಳಿಗೆ ನೀರು ಬೇಕಾಗಿತ್ತು. ಅನಂತರ ಹುಲ್ಲು ಹಾಕಬೇಕಿತ್ತು. ಅವನು ಹೊನ್ನನನ್ನು ಕೇಳಿದ: "ಹೊನ್ನ, ನಾವು ಬಂದ ಕೆಲಸವಾಯಿತು. ತಂಪು ಹೊತ್ತಾಗಿದೆ. ಈಗಾಗಲೇ ವಾಪಸು ಹೊರಟುಬಿಡಾಣ."

"ಎತ್ತುಗಳು ಸೋತಿವೆಯಲ್ಲ ಅಯ್ಯನೋರೇ."

"ಹೂಂ. ಸೋತಿವೆ," ಒಂದು ನಿಮಿಷ ಯೋಚಿಸಿದ ನಂತರ ಅವನು ಎಂದ: "ಒಂದು ಕೆಲಸ ಮಾಡು. ಮತ್ತೆ ಗಾಡಿ ಕಟ್ಟು. ಮೂರು ಜನವೂ

ಹೋಗಿ ಒಂದು ಹೋಟೆಲಾಗೆ ಊಟ ಮಾಡೋಣ. ನಿಧಾನವಾಗಿ ಹಚ್ಚೆಗುಟ್ಟಿಕೊಂಡು ಹ್ವಡಿ. ಈ ಊರಿಗೆ ಮೂರು ಮೈಲಿ ದೂರದಲ್ಲಿ ಒಂದು ಊರು ಸಿಕ್ಕಲಿಲ್ವಾ, ಅತ್ತಲಾಗೆಲ್ಲೋ ರಸ್ತೆ ಒಡೆಯೂದು, ಎಡಗರಹಳ್ಳಿ ಅಂತ, ಅಲ್ಲಿ ರಸ್ತೆ ದಡದಾಗೆ ಕಲ್ಲು ಬಾವಿ ತಾವ ಒಂದು ಮಂಟಪ ಇದೆ. ನಾನು ನೋಡಿದೆ ಬರುವಾಗ. ಅಲ್ಲಿ ಗಾಡಿ ನಿಲ್ಲಿಸಿ ಎತ್ತಿಗೆ ಮೇವು ಹಾಕಿ ಮಂಟಪದ ಕಲ್ಲಿನ ಮೇಲೆ ಮಲೀಕತ್ತೀವಿ. ಊರಿಗೆ ಹತ್ತಿರ. ಭಯವೇನಿಲ್ಲ."

ಇವರು ಇಲ್ಲಿಗೆ ಬಂದ ನಿರ್ದಿಷ್ಟ ಉದ್ದೇಶ ತಿಳಿಯದಿದ್ದರೂ ಈ ಸಂಬಂಧದ ಒಳಗು ಹೊನ್ನನಿಗೆ ಗೊತ್ತಿತ್ತು. ತಕ್ಷಣ ಆಗಲಿ ಎಂದು ಒಪ್ಪಿಕೊಂಡ. ರಾಮಕೃಷ್ಣ ಒಳಗೆ ಬಂದು ಅಡಿಗೆ ಮನೆಯ ಬಾಗಿಲಿನಲ್ಲಿ ನಿಂತು ಹೆಂಡತಿಗೆ ಹೇಳಿದ: "ಹೊನ್ನ ನಾಳೆ ನೆಂಟರ ಮನೆ ಮದುವೆಗೆ ಹೋಗಬೇಕಂತೆ. ಈಗಲೇ ಹೊರಡಾಣ ಅಂತಿದಾನೆ. ಹೊರಡು."

"ಈಗಿಂದೀಗಲೆ?"

"ಅವನಿಗೆ ತೊಂದರೆಯಾಗಬಾರದು. ನೀನು ಇರುತೀನಿ ಅನ್ನೋದಾದರೆ ಇರು. ನಾನು ಹೋಗ್ತೀನಿ."

ಅವಳು ಅಪ್ಪನ ಮುಖ ನೋಡಿದಳು. ಅವರು "ಅವನೆಂಥ ಗಾಡಿಯೋನು ಈಗ ಬಂದು ಈಗಲೇ ಹೋಗಬೇಕು ಅನ್ನೋನು. ಬೇರೆ ಯಾರೂ ಸಿಕ್ತಿರಲಿಲ್ವೆ ರಾತ್ರಿ ಮಲಗಿದ್ದು ಬೆಳಿಗ್ಗೆ ಹೊರಡೂವಂಥೋನು?" ಎಂದರು.

"ಇಲ್ಲಪ್ಪ, ಅವನಿಗ್ಯಾಕೆ ತೊಂದರೆ ಮಾಡಬೇಕು" ಎಂದು ಅವಳು ತಂದೆಗೆ ನಮಸ್ಕಾರ ಮಾಡಿ ಹೊರಟಳು.

ಎರಡು

ಒಂದು ದಿನ ಬೆಳಿಗ್ಗೆ ಎಂಟು ಗಂಟೆಯ ಹೊತ್ತಿನಲ್ಲಿ ಇಪ್ಪತ್ತು ವರ್ಷದ ಒಬ್ಬ ಯುವಕ ರಾಮಕೃಷ್ಣಯ್ಯನ ಮನೆಗೆ ಬಂದ. ರಾಮಕೃಷ್ಣಯ್ಯ

ಹೊಲತೋಟಗಳ ಕಡೆಗೆ ಹೋಗಿದ್ದ. ಸುಕನ್ಯೆ ಮನೆಗೆಲಸದಲ್ಲಿದ್ದಳು. ಯುವಕನ ಶರಟೆಲ್ಲ ಬೆವರಿನಿಂದ ಒದ್ದೆಯಾಗಿತ್ತು. ಮುಖಕ್ಕೆ ಧೂಳು ಮೆತ್ತಿಕೊಂಡಿತ್ತು. ನೋಡಿದರೆ ಬಹಳ ದೂರದಿಂದ ಬಂದಿರುವಂತೆ ಕಾಣುತ್ತಿತ್ತು. ಅವನು ಸುಕನ್ಯೆಯನ್ನು ಗುರ್ತಿಸಿದ. ಅವನ ಗುರುತು ಇವಳಿಗೆ ಆಗಲಿಲ್ಲ. ತನ್ನ ಪೈಜಾಮದ ಜೇಬಿನಿಂದ ಒಂದು ಚೀಟಿ ತೆಗೆದು ಅವಳ ಮುಂದಿಟ್ಟು ಹೇಳಿದ:

"ನಿಮ್ಮ ಮಂಡೀಲಿ ತೂಕ ಹಾಕಿ ಮೂಟೆ ಹೊಲಿಯೂದು, ವ್ಯಾಗನ್‌ಗೆ ತುಂಬಿಸೂ ಕೆಲಸ ಮಾಡ್ತೀನಿ. ಪುಟ್ಟಸ್ವಾಮಿ ಅಂತ ಹೆಸರು. ಸಾಹ್ಕಾರ್ರಿಗೆ ಕಾಲಾಗೆ ಒಂದು ಗಾಯ ಕಾಣ್ತದೆ. ಕಾಲೆಲ್ಲ ಊದಿಕೊಂಡದೆ. ಡಾಕ್ಟರು ಬದುಕೂದು ಕಷ್ಟ ಅಂತಾರೆ. ರೈತರು ನಿಮ್ಮನ್ನೂ ನಿಮ್ಮ ಯಜಮಾನರನ್ನೂ ಕರ್ಕಂಬಾ ಅಂತ ಈ ಚೀಟಿ ಕೊಟ್ಟವರೆ. ದಾರಿ ತಿಳೀದೇ ಯಾವ ಯಾವ ಊರೋ ಬಿಡ್ತಾ ಬಂದೆ ನಾನು, ನಸುಕಿನ ನಾಕು ಗಂಟೆಗೇ ಹ್ವಂಟೋನು."

ಅವಳು ಕಾಗದ ಓದಿಕೊಂಡಳು. ಅದೇ ವಿಷಯ ಬರೆದಿತ್ತು. ತಂದೆಯ ಮಂಡಿಯ ರೈತರಾದ ಸಾರ್ಥವಳ್ಳಿ ನಂಜಪ್ಪನವರು, ಮೊದಲಿನಿಂದ ಇವರ ಮಂಡಿಯಲ್ಲಿದ್ದವರು, ಹೀನ ಸಂಬಳ ಕೊಡುತ್ತಿದ್ದರೂ, ಬೇರೆ ಕಡೆ ಕೆಲಸ ಸಿಕ್ಕುತ್ತಿರಲಿಲ್ಲವೆಂದೋ ಅಥವಾ ಬೇರೆಡೆ ಹೋಗುವ ಮನಸ್ಸಿಲ್ಲದೆಯೋ. "ಎಂಥ ಗಾಯ? ಯಾಕಾಯಿತು?" ಅವಳು ಕೇಳಿದಳು.

"ಸಾಹ್ಕಾರ್ರಿಗೆ ಸಕ್ಕರೆ ಕಾಯಿಲೆ ಇತ್ತಲಾ, ಸಕ್ಕರೆ ಕಾಯಿಲೆಯೋರಿಗೆ ಬರುತ್ತಂತೆ ಆ ಗಾಯ. 'ನಾನು ಮಾಡೂದ ಮಾಡ್ತಿದೀನಿ, ಬದುಕಬೇಕು ಇದ್ದರೆ ಸಂದೇಹವೂ ಇಲ್ಲ' ಎಂದರಂತೆ ಕಾಂಪೌಂಡರು. ಸಕ್ಕರೆ ಕಾಯಿಲೆಯೋರಿಗೆ ಆದ ಗಾಯ ಮಾಯೂದಿಲ್ಲವಂತೆ."

ಪುಟ್ಟಸ್ವಾಮಿ ತಕ್ಷಣ ಹಿಂತಿರುಗುವ ಚಟುಪಟು ತೋರಿದ. ಆವತ್ತು ಕೊಬ್ಬರಿ ಹರಾಜಿನ ದಿನ. ಬೇಗ ಬಂದೇ ತೀರಬೇಕೆಂದು ರೈತರು ಹೇಳಿದ್ದಾರೆ. ಅವನಿಗೆ ಅವಳು ಬೇಗ ಬೇಗ ರೊಟ್ಟಿ ತಟ್ಟತೊಡಗಿದಳು.

ತಾನು ಯಾವಾಗ ಹೊರಡುವೆನೆಂಬ ಬಗೆಗೆ ಗಂಡನನ್ನು ಕೇಳಬೇಕು. ಇಂಥ ಸಮಯದಲ್ಲಿ ಅವರು ಹೋಗಬೇಡ ಅನ್ನುವುದಿಲ್ಲವೆಂಬ ದೃಢವಿಶ್ವಾಸ ಅವಳಿಗಿತ್ತು. ಮಗನನ್ನು ಅವರ ಮನೆಯಲ್ಲಿಟ್ಟು ಕೊಂಡದ್ದಕ್ಕೆ ಕೂಳಿನ ಕ್ರಯವಾಗಿ ಎರಡೂವರೆ ಸಾವಿರ ಕೊಟ್ಟು ಅವರು ಎರಡನೇ ಮಾತಿಲ್ಲದೆ ತೆಗೆದುಕೊಂಡ ಮೇಲೆ ಗಂಡನ ಮನಸ್ಸು ಹೇಗಿದೆಯೋ ಅವಳಿಗೆ ತಿಳಿದಿಲ್ಲ.

ಇವಳು ಕೊಟ್ಟ ರೊಟ್ಟಿ ಚಟ್ನಿಗಳನ್ನು ಪುಟ್ಟಸ್ವಾಮಿ ತಿಂದು ಮುಗಿಸುವ ಹೊತ್ತಿಗೆ ರಾಮಕೃಷ್ಣಯ್ಯ ಹಿಂತಿರುಗಿದ. ಪುಟ್ಟಸ್ವಾಮಿಯೇ ಅವರಿಗೆ ಇನ್ನೊಮ್ಮೆ ವರದಿ ಹೇಳಿದ್ದರಿಂದ ಅವಳಿಗೆ ಆ ವಿಷಯವಾಗಿ ಮಾತನಾಡುವ ಕಷ್ಟ ತಪ್ಪಿತು. ರೈಟರ್ ನಂಜಪ್ಪನವರ ಕಾಗದವನ್ನು ಮಾತ್ರ ಗಂಡನ ಮುಂದಿಟ್ಟು ಅವಳು ಒಳಗೆ ನಡೆದಳು. ರೈಟರ್ ನಂಜಪ್ಪನೆಂದರೆ ತನ್ನ ಮದುವೆಯಲ್ಲಿ ಓಡಾಡಿದವರು ಹಲ್ಲು ಕಿರಿದುಕೊಂಡು, ಎಂಬ ನೆನಪು ರಾಮಕೃಷ್ಣಯ್ಯನಿಗೆ ಬಂತು. ಕಾಗದ ಓದಿದ ಅವನು ಒಳಗೆ ನಡೆದು "ಏನಂತೀಯಾ?" ಎಂದ. ಅವಳು ಉತ್ತರ ಹೇಳಲಿಲ್ಲ. ಸುಮ್ಮನೆ ಅವನ ಮುಖ ನೋಡಿದಳು. ಒಂದು ನಿಮಿಷದ ನಂತರ ಅವನೇ, "ಈಗ ಹನ್ನೊಂದೂವರೆಗೆ ಚನ್ನರಾಯಪಟ್ಟಣಕ್ಕೆ ಹೋಗೂ ಬಸ್ಸು ಬರುತ್ತೆ. ಇಬ್ಬರೂ ಹೋಗಾಣ. ಚಲಪತಿಶೆಟ್ಟರ ಹತ್ತಿರ ಒಂದಿಷ್ಟು ದುಡ್ಡು ಇಸಕಂಡು ಅಲ್ಲಿಂದ ಬಸ್ಸಿನಲ್ಲಿ ತಿಪಟೂರಿಗೆ ಹೋಗಾಣ. ಸಂಜೆಯೊಳಗೆ ಮುಟ್ಟಬೌದು," ಎಂದ.

ಮನೆ ನೋಡಿಕೊಂಡು ರಾತ್ರಿ ಮಲಗಲು ಸುಬ್ಬಣ್ಣಯ್ಯನ ಮನೆಯವರಿಗೆ ಹೇಳಿ ಬೀಗಹಾಕಿ ಅವರ ಕೈಗೆ ಬೀಗದ ಕೈ ಕೊಟ್ಟು ಇಬ್ಬರೂ ಹೊರಟರು. ಬಸ್ಸು ಸಿಕ್ಕಿತು. ಚನ್ನರಾಯಪಟ್ಟಣದ ಬಸ್‌ಸ್ಟ್ಯಾಂಡಿನಲ್ಲಿ ಇವಳೊಬ್ಬಳನ್ನೇ ಕೂರಿಸಿ ರಾಮಕೃಷ್ಣಯ್ಯ ಚಲಪತಿಶೆಟ್ಟರ ಅಂಗಡಿಗೆ ಹೋದ. ಅವಳಿಗೆ ದುಃಖವೂ ಅಲ್ಲದ ಹಿತವೂ ಅಲ್ಲದ ತನಗೇ ಅರ್ಥವಾಗದ ಭಾವನೆ ಬಂದಿತ್ತು. ಒಂದು ವಿಧವಾದ ಆತಂಕ, ತವಕ, ಅಪ್ಪ ಸಾಯುವುದು ಖಂಡಿತವೆಂದು ಮನಸ್ಸು ಹೇಳುತ್ತಿತ್ತು.

ಇದ್ದಕ್ಕಿದ್ದಂತೆಯೇ ಒಂದು ಆಶೆ ಹುಟ್ಟಿತು. ಹೇಗಾದರೂ ಮಾಡಿ ಗಣೇಶನಿಗೆ ಸಮಾಚಾರ ತಿಳಿಸಿ ಹಾಗಿಂದ ಹಾಗೇ ತಿಪಟೂರಿಗೆ ಬರೂ ಹಾಗೆ ಮಾಡಬೇಕು. ಈ ಸಂದರ್ಭದಲ್ಲಿ, ಅಜ್ಜ ಸಾಯುವಾಗ ಅವನು ಎದುರಿಗಿರಬೇಕು. ಆದರೆ ಹೇಗೆ ತಿಳಿಸೂದು?

ಅಷ್ಟರಲ್ಲಿ ಎದುರಿಗೇ ಹೋದ, ಹೌದು, ಅವರೇ, ನಮ್ಮೂರಿನೋರೇ, ಮಗ್ಗದ ತಮ್ಮಣ್ಣ ಶೆಟ್ಟರು, ಹಾಸನದಲ್ಲಿ ಮಗಳ ಮನೆಗೆ ಹೊರಟಿರಬಹುದು, ಬಸ್ಸಿಗೆ ಕಾಯ್ತಿದಾರೆ, ಎನ್ನಿಸಿ ಕೂತಿದ್ದವಳು ಎದ್ದು ಹೋಗಿ "ತಮ್ಮಣ್ಣ ಶೆಟ್ಟರೇ" ಎಂದು ಕೂಗಿದಳು. ಹಿಂತಿರುಗಿ ನೋಡಿದ ಅವರಿಗೆ ಇವಳ ಗುರುತು ಹತ್ತದಿದ್ದಾಗ, "ನಾನು, ನಿಮ್ಮೂರು, ಪರಮೇಶ್ವರಯ್ಯನೋರ ಸೊಸೆ" ಎಂದು ಪರಿಚಯ ಹೇಳಿಕೊಂಡಳು. "ಓ ಗೊತ್ತಾಯ್ತು ಗೊತ್ತಾಯ್ತು," ಅವರ ಮುಖದಲ್ಲಿ ಗುರುತಿನ ಮುಗುಳ್ನಗೆ ಬಂದ ಕೂಡಲೇ "ನಾನು ಇವರೂ ತಿಪಟೂರಿಗೆ ಬಸ್‌ನಲ್ಲಿ ಹೋಗ್ತೀವಿ. ಈಗ ಇವರು ಪ್ಯಾಟೆ ಅಂಗಡಿಗೆ ಹೋಗಿದಾರೆ. ತಿಪಟೂರಿಗೆ ನಮ್ಮ ತಂದೆಗೆ ಅತ್ಲಗೋ ಇತ್ಲಗೋ ಅನ್ನೂ ಹಾಗೆ ಕಾಯಿಲೆಯಂತೆ. ಹಾಸನದಾಗೆ ನಮ್ಮ ಹುಡುಗ ಓದ್ತಿದಾನಲ, ಗಣೇಶ. ಆಂಜನೇಯಸ್ವಾಮಿ ದೇವಸ್ಥಾನದ ಹಿಂದುಗಡೆ ಬೀದಿ ಅದೆಂಥದೋ ಕೆಂಚಪ್ಪನೋರ ಮನೆ ಹಿಂದುಗಡೆ ರೂಮು ಮಾಡ್ಕಂಡಿದಾನಂತೆ, ಒಂದು ಹೆಜ್ಜೆ ಇವತ್ತೇ ಹೋಗಿ "ನಿಮ್ಮಮ್ಮನೇ ಹೇಳಿದಳು, ನೀನು ಸೀದಾ ತಿಪಟೂರಿಗೆ ಬರಬೇಕಂತೆ, ಯಾವ ಕಾರಣಕ್ಕೂ ಬರದೆ ಇರಕೂಡದಂತೆ' ಅಂತ ಹೇಳ್ತೀರಾ?"

"ಹೇಳ್ತೀನಿ ಇವತ್ತು ಸಾಯಂಕಾಲವೇ ಹೇಳ್ತೀನಿ. ನಮ್ಮ ಹುಡುಗೀ ಮನೆಯೂ ಅಲ್ಲಿಗೆ ಹತ್ರವೇ," ಎಂದು ಆಶ್ವಾಸನೆ ಇತ್ತು ಹೋದರು.

ಇವರಿಗೆ ಮೂರೂವರೆ ಗಂಟೆಯ ಬಸ್ಸು ಸಿಕ್ಕಿತು. ತಿಪಟೂರು ಮುಟ್ಟಿ ಮನೆಗೆ ಹೋಗುವ ಹೊತ್ತಿಗೆ ಮಬ್ಬು ಕವಿಯುತ್ತಿತ್ತು. ಕ್ಯಾಟರ್ ನಂಜಪ್ಪನವರೊಬ್ಬರೇ ಮನೆಯಲ್ಲಿದ್ದು ರೋಗಿಯ ನಿಗಾ ನೋಡಿಕೊಳ್ಳುತ್ತಿದ್ದರು. ಮಿಣುಕು ಬೆಳಕು ಕೊಡುವ ಸಣ್ಣ ಬಲ್ಬಿನ ದೀಪ

ಉರಿಯುತ್ತಿತ್ತು. ಹಾಲಿನಲ್ಲೇ ನೆಲದ ಮೇಲೆ ಚಾಪೆ ಹಾಕಿ ಹಾಸಿಗೆ ಹಾಸಿ ಮಂಡಿ ಸಾಹುಕಾರ್ ನಾಗಪ್ಪನವರನ್ನು ಮಲಗಿಸಿದ್ದರು. ಬಿಳಿಯ ಬ್ಯಾಂಡೇಜ್ ಹಾಕಿದ್ದರೂ ಗಾಯದ ವಾಸನೆ ಬರುತ್ತಿತ್ತು. ರೋಗಿ ನಿಜವಾಗಿಯೂ ನಿಶ್ಶಕ್ತರಾಗಿದ್ದರು. "ನಿಮ್ಮ ಮಗಳು ಅಳಿಯ ಬಂದಿದಾರೆ," ಎಂದು ರೈಟರು ಕೂಗಿ ಹೇಳಿದುದು ಅವರಿಗೆ ಕೇಳಿಸಿತು. ತಿಳಿಯಿತು ಕೂಡ. ರಾಮಕೃಷ್ಣಯ್ಯ ಹತ್ತಿರ ಹೋಗಿ, "ಹ್ಯಾಗಿದೀರಾ?" ಎಂದು ಮಾತನಾಡಿಸಿದ. ಅವರು ಅರ್ಥವಾದಂತೆ ಕಣ್ಣು ಆಡಿಸಿದರು. ಅವನು ಸ್ವಲ್ಪ ಹೊತ್ತು ಹಾಸಿಗೆಯ ಹತ್ತಿರವೇ ಕುಳಿತ. ಸುಕನ್ಯೆ ಹತ್ತಿರ ಬಂದಳು. ಅಪ್ಪನ ಕೈ ಮುಟ್ಟಿದಳು. ತೋಳು ಭುಜ ಹಿಡಿದು ಅಲುಗಿಸಿದಳು. ಕಣ್ಣಿನಲ್ಲಿ ತುಂಬಿ ಬಂದ ನೀರನ್ನು ಹನಿಕಿಸಿದಳು. ಅವರ ಕಣ್ಣಿನಲ್ಲೂ ನೀರು ತುಂಬಿತು.

"ಡಾಕ್ಟರು ಏನು ಹೇಳಿದರು?" ರೈಟರನ್ನು ಕೇಳಿದಳು.

"ಒಳಗಡೆ ಹೇಳ್ತೀನಿ ಬನ್ನಿ," ಎಂದ ಅವರು ಅವಳನ್ನು ಒಳಗೆ ಕರೆದುಕೊಂಡು ಹೋಗಿ ಸ್ವಿಚ್ ಹಾಕಿದರು. ಅಲ್ಲಿಯದೂ ಸೀಮೆಎಣ್ಣೆ ಬುಡ್ಡಿಯಷ್ಟೇ ಬೆಳಕು ಕೊಡುವ ಕಮ್ಮಿ ಕ್ಯಾಂಡಲಿನ ಬಲ್ಬು. ತಾವು ಹೇಳುವುದು ರೋಗಿಗೆ ಕೇಳಬಾರದೆಂದು ಧ್ವನಿ ತಗ್ಗಿಸಿ ಮಾತನಾಡಿದರು: "ಡಾಕ್ಟರ್ ಸೀತಾರಾಮಯ್ಯನೋರು ಗೊತ್ತಲ್ಲ, ಅವರೇ ನೋಡಿ ಔಷಧಿ ಕೊಟ್ಟಿರೋರು. ಸಕ್ಕರೆ ಕಾಹಿಲೆಯೋರಿಗೆ ಹೀಗಾಗುತ್ತೆ, ತಕ್ಷಣ ಬೆಂಗಳೂರಿಗೆ ಕರ್ಕೊಂಡ್ ಹೋಗಬೇಕು ಅಂತ ಹನ್ನೆರಡು ದಿನದ ಹಿಂದೆಯೇ ಹೇಳಿದರು. ಆಗ ಇವರಿಗೆ ಜ್ಞಾನವೂ ಸರಿಯಾಗಿತ್ತು. ಇವರು ಒಪ್ಪಲಿಲ್ಲ. 'ಬೆಂಗಳೂರಲ್ಲಿ, ಈ ಸೀತಾರಾಮಯ್ಯನಿಗೆ ಗುರುತಿರೋ ದೊಡ್ಡ ಡಾಕ್ಟರಿಗೆ ತಿನ್ನಿಸುಕ್ಕೆ ಹೀಗೆ ಹೇಳ್ತಾನೆ, ನಾವು ನೇಟಿವ್ ಔಷಧ ಮಾಡ್ಕೊಂಡು ಗುಣ ಮಾಡ್ಕೊತೀವಿ' ಅಂತಂದು ಹಾಗಲಕಾಯಿ ರಸ ತೆಗೆಸಿ ಕುಡಿದು ಸುಮ್ಮನಾಗಿ ಬಿಟ್ಟರು. ನಾನೂ ಹೇಳಿದೆ. ಆದರೆ ಅವರ ಕೈಕೆಳಗಿರುವ ಅಧೀನದವಗೆ ಎಷ್ಟು ಹೇಳಬಹುದು? ಅಲ್ಲದೆ ಇವರು ಸೀತಾರಾಮಯ್ಯನೋರಿಗೆ ದುಡ್ಡು ಕೊಟ್ಟಿರಲಿಲ್ಲ. ನಂಗೇನಾಗಬೇಕು ಅಂತ ಅವರು ಬರೋದೇ

ನಿಲ್ಲಿಸಿಬಿಟ್ಟರು. ಆಮ್ಯಾಲೆ ಸರ್ಕಾರಿ ಆಸ್ಪತ್ರೇಲಿ ಕಂಪೌಂಡರಾಗಿದಾರಲ್ಲ ನಂಜುಂಡಪ್ಪ ಅಂತ ಅವರಿಗೆ ಹೇಳಿ ಕಳಿಸಿದರು. ಅವರಾದರೆ ಚೀಪ್ ರೇಟು. ಬಂದು ಬ್ಯಾಂಡೇಜ್ ಕಟ್ಟಿ ಗುಳಿಗೆ ಕೊಟ್ಟು ಹೋಗ್ತಿದಾರೆ. ಅದೇ ಗುಣವಾಗುತ್ತೆ ಅಂದುಕೊಂಡು ಇವರೂ ಸುಮ್ನಿದಾರೆ. ಕಂಪೌಂಡರಿಗೆ ಏನು ತಿಳಿಯುತ್ತೆ? ದೊಡ್ಡ ಮಂಡಿ ಸಾವ್ಕಾರ್ರು ಅಂತ ಅವರು ಬಂದು ಬ್ಯಾಂಡೇಜು ಕಟ್ತಿದಾರೆ. ಅವರಿಗೂ ಏನೂ ಕೊಟ್ಟಿಲ್ಲ."

ಅವಳಿಗೂ ಡಾಕ್ಟರ್ ಸೀತಾರಾಮಯ್ಯನವರನ್ನು ನೋಡಿದ ನೆನಪುಂಟು. ತಾನು ಚಿಕ್ಕ ಹುಡುಗಿಯಾಗಿದ್ದಾಗಲೇ ಅವರು ತಿಪಟೂರಿಗೇ ದೊಡ್ಡ ವೈದ್ಯರೆನ್ನಿಸಿಕೊಂಡಿದ್ದವರು. ದೊಡ್ಡ ಪೇಟೆಯಲ್ಲಿ ಅವರ ಶಾಪು. ಗಂಡನನ್ನು ಒಳಗೆ ಕರೆದು ರೈಟರ್ ಎದುರಿಗೇ ಅವರು ಹೇಳಿದುದನ್ನೆಲ್ಲ ಗಂಡನಿಗೆ ಹೇಳಿ, "ನೀವೆ ಹೋಗಿ ಸೀತಾರಾಮಯ್ಯನೋರನ್ನ ಕೇಳಿ. ಅದೆಷ್ಟಾದರೂ ದುಡ್ಡು ಖರ್ಚಾಗಲಿ ನಾನು ಕೊಡ್ತೀನಿ, ದಯವಿಟ್ಟು ದೊಡ್ಡ ಮನಸ್ಸು ಮಾಡಿ ಬಂದು ವಾಸಿಮಾಡಿ ಅಂದರೆ ಬತ್ತಾರೆ," ಎಂದು ಹೇಳಿ ಮುಗಿಸುವಾಗ ಅದೆಷ್ಟಾದರೂ ನಾನು ಕೊಡ್ತೀನಿ ಎನ್ನಬೇಕಾದರೆ ಅದು ಹತ್ತಿರವಿರಬೇಕಲ್ಲ, ಇವರು ಚಲಪತಿ ಶೆಟ್ಟರ ಹತ್ತಿರ ಎಷ್ಟು ಇಸಕಂಡು ಬಂದಿದಾರೋ ಏನೋ, ಎಂಬ ಯೋಚನೆಯೂ ಬಂತು. ರಾಮಕೃಷ್ಣಯ್ಯ ಪ್ರತಿ ಮಾತನಾಡದೆ ಹೊರಟ. ಅವನಿಗೆ ಶಾಪು ತೋರಿಸಲು ರೈಟರು ಹಿಂಬಾಲಿಸಿದರು. ಸುಕನ್ಯೆ ಅಡಿಗೆ ಮನೆಯನ್ನು ಒಂದು ಸಲ ತಡಕಿದಳು. ಈ ಸಲ ಮನೆಯಲ್ಲಿ ಒಂದು ಸೇರು ರಾಗಿ ಹಿಟ್ಟೂ ಇರಲಿಲ್ಲ. ಒಂದು ಕಲ್ಲು ಮರಿಗೆಯಲ್ಲಿ ಅಚ್ಚೇರಿನಷ್ಟು ಕಪ್ಪು ತಿರುಗಿದ್ದ ಹರಳು ಉಪ್ಪನ್ನು ಬಿಟ್ಟರೆ ಬೇರೆ ಎಲ್ಲ ಡಬ್ಬ, ಮಡಿಕೆ ಕುಡಿಕೆಗಳೂ ಖಾಲಿ. ಒಲೆ ಉರಿಸುವ ಸೌದೆ ಮಾತ್ರ ಇತ್ತು. ಒಂದು ಸೀಮೆ ಎಣ್ಣೆ ಸ್ಟೋವು, ಒಂದು ಪಾತ್ರೆಯಲ್ಲಿ ಇಷ್ಟು ಹಾಲು, ಇದ್ದವು. ಈ ಹಳೇ ಸ್ಟೋವು ಮೊದಲು ಈ ಮನೆಯಲ್ಲಿರಲಿಲ್ಲ. ರೈಟರು ಹಾಲು ಕಾಸಲೆಂದು ತಂದಿಟ್ಟಿರಬಹುದೆಂದು ಊಹಿಸಿದ್ದ ಅವಳಿಗೆ ಅವರನ್ನು ಕೇಳಿದ ನಂತರ ಖಚಿತವಾಯಿತು.

ಒಂಬತ್ತು ಗಂಟೆಯ ಹೊತ್ತಿಗೆ ಡಾಕ್ಟರು ಬಂದರು. ಕಾಲಿನ ವ್ರಣವನ್ನು ನೋಡಿದರು. ರೋಗಿಯ ಉಸಿರು ನಾಡಿಗಳನ್ನು ಪರೀಕ್ಷಿಸಿದರು. ಮಾತನಾಡಿಸಿ ಜ್ಞಾನವನ್ನು ನೋಡಿದರು. "ಇನ್ನು ಇಪ್ಪತ್ತನಾಲ್ಕು ಗಂಟೆ. ನೀವು ವಿಮಾನ ಮಾಡಿಕೊಂಡು ಲಂಡನ್ನಿಗೆ ಕರಕಂಡು ಹೋದರೂ ಅಷ್ಟೆ," ಎಂದು ಮೇಲೆ ಎದ್ದರು. "ಮುಂದಿನದ್ದಕ್ಕೆ ಸಿದ್ಧವಾಗಿರಿ," ಎಂದು ತಮ್ಮ ಚೀಲ ಹಿಡಿದು ಹೊರಟು ಹೋದರು. ಸುಕನ್ಯೆ ಸ್ವಲ್ಪ ಹಾಲು ಕಾಯಿಸಿ ಆರಿಸಿ ಕುಡಿಸಿದಳು. ಸ್ವಲ್ಪ ಒಳಗೆ ಹೋಯಿತು. "ನಂಜಪ್ಪನೋರೆ, ಇವತ್ತು ನೀವು ನಿಮ್ಮ ಮನೇಲಿ ಮಲಿಕ ಹೋಗಿ, ಇಷ್ಟು ದಿನ ಹಗಲುರಾತ್ರಿ ಇಲ್ಲೇ ಇದೀರ," ಸುಕನ್ಯೆ ಹೇಳಿದ ಮೇಲೆ, "ಆಯ್ತು ನಮ್ಮ ಮನೆ ನೋಡಿದೀಯಲ್ಲಮ್ಮ, ತೀರ ಅರ್ಜೆಂಟ್ ಅಂದರೆ ಹೇಳಿ ಕಳಿಸು. ಭಾವನೋರು ನನ್ನ ಜೊತೆ ಬಂದರೆ ಮನೆ ತೋರಿಸ್ತೀನಿ," ಎಂದರು. ರಾಮಕೃಷ್ಣಯ್ಯ ಹೋಗಿ ನೋಡಿಕೊಂಡು ಬಂದ.

ರೋಗಿ ಮಲಗಿದ್ದಂತೆಯೇ ಮಲಗಿದ್ದರು. ಉಸಿರಿನ ವೇಗ ಹೆಚ್ಚಾಗಿದ್ದರೂ ಅದು ಕೊನೆಗೆ ಬರುವ ಉಸಿರಲ್ಲವೆಂದು ರಾಮಕೃಷ್ಣಯ್ಯನಿಗೆ ತಿಳಿದಿತ್ತು. ಅದನ್ನು ಬಿಡಿಸಿ ಹೆಂಡತಿಗೆ ಹೇಳಿದ. ಅವನಿಗೆ ಆಕಳಿಕೆ ಬರುತ್ತಿತ್ತು. ಆ ಮಧ್ಯಾಹ್ನದ ಅವನ ನಿದ್ರೆಯಾಗಿರಲಿಲ್ಲ. ಅಲ್ಲದೆ ಅಷ್ಟು ದೂರದ ಅಭ್ಯಾಸವಿಲ್ಲದ ಜಲ್ಲಿ ರಸ್ತೆಯ ಬಸ್ ಪ್ರಯಾಣ. ಆದರೆ ಹೆಂಡತಿ ಎಚ್ಚರವಾಗಿರುತ್ತಾಳೆ, ಅವಳೊಬ್ಬಳನ್ನೇ ಸಾಯುವ ರೋಗಿಯ ಸಂಗಡ ಬಿಟ್ಟು ತಾನು ನಿದ್ರಿಸಬಾರದೆಂದು ಗೋಡೆ ಒರಗಿ ಕುಳಿತ. ಮಾಡಲು ಬೇರೆ ಕೆಲಸವಿರಲಿಲ್ಲ. ಮಾತನಾಡಲು ಬೇರೆ ವಿಷಯವಿರಲಿಲ್ಲ. ಸುಕನ್ಯೆಗೆ ಇಂಥ ಸಮಯದಲ್ಲಿ ಮಾತನಾಡಬೇಕೆನ್ನಿಸುತ್ತಿತ್ತು. ಗಂಡನೇ ಏನಾದರೂ ತುಂಬ ಹೇಳಬೇಕು. ತಾನು ಆಡುವುದನ್ನೆಲ್ಲ ಕೇಳಬೇಕು. ಹೌದೆನ್ನಬೇಕು. ಇಂಥ ಸಮಯದಲ್ಲಲ್ಲದೆ ಒಬ್ಬರಿಗೊಬ್ಬರು ಇನ್ಯಾವಾಗ ಮಾತನಾಡುವುದು? ಮಾತಿನಿಂದ ತಾನೆ ಪರಸ್ಪರ ಸಮಾಧಾನ. ಧೈರ್ಯ ಬರುವುದು? ಆದರೆ

ಗಂಡನ ಸ್ವಭಾವ ತನಗೆ ಗೊತ್ತಿದೆ. ತಾನು ಮಾತ್ರ ಎಚ್ಚರವಾಗಿರಬೇಕು. ಆಗಾಗ್ಗೆ ಬಾಯಿಗೆ ತೊಟ್ಟು ತೊಟ್ಟು ಹಾಲು ಬಿಡುತ್ತಿರಬೇಕು. ಅದನ್ನು ಬಿಟ್ಟು ಬೇರೆ ಯಾವ ಕೆಲಸವೂ ಇಲ್ಲ. ಅಥವಾ ಸಾವು ಯಾವಾಗ ಹತ್ತಿರವಾಗುತ್ತದೆಂಬುದನ್ನು ಎಚ್ಚರದಿಂದ ಕಾಯಬೇಕು. ಕಾಯ್ದು ಮಾಡುವುದೇನು? 'ನೋಡಿ ಹೀಗಾಗ್ತಿದೆ' ಎಂದು ಇವರಿಗೆ ಹೇಳುವುದು. ಜೀವ ತನ್ನ ಪಾಡಿಗೆ ತಾನು ಹೋಗುತ್ತೆ. ಆಗ, ನೆನಪಿಗೆ ಬಂತು. ಒಳಗೆ ಅಡಿಗೆ ಮನೆಯಲ್ಲಿರುವ ದೇವರ ಗೂಡಿನಲ್ಲಿ ಕಾಶಿಗಂಗೆಯ ಸೀಲ್ ಮಾಡಿದ ಮುಚ್ಚಳದ ತಾಮ್ರದ ಥಾಲಿ ಇದೆ. ಅದನ್ನು ಒಡೆದು ಒಂದು ಉದ್ಧರಣೆಯನ್ನು ಸಕಾಲದಲ್ಲಿ ಒಳಕ್ಕೆ ಹೋಗಿಸುವುದು. ಈ ಜ್ಞಾಪಕ ಬಂದ ತಕ್ಷಣ ಒಳಗೆ ಹೋಗಿ ಗಂಗಾಥಾಲಿ ಅಲ್ಲೇ ಇರುವುದನ್ನು ಪರೀಕ್ಷಿಸಿ ಬಂದು ಗಂಡನಿಗೆ ಹೇಳಿದಳು, "ಕುಡುಗೋಲಿನಿಂದ ಮುಚ್ಚಳ ತೆಕ್ಕೊಡಬೇಕು ನೀವು." ಅವನು, "ಹೂಂ. ಕುಡುಗೋಲನ್ನೂ ಹುಡುಕಿಟ್ಕೊ, ಅದರ ಮೂತಿಯ ಧೂಳು ತೊಳೆದು ಒರೆಸಿಡು. ಉದ್ಧರಣೇನೂ ತೊಳೆದಿಡು" ಎಂದ. ಗಂಡ ತನ್ನೊಡನೆ ಮನಃತೃಪ್ತಿಯಾಗುವಷ್ಟು ಮಾತನಾಡಿದನೆನ್ನಿಸಿತು. ಎದ್ದು ಹೋಗಿ ಕುಡುಗೋಲು ಉದ್ಧರಣೆಗಳನ್ನು ಹುಡುಕಿ ಹುಣಸೆಹಣ್ಣು ಇಲ್ಲದ್ದಕ್ಕೆ ಮಣ್ಣು ಹಾಕಿ ಉಜ್ಜಿ ತೊಳೆದು ಒರೆಸಿಟ್ಟಳು. ಮತ್ತೆ ಸಾಯುವ ಸ್ಥಿತಿಯಲ್ಲಿದ್ದ ರೋಗಿಯ ಹತ್ತಿರ ಕುಳಿತಳು. ರೋಗಿ ಒಮ್ಮೊಮ್ಮೆ ಅರೆಗಣ್ಣು ಬಿಡುತ್ತಿದ್ದರು. ಉಳಿದಂತೆ ರೆಪ್ಪೆ ಮುಚ್ಚಿಕೊಳ್ಳುತ್ತಿತ್ತು. ಕಣ್ಣು ತೆರೆದಾಗ ಅವಳು 'ಹ್ಯಾಗಿದೀರಾ? ನೋಡಿ ನಾನು ಬಂದಿದೀನಿ, ಸುಕನ್ಯಾ," ಎಂದು ಕಿವಿಯ ಹತ್ತಿರ ಹೋಗಿ ಕೂಗಿ ಹೇಳುವಳು. ಅವರ ಮುಖದಲ್ಲಿ ಅರ್ಥವಾಗದ ಭಾವನೆಯನ್ನು ಕಂಡು ತೃಪ್ತಿಪಡುವಳು. ಹೀಗೆಯೇ ನಡುರಾತ್ರಿಗೂ ಮೀರಿ ಕಳೆಯಿತು. ಮತ್ತೆ ಹೊತ್ತು ಹೋಗುವುದು ಕಷ್ಟವಾಯಿತು.

ಅಷ್ಟು ಹೊತ್ತಿಗೆ ಯಾರೋ ಬಂದಂತಾಯಿತು. ಬಾಗಿಲು ತಟ್ಟಿದರು. ರೈಟರ್ ನಂಜಪ್ಪನವರಿರಬೇಕೆನಿಸಿತು. ರಾಮಕೃಷ್ಣಯ್ಯ "ಯಾರು?" ಎಂದ. "ನಾನು," ಎಂಬ ಶಬ್ದದಿಂದಲೇ ಗೊತ್ತಾಯಿತು. ಗಣೇಶ. ಸುಕನ್ಯೆಗೆ

ಭುಜ ಬಂದಂತಾಯಿತು. ತಮ್ಮಣ್ಣ ಶೆಟ್ಟರು ಹೋದ ತಕ್ಷಣ ಹೇಳಿದ್ದಾರೆ, ಈಗ ಯಾವ ಬಸ್ಸಿತ್ತು? ಎಂದುಕೊಂಡು ಮೇಲೆ ಏಳುವಾಗ ಆಗ ತಾನೇ ರೈಲು ಹೋದ ಶಬ್ದ ಕೇಳಿದ ನೆನಪಾಯಿತು. ಒಳಗೆ ಬಂದ ಗಣೇಶ ಅಜ್ಜನ ಹಾಸಿಗೆಯ ಹತ್ತಿರ ಬಂದು ಕುಳಿತು, "ಏನಾಗಿದೆಯಮ್ಮ?" ಎಂದು ಕೇಳಿದ. ಅಮ್ಮ ವಿವರಿಸಿದಳು. ಆಮೇಲೆ ಗಂಡನ ಕಡೆಗೆ ತಿರುಗಿ, "ನೀವೊಂದು ಚಾಪೆ ಹಾಕ್ಕಂಡು ಸ್ವಲ್ಪ ನಿದ್ದೆ ಮಾಡಿ. ಗಣೇಶನ ಜೊತೆ ನಾನು ಎಚ್ಚರವಾಗಿರ್ತೀನಿ," ಎಂದಳು. ರಾಮಕೃಷ್ಣಯ್ಯ ಒಳಗಿನ ಕೋಣೆಗೆ ಹೋಗಿ ಚಾಪೆಯನ್ನು ನೆಲದ ಮೇಲೆ ಕುಕ್ಕಿ ಧೂಳು ಕೊಡವಿ, ಹಾಸಿಕೊಂಡು ಮಲಗಿದ. ಸ್ವಲ್ಪ ಹೊತ್ತಿಗೆ ಸುಕನ್ಯೆಯೂ ಗೋಡೆಯೊರಗಿ ತೂಕಡಿಸಲು ಆರಂಭಿಸಿದಳು. ಗಣೇಶ ನೆಲದ ಮೇಲೆಯೇ ನಿದ್ದೆ ಮಾಡತೊಡಗಿದ.

ಬೆಳಗ್ಗೆ ಹೊತ್ತು ಹುಟ್ಟುವ ಹೊತ್ತಿಗೆ ಸುಕನ್ಯೆ ಒದ್ದೆ ಬಟ್ಟೆಯಲ್ಲಿ ರೋಗಿಯ ಮುಖ ಒರೆಸಿ ತೊಟ್ಟು ಹಾಲು ಕುಡಿಸಿದಳು. ರಾಮಕೃಷ್ಣಯ್ಯ ಗಣೇಶರು ಎದ್ದು ಸುತ್ತ ಕುಳಿತಿದ್ದರು. ರೈಟರೂ ಮನೆಯಿಂದ ಬಂದು ನಿಂತಿದ್ದರು. ಕಾಲಿನ ಗಾಯದ ದುರ್ವಾಸನೆ ಹೆಚ್ಚಾಗಿತ್ತು. ಕಾಂಪೌಂಡರು ಬಂದು ಬ್ಯಾಂಡೇಜು ಬಿಚ್ಚಿ ಹೊಸದು ಹಾಕಬೇಕಿತ್ತು. ನೊಣ ಮುತ್ತಿಕೊಳ್ಳದಂತೆ ತೊಡೆಯ ತನಕ ದುಪ್ಪಟಿ ಹೊದಿಸಿದ್ದರೂ ವಾಸನೆಗೆ ಬೆಳಕು ಹರಿದ ಮೇಲೆ ನೊಣಗಳು ಗುಂಯ್‌ಗುಡಲು ಶುರುವಾದವು. ರೋಗಿ ತೊಟ್ಟಿದ್ದ ಶರಟಿನ ಬೆವರು ವಾಸನೆ ಗಾಯದ ಗಬ್ಬನ್ನು ಮೀರಿಸುವಂತಿತ್ತು. ಸ್ವಲ್ಪ ಎಬ್ಬಿಸಿ ಕೂರಿಸಿ ಒದ್ದೆ ಬಟ್ಟೆಯಿಂದ ಮೈ ಒರೆಸಿ ಬೇರೆ ಶರಟು ಹಾಕಬೇಕೆಂದು ಸುಕನ್ಯೆ ಯೋಚಿಸುತ್ತಿದ್ದಾಗ ನಾಗಪ್ಪನವರು ಒಮ್ಮೆ ಕಣ್ಣುಬಿಟ್ಟರು. ಮುಖದಲ್ಲಿ ಗಾಬರಿ, ಕಳವಳ, ಏನೋ ಕೇಳುವಂತೆ ಕೊಂಯ್ ಕೊಂಯ್ ಗುಟ್ಟಿದರು. ಬಲಗೈ ಎತ್ತಿ ಕಷ್ಟದಿಂದ ತಮ್ಮ ಪಕ್ಕೆಯ ಹತ್ತಿರ ತಡಕಿಕೊಂಡರು. ಈಗ ಒಮ್ಮೆ ಮಾತನಾಡಿಸಬಹುದೆಂಬ ಆಸೆಯಿಂದ ಮಗಳು "ಏನು? ಏನು ಬೇಕು? ಗೊತ್ತಾಯ್ತೆ, ನಾನು ಬಂದಿದೀನಿ, ಗಣೇಶ ಇಲ್ಲಿದಾನೆ ನೋಡಿ, ಇವರೂ ಕೂತಿದಾರೆ" ಎಂದು

ಹೇಳಹೋದಳು. ಅದು ಅವರ ಪ್ರಶ್ನೆಯನ್ನು ತಲುಪಲಿಲ್ಲ. "ಏನು ಬೇಕು? ಏನು ಬೇಕು ಹೇಳಿ," ಎಂದು ಮತ್ತೆ ಮತ್ತೆ ಕೂಗಿ ಕೇಳಿದಳು. ಹತ್ತಿರ ನಿಂತಿದ್ದ ರೈಟರು:

"ಜನಿವಾರದಲ್ಲಿ ಕಬ್ಬಿಣದ ಪೆಟ್ಟಿಗೆ ಬೀಗದ ಕೈ ಇದೆ. ಅದೆಲ್ಲಿ ಅಂತ ಜ್ಞಾಪಕ ಬಂದಾಗಲೆಲ್ಲ ತಡಕಿ ತಡಕಿ ಮುಟ್ಟಿಕೊಳ್ತಿದ್ದರು. ಅದನ್ನ ಹುಡುಕುತ್ತಿರಬೇಕು," ಎಂದರು.

ಕುಳಿತಿದ್ದ ರಾಮಕೃಷ್ಣಯ್ಯ ಹತ್ತಿರ ಸರಿದು ಅವರ ಕಿಮ್ಮಟಗಟ್ಟಿದ ಶರಟನ್ನು ಎತ್ತಿ ಅದಕ್ಕಿಂತ ಹೆಚ್ಚು ಕಿಮ್ಮಟಗಟ್ಟಿದ್ದ ಜನಿವಾರ ಹುಡುಕಿ ಅದರ ಸುತ್ತ ತಡವಿ ದಪ್ಪನಾದ ಬೀಗದ ಕೈಯನ್ನು ಪತ್ತೆ ಮಾಡಿದ. ತೊಡರು ಗಂಟಿನಲ್ಲಿದ್ದ ಅದನ್ನು ಜನಿವಾರಕ್ಕೆ ಸ್ವಲ್ಪವೂ ಜಖಂ ಆಗದಂತೆ ಬಿಚ್ಚಿ ಅವರ ಬಲಗೈಗೆ ಕೊಟ್ಟ. ಯಾವ ಮಾತೂ ಆಡಲಿಲ್ಲ. 'ನಿಮ್ಮ ಬೀಗದ ಕೈ ಇದು ತಗೊಳ್ಳಿ' ಎಂದೂ ಹೇಳಲಿಲ್ಲ. ಅವರು ದುರ್ಬಲವಾದ ಕೈಯಿಂದ ಹಿಡಕೊಂಡರು. ಅನಂತರ ಕ್ರಮೇಣ ಕೈ ಬೆರಳುಗಳನ್ನು ಮಡಿಸಿ ಮುಷ್ಟಿಯನ್ನು ಬಿಗಿ ಮಾಡಿದರು. ಅವಲಂಬನೆ ಇಲ್ಲದ ಮೊಣಕೈ ಮೇಲೆ ನಿಂತಿದ್ದ ಹಸ್ತವು ಬೀಗದ ಕೈಯನ್ನು ಬಿಗಿಯಾಗಿ ಹಿಡಿದ ಮುಷ್ಟಿಯಾಗಿ ಎದೆಯ ಮೇಲೆ ಕುಸಿದು ಮಲಗಿತು. ಕ್ರಮೇಣವಾಗಿ ಕಣ್ಣುಗಳು ಮುಚ್ಚಿದವು. ಮುಖದ ಗಾಬರಿ ಕಳವಳಗಳು ಕಡಿಮೆಯಾಗಿ ಸಮಾಧಾನವನ್ನು ಸೂಚಿಸುವಂತಹ ಮಂಪರು ಬಂತು. ಎಲ್ಲರೂ ಅದನ್ನೇ ಗಮನಿಸುತ್ತಿದ್ದರು.

ಸುಕನ್ಯೆ ಮನೆಯನ್ನೊಮ್ಮೆ ಗುಡಿಸಿ ಅವರಿಬ್ಬರೂ ಸ್ನಾನ ಮುಗಿಸಿ ರಾಮಕೃಷ್ಣಯ್ಯ ಸರಸರನೆ ತನ್ನ ಬಟ್ಟೆಗಳನ್ನು ಹಿಂಡಿ ಹಾಕಿ ಇಲ್ಲಿಗೆ ಬರುವ ವರೆಗೂ ಗಣೇಶ ಕೂತಿದ್ದ. ಅನಂತರ ಅವನು ಸ್ನಾನಕ್ಕೆಂದು ಎದ್ದುಹೋದ. ರೋಗಿ ಕಣ್ಣು ಮುಚ್ಚಿದ್ದರು. ಬೀಗದ ಕೈ ಹಿಡಿದ ಮುಷ್ಟಿ ಎದೆಯ ಮೇಲೆಯೇ ಇತ್ತು. ತನ್ನ ಸೀರೆಯನ್ನು ಕಸಕಿ ಒಣಗಹಾಕಿ ಬಂದ ಸುಕನ್ಯೆ ಇನ್ನೊಂದು ತೊಟ್ಟು ಹಾಲು ಕುಡಿಸಲೆಂದು ಹತ್ತಿರ ಕೂತಳು. "ಬಾಯಿಬಿಡಿ, ಹಾಲು ಕುಡಿಸ್ತೀನಿ" ಎಂದು ತುಟಿಬಿಡಿಸಲು ಹೋದರೆ

ಬಿಡಲಿಲ್ಲ. ಬಲವಂತವಾಗಿ ಬಿಡಿಸಲು ಬೆರಳು ಹಾಕಿದಳು. ತಣ್ಣಗಿತ್ತು. "ಇದೇನು ನೋಡಿ ತಣ್ಣಗಿದೆ" ಎಂದು ಗಂಡನಿಗೆ ಹೇಳಿದಳು. ರಾಮಕೃಷ್ಣಯ್ಯ ಬಂದು ನೋಡಿದ. ಬೇಗದ ಕೈ ಮುಷ್ಟಿಯ ನಾಡಿ ಹಿಡಿದ. ಜೀವ ಹೋಗಿ ಎಷ್ಟೋ ಹೊತ್ತಾಗಿತ್ತು. "ರಾತ್ರಿ ಎಲ್ಲ ಕಾದೆವು. ಪ್ರಾಣ ಹೋಗುವಾಗ ಗಂಗಾಜಲ ಬಿಡಲಿಲ್ಲ," ಎಂದು ಸುಕನ್ಯೆ ಅಳಲು ಶುರುಮಾಡಿದಳು.

ಸ್ವಲ್ಪ ಹೊತ್ತಿಗೆ ರೈಲು ಬೊಂಬಿನಲ್ಲಿ ಹಾಲು ಹಿಡಿದು ಬಂದ ರೈಟರು ಹಾಗೆಯೇ ನಿಂತರು. ಹತ್ತು ನಿಮಿಷವಾದ ಮೇಲೆ ರಾಮಕೃಷ್ಣಯ್ಯ, 'ಈ ಊರು ನಂಗೇನೂ ಗೊತ್ತಿಲ್ಲ, ಹೊರೋರು, ಮಾಡಿಸೋರು, ಸೌದೆ, ಇತರ ಪದಾರ್ಥಗಳನ್ನೆಲ್ಲ ನೀವೇ ಏರ್ಪಾಟು ಮಾಡಬೇಕು. ಇಲ್ಲಿ ತಗಾಳಿ," ಎಂದು ಕೋಟು ಜೇಬಿನಿಂದ ದುಡ್ಡು ತೆಗೆದು ಎಣಿಸಿ, "ನೂರು ರೂಪಾಯಿ ಇದೆ. ಎಲ್ಲಾ ಮಾಡಿ, ಸಾಲದಿದ್ದರೆ ಕೊಡ್ತೀನಿ," ಎಂದ. ಅವರು ಹೋದರು. ರಾಮಕೃಷ್ಣಯ್ಯ ಬಚ್ಚಲ ಮನೆಗೆ ಹೋಗಿ ಐದಾರು ಹೋಳಿಕೆ ಸೌದೆ ತಂದು ಮನೆಯ ಮುಂದುಗಡೆ ಬೆಂಕಿ ಹಾಕಿ ಒಳಗೆ ಬಂದು ಸುಮ್ಮನೆ ಕುಳಿತ. ರೈಟರು ಎಲ್ಲ ಏರ್ಪಾಟೂ ಮಾಡಿ ಬರುವತನಕ ಬೇರೆ ಕೆಲಸವಿರಲಿಲ್ಲ. ಅಷ್ಟರಲ್ಲಿ ಒಮ್ಮೆ ಉಕ್ಕಿ ಬಂದ ಅಳುವಿನ ಒತ್ತಡ ಕಳೆದದ್ದರಿಂದ ಸುಕನ್ಯೆಯೂ ಸುಮ್ಮನೆ ಕುಳಿತಳು. ಗಣೇಶ ಒಳಬಾಗಿಲಿನ ಹತ್ತಿರ ನಿಂತೇ ಇದ್ದ. ಅವನಿಗೆ ಅಳುವೂ ಬರಲಿಲ್ಲ. ಯಾವ ಮಾತೂ ತಿಳಿಯಲಿಲ್ಲ.

ರೈಟರು ಎರಡು ಎರಡೂವರೆ ಗಂಟೆ ಕಳೆದರೂ ಬರಲಿಲ್ಲ. ಎಲ್ಲವನ್ನೂ ಹೊಂದಿಸಬೇಕು. ಎಲ್ಲರನ್ನೂ ಹುಡುಕಬೇಕು. ಕೊನೆಗೆ ಹನ್ನೆರಡು ಗಂಟೆಯ ಹೊತ್ತಿಗೆ ಒಂದು ಚೀಲದಲ್ಲಿ ಪರಿಕರಗಳನ್ನು ಹಿಡಿದು ಸರಸರನೆ ಬಂದರು. ಅವರ ಹಿಂದೆಯೇ ಪುರೋಹಿತರು, ಹೊರುವ ನಾಲ್ಕು ಜನ, ಬೇರೆ ಯಾರೂ ಇಲ್ಲ. ಒಳಗೆ ಬಂದ ಪುರೋಹಿತರು, ಕೈಕಾಲು ಮುರಿಸಿಲ್ಲವೆ? ಇಷ್ಟು ಹೊತ್ತಿಗೆ ಸೆಟೆದುಕೊಂಡಿರುತ್ತೆ,' ಎಂದು ಅಲ್ಲಿ ಕುಳಿತಿದ್ದ ಪರ ಲೋಟವನ್ನು ಸೂಚಿಸಿದರು. 'ನಂಗೆ ಹೊಳೀಲೇ ಇಲ್ಲ.

ಈಗ ಮಡಿಸೋಣ," ಎಂದು ಎದ್ದು ಹತ್ತಿರ ಬಂದ ರಾಮಕೃಷ್ಣಯ್ಯ ಮುಷ್ಟಿಯಲ್ಲಿ ಹಿಡಿದಿದ್ದ ಬೀಗದ ಕೈಯನ್ನು ನೋಡಿ ಒಂದು ತಕ್ಷಣ ಸುಮ್ಮನೆ ನಿಂತ. ಅನಂತರ ಪುರೋಹಿತರ ಕಡೆ ತಿರುಗಿ "ಒಂದು ನಿಮಿಷ, ತಾವು ದಯವಿಟ್ಟು ಹೊರಗಡೆ ಕೆಲಸ ನೋಡ್ತೀರಾ? ಸ್ವಲ್ಪ ಕುಟುಂಬದ ಮಾತಿದೆ," ಎಂದ. ಅವರು ಹೊರಗೆ ಹೋಗಿ ಚಟ್ಟ ಕಟ್ಟುವ ಮೇಲ್ವಿಚಾರಣೆ ನೋಡತೊಡಗಿದರು. ರಾಮ ಕೃಷ್ಣಯ್ಯ ಬೀದಿಯ ಬಾಗಿಲು ಮುಚ್ಚಿ ಒಳಗಿನ ಚಿಲಕ ಹಾಕಿ ಬಂದು ಹೆಂಡತಿಗೆ, "ಆ ಬೀಗದ ಕೈ ತಗೊ" ಎಂದ. ಅವಳು ಗಂಡನ ಮುಖ ನೋಡಿದಳು. "ಕೇಳಲಿಲ್ಲವೆ?" ಎಂದ. ಅರ್ಥವಾದವಳಂತೆ ಅವಳು ಬಗ್ಗಿ ಅದನ್ನು ಹೆಣದ ಮುಷ್ಟಿಯಿಂದ ತೆಗೆದುಕೊಳ್ಳಲು ಹೋದಳು. ಅದು ಕೊಡಲಿಲ್ಲ. ಬಿಗಿಯಾಗಿ ಹಿಡಿದುಕೊಂಡಿತ್ತು. ಅವಳು ಉಪಾಯವಾಗಿ ಬೆರಳುಗಳನ್ನು ಬಿಡಿಸಿ ಎಳೆದುಕೊಳ್ಳಲು ನೋಡಿದಳು. ಅದು ಬಿಗಿ ಮಾಡಿದ ಒಂದು ಬೆರಳನ್ನೂ ಸಡಿಲ ಮಾಡಲಿಲ್ಲ. ಅವಳು ಮತ್ತೆ ಪ್ರಯತ್ನಿಸಿದಳು. ಅದು ಬಗ್ಗಿ ನಿಂತು ಇಸಕೊಳ್ಳಲು ಸಾಧ್ಯವಿಲ್ಲವೆಂದು ಅರ್ಥಮಾಡಿಕೊಂಡು ಪಕ್ಕದಲ್ಲಿ ಕುಳಿತು ಉಸಿರು ಕಟ್ಟಿ ಬಿಡಿಸತೊಡಗಿದಳು. ಬಲವಂತವಾಗಿ ಎರಡು ಬೆರಳನ್ನೂ ಎಳೆದು ಅರಳಿಸಿ ಹಿಡಿದಳು. ಅನಂತರ ಉಳಿದೆರಡು ಬೆರಳಿನ ಸಂದಿಗೆ ತನ್ನ ಬೆರಳನ್ನು ತೂರಿ ಸಂದು ಮಾಡಹೋದಾಗ ಅರಳಿಸಿದ ಬೆರಳುಗಳು ಚಕ್ಕನೆ ಮೊದಲಿದ್ದ ಸ್ಥಿತಿಗೆ ಬಂದು ಇವಳ ಬೆರಳುಗಳನ್ನೇ ಸಿಕ್ಕಿಸಿಕೊಂಡವು. ಇವಳ ಮೈ ಬೆವರಿತು. ಭಯವಾಯಿತು. ಗಂಡನ ಮುಖ ನೋಡಿದಳು. ಅವನು "ಬಿಡಿಸಿಕೊ" ಎಂದು ಧೈರ್ಯ ಹೇಳಿದ. ಅವಳು ಮತ್ತೆ ಪ್ರಯತ್ನಿಸಿದಳು. ಅದು ಬೀಗದ ಕೈಯನ್ನು ಬಿಟ್ಟುಕೊಡಲಿಲ್ಲ. "ನೀವು ಕಿತ್ತುಕೊ ಬನ್ನಿ," ಅವಳು ಗಂಡನನ್ನು ಕರೆದಳು. "ನೀನೇ ಕಿತ್ತುಕೊಬೇಕು." ಅವನು ನಿಂತಲ್ಲೇ ನಿಂತಿದ್ದ. "ನೀ ಬಾರೋ ಗಣೇಶ," ಅವಳು ಮಗನನ್ನು ಕೂಗಿದಳು. ಗಣೇಶ ಹತ್ತಿರ ಬಂದ. ತಾಯಿ ಮಗ ಇಬ್ಬರೂ ಸೇರಿ ಬೆರಳುಗಳನ್ನು ಬಿಡಿಸಿ ಬೀಗದ ಕೈಯನ್ನು ಸಫಲವಾಗಿ ತೆಗೆದುಕೊಂಡರು. ತೆಗೆದು ಅದನ್ನು ಗಂಡನ ಕೈಗೆ ಕೊಡಹೋದಳು.

"ನನಗೆ ಬ್ಯಾಡ. ಒಳಗಿನ ಕತ್ತಲೆ ಕೋಣೆಗೆ ನೆಲಮಾಳಿಗೆ ಇಳಿದು ಪೆಟ್ಟಿಗೆ ಬಾಗಿಲು ತೆಗೀರಿ. ಒಳಗೆ ಎಷ್ಟು ಹಣವಿದ್ದರೂ ಒಂದು ಚೀಲಕ್ಕೆ ತುಂಬಿಕೊಂಡು ಬನ್ನಿ. ಹೊತ್ತುಕೊಂಡು ಸ್ಮಶಾನಕ್ಕೆ ಹೋಗಿ ಹೆಣದ ಜೊತೆ ಅದನ್ನೆಲ್ಲ ಸುಟ್ಟು ಬೂದಿ ಮಾಡಬೇಕು," ಅವನೆಂದಾಗ ಅವಳಿಗೆ ಮಾತು ತಿಳಿಯಲಿಲ್ಲ. ನಿಂತಂತೆಯೇ ನಿಂತಿದ್ದಳು. "ಕೇಳಲಿಲ್ಲವೆ ಹೇಳಿದ್ದು?" ಎಂದು ತಾನೇ ಬೀಗದ ಕೈಯನ್ನು ಅವಳ ಕೈಯಿಂದ ಕಿತ್ತುಕೊಂಡು "ತಗಳೋ ಗಣೇಶ. ನೀನು ಹೋಗಿ ಪೆಟ್ಟಿಗೇನೆಲ್ಲ ಶೋಧಿಸಿ ಎಲ್ಲಾನೂ ಒಂದು ಚೀಲಕ್ಕೆ ತುಂಬಿಕೊಂಡು ಬಾ," ಎಂದು ಮಗನ ಮುಂದೆ ಹಿಡಿದ. ಅಷ್ಟರಲ್ಲಿ ಅವಳ ಬುದ್ಧಿ ಜಾಗ್ರತವಾಯಿತು. "ನಿಮಗೇನು ಬುದ್ಧಿಗಿದ್ಧಿ ಇದೆಯೋ ಇಲ್ಲವೋ, ದುಡ್ಡೆಲ್ಲ ಹೀಗೆ ಸುಟ್ಟು ಹಾಕುಕ್ಕೆ," ಎಂದು ಗದ್ದರಿಸಿಕೊಂಡಳು. ಧ್ವನಿ ಹೊರಗಿರುವವರಿಗೂ ಕೇಳುವಷ್ಟು ದೊಡ್ಡದಾಗಿತ್ತು. ರಾಮಕೃಷ್ಣಯ್ಯ "ಹಾಗೆ ಕಿರುಚಿಕೋಬೇಡ. ನಾನು ಹೇಳೂದರಲ್ಲಿ ಅರ್ಥವಿದೆ. ಅದರಂತೆ ಮಾಡು," ಎಂದ. "ಏನು ಅರ್ಥ, ಬುದ್ಧಿ ಯಾವತ್ತಿತ್ತು ನಿಮಗೆ?" ಎಂದು ಅವಳು ಇನ್ನೂ ಜೋರು ಮಾಡಿದಳು. ಹತ್ತಿರವೇ ನಿಂತಿದ್ದ ರಾಮಕೃಷ್ಣಯ್ಯ ಕೈ ಎತ್ತಿ ಫಟ್ ಎಂದು ಅವಳ ಕೆನ್ನೆಗೆ ಒಂದೇಟು ಕೊಟ್ಟು, 'ಬಾಯಿ ಮುಚ್ಕೊತ್ತೀಯೋ ಇಲ್ಲವೋ?" ಎಂದ. ಅವಳು ನಡುಗಿ ಹೋದಳು. ಮದುವೆಯಾಗಿ ಆ ಮನೆಗೆ ಹೋದ ಇದುವರೆಗೂ ಗಂಡ ತನ್ನನ್ನು ಹೊಡೆದಿರಲಿಲ್ಲ. ತನ್ನನ್ನು ಮಾತ್ರವಲ್ಲ ಯಾರನ್ನೂ, ಹೊಲಕ್ಕೆ ನುಗ್ಗುವ ಪೋಲಿ ದನವನ್ನೂ ಹೊಡೆಯುವವನಲ್ಲವೆಂದು ಊರವರೆಲ್ಲ ಹೇಳುವುದನ್ನು ಕೇಳಿದ್ದಳು. ಈಗ ಅನಿರೀಕ್ಷಿತವಾಗಿ ಬಿದ್ದ ಈ ಪೆಟ್ಟಿಗೆ ಅವಳ ಸ್ಥೈರ್ಯ ಉಡುಗಿತು. ಹತ್ತಿರ ನಿಂತಿದ್ದ ಗಣೇಶನಿಗೂ ಭಯ ಹುಟ್ಟಿತು. ರಾಮಕೃಷ್ಣಯ್ಯ ಬೀಗದ ಕೈಯನ್ನು ಮುಂದೆ ಹಿಡಿದು "ಹೇಳಿದ್ದು ಕೇಳೋ," ಎಂದ. ಅವನು ಅದನ್ನು ಇಸಕೊಂಡು ಒಳಗೆ ನಡೆದ.

ಮನೆಯ ಒಳಭಾಗದಲ್ಲಿದ್ದ ಕತ್ತಲೆ ಕೋಣೆ ಅವನಿಗೆ ಗೊತ್ತಿತ್ತು. ಅಪ್ಪ ಅದಕ್ಕೆ ವಿದ್ಯುತ್ ಸಂಪರ್ಕ ಹಾಕಿಸಿರಲಿಲ್ಲ. ಕದ ತೆಗೆದರೆ

ಓಬಳಿಯಲ್ಲೇ ಒಂದು ಲಾಟೀನಿಟ್ಟಿದ್ದರು. ಅದನ್ನು ಹಚ್ಚಿ ಒಳಗಿನಿಂದ
ಬಾಗಿಲು ಮುಚ್ಚಿ ಚಿಲಕ ಹಾಕಿಕೊಂಡ ಮೇಲೆಯೇ ಅಜ್ಜ ನೆಲಮಾಳಿಗೆಗೆ
ಇಳಿದು ಕಬ್ಬಿಣದ ಪೆಟ್ಟಿಗೆಯ ಬಾಗಿಲು ತೆಗೆಯುತ್ತಿದ್ದರೆಂಬುದು ಅವನಿಗೆ
ಹೊರಗಿನಿಂದ ಕೇಳುತ್ತಿದ್ದ ಸದ್ದಿನಿಂದ ಗೊತ್ತಿತ್ತು. ಹಗಲು ಹೊತ್ತಿನಲ್ಲೂ
ಕತ್ತಲಿರುತ್ತಿದ್ದ ಕೋಣೆಯ ಬಾಗಿಲ ಹಿಂಬದಿಯಲ್ಲಿ ತಡಕಿ ಲಾಟೀನನ್ನು
ಪತ್ತೆ ಮಾಡಿ, ಬಚ್ಚಲು ಮನೆಗೆ ಹೋಗಿ ಅದರ ಚಿಮಣಿ ಒರೆಸಿ ಹೊತ್ತಿಸಿದ.
ಮತ್ತೆ ಕೋಣೆಗೆ ಹೋಗಿ ಕೆಳಗೆ ಇಳಿದು ಬೀಗದ ಕೈ ಹಾಕಿ ತೆಗೆಯಲು
ಹೋದರೆ ಬರುತ್ತಿಲ್ಲ. ಅದೆಷ್ಟೋ ಸುತ್ತು ಈ ಕಡೆ, ಮತ್ತೆ ಎಷ್ಟೋ
ಸುತ್ತು ಆ ಕಡೆ ತಿರುಗಿಸಿದರೆ ಬರುತ್ತದೆಂದು ಅಮ್ಮನಿಂದಲೇ ಕೇಳಿದ್ದ
ನೆನಪು ಬಂದು ಅತ್ತ ಇತ್ತ ಇತ್ತ ಅತ್ತ ತಿರುಗಿಸಲು ಶುರು ಮಾಡಿದ.
ಕೊನೆಗೆ ತೆಗೆದು ಕೊಂಡಿತು. ಲಾಟೀನು ಹಿಡಿದುನೋಡಿದರೆ ನೋಟಿನ
ಕಂತೆಗಳು ಒಂದು ಕಂತೆ ಎಳೆದು ನೋಡಿದ. ಎಲ್ಲ ನೂರರವು. ಎಣಿಸಿದರೆ
ನೂರು ನೋಟುಗಳು. ಹೊರಗೆ ಹೋಗಿ ಒಂದು ಗೋಣಿ ಚೀಲ ತಂದು
ಅದರೊಳಕ್ಕೆ ಎಣಿಸಿ ಎಣಿಸಿ ತುಂಬಿದ ಒಟ್ಟು ಅರುವತ್ತೈದು ಕಂತೆಗಳಿದ್ದವು.
ಬುದ್ಧಿಯು ತಾನು ಓದುತ್ತಿದ್ದ ಗಣಿತ ಸೂತ್ರವನ್ನನ್ವಯಿಸಿತು. ಒಂದು
ನಿಮಿಷದಲ್ಲಿ ಲೆಕ್ಕಾಚಾರವಾಯಿತು. ಮತ್ತೆ ಪೆಟ್ಟಿಗೆ ಬಾಗಿಲು ಮುಚ್ಚಿ
ಬೀಗದ ಕೈ ತಿರುಗಿಸಿ ಚೀಲವನ್ನು ಎತ್ತಿ, ಭಾರವಾಗಿತ್ತು, ನೋಟುಗಳೂ
ಭಾರವಾಗಿರುತ್ತವೆಂಬ ಕಲ್ಪನೆಯೇ ಅವನಿಗೆ ಇರಲಿಲ್ಲ. ತಂದು ಹಣದ
ಪಕ್ಕದಲ್ಲಿಟ್ಟು ಅಪ್ಪನಿಗೆ "ಆರೂವರೆ ಲಕ್ಷವಿದೆ," ಎಂದ. ಅಪ್ಪ ಕತ್ತೆತ್ತಿ
ಅವನ ಮುಖ ನೋಡಿದರು. ಒಂದು ನಿಮಿಷದ ನಂತರ, "ಎಷ್ಟಿದೆ ಅಂತ
ಕೇಳಿದೆನೇ? ಎಣಿಸು ಅಂತ ಹೇಳಿದ್ದೆನೆಯೇ? ಅಧಿಕ ಪ್ರಸಂಗಿತನ
ಅನಾವಶ್ಯಕ ಮಾತು ಯಾವತ್ತೂ ಇರಬಾರದು," ಎಂದುಬಿಟ್ಟರು. ಮಗ
ಪೆಚ್ಚಾಗಿ ನಿಂತ. ಅಮ್ಮ ಗರಬಡಿದವಳಂತೆ ರೆಪ್ಪೆಯನ್ನು ಆಡಿಸದೆ
ಗೋಡೆಯೊರಗಿ ಕೂತಿದ್ದಳು. ಅವಳ ಎಡಗೆನ್ನೆಯ ಮೇಲೆ ನಾಲ್ಕು ಬೆರಳಿನ
ಗುರುತು ಕೆಂಪಗೆ ಹತ್ತಿತ್ತು. ರಾಮಕೃಷ್ಣಯ್ಯ ಹೋಗಿ ಮುಂದಿನ ಬಾಗಿಲ
ತೆಗೆದ. ಹೊರಗಿದ್ದವರಿಗೆ, "ಬನ್ನಿ, ಬಿಸಿಲು ಹತ್ತಿದೆ. ಸರಸರನೆ ಎಲ್ಲ

ಮಲಗಿಸೋಣ," ಎಂದ ಕೃಷ್ಣ. ಅವರೆಲ್ಲ ಒಳಗೆ ಬಂದರು. ಇಬ್ಬಿಬ್ಬರೂ ಸೇರಿ ಮುರಿದರೂ ಕೈಕಾಲುಗಳನ್ನು ಮಡಚಿ ಚಟ್ಟದ ಅಳತೆಗೆ ತರುವುದು ಕಷ್ಟವಾಯಿತು. ಗಾಯವಿದ್ದ ಕಾಲನ್ನು ಮುಟ್ಟಲು ಉಳಿದವರು ಅಸಹ್ಯಕೊಂಡಿದ್ದರಿಂದ ರಾಮಕೃಷ್ಣಯ್ಯನೇ ಕೈ ಹಾಕಿ ಎತ್ತಿ ಅದುಮಿ ಏದುಸಿರು ಬಿಟ್ಟು ಮಡಿಸಿದ.

ಮನೆಯಲ್ಲಿ ನಡೆಯುವ ಕರ್ಮಗಳಾದ ಮೇಲೆ ರಾಮಕೃಷ್ಣಯ್ಯ ಬೆಂಕಿಯ ಮಡಕೆಯನ್ನು ಹಿಡಿದು ನಿಂತ. ಮಗನನ್ನು ಕೂಗಿ "ನೋಡು ಈ ಚಟ್ಟವಿದೆಯಲ್ಲ, ನೀನು ಚಟ್ಟ ಹೆಗಲಮೇಲೆ ಇಟ್ಟುಕೊಂಡು ನನ್ನ ಮುಂದೆ ಮುಂದೆ ನಡಿ," ಎಂದ. "ಅದೇನು?" ಪುರೋಹಿತರು ಕೇಳಿದರು. "ಕುಟುಂಬದ ವಿಷಯ. ತಾವು ಮುಂದಿನ ಕೆಲಸಕ್ಕೆ ಅಪ್ಪಣೆ ಕೊಡಿಸಿ," ಅವನು ಉತ್ತರಿಸಿದ. "ನಿಮ್ಮ ಮಗನೇ? ತಂದೆ ಇರೂ ಮಕ್ಕಳು ಸ್ಮಶಾನಕ್ಕೆ ಬರಬಾರದು," ಅವರೆಂದರು. "ನಾನೇ ಹೇಳ್ತಿರೋವಾಗ ಬಂದರೆ ತಪ್ಪಾಗಿಲ್ಲ. ಇನ್ನು ತಾವು ಮುಂದಿನ ಅಪ್ಪಣೆ ಕೊಡಿಸಿ." ಅವನು ಮರು ಉತ್ತರ ಕೊಟ್ಟ. ಮುಂದೆ ನಾಗಪ್ಪನವರ ಯಾನ ಮೇಲೇರಿ ಯಾತ್ರೆ ಶುರು ಆಯಿತು. ಹಾಗಿದ್ದೂ ಸಂಜೆಯಾದರೂ ಬಿಸಿಲು ಚುರುಗುಡುತ್ತಿತ್ತು. ಅಷ್ಟೇ ಜನ ಬೇರೆ ಯಾರೂ ಇಲ್ಲದ. ಬಂಧು ಬಾಂಧವ ಇಷ್ಟಮಿತ್ರಾದಿ ಜಂಗುಳಿ ಇಲ್ಲದ, ನಮ್ಮ ಬೇಕೋ ಅಷ್ಟೇ ಜನರ ಯಾತ್ರೆ ಊರಿನ ಗಡಿಯನ್ನು ದಾಟಿ ಮುಂದೆ ಸಾಗಿತು. ಕೊನೆಗೆ ದಹನ ಸ್ಥಾನ ಬಂದಿತು. ಸೌದೆಯನ್ನು ಕ್ರಮವಾಗಿ ಒಟ್ಟಿ ಚಿತೆಯನ್ನು ಸಿದ್ಧಪಡಿಸಿದ್ದರು. ರಾಮಕೃಷ್ಣಯ್ಯ ಮಗನನ್ನು ಒಂದು ಬದಿಗೆ ಕರೆದು ಹೇಳಿದ: "ಅಲ್ಲಿ ಸೌದೆ ಒಟ್ಟಿದಾರಲ್ಲ, ಅದರಲ್ಲಿ ಮೇಲ್ಭಾಗದ ಒಂದು ಒರಸೆ ತೆಗೆದು ಬೇರೆ ಯಾರಿಗೂ ಕಾಣದ ಹಾಗೆ ನೋಟಿನ ಕಂತೆಗಳನ್ನೆಲ್ಲಾ ಹಾಸಿಗೆ ಹಾಸಿದ ಹಾಗೆ ಹರವಿಡು. ಅದರ ಮೇಲೆ ತೆಗೆದ ಸೌದೆಯನ್ನು ಮೊದಲಿದ್ದ ಹಾಗೆಯೇ ಮುಚ್ಚಿ ಇಡು."

ಮಗನ ಸ್ಥಾನದಲ್ಲಿ ನಿಂತು ರಾಮಕೃಷ್ಣಯ್ಯ ಎಲ್ಲ ಶಾಸ್ತ್ರಗಳನ್ನು ನಡೆಸಿದ. ಹೆಂಡತಿಯ ಮಗನಾಗಿ ತಲೆಯನ್ನು ಬೋಳಿಸಿಕೊಂಡು ಮುಖಾಗ್ನಿ

ಹಿಡಿದಂತಾಯಿತು.

"ಅಂಥ ಸಂದರ್ಭದಲ್ಲೂ ನಿನಗೆ ಅರ್ಥವಾಗಲಿಲ್ಲವಲ್ಲಾ; ಜೊತೆಗೆ ಹೊರಗಿರೋರಿಗೆ ಕೇಳಲಿ ಅಂತ ಕಿರುಚುಕ್ಕೆ ಶುರುಮಾಡಿದೆಯಲ್ಲ ಅಂತ ಹೊಡೆದೆ. ಆದರೆ ಆ ಕಾಗದಾನ ಸೌದೆ ಹೊತ್ತಿಸುಕ್ಕಿಲ್ಲದೆ ಮತ್ತೇನು ಮಾಡಬೇಕಿತ್ತು ನೀನೇ ಹೇಳು."

"ಅರುಣನರ ಲಕ್ಷಾನ ಏನು ಮಾಡಬೇಕಾಗಿತ್ತಂತೆ. ನಮಗೆ ಮಗನಿಲ್ಲವೆ, ಮಾವಿಲ್ಲವೆ, ನಮಗಲ್ಲದೆ ಇನ್ನಾರಿಗೆ ಸೇರಬೇಕಾಗಿತ್ತು ಅದು?"

ಅವನು ತಕ್ಷಣ ಉತ್ತರ ಹೇಳಲಿಲ್ಲ. ಅವನ ಸ್ವಭಾವವೇ ಹಾಗೆ. ಬಹು ಮುಖ್ಯ ಪ್ರಶ್ನೆ ಕೇಳಿದಾಗ ಸುಮ್ಮನಾಗಿ ಬಿಡುವುದು. ಆಮೇಲೆ ಯಾವಾಗಲೋ ಸಂಕ್ಷಿಪ್ತವಾಗಿ ಎರಡು ಮಾತು ಹೇಳಿ ಸುಮ್ಮನಾಗುವುದು. ಈಗಲೂ ಮೇಲಿನ ಮದರಾಸು ತಾರಸಿಯ ಅಡ್ಡತೊಲೆಯನ್ನು ನೋಡತೊಡಗಿದ. ನಂತರ ಹೇಳಿದ. "ಯಾರಿಗೆ ಸೇರಬೇಕೂಂತ ಇವರಾಗ ಕೊಡಲಿಲ್ಲ, ಹೇಳಲಿಲ್ಲ, ಬರೆಯಲಿಲ್ಲ."

"ತಂದೆಯ ಆಸ್ತಿ ಮಕ್ಕಳಿಗೆ ಸೇರುಕ್ಕೆ ಬರೆಯಲೇಬೇಕೆ?" ಅವಳು ವಾದ ಮಾಡಿದಳು.

"ನಿಮ್ಮ ತಂದೆ ಸಾಯುವಾಗ ಜಮೀನೆಲ್ಲ ಮಕ್ಕಳಿಗೆ ಸೇರಬೇಕು ಅಂತ ಬರೆದೇ ಸತ್ತರೇ? ನೀವು ಅನುಭವಿಸುತ್ತಿಲ್ಲವೇ ಅದನ್ನ?"

ಅವನು ಯಥಾಪ್ರಕಾರ ಮೌನಿಯಾದ. ಅವಳು ನಿಂತೇ ಇದ್ದಳು. ಕೊನೆಗೆ ಹೇಳಿದ, "ನಾಗಪ್ಪೋರು ಎಲ್ಲರಂತಿರಲಿಲ್ಲ. ಸತ್ತೋರ ಅಪಗುಣಾನ ನನ್ನ ನಾಲಿಗೇಲಿ ಆಡಿಸಬೇಕು ಅಂತ ನೀನ್ಯಾಕೆ ಹಠ ಮಾಡ್ತಿದೀಯಾ? ಬೀಗದ ಕೈಯನ್ನು ಹಿಡಕೊಂಡೇ ಸತ್ತರು. ಆ ಬೀಗದ ಕ್ಕೆ ಒಳಗಿರೋದನ್ನ ಅವರ ಜೊತೆಗೆ ಕಳಿಸೋದು ಬಿಟ್ಟರೆ ಬೇರೆ ದಾರಿಯೇ ಇರಲಿಲ್ಲ."

"ಅದನ್ನ ಅವರ ಹೆಸರಲ್ಲೇ ಧರ್ಮದ ಕೆಲಸಕ್ಕೆ

ಕೊಡಬಹುದಾಗಿತ್ತು." ಅವಳು ಪ್ರತಿ ವಾದವೆಂಬಂತೆ ಮಾತನಾಡಿದಳು

ಅಪ್ಪ ತೊಲೆಯನ್ನು ನೋಡುತ್ತಲೇ ಆದರೆ ನಿಧಾನ ಮಾಡದೆ ಉತ್ತರಿಸಿದ, "ಅವರ ಸಂಕಲ್ಪದಲ್ಲಿರದಿದ್ದ ದಾನವನ್ನ ಅವರ ಹೆಸರಲ್ಲಿ ಮಾಡುಕ್ಕೆ ನಮಗೆ ಯಾವ ಅಧಿಕಾರವಿದೆ?"

ಗಂಡ ಬೂದಿ ಎತ್ತಿದ ಕರ್ಮ ಮುಗಿಸಿ ಬಂದು ಮೂವರೂ ಹೊರಟಾಗ ರೈಟರ್ ನಂಜಪ್ಪಯ್ಯ ಎದುರಿಗಿದ್ದರು. ಗಂಡನನ್ನು ಒಳಗೆ ಕರೆದು ಕೇಳಿದಳು. "ಮನೆ ಬೀಗದ ಕೈ ಯಾರ ಕೈಲಿ ಕೊಟ್ಟು ಹೋಗೋದು?"

ಅವನು ಯೋಚಿಸುತ್ತಾ ನಿಂತ, "ಬೇಗ ಹೇಳಿ," ಅವಳೆಂದಳು. ಅವನು ಉತ್ತರಿಸಲಿಲ್ಲ. ಅವಳು ನಿಂತೇ ಇದ್ದಳು. "ಬಸ್ಸಿಗೆ ಹೊತ್ತಾಗುತ್ತೆ," ಎಂದು ಇನ್ನೊಮ್ಮೆ ತಗಾದೆ ಮಾಡಿದಳು. ಕೊನೆಗೆ ಹೇಳಿದ. "ಯಾರ ಕೈಲಿ ಕೊಡೂಕ್ಕು ಅಧಿಕಾರವಿಲ್ಲ, ಕೊಡದೇ ಹತ್ತಿರ ಇಟ್ಟುಕೊಳ್ಳುಕ್ಕೂ ಅಧಿಕಾರವಿಲ್ಲ. ಗಣೇಶನ ಕೈಲಿ ಕೊಟ್ಟು, ಓಡಿ ಹೋಗಿ ಸ್ಮಶಾನದಲ್ಲಿ ಎಸೆದು ಬಾ, ಅಂದರೆ ಸರಿಯಾಗುತ್ತೆ."

ಸಿಟ್ಟಿನಿಂದ ಮಾತನಾಡುತ್ತಿದ್ದಾನೆಂದು ಅವಳು ಅವನ ಮುಖ ನೋಡಿದಳು. ಮುಖ ಎಂದಿನಂತೆ ಶಾಂತವಾಗಿಯೇ ಇತ್ತು. ಅವಳಿಗೆ ಸಿಟ್ಟು ಬಂತು. "ಅಂಥೋರು ಯಾಕೆ ಅವರ ತಿಥಿ ಕರ್ಮ ಮಾಡ್ತೀರಾ ದುಡ್ಡು ಖರ್ಚು ಮಾಡಿ?" ಎಂದು ತಗಾದೆಯ ಧ್ವನಿಯಲ್ಲೇ ಹೇಳಿದಳು.

ಅವನು ಉತ್ತರಕ್ಕೆ ತಡಮಾಡಲಿಲ್ಲ, "ಗಂಡು ಮಕ್ಕಳಿಲ್ಲದೋರ ಮಗಳನ್ನ ಮದುವೆಯಾಗಿರುವಾಗ, ಅದೂ ಒಬ್ಬನೇ ಅಳಿಯನಾಗಿರುವಾಗ, ಮಾಡೋದು ಕರ್ತವ್ಯ ತಾನೇ? ಶ್ರಾದ್ಧ ಮಾಡಿ ಪ್ರೇತತ್ವ ಕಳೆಯದೇ ಇದ್ದರೆ ಅವರು ಅತ್ತಲೂ ಇಲ್ಲ ಇತ್ತಲೂ ಇಲ್ಲದ ಸ್ಥಿತೀಲಿ ಇರ್ತಾರೆ ಅಂತ ಅಲ್ಲವೇ ಹೇಳೋದು? ಇನ್ಯಾರಾದರೂ ಮಾಡೋರಿದ್ದರೆ ನಾನು ಮಾಡೋದೆ ಇಲ್ಲ." ಇಷ್ಟು ಹೇಳಿ ಅವನು ಹೊರಗೆ ನಡೆದ.

೩. ರ‍್ಯಾಗಿಂಗ್

('ತಂತು' ಕಾದಂಬರಿಯಿಂದ)

ರ‍್ಯಾಗಿಂಗ್! ಕಾಲೇಜಿನ ಹೊಸ ವಿದ್ಯಾರ್ಥಿಗಳಿಗೆ ನಡುಕ. ಪಾಲಕರಿಗೆ ಕಾಳಜಿ. ಕಾಲೇಜಿನ ಆಡಳಿತ ವರ್ಗದವರಿಗೆ ಡುಗುಡುಗು. ಇತರರಿಗೆ ಪೇಪರಿನಲ್ಲಿ ಓದಿ ತಿಳಿಯುವ ಕುತೂಹಲ . ಎಂಥ ವಿಷಯವೇ ಆಗಲಿ, ಭೈರಪ್ಪನವರು ಆಳವಾಗಿ ಯೋಚಿಸಿ ಮನಮುಟ್ಟುವಂತೆ ವಿವರಿಸುವರೆನ್ನುವುದಕ್ಕೆ ಇದೂ ಒಂದು ನಿದರ್ಶನ.

ಒಂದು ರಾತ್ರಿ ಹಾಸ್ಟೆಲಿನ ಊಟದ ಮನೆಯಲ್ಲಿ ಊಟ ಮಾಡಿ
ಕೋಣೆಗೆ ಹೋಗುತ್ತಿದ್ದಾಗ ಕೊನೆ ವರ್ಷದ ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿ
ವಿಜಯಕುಮಾರ, "ಲೇ ಅನೂಪ್, ಸ್ಟಾಪ್. ಐ ವಾಂಟು ಟಾಕ್ ಟು
ಯು," ಎಂದು ಹಿಂದಿನಿಂದ ಕೂಗಿದ. ಹಿಂತಿರುಗಿ ನೋಡಿದ ಇವನಿಗೆ
ಅವನ ಗುರುತು ಸಿಕ್ಕಿತು. ಮೊನ್ನೆ ತಾನೆ ಎಲೆಕ್ಟ್ರಾನಿಕ್ಸ್ ವಿಭಾಗದ
ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಸಭೆ ಸೇರಿದ್ದಾಗ ಕೊನೆಯ ವರ್ಷದ
ಎಂದರೆ ಏಳನೆ ಸೆಮಿಸ್ಟರಿನ ಪ್ರತಿನಿಧಿಯೆಂದು ಈ ವಿಜಯಕುಮಾರ
ಎಚ್.ಒ.ಡಿ. ಬರುವ ಮುನ್ನ ಇತ್ತಿಂದತ್ತ ಅತ್ತಿಂದಿತ್ತ
ಓಡಿಯಾಡುತ್ತಿದ್ದದ್ದು ಹೊಸಬರೆಲ್ಲ ಗಮನಿಸಿದ್ದರು. ಅವನ ತರಗತಿಗೆ
ಅವನೇ ಪ್ರತಿನಿಧಿಯಂತೆ. ಕಳೆದ ಸೆಮಿಸ್ಟರಿನಲ್ಲಿ ಎಲೆಕ್ಟ್ರಾನಿಕ್ಸ್ ವಿಭಾಗದ
ವಿದ್ಯಾರ್ಥಿಗಳು ಅಖಿಲ ಭಾರತ ಪ್ರವಾಸ ಹೋಗಿದ್ದಾಗ ಅವನೇ ಪ್ರವಾಸ
ಕಾರ್ಯದರ್ಶಿಯಾಗಿದ್ದನಂತೆ. ಎಚ್.ಒ.ಡಿ. ಕೂಡ ಅವರ ಭಾಷಣದಲ್ಲಿ
ಹೊಸಬರಿಗೆ ಏನಾದರೂ ತಿಳಿಯದಿದ್ದರೆ ವಿಜಯಕುಮಾರನಂಥ ಹಿರಿಯ
ಸೆಮಿಸ್ಟರಿನ ಕಾರ್ಯದರ್ಶಿಯನ್ನು ಕೇಳುವಂತೆ ಹೇಳಿದ್ದರು.

ಅವನು ಕರ್ನಾಟಕ ಸರ್ಕಾರದ ಕೈಗಾರಿಕಾ ಕಮಿಶನರ್ ಎನ್.ಟಿ.ರೆಡ್ಡಿಯವರ ಮಗನಂತೆ ಎಂಬುದೆಲ್ಲ ಒಂದು ದಿನದಲ್ಲಿ ಕಿರಿಯ ವಿದ್ಯಾರ್ಥಿಗಳಿಗೆ ಹರಡಿತು. ಜೊತೆಗೆ ಥಳಥಳ ಹೊಳೆಯುವ ಬುಲೆಟ್ ಮೋಟರ್ ಬೈಕಿನಲ್ಲಿ ಮುಖ ಮುಸುಡಿಗಳ ಗುರುತು ಸಿಕ್ಕದಂತಹ ಹೆಲ್ಮೆಟ್ ಧರಿಸಿ ಯಮವೇಗದಲ್ಲಿ ಹೋಗುತ್ತಿದ್ದ ಸ್ಪೀಡ್‌ಕಿಂಗ್ ಎಂಬ ಬಿರುದಿನ ವೀರನೂ ಇವನೇ ಎಂಬ ವಿಶೇಷ ಗುರುತೂ ಸಿಕ್ಕಿ, ಅವನ ಪರಿಚಯ ಸ್ನೇಹಗಳು ಆಗುವುದೇ ಒಂದು ಹೆಮ್ಮೆ ಎಂದು ಹುಡುಗರಲ್ಲಿ. ಮೋಟರ್ ಬೈಕಿನಲ್ಲಿ ಅವನ ಹಿಂದೆ ಕೂತು ಹೋಗಿ ಬರುವುದೇ ಕಾಲೇಜಿನ ತಾರಾಪಟ್ಟದ ಗುರುತು ಎಂಬ ಭಾವನೆ ಹುಡುಗಿಯರಲ್ಲಿ ಪ್ರಚಲಿತವಿದ್ದುದೂ ತಿಳಿದಿತ್ತು. ಅವನಿದ್ದುದೂ ಕಾಲೇಜು ಆವರಣದಲ್ಲಿದ್ದ ಹಾಸ್ಟೆಲಿನಲ್ಲೇ ಆದರೂ ಯಾವಾಗಲೂ, ತರಗತಿಗೆ ಬರುವಾಗಲೂ ಕೈಲಿ ಬಾಹ್ಯಾಕಾಶ ಯಾತ್ರಿಗಳ ಶೈಲಿಯ ಮುಖತ್ರಾಣವನ್ನು ಹಿಡಿದೇ ಬರುತ್ತಿದ್ದ. ಅಂಥವನೇ ಈಗ, 'ಲೇ ಅನೂಪ್, ಸ್ಟಾಪ್. ಐ ವಾಂಟು ಟಾಕ್ ಟು ಯು,' ಎಂದು ಹೆಸರು ಹಿಡಿದು ಕೂಗಿದುದರಿಂದ ಅನೂಪನಿಗೊಂದು ಅಂತಸ್ತು ದೊರಕಿದಂತಾಯಿತು. ಇವನಿಗೆ ವಿಜಯಕುಮಾರನ ವಿಷಯದಲ್ಲಿ ಮತ್ಸರವೂ ಹುಟ್ಟಿತ್ತು. ವಿದ್ಯಾಶಾಲೆಯಲ್ಲಿ ಎಲ್ಲ ವಿಷಯಕ್ಕೂ ನಾಯಕನಾಗಿದ್ದವನು ತಾನು, ಇಲ್ಲಿ ಯಾವ ತೋಲಪ್ಪನಾಯಕ ಅಂತ ಇವನ ಶ್ರೇಷ್ಠತೆ ಒಪ್ಪಿಕೊಬೇಕು? ಎಂದು ಮೊನ್ನೆಯಿಂದ ಒಳಗೇ ಕುದಿಯುತ್ತಿದ್ದ ಮತ್ಸರವು ಈಗ ತಣ್ಣಗಾಗಿ ಅವನೊಡನೆ ಸ್ನೇಹ ಬೆಳೆಸುವ ಆಕಾಂಕ್ಷೆ ಹುಟ್ಟಿತು. ಹತ್ತಿರ ಬಂದ ವಿಜಯಕುಮಾರ ಇವನ ಹೆಗಲ ಮೇಲೆ ಹಿರಿತನದ ಅನುಗ್ರಹದ ಧಾಟಿಯಲ್ಲಿ ಕೈ ಹಾಕಿ, "ಡು ಯು ನೋ ಫೈರಿಂಗ್?" ಎಂದ.

"ಐ ಹ್ಯಾವ್ ನೊ ಎನ್.ಸಿ.ಸಿ. ಟ್ರೇನಿಂಗ್. ಐ ವಾಂಟು ಜಾಯಿನ್," ಇವನು ಉತ್ತರಿಸಿದ.

ಇವನ ಉತ್ತರದಿಂದ ವಿಜಯಕುಮಾರನ ಮುಖದಲ್ಲಿ ದಷ್ಟನನ್ನು ಕಂಡಾಗ ಬ್ರಾಹ್ಮಣನಲ್ಲಿ ಹುಟ್ಟುವಂಥ ತಿರಸ್ಕಾರ ಮೂಡಿತು. ಕೇಳಿದ: "ಯು

ಡೋಂಟ್ ನೋ ದಿ ಮೀನಿಂಗ್ ಆಫ್ ಫ್ಯಾಗಿಂಗ್?"

ಅಮೆರಿಕನ್ ಮತ್ತು ಇತರ ಇಂಗ್ಲಿಷ್ ಸ್ಲ್ಯಾಂಗ್, ದಿಲ್ಲಿಯ ಹುಡುಗರಲ್ಲಿ ಮಾತ್ರವಲ್ಲ ಇಂಜಿನಿಯರಿಂಗ್ ಕಾಲೇಜಿನ ಹುಡುಗರಲ್ಲೂ ಪ್ರಚಲಿತವಿದೆ ಎಂಬುದು ಇವನಿಗೆ ಈಗ ಅರ್ಥವಾಯಿತು. "ಐ ನೋ ಓನ್ಲಿ ಇಟ್ಸ್ ಜನರಲ್ ಮೀನಿಂಗ್," ಎಂದ.

"ಬಾ, ನಾನು ಹೇಳಿಕೊಡ್ತೀನಿ. ಅದಕ್ಕಿಂತ ಮೊದಲು ನಿನಗೆ ನನ್ನ ಗೆಳೆಯನಾಗುವ ಇಚ್ಛೆ ಇದೆಯೋ ಮೊದಲು ಹೇಳು," ವಿಜಯಕುಮಾರ ರೆಡ್ಡಿ ಇಂಗ್ಲಿಷಿನಲ್ಲೇ ಮುಂದುವರೆಸಿದ. 'ಐ ವಾಂಟು,' ಇವನು ಉತ್ತರಿಸಿದ ನಂತರ, 'ಬಾ ನನ್ನ ರೂಮಿಗೆ ಹೋಗೋಣ," ಎಂದು ಬೆನ್ನು ತಟ್ಟಿ ಆಹ್ವಾನಿಸಿದ.

ಒಂಟಿತನ, ಗೆಳೆಯರಿಲ್ಲದೆ ಬೇಸರವಾಗುತ್ತಿದ್ದ ಇವನು ಅವನನ್ನು ಹಿಂಬಾಲಿಸಿದ. ಮೇಲಿನ ಅಂತಸ್ತಿನ ಕೊನೆಯ ಕೋಣೆಯ ಬೀಗ ತೆಗೆದ ಅವನು ಒಳಗೆ ಬಂದ ಅವನನ್ನು, 'ಸಿಟ್‌ಡೌನ್' ಎಂದು ಒಂದು ಕುರ್ಚಿ ತೋರಿಸಿದ. ಕೊನೆಯ ವರ್ಷದವರಿಗೆ ಒಂದು ಕೋಣೆಗೆ ಒಬ್ಬರೇ ಇರುವ ಸೌಲಭ್ಯ. ಕಿರಿಯ ವಿದ್ಯಾರ್ಥಿಗಳು ಇನ್ನೊಬ್ಬರೊಡನೆ ಹಂಚಿಕೊಳ್ಳಬೇಕೆಂದು ಇವನಿಗೆ ಮೊದಲೇ ಗೊತ್ತಿತ್ತು. ಇವನು ಕುಳಿತ ನಂತರ ಅವನು ಹೊರಗೆ ಹೋಗಿ ಇನ್ನು ಮೂವರು ಹುಡುಗರನ್ನು ಕರೆತಂದ. ಎಲ್ಲರೂ ಕೊನೆ ವರ್ಷದವರು. ವಿಜಯಕುಮಾರನೇ ಪರಿಚಯ ಹೇಳಿದ: ನಂಜುಂಡಪ್ಪ. ಅವನ ಕಾಲೇಜಿನ ಹೆಸರು ರೋಬೋಟ್; ಯಾಕೆಂದರೆ ಎಂಥ ಅಪಾಯದ ಯಂತ್ರದ ಮಧ್ಯದಲ್ಲಾದರೂ ನುಗ್ಗಿ ಕೆಲಸ ಮಾಡುವ ಏಕೈಕ ಧೈರ್ಯಶಾಲಿ ಅವನು. ರಂಗನಾಥ್; ಹೆಸರು ರಾಕೆಟ್; ಎಂದರೆ ಮೋಟರ್ ಬೈಕನ್ನು ರಾಕೆಟ್ ವೇಗದಲ್ಲಿ ಆಕಾಶದ ಕಡೆಗೆ ಓಡಿಸುವಂಥ ವೀರ. ಮೂರನೆಯವನು ಜಸ್‌ಬೀರ ಚೌಧುರಿ: ಹರಿಯಾಣದ ದೊಡ್ಡ ಜಮೀನುದಾರನ ಮಗ; ನಾಲ್ಕು ವರ್ಷದ ಹಿಂದೆಯೇ ಎರಡು ಲಕ್ಷ ಖರೀದಿ ಹಣ ಕೊಟ್ಟು, ಈ ಕಾಲೇಜಿಗೆ ಸೇರಿದವನು. ಎರಡು ಲಕ್ಷದಲ್ಲಿ ಸೀಟು ಕೊಡಿಸಿದ ಕಾಲೇಜು ಸಮಿತಿ

ಸದಸ್ಯನಿಗೆ ಒಂದೊಂದವರೆ ಲಕ್ಷ. ಕಾಲೇಜು ಫಂಡಿಗೆ ಐವತ್ತು ಸಾವಿರ. "ಚೌಧುರಿಯ ಹಾಗೆ ಫೇರ್ ಮಾಸ್ಟರ್," ಎಂದು ಪಿ.ಕೆ. ರೆಡ್ಡಿ ಹೇಳಿದಾಗ ಚೌಧುರಿ ಹೆಮ್ಮೆಯಿಂದ ಹುಬ್ಬು ಹಾರಿಸಿದ. ಫೇರ್, ಫೇರಿಂಗ್ ಎಂಬ ಶಬ್ದದ ಹೊಳಹು ಅನೂಪನಿಗೆ ಆಯಿತಾದರೂ ಸ್ಪಷ್ಟ ಅರ್ಥ ಇನ್ನೂ ಗ್ರಹಿಕೆಗೆ ಬರಲಿಲ್ಲ. ಆ ನಾಲ್ವರಲ್ಲಿ ಮೂವರು ರೆಡ್ಡಿಯ ಮಂಚದ ಮೇಲೆ ಕುಳಿತರು. ರೆಡ್ಡಿ ತನ್ನ ತಿರುಗುವ ಕುರ್ಚಿಯನ್ನು ಇತ್ತ ತಿರುಗಿಸಿ ಅಧ್ಯಕ್ಷ ಪೀಠದಲ್ಲಿ ಕೂರುವವನ ಧಿಮಾಕಿನಲ್ಲಿ ಕುಳಿತು ಮೂಲೆಯಲ್ಲಿ ಒರಗಿಸಿಟ್ಟಿದ್ದ ಒಂದು ಕಬ್ಬಿಣದ ಮಡಿಸುವ ಕುರ್ಚಿಯ ಕಡೆಗೆ ಕೈ ತೋರಿಸಿ, 'ಅದನ್ನು ಹಾಕಿಕೊಂಡು ಕೂತುಕೋ,' ಎಂದು ಅನೂಪನಿಗೆ ಆದೇಶವಿತ್ತ. ಕುರ್ಚಿ ಎತ್ತಿ ಇವರೆಲ್ಲರಿಗಿಂತ ತುಸು ಗೌರವದ ದೂರದಲ್ಲಿ ಹಾಕಿಕೊಂಡು ಕುಳಿತ. ಮುಂದೆ ಮಾತಾಡಲು ತಿಳಿಯಲಿಲ್ಲ. ಅವರಿಗೂ ಹೇಗೆ ಮಾತು ಆರಂಭಿಸುವುದೆಂದು ತಿಳಿಯದೆ ಮುಜುಗರವಾಗುತ್ತಿತ್ತು.

ಅಷ್ಟರಲ್ಲಿ ಪೋಲೀಸ್ ಇನ್ಸ್‌ಪೆಕ್ಟರನ ಗತ್ತಿನಲ್ಲಿ ಜಸಬೀರ ಚೌಧುರಿ ಕೇಳಿದ: "ಅಂತೂ ನೀನು ನಮ್ಮ ಸ್ನೇಹಿತನಾಗುಕ್ಕೆ ಒಪ್ಪಿದೀಯಾ?" ಅನೂಪನಿಗೆ ಈ ಪ್ರಶ್ನೆಯ ಅರ್ಥವಾಗಲಿಲ್ಲ. ಸುಮ್ಮನೆ ಇವನ ಮುಖ ನೋಡಿದ. ಚೌಧುರಿಯೇ ವಿವರಿಸಿ ಹೇಳುವವನಂತೆ, "ನಾವು ಈ ನಾಲ್ಕು ಜನದ್ದೇ ಒಂದು ಒಗ್ಗಟ್ಟಿನ ಕೂಟ. ಇದರೊಳಗೆ ಪ್ರವೇಶಿಸುವ ಅವಕಾಶವನ್ನ ಬೇರೆ ಯಾರಿಗೂ ಇದುವರೆಗೆ ಕೊಟ್ಟಿಲ್ಲ. ಮಹಾರಾಜನ ಮಗನಿರಲಿ, ಬ್ರಿಟಿಷ್ ರಾಣಿಯ ಕುಟುಂಬದವನಿರಲಿ, ಯಾರಿಗೂ ಕೊಟ್ಟಿಲ್ಲ. ನಿನಗೆ ಕೊಡಬೇಕು ಅಂತ ತೀರ್ಮಾನಿಸಿದೀವಿ. ಅರ್ಥವಾಯಿತೊ?" ಅನೂಪ ಅರ್ಥವಾಯಿತು ಅನ್ನುವವನ ಹಾಗೆ ಕತ್ತು ಅಲುಗಿಸಿದ. "ಹಾಗಾದರೆ ಎದ್ದು ಹತ್ತಿರ ಬಂದು ಎಲ್ಲರ ಕೈ ಮುಟ್ಟಿ ಹೇಳು," ಎಂಬ ಚೌಧುರಿಯ ಆದೇಶಕ್ಕೆ ಅವನು ಸಂಕೋಚದಿಂದ ಕುಳಿತಲ್ಲಿಯೇ ಕೂತಿದ್ದ.

"ಯಾಕೆ ಸಂಕೋಚ? ನಮ್ಮ ಸ್ನೇಹಿತನಾಗಿರುಕ್ಕೆ, ಐ ಮೀನ್ ಪ್ರಿಯ ಸ್ನೇಹಿತನಾಗಿರುಕ್ಕೆ ನಿನಗೆ ಸಂಕೋಚವೇ?" ಅಧ್ಯಕ್ಷ ಪೀಠದಲ್ಲಿದ್ದ

ರೆಡ್ಡಿ ಬಾಯಿತೆಗೆದ. ಅನೂಪ ಎದ್ದು ಬಂದು ಮೊದಲು ರೆಡ್ಡಿಯ ಮುಂದೆ
ನಿಂತು ಅವನ ಕೈ ಹಿಡಿದು, ಐ ವಿಲ್ ಬಿ ಯುವರ್ ಫ್ರೆಂಡ್ ಆಲ್‌ವೇಸ್
ಎಂದು ಹೇಳಿದ. ಅನಂತರ ಫೈರ್ ಮಾಸ್ಟರ್ ಚೌಧುರಿಯ ದಪ್ಪ ಲಂಪ
ಹಸ್ತವನ್ನು ಹಿಡಿದು ಅದನ್ನೇ ಹೇಳಿದ ನಂತರ ರಾಕೆಟ್ ರಂಗನಾಥ ಮತ್ತು
ರೋಬೋಟ್ ನಂಜುಂಡಪ್ಪರುಗಳ ಕೈಗಳನ್ನೂ ಒಂದೊಂದಾಗಿ ಮುಟ್ಟಿ
ಉಚ್ಚರಿಸಿದ.

ವಿಧಿವತ್ತಾಗಿ ಮಂತ್ರೋಚ್ಚಾರಣೆಯಾದ ನಂತರ ಸ್ನೇಹಬಂಧನವ
ಸಂಪೂರ್ಣವಾಯಿತೆಂಬಂತೆ ಅವರೆಲ್ಲ ಎದ್ದು ನಿಂತು ಇವನ ಹತ್ತಿರ ಬಂದ
ಸುತ್ತ ನಿಂತು ಒಟ್ಟಿಗೆ ಆಲಿಂಗಿಸಿಕೊಂಡು, "ಗುಡ್ ಗುಡ್ ಅವರ್ ಫ್ರೆಂಡ್
ಗುಡ್ ಗುಡ್ ಅವರ್ ಫ್ರೆಂಡ್....." ಎಂದು ನಾಲ್ಕು ಸಲ ತಾಳಬದ್ಧವಾಗಿ
ನುಡಿದ ನಂತರ ಅವರವರ ಜಾಗಕ್ಕೆ ಹಿಂತಿರುಗಿದರು.

ಚೌಧುರಿ, "ಟೇಕ್ ಯುವರ್ ಸೀಟ್" ಎಂದ. ಇವನು ತನ
ಕಬ್ಬಿಣದ ಕುರ್ಚಿಗೆ ಹಿಂತಿರುಗಿದ ನಂತರ, 'ಹಾಗಲ್ಲ, ಆ ಕುರ್ಚಿಯನ
ಇಲ್ಲಿ ಹತ್ತಿರಕ್ಕೆ ತಂದು ಹಾಕಿ ಕೂತುಕೊ. ಸ್ನೇಹಿತನಾದ ಮೇಲೆ ದೂ
ಕೂರಬಾರದು" ಎಂದ. ಅವನು ಸ್ನೇಹಲಾಭದ ಧನ್ಯತೆಯಿಂದ ತನ
ಕುರ್ಚಿಯನ್ನು ತಂದು ಮಂಚದ ಹತ್ತಿರಕ್ಕೆ ಹಾಕಿದ ಮೇಲೆ ಮಂಚ
ಮೇಲಿದ್ದ ಮೂವರಲ್ಲಿ ನಡುವೆ ಕೂತಿದ್ದ ರೋಬೋಟ್ ನಂಜುಂಡಪ
ಮೇಲೆದ್ದು, ಆ ಕುರ್ಚಿಯ ಮೇಲೆ ಕೂತು "ನೀನು ಇಲ್ಲಿ ಬಾ" ಎಂದ
ಮಂಚ ತೋರಿಸಿದ. ಎಡಪಕ್ಕಕ್ಕೆ ರಾಕೆಟ್ ರಂಗನಾಥ ನಡುವೆ ಅನೂಪ
ಬಲಕ್ಕೆ ಫೈರ್ ಮಾಸ್ಟರ್ ಚೌಧುರಿ, ಅನೂಪನ ಎದುರಿಗೆ ಮಂ
ತಗುಲವಷ್ಟು ಹತ್ತಿರದಲ್ಲಿ ರೋಬೋಟ್ ನಂಜುಂಡಪ್ಪ ಕುಳಿತರು
ನಂಜುಂಡಪ್ಪನ ಎಡಭುಜಕ್ಕೆ ಅರ್ಧ ಅಡಿ ದೂರದಲ್ಲಿ ಅಧ್ಯಕ
ಸ್ಪೀಡ್‌ಕಿಂಗ್ ರೆಡ್ಡಿ. ಈಗ ಚೌಧುರಿ ಕೇಳಿದ: "ಒಂದು ತಪ್ಪಾಗಿದ
ನಿನ್ನನ್ನ ಫ್ರೆಂಡ್ ಅಂತ ಅಡ್ಮಿಟ್ ಮಾಡಿಕೊಂಡ ಮೇಲೆ ಅಲ್ಲ ಅ
ಹೊರ ಹಾಕುಕ್ಕೂ ಆಗುಲ್ಲ. ಆದರೆ ಪರೀಕ್ಷೆ ಮಾಡದೆ ಅಡ್ಮಿಟ
ಮಾಡೂದು ನಿಯಮಕ್ಕೆ ವಿರೋಧ. ಈಗ ಏನು ಮಾಡೂದು?

ಅನೂಪನಿಗೆ ಅರ್ಥವಾಗಲಿಲ್ಲ. ಪೆಚ್ಚಾಗಿ ಇವನ ಮುಖ ನೋಡಿದ. "ಏನು ಮಾಡೋದು?" ಗಹನವಾದ ಸಮಸ್ಯೆಗೆ ಪರಿಹಾರ ಕೇಳುವವನಂತೆ ಚೌಧುರಿ ರೆಡ್ಡಿಯ ಅಭಿಮತ ಕೇಳಿದ. "ಸ್ಪೀಡ್‌ಕಿಂಗ್ ಹೇಳಿದಂತೆ. ಅವನದೇ ಕೊನೇ ತೀರ್ಮಾನ," ಉಳಿದಿಬ್ಬರು ಒಕ್ಕೊರಲಿನಲ್ಲಿ ಹೇಳಿದರು. "ನೀನೇನಂತೀಯ?" ಚೌಧುರಿ ಅನೂಪನನ್ನು ಕೇಳಿದ.

"ಯಾವುದನ್ನ?" ಇವನಿಗೆ ಅರ್ಥವಾಗಲಿಲ್ಲ.

"ಯಾವುದನ್ನ ಅಂದರೆ ಸ್ಪೀಡ್‌ಕಿಂಗ್‌ನದೇ ಕೊನೆ ತೀರ್ಮಾನ ಅನ್ನೋದನ್ನ. ಯಾಕೆಂದರೆ ಅವನೇ ನಮ್ಮ ಲೀಡರ್. ಲೀಡರ್ ಮಾತು ಕೊನೇದು ಅಂತ ಒಪ್ಪುತೀಯೋ ಇಲ್ಲವೊ?"

"ಯಾವ ವಿಷಯಕ್ಕೆ?" ಗೊಂದಲದಲ್ಲಿ ಬಿದ್ದ ಅನೂಪ ಸ್ಪಷ್ಟೀಕರಣ ಕೇಳಿದ.

ಚೌಧುರಿ ಗದ್ದರಿಕೆಯ ಧ್ವನಿಯನ್ನು ಮಿಶ್ರಮಾಡಿ ಹೇಳಿದ: "ಲೀಡರ್ ಅಂತ ಒಪ್ಪಿಕೊಂಡ ಮೇಲೆ ಹೀಗೆ ಧಿಕ್ಕಾರದ ಪ್ರಶ್ನೆ ಕೇಳಕೂಡದು. ಲೀಡರ್ ಏನು ಹೇಳ್ತಾನೆ, ಅವನ ಮನಸ್ಸು ಹೇಗೆ ಯಾವ ವಿಷಯದಲ್ಲಿ ಯಾವ ದಿಕ್ಕಿನಲ್ಲಿ ಕೆಲಸ ಮಾಡುತ್ತೆ ಅನ್ನೋದ ಬಾಯಿಬಿಟ್ಟು ಕೇಳದೆಯೇ ಅರ್ಥಮಾಡಿಕೊಳ್ಳೋದು ಒಗ್ಗಟ್ಟಿನ ಲಕ್ಷಣ. ನೀನು ಒಪ್ಪುತೀಯೋ ಇಲ್ಲವೊ?"

ಅನೂಪನಿಗೆ ಇನ್ನೂ ಗೊಂದಲ ಹೋಗಲಿಲ್ಲ. ಉತ್ತರವೂ ಹೊಳೆಯಲಿಲ್ಲ. ತೀರ್ಮಾನವಾಗಬೇಕಾದ ಅಂಶವೇ ತಿಳಿಯದಿರುವಾಗ ಒಪ್ಪಿಗೆ ಕೊಡುವುದರಲ್ಲಿ ಏನರ್ಥವುಂಟು? ಯಾವ ನ್ಯಾಯವುಂಟು? ಎಂಬ ಜಿಜ್ಞಾಸೆಯಲ್ಲಿ ಅವನ ಬುದ್ಧಿ ತೊಡಗಿದ್ದಾಗ ಲೀಡರ್ ರೆಡ್ಡಿ, "ನನಗೇನೂ ಅನುಮಾನವಿಲ್ಲ. ಆದರೂ ವಸ್ತುನಿಷ್ಠೆ, ಸತ್ಯನಿಷ್ಠೆಯ ಅಗತ್ಯಗಳನ್ನು ಪೂರೈಸಬೇಕಾಗಿರುವುದರಿಂದ ಪರೀಕ್ಷೆ ಮಾಡಿಬಿಡಿ." ಎಂದು ತೀರ್ಪು ಹೇಳಿದ.

ಯಾವುದನ್ನು ಪರೀಕ್ಷೆ ಮಾಡಬೇಕೆಂದು ತಿಳಿಯದ ಅನೂಪ ಇನ್ನೂ ಗೊಂದಲದಲ್ಲಿ ಮುಳುಗಿದ್ದಾಗ ಚೌಧುರಿ ತನ್ನ ಕೊಬ್ಬಿದ

ಎಡಗೈಯನ್ನು ಇವನ ಹೆಗಲ ಮೇಲಿಟ್ಟು ವಿವರಿಸಿದ: "ನಮ್ಮದು ವೀ
ಗುಂಪು, ಗಂಡಸರ ಗುಂಪು ಅಂತ ನಿನಗೇ ಗೊತ್ತಿದೆ. ಸ್ಪೀಡ್ ಕಿಂ
ರೋಬೋಟ್, ರಾಕೆಟ್, ಫೈರ್ ಮಾಸ್ಟರ್. ಅವರ ಜೊತೆ ಸೇರಿ ನೀ
ಅಂಥ ಒಂದು ಗಂಡು ಬಿರುದು ಗಳಿಸಬೇಕಾದರೆ ನೀನು ಗಂಡಸು ಅ
ಮೊದಲು ಸಾಬೀತಾಗಬೇಕು. ಹೆಂಗಸರಿಗೆ, ಹಿಜಡಾಗಳಿಗೆ ಇ
ಪ್ರವೇಶವಿಲ್ಲ. ನೀನು ಹೆಂಗಸಲ್ಲ ಅಂತ ಮುಖಚಪರೆ, ಎದೆಕೂ
ಎಳೆಗಡ್ಡ ಮೀಸೆ ತೋರಿಸುತ್ತವೆ. ಆದರೆ ಹಿಜಡಾ ಅಲ್ಲ ಅಂತ ಸಾಬಿ
ಮಾಡೂದು ನಿನ್ನ ಜವಾಬ್ದಾರಿ. ಆದ್ದರಿಂದ ನಿನ್ನ ಪ್ಯಾಂಟು ಚಡ್ಡಿ ಬ
ತೋರಿಸಿ ಪ್ರೂವ್ ಮಾಡಿಬಿಡು."

ಅನೂಪನಿಗೆ ಸಂದಿಗ್ಧಕ್ಕೆ ಸಿಕ್ಕಿದಂತಾಯಿತು. ಇವರು ರ‍್ಯಾಗಿಂ
ಮಾಡುವವರು, ಹಿರಿಯ ವಿದ್ಯಾರ್ಥಿಗಳು ಕಿರಿಯರಿಗೆ ರ‍್ಯಾಗಿಂ
ಹೆಸರಿನಲ್ಲಿ ಹಿಂಸೆ ಅವಮಾನಗಳನ್ನು ಮಾಡುತಾರೆಂದು ಅವನು ಕೇಳಿ
ಆದರೆ ಅದು ತನ್ನ ಹಾಸ್ಟೆಲಿನಲ್ಲಿಯೇ, ತನಗೇ ಆಗುತ್ತದೆಂ
ಕಲ್ಪಿಸಿಕೊಳ್ಳುವುದೂ ಸಾಧ್ಯವಿರಲಿಲ್ಲ. ತಾನು ಈಗಾಗಲೇ ಈ ನಾಲ್
ಪುಂಡ ದಡಿಯರ ಕೈಗೆ ಸಿಕ್ಕಿಕೊಂಡಿದ್ದೇನೆಂಬ ಅರಿವಾಯಿತು. ಹೇಗಾದ
ಮಾಡಿ ತಪ್ಪಿಸಿಕೊಳ್ಳಬೇಕೆಂದು ಅವನ ಮನಸ್ಸು ನಿಶ್ಚಯಿಸಿತು. ಇವ
ಕೈಕೊಟ್ಟು ಬಾಗಿಲು ತೆಗೆದುಕೊಂಡು ಓಡಿ ಬಿಡುವುದೊಂದೇ ಉಪಾ
ತಾನು ಎಷ್ಟೇ ಶಕ್ತಿವಂತನಾಗಿದ್ದರೂ ಈ ನಾಲ್ಕು ಜನರೂ ತನಗ
ನಾಲ್ಕು ವರ್ಷಕ್ಕೆ ದೊಡ್ಡವರು. ಅಲ್ಲದೆ ಒಟ್ಟಿನಲ್ಲಿ ನಾಲ್ಕು ಜನರಿದ
ಎಂಬ ಅರಿವೂ ಮೂಡಿತು. ಕೂತಿದ್ದವನು ದಢಕ್ಕನೆ ಎದ್ದು ಬಾ
ಕಡೆಗೆ ಹಾರಿದ. ಅವನು ಹಾಗೆ ಹಾರುತ್ತಾನೆಂದು ನಿರೀಕ್ಷಿಸಿ
ಎಚ್ಚರದಿಂದ ಕಾಯುತ್ತಿದ್ದ ಅವರು ಮೂವರೂ ಏಕಕಾಲದಲ್ಲಿ ಅ
ಮೇಲೆ ನೆಗೆದು ಒಟ್ಟಿಗೆ ತಬ್ಬಿ ಹಿಡಿದು ಮಂಚದ ಮೇಲಕ್ಕೆ ಎಳೆತ
ಕುಕ್ಕರಿಸಿದರು. ರೊಬೋಟ್ ನಂಜುಂಡಪ್ಪ ಬಾಗಿಲಿನ ಬೋಲ್ಟ್ ಹಾ
ಫೈರ್‌ಮಾಸ್ಟರ್ ಚೌಧುರಿ ತನ್ನ ಕೊಬ್ಬಿದ ಕೈನಿಂದ ಅನೂಪನ ಶರ
ಎದೆಯ ಭಾಗವನ್ನು ಹಿಡಿದು ತಿರುಚಿ ಹಿಂದಿ ಸಿನಿಮಾದಲ್ಲಿ ಖಳನಾ
ಡಾಕೂ ಮಾತನಾಡುವ ಶೈಲಿಯಲ್ಲಿ ಪಿಸುಗುಟ್ಟಿದ: "ನೀನೇನಾದ

ಅರಚಿ ಕಿರುಚಿ ಮಾಡಿದರೆ ಉಸಿರು ಹೊರಕ್ಕೆ ಬರದ ಹಾಗೆ ಇಲ್ಲಿ ನೋಡು, ಹೀಗೆ, ಕುತ್ತಿಗೆ ಹಿಸುಕಿಬಿಡ್ತೀನಿ. ನಮ್ಮ ಗುಂಪಿಗೆ ನೀನು ಅಡ್ಮಿಟ್ ಆದ ಮೇಲೆ ಅದರ ರೂಲ್ಸ್‌ನಂತೆ ನಡೆಯಬೇಕು. ಕದ್ದು ಓಡಿಹೋಗೂದು ಗಂಡಸಿನ ಲಕ್ಷಣವಲ್ಲ. ಗಂಡಸು ಅಂತ ಸುಳ್ಳು ಹೇಳಿ ಗುಂಪಿಗೆ ನಿಷ್ಠೆಯ ವಚನ ಕೊಟ್ಟಿದೀಯ. ಕದ್ದು ಓಡಿ ಹಿಜಡಾ ಅಂತ ಸಾಬೀತು ಮಾಡಿದೀಯ. ಹಿಜಡಾ ಅಲ್ಲ ಅಂತ ಪ್ರೂವ್ ಮಾಡಿ ತೋರಿಸದಿದ್ದರೆ ನಿನಗೇನಾಗುತ್ತೆ ಗೊತ್ತಾ?"

ಅರ್ಧ ಉಸಿರು ಕಟ್ಟಿ ಜೀವವು ಕುತ್ತಿಗೆಯೊಳಗೆ ಸಿಕ್ಕಿಹಾಕಿಕೊಳ್ಳುವಂತೆ ಅವನು ತನ್ನ ಶರಟಿನ ಕಾಲರನ್ನು ತಿರುಚಿ ಹಿಡಿದ ರೀತಿಗೆ ಅನೂಪನ ಧೃತಿ ಉಡುಗುತ್ತಿತ್ತು. ಬಲಮುಷ್ಟಿಯನ್ನು ಬಿಗಿ ಮಾಡಿ ಚೌಧುರಿಯ ಹಲ್ಲುಗಳ ಮೇಲೆ ಖಟ್ ಎಂದು ಗುದ್ದುವ ಆಲೋಚನೆ ಅವನ ಮನಸ್ಸಿನೊಳಗೆ ಹಾದು ಹೋಯಿತು. ಅದನ್ನು ತಕ್ಷಣ ಅರ್ಥಮಾಡಿಕೊಂಡವನಂತೆ ಚೌಧುರಿ ಶರಟನ್ನು ಇನ್ನೊಂದು ಸುತ್ತು ತಿರುಗಿಸಿ ಬಿಗಿ ಮಾಡಿದ. ಅನೂಪನಿಗೆ ಏದುಸಿರು ಬರತೊಡಗಿ ಬುದ್ಧಿ ಮಂಕಾಯಿತು. ಚೌಧುರಿ ಶರಟಿನ ಹಿಡಿತವನ್ನು ವಾಪಾಸು ತಿರುಗಿಸಿ ಅಳ್ಳಕ ಮಾಡಿ ಅವನು ಸರಿಯಾಗಿ ಉಸಿರಾಡಲು ಅನುವು ಮಾಡಿಕೊಟ್ಟ. ಹತ್ತು ಹನ್ನೆರಡು ಬಾರಿ ದೀರ್ಘ ಉಸಿರಾಡಿದ ಮೇಲೆ ಬುದ್ಧಿ ತುಸು ತಿಳಿಯಾಯಿತು. ಇವರಿಂದ ಬಿಡಿಸಿಕೊಂಡು ಹೋಗಲು ಸಾಧ್ಯವಿಲ್ಲ. ಈ ಗೂಂಡಾಗಿರಿಯನ್ನು ಅನುಭವಿಸಿಯೇ ತೀರಬೇಕು ಎಂಬ ವಾಸ್ತವತೆ ಅರಿವಿಗೆ ಬರತೊಡಗಿತು. ಅಷ್ಟರಲ್ಲಿ ಅಧ್ಯಕ್ಷಸ್ಥಾನದ ರೆಡ್ಡಿ ಕೇಳಿದ: "ಲೇ, ಈಗ ನಿನಗೊಂದು ಅವಕಾಶ ಕೊಟ್ಟಿದೀವಿ. ನೀನೇ ಪ್ಯಾಂಟು ನಿಕ್ಕರು ಕಳಚಿ ತೋರುಸ್ತೀಯೋ ಅಥವಾ ಬ್ಲೇಡಿನಲ್ಲಿ ಹರಿದು ಬಿಸಾಕೋಣವೊ? ಆಮೇಲೆ ವಾಪಾಸು ನಿನ್ನ ರೂಮಿಗೆ ಬುಂಡಗೆ ಹೋಗಬೇಕಾಯ್ತದೆ."

ಅನೂಪ ಸುಮ್ಮನೆ [illegible]ತಿದ್ದ. ಎರಡು ನಿಮಿಷ ಸಮಯ ಕೊಡುವಂತೆ ಕಾದ ಚೌಧುರಿ ಅನಂತರ ಅವನನ್ನು ಎತ್ತಿ ನಿಲ್ಲಿಸಿದ. ಲೋಬೋಲೋಟ್ ನಂಜುಂಡಪ್ಪ ರ್‍ಯಾಕೆಟ್ ರಂಗನಾಥರು ಅವನ ಸೊಂಟಕ್ಕೆ

ಕೈ ಹಾಕಿ ಬೆಲ್ಟು, ಗುಂಡಿ, ಕೊಂಡಿ ತೆಗೆದು ಪ್ಯಾಂಟು ನಿಕ್ಕರುಗಳನ್ ಕೆಳಗೆಳೆದು ಬೆತ್ತಲೆ ಮಾಡಿಬಿಟ್ಟರು. ಅನೂಪ ನಾಚಿಕೆಯಿಂದ ಕಣ್ ಮುಚ್ಚಿಕೊಂಡ.

"ಈಗ ಇವನನ್ನು ಗಂಡಸು ಅಂತ ತೀರ್ಮಾನಿಸಬೇಕೋ? ಹಿಜರ ಅಂತ ತೀರ್ಮಾನಿಸಬೇಕೊ?" ಸ್ಪೀಡ್‌ಕಿಂಗ್ ರೆಡ್ಡಿ ಕೇಳಿದ.

"ಕಣ್ಣು ಮುಚ್ಚಿಕೊಂಡಿದಾನೆ. ಆದ್ದರಿಂದ ಹಿಜಡಾ, ಗಂಡಸಂತ ಅಲ್ಲ," ರಾಕೆಟ್ ರಂಗನಾಥ ಉತ್ತರಿಸಿದ.

"ಇವನನ್ನು ಪೂರ್ತಿ ಬರಿಮೈ ಮಾಡಿ ಹಾಸ್ಟೆಲಿನ ಕಾರಿಡಾರಿನಲ್ಲ ಮೂರು ಸುತ್ತು ತಿರುಗಾಡಿಸೋಣ. ಬೆಲ್ ಹೊಡೆದು ಎಲ್ಲ ಹುಡುಗರನ ಹೊರಗೆ ಕರೆಯೋಣ." ರೆಡ್ಡಿ ಸೂಚಿಸಿದ.

ಅನೂಪನಿಗೆ ಜೀವ ಹೋಗುವಂತಾಯಿತು. "ಬೇಡ, ಬೇ ಪ್ಲೀಸ್, ಪ್ಲೀಸ್, ಫಾರ್ ಗಾಡ್ಸ್ ಸೇಕ್ ಪ್ಲೀಸ್" ಎಂದ ಅಂಗಲಾಚಿಕೊಂಡ. ಉಸಿರು ಅರ್ಧಕ್ಕೆ ಹಿಡಿದು ಗಂಟ ಹೂತುಕೊಂಡಿತು.

"ಬರೀ ಮೈಲಿ ಕಾರಿಡಾರ್ ಒಂದು ರೌಂಡ್ ಹಾಕು ಅಂದರೆ ಜೀ ಹೋಗೋನ ಹಂಗೆ ಆಡ್ತಾನೆ. ಇವನು ನಿಜವಾಗಿಯೂ ಗಂಡಸ ಗಂಡಸಾದರೆ ಯಾಕೆ ಹೆದರಬೇಕು?" ರೋಬೋಟ್ ನಂಜುಂಡಪ್ಪ ಕೇಳಿ

"ಹಂಗಾದರೆ ನೀವೆಲ್ಲ ಬರಿಮೈಲಿ ಒಂದು ಸುತ್ತು ನಡೆದು ಬನ್ನಿ ಅನೂಪ ಪ್ರತಿಯಾಗಿ ಕೇಳಿದ.

"ಏಯ್, ಗಂಡಸುತನ ಪ್ರೂವ್ ಮಾಡುಕ್ಕೆ ನಾವೇನು ಫ ಇಯರ್ ಹುಡುಗರಲ್ಲ. ನಾವು ಕೊನೆ ವರ್ಷದೋರು. ನ ಗಂಡಸುತನಾನ ಮೊದಲನೆ ವರ್ಷದಲ್ಲೇ ಪ್ರೂವ್ ಮಾಡಿ ಈ ಕಾಲೇಜಿ ಶಕ್ತಿವಂತರು ಅನ್ನಿಸಿಕೊಂಡಿದೀವಿ. ನಾಯಕರಾಗಿದೀವಿ. ನೀನು ಓದಿ ಸ್ಕೂಲಿನಲ್ಲಿ ನೀನು ನಾಯಕನಾಗಿದ್ದೆಯಂತೆ. ಹಾಗಂತ ನಿ ಸರ್ಟಿಫಿಕೇಟಿನಲ್ಲಿದೆ. ನೀನಿಲ್ಲಿ ನಾಯಕನಾಗುತೀಯೊ? ಕುರಿ ಹಂಗೆ ಬಗ್ಗಿಸಿಕೊಂಡು ಕ್ಲಾಸಿಗೆ ಬಂದು ಕತ್ತು ಬಗ್ಗಿಸಿ ಎದ್ದು ಹೋಗ್ತೀಯೆ

ನಾಯಕನಾಗಬೇಕಂತ ಇದ್ದರೆ ನಾವು ಹೇಳಿದ ಹಾಗೆ ಕೇಳು. ನಾವು ಹೇಳಿದೋರಲ್ಲದೆ ಬೇರೆ ಯಾವನೂ ಯಾವ ಕ್ಲಾಸಿನಲ್ಲೂ ಲೀಡರ್ ಆಗುಕ್ಕೆ ಸಾಧ್ಯವೇ ಇಲ್ಲ," ರೆಡ್ಡಿ ತಮ್ಮ ಅಧಿಕಾರದ ಪೂರ್ಣ ಚಿತ್ರವನ್ನು ಮುಂದಿಟ್ಟ. ಅನೂಪನಿಗೆ ಯಾವುದೂ ಸರಿಯಾಗಿ ಅರ್ಥವಾಗಲಿಲ್ಲ. ಅಷ್ಟರಲ್ಲಿ ಸಂಕೋಚ ನಾಚಿಕೆಗಳ ಪ್ರಥಮ ಹಂತದಲ್ಲಿ ಆಗುವ ಸಾಂದ್ರತೆಯು ಕಳೆದು ತಾನು ನಿಂತ ಸೊಂಟದಲ್ಲಿ ಉಂಟಾದ ನೋವನ್ನು ಹೋಗಲಾಡಿಸಿಕೊಳ್ಳಲು ಶರೀರವೇ ಸೆಟೆದು ನಿಂತಿತ್ತು. ಅದನ್ನು ಗಮನಿಸಿದ ರೆಡ್ಡಿ ರಿಯಾಯ್ತಿ ಕೊಟ್ಟವನಂತೆ ಹೇಳಿದ: "ಆಲ್‌ರೈಟ್, ಇವನು ನಮ್ಮ ಸ್ನೇಹಿತನಾದ್ದರಿಂದ ಬೆತ್ತಲೆ ಮೆರವಣಿಗೆಯ ವಿಧಿಯನ್ನ ಕೈ ಬಿಡೋಣ. ನಾಳೆ ಸಂಜೆ ನಾವು ನಾಲ್ಕು ಜನಕ್ಕೂ ರೆಕ್ಸ್‌ನಲ್ಲಿ ಸ್ಕಾಚ್ ಪಾರ್ಟಿ ಚಿಕನ್ ಊಟ ಕೊಡಿಸಿಬಿಟ್ಟರೆ ಸಾಕು. ಕೊಡಿಸೂದು ಅಂದರೆ ನೀನೂ ತಗೋಬೇಕು. ಹೇಳಿಬಿಡು. ಒಪ್ಪಿಕೊಂಡರೆ ಈಗಲೇ ಚಡ್ಡಿ ಪ್ಯಾಂಟು ಹಾಕಿಕೊಳ್ಳುಕ್ಕೆ ಅನುಮತಿ ಕೊಡ್ತೀವಿ."

"ಆಗಲಿ ಕೊಡುಸ್ತೀನಿ," ಅನೂಪ ತಕ್ಷಣ ಒಪ್ಪಿಕೊಂಡ.

"ಈಗ ಒಪ್ಪಿ ನಾಳೆ ಕೊಡಿಸುಲ್ಲ ಅಂತ ಸುಳ್ಳು ಹೇಳಿದರೆ ಏನಾಗುತ್ತೆ ಗೊತ್ತಾ?" ಚೌಧುರಿ ಡಾಕೂ ಧ್ವನಿಯಲ್ಲಿ ಕೇಳಿದ.

"ನಾನು ಆಡಿದ ಮಾತಿಗೆ ಯಾವತ್ತೂ ತಪ್ಪುಲ್ಲ," ಇವನು ಹೇಳಿದ ಮೇಲೆ ಅವರು ಬಟ್ಟೆ ಕೊಟ್ಟರು. ಅವನ್ನು ತೊಟ್ಟುಕೊಂಡ ಮೇಲೆ ಅವನು ಹೊರಟ.

"ಫ್ರೆಂಡ್ ಅಂತೀಯ. ಬಟ್ಟೆ ಕೊಟ್ಟ ತಕ್ಷಣ ಹೊರಟು ಬಿಡ್ತೀಯ. ಸಿಟ್ ಡೌನ್, ಹೋಗೂವಂತೆ." ರಾಕೆಟ್ ಹೇಳಿದ.

"ನನ್ನ ರೂಮ್ ಮೇಟ್ ಸಿನಿಮಾಕ್ಕೆ ಹೋಗಬೇಕು ಅಂತಿದ್ದ. ಅವನು ಬೀಗದ ಕೈ ತಗಂಡು ಹೋದರೆ ನನಗೆ ನಡುರಾತ್ರಿ ಎರಡು ಗಂಟೆ ವರೆಗೆ ಕಷ್ಟವಾಗುತ್ತೆ. ನಾಳೆ ಸಂಜೆ ನಿಮಗೆಲ್ಲ ಪಾರ್ಟಿಗೆ ಆಮಂತ್ರಣ. ಎಷ್ಟು ಬೇಕಾದರೂ ಕುಡೀಬಹುದು. ವಾಪಾಸು ಬರುಕ್ಕೆ ಟ್ರೈ ಮಾಡುಸ್ತೀನಿ," ಇವನು ಹೇಳಿದ ತಕ್ಷಣ ಅವರು ನಾಲ್ವರಿಗೂ

ಖುಷಿಯಾಯಿತು.

"ತುಮ್ ಬಹುತ್ ದಿಲ್‌ದಾರ್ ಹೊ ಯಾರ್," ಎಂದು ಚೌಧುರಿ ಅವನ ಕೆನ್ನೆ ಸವರಿ ತನ್ನ ಬೆರಳುಗಳಿಗೆ ಮುತ್ತಿಟ್ಟುಕೊಂಡ.

ವಾಸ್ತವವಾಗಿ ಅವನ ಕೋಣೆಯ ಬೀಗಕ್ಕೆ ಎರಡು ಕೈಗಳಿದ್ದು ಒಂದು ಅವನ ಜೇಬಿನಲ್ಲೇ ಇತ್ತು. ಕೋಣೆಗೆ ಹೋದರೆ ಅವನ ಸಹವಾಸಿ ಕಾಂತರಾಜುವಿನ ಮುಖ ಕಣ್ಣುಗಳು ಊದಿ ಕೆಂಪಾಗಿದ್ದವು. "ಯಾಕೊ ಹೀಗಿದೀಯ?" ಎಂದು ಇವನು ಕೇಳಿದ್ದೇ ತಡ ಅವನ ಕಣ್ಣಂಗಳದಲ್ಲಿ ನೀರು ತುಂಬಿಕೊಂಡಿತು. "ಯಾಕೆ ಅಳ್ತಿ, ಏನಾಯಿತು ಹೇಳೋ," ಎಂದು ಇವನು ಭುಜ ತಟ್ಟಿ ಸಮಾಧಾನ ಮಾಡಿ ಕೇಳಿದ ಮೇಲೆ, ಥರ್ಡ್ ಇಯರ್ ಸೂಳೆ ಮಕ್ಕಳು, ಎರಡನೆ ಮಹಡಿ ಇಪತ್ತಾರನೆ ರೂಮಿಗೆ ಉಪಾಯವಾಗಿ ಕರಕಂಡು ಹೋಗಿ ನನ್ನ ಬಟ್ಟೆ ಬಿಚ್ಚಿಸಿ ಅವಮಾನ ಮಾಡಿದರು. ಒಟ್ಟು ಆರು ಜನ, ಎಂದು ಬಿಕ್ಕಳಿಸಿದ. ಇವತ್ತು ಮೊದಲನೆ ವರ್ಷದ ಎಲ್ಲರಿಗೂ ರ್‍ಯಾಗ್ ಮಾಡಿದಾರೆ ಎಂದು ಅನೂಪನಿಗೆ ಅರ್ಥವಾಯಿತು.

"ಬಾ ನನ್ನ ಜೊತೆ. ಟೆಲಿಫೋನ್ ಎಕ್ಸ್‌ಛೇಂಜಿಗೆ ಹೋಗಿ ನನ್ನ ತಂದೆಗೆ ಫೋನ್ ಮಾಡಾಣ. ಅವರು 'ದಿ ಇಂಡಿಯನ್ ಟ್ರಿಬ್ಯೂನ್,ನ ಎಡಿಟರ್.' ಐ.ಜಿ.ಗೆ ಬೇಕಾದರೂ ಫೋನ್ ಮಾಡಿ ಇಲ್ಲಿಯ ಎಸ್.ಪಿ.ಗೆ ಫೋನ್ ಮಾಡಿಸುತಾರೆ. ನನಗೂ ಫೈನಲ್ ಇಯರ್‌ನ ನಾಲ್ಕು ಜನ ಅದೇ ಕೆಲಸ ಮಾಡಿದರು. ಸ್ಪೀಡ್ ಕಿಂಗ್ ವಿಜಯಕುಮಾರ ರೆಡ್ಡಿ. ರೊಬೋಟ್ ನಂಜುಂಡಪ್ಪ, ರಾಕೆಟ್ ರಂಗನಾಥ, ಫೈರ್‌ಮಾಸ್ಟರ್ ಜಸಬೀರ್ ಚೌಧುರಿ, ಅಂತ ಅವರ ಹೆಸರು. ನೀನೂ ಅವರನ್ನ ಗುರುತಿಸುತೀನಿ ಅಂತ ಹೇಳು. ಅರೆಸ್ಟ್ ಮಾಡಿಸೋಣ."

ಪೋಲೀಸ್, ಅರೆಸ್ಟ್ ಎಂಬ ಶಬ್ದ ಕಿವಿಗೆ ಬಿದ್ದ ತಕ್ಷಣ ಕಾಂತರಾಜುವಿಗೆ ಅಳುಮುಖದಲ್ಲಿ ಗಾಬರಿ ತುಂಬಿಕೊಂಡಿತು. "ಬ್ಯಾಡ ಬ್ಯಾಡ. ಅವರು ನಮ್ಮನ್ನೇ ಹಿಡಕೊಂಡು ಹ್ವಡೀತಾರೆ. ಪೋಲೀಸಿನೋರ ಸಾವಾಸ ಬ್ಯಾಡ," ಎಂದು ಹೌಹಾರಿದ.

"ಪೊಯ್ ಮೇಲಿನೋರಿಂದ ಹೇಳಿಸಿದರೆ ಏನೂ ಮಾಡುಲ್ಲ.

ಹೆದರಬೇಡ." ಎಂದು ಇವನು ಎಷ್ಟು ಆಶ್ವಾಸನೆ ಕೊಟ್ಟರೂ ಅವನ ಭಯ ಸ್ವಲ್ಪವೂ ಇಂಗಲಿಲ್ಲ. "ನೀನು ಅಳ್ತಾ ಬಿದ್ದಿರು. ನಾನು ಈಗ ಹೋಗಿ ನಮ್ಮಪ್ಪನಿಗೆ ಫೋನ್ ಮಾಡಿ ಪೋಲೀಸಿಗೆ ಹೇಳುಸ್ತೀನಿ." ಎಂದು ಹೇಳಿ ಅವನು ಹೊರನಡೆದ.

ಫೋನಿನಲ್ಲಿ ಅಪ್ಪ ಸಿಕ್ಕಿದರು. "ನಾನು ಅನೂಪ ಮಾತಾಡ್ತಿದೀನಿ. ಇದು ವಿದ್ಯಾಶಾಲೆಯ ಥರದ ಕಾಲೇಜಲ್ಲ. ಎಲ್ಲ ರೌಡಿ ಹುಡುಗರು. ಇವತ್ತು ಮೊದಲನೆ ವರ್ಷದ ಹುಡುಗರನ್ನೆಲ್ಲ ಒಬ್ಬೊಬ್ಬರನ್ನೇ ನಂಬಿಸಿ ಕರಕಂಡು ಹೋಗಿ ರ್‍ಯಾಗ್ ಮಾಡಿದಾರೆ. ನನ್ನನ್ನ ಎಲೆಕ್ಟ್ರಾನಿಕ್ಸ್ ಕೊನೆ ವರ್ಷದ ನಾಲ್ಕು ಹುಡುಗರು ಸ್ನೇಹ ನಟಿಸಿ ರೂಮಿಗೆ ಕರಕೊಂಡು ಹೋಗಿ," ಎಂದು ಅವರ ಹೆಸರು ಕೊಠಡಿಯ ಸಂಖ್ಯೆ ನಡೆದ ಸಂಗತಿ ಎಲ್ಲವನ್ನೂ ವಿವರವಾಗಿ ಹೇಳಿದ. "ಈಗ ಎಲ್ಲೆಲ್ಲೂ ಹುಡುಗರ ನಡಾವಳಿಕೆ ಹೀನವಾಗಿದೆ, ಅಸಭ್ಯವಾಗಿದೆ." ಎಂದ. "ನಾಳೆ ಬೆಳಗ್ಗೆ ಪ್ರಿನ್ಸಿಪಾಲರಿಗೆ ಕಂಪ್ಲೇಂಟು ಕೊಡು. ನಾನೂ ನಾಳೆ ಅಲ್ಲಿಗೆ ಬಂದು ಅವರನ್ನ ಕಾಣ್ತೀನಿ" ಅಪ್ಪ ಸಮಾಧಾನ ಹೇಳಿದರು. " ಪ್ರಿನ್ಸಿಪಾಲರು ಯೂಸ್‌ಲೆಸ್, ಪ್ರತಿವರ್ಷ ಇದು ನಡೆಯುತ್ತಂತೆ. ಕ್ರಮ ತಗೊಂಡರೆ ರೌಡಿ ಹುಡುಗರು ತಮ್ಮ ಮೇಲೆ ತಿರುಗುತಾರೆ ಅಂತ ಅವರು ಗೊತ್ತಿದ್ದೂ ಗೊತ್ತಿಲ್ಲದೋರ ಹಾಗೆ ಇರ್ತಾರೆ. ನಾನು ಈಗ ಈ ನಾಲ್ಕು ಹುಡುಗರ ಹೆಸರು ಅವರ ಬಿರುದುಗಳನ್ನ ಹೇಳಿದೀನಲ್ಲ. ನೀವು ಈ ತಕ್ಷಣ ಅಲ್ಲಿ ಐ.ಜಿ.ಪಿ.ಗೆ ಫೋನ್ ಮಾಡಿ. ಅವರು ಇಲ್ಲಿಯ ಎಸ್.ಪಿ.ಗೆ ತಿಳಿಸಿ ಇವರನ್ನ ಅರೆಸ್ಟ್ ಮಾಡಿಸಬೇಕು. ನಾನು ಕಂಪ್ಲೇಂಟು ಬರೆದು ಕೊಡ್ತೀನಿ. ಕೋರ್ಟಿನಲ್ಲಿ ಏನೇನಾಯ್ತು ಅಂತ ಹೇಳಕ್ಕೆ ಸಿದ್ಧ. ನನಗಾಗಿರೋ ಅವಮಾನ ನಿಮಗೆ ಅರ್ಥವಾಗಲ್ಲ. ಅವರಿಗೆ ಶಿಕ್ಷೆಯಾಗದೆ ಈ ಅವಮಾನ ಸಹಿಸಿಕೊಂಡು ನಾನು ಈ ಕಾಲೇಜಿನಲ್ಲಿರಲ್ಲ. ನಾನು ಎಂಜಿನಿಯರಿಂಗ್ ಓದದಿದ್ದರೆ ಬೇಡ. ಏನೂ ಓದದಿದ್ದರೂ ಬೇಡ." ಎಂದು ನೈತಿಕ ರೊಚ್ಚು ತೋರಿಸಿದ.

"ಅವರನ್ನ ಹಿಡಿದು ಶಿಕ್ಷೆ ಮಾಡಿಸೋದು ನಿನ್ನ ಹಕ್ಕು. ನೀನೇ ಕಂಪ್ಲೇಂಟು ಕೊಡು. ನನ್ನ ಸ್ವಾನುಭಾವ ತರೋದು ಬೇಡ." ಅಪ್ಪ ಹೇಳಿದರು.

"ಪ್ರಭಾವ ಇಲ್ಲದೆ ಈ ದೇಶದಲ್ಲಿ ಯಾವ ಪೋಲೀಸಿನೋರೂ ಕ್ರಮ ತಗೊಳ್ಳುಲ್ಲ. ಪ್ರಿನ್ಸಿಪಾಲರು ಯೂಸ್‌ಲೆಸ್ ಅಂತ ಆಗಲೇ ಹೇಳಿದೆನಲ್ಲ. ನಾನು ಓದೂದ ಬಿಟ್ಟು ಮನೆಗೆ ಬರ್ತೀನಿ ಅಷ್ಟೆ." ಇವನು ಹಟ ಹಿಡಿದ.

ಒಂದು ನಿಮಿಷದ ನಂತರ ಅಪ್ಪ, "ಆಯ್ತು. ನಾನೀಗಲೇ ಫೋನ್ ಮಾಡ್ತೀನಿ. ನೀನು ಧೈರ್ಯವಾಗಿರು," ಎಂದರು.

ವಾಪಾಸು ನಡೆಯುವಾಗ ಆ ನಾಲ್ವರನ್ನೂ ಪೋಲೀಸರು ಹಿಡಕೊಂಡು ಹೋಗಿ ಒದ್ದು ಕೂಡಿ ಹಾಕುವ ಚಿತ್ರ ಮನಸ್ಸಿನಲ್ಲಿ ಮೂಡಿ ಖುಷಿಯಾಯಿತು. ಇನ್‌ಸ್ಪೆಕ್ಟರು ಕೇಳಿದರೆ ಹ್ಯಾಗೆ ಶುರುಮಾಡಬೇಕು, ಏನೇನು ಹೇಳಬೇಕು? ಎಂದು ಆಲೋಚಿಸುತ್ತಾ ನೆನಪನ್ನು ಸ್ಪಷ್ಟಗೊಳಿಸುತ್ತಾ ನಡೆದ. ಎಲ್ಲವನ್ನೂ ಹೇಳಬೇಕು. ಅದರಲ್ಲಿ ನಾಚಿಕೆ ಏನು? ಎಂದೂ ನಿರ್ಧರಿಸಿದ. ಇಡೀ ರಸ್ತೆಯಲ್ಲಿ ಯಾರೂ ಇಲ್ಲ. ದೂರದೂರದ ಬೀದಿ ದೀಪಗಳು ನಿರ್ಜನತ್ವವನ್ನು ಹೆಚ್ಚು ಗಾಢಗೊಳಿಸುತ್ತಿದ್ದವು. ನಡುವೆ ಬರುತ್ತಿದ್ದ ಮಬ್ಬುಗತ್ತಲ ತಾವುಗಳಲ್ಲಿ ಹೋಗುವಾಗ ಅವನಿಗೆ ತಾನೊಬ್ಬ ಧೈರ್ಯಶಾಲಿ ಎಂಬ ಆಶ್ವಾಸನೆ ದೊರೆಯುತ್ತಿತ್ತು. ನಾಳೆ ಬೆಳಗ್ಗೆ ಎದ್ದು ಅವರು ಮಾತಾಡಿಸಿದರೆ ನಾನು ತಿರಸ್ಕಾರ ತೋರಿಸಬೇಕು; ಪೋಲೀಸರು ಬಂದು ಹಿಡಿಯುವ ತನಕ ನಾನು ಏನು ಮಾಡಿದ್ದೇನಂತ ಯಾರಿಗೂ ತಿಳಿಯಕೂಡದು, ಎಂದು ಯೋಚಿಸುತ್ತಾ ನಿಧಾನವಾಗಿ ಹಾಸ್ಟೆಲು ಗೇಟು ಸೇರುವ ಹೊತ್ತಿಗೆ ಐವತ್ತು ನಿಮಿಷವಾಗಿತ್ತು. ಹಾಸ್ಟೆಲಿನ ಗೇಟು ಹಾಕಿತ್ತಾದರೂ ದೀಪ ಉರಿಯುತ್ತಿತ್ತು. ಕಾವಲುಗಾರ ಎಚ್ಚರವಾಗಿದ್ದ. ಇವನನ್ನು ನೋಡಿ ಅವನು, "ಏಯ್, ಯಾರು ನೀನು?" ಎಂದ. ಇವನು ತನ್ನ ಗುರುತು ಹೇಳಿದ ಮೇಲೆ, "ಊಟ್ ಬತ್ತಿನಲ್ಲಿ ಎಲ್ಲಿಗೆ ಓಗಿದ್ದೆ? ಯಾರ ಪರ್ಮಿಸನ್ ತಗಂಡಿದ್ದೆ?" ಎಂದೆಲ್ಲ ತನಿಖೆ ಮಾಡಿದ. ತನ್ನ ತಂದೆಗೆ ಅರ್ಜೆಂಟ್ ಫೋನ್ ಮಾಡಲು ಹೋಗಿದ್ದೆನೆಂದು ಹೇಳಿದ ಮೇಲೆ ಅವನು ಒಳಗೆ ಬಿಟ್ಟನಾದರೂ, "ಪೋಲೀಸಿನೋರು ಇಡಕಂಡ್ ಓಯ್ತಾರೆ

ಅಂತರೇನಾದರೂ ತಪ್ಪಿಸಿಕೊಂಡು ಓಗಿದ್ರಾ?" ಎಂದ.

"ಯಾರು ಪೋಲೀಸಿನೋರು? ಯಾರನ್ನ ಇಡಕಂಡು ಓದರು?" ಎಂದು ಇವನು ಒತ್ತಿ ಕೇಳಿದ ಮೇಲೆ ಹೇಳಿದ: "ಇಸ್ಪೀಡ್ ಕಿಂಗ್ ಅವನು ಬುಲೆಟ್ ಮೋಟರ್‌ಬೈಕು, ಅವನು, ಆ ದಢಿಯ ದಿಲ್ಲಿ ಆಚೆ ದೇಸ. ಓಂದಿ ಮಾತಾಡ್ತೋನು, ಇನ್ನು ಇಬ್ಬರನ್ನ ವ್ಯಾನು ಬಂದು ಕೂಡಿಕಂಡು ಓಯ್ತು."

ಇಷ್ಟು ಕ್ಷಿಪ್ರವಾಗಿ ಕೆಲಸವಾಗಿರುವುದನ್ನು ತಿಳಿದು ಇವನಿಗೆ ಖುಷಿಯಾಯಿತು. ಆದರೆ ತನಗೆ ಏನೂ ಗೊತ್ತಿಲ್ಲವೆಂಬಂತೆ ತನ್ನ ಕೋಣೆಗೆ ನಡೆದ. ಪೋಲೀಸಿನವರು ಬಂದು ನಾಲ್ವರನ್ನು ಒಯ್ದಿದ್ದ ಸುದ್ದಿ ಯಾರಿಗೂ ಗೊತ್ತಿದ್ದಂತಿರಲಿಲ್ಲ. ಕಾಂತರಾಜು ದೀಪ ಆರಿಸಿ ಮಲಗಿದ್ದ. ಫೋನ್ ಮಾಡಿದೆಯಾ? ಎಂದು ಅವನು ಕೇಳಿದ್ದಕ್ಕೆ ಇವನು ಮಾಡಿದೆ ಎಂದಷ್ಟೇ ಹೇಳಿ ಬಟ್ಟೆ ಬದಲಾಯಿಸತೊಡಗಿದ. ಅಷ್ಟರಲ್ಲಿ ಗೇಟು ತೆಗೆದ ಶಬ್ದವಾಯಿತು. ಮೋಟರ್ ಬೈಕಿನ ಗುಡುಗುಡು ಸದ್ದು. ಒಳಗೆ ಬಂದ ಮೋಟರ್ ಬೈಕು ಹಾಸ್ಟೆಲಿನ ಮುಂಬದಿಯಲ್ಲಿ ನಿಂತಿತು. ಬೂಟಿನ ಸದ್ದಾಯಿತು. ನೇರ ಇವನ ಕೋಣೆಗೇ ಬಂದು ಯಾರೋ ಬಾಗಿಲು ತಟ್ಟಿದರು. ಇವನು ಬಾಗಿಲು ತೆಗೆದಾಗ ನಿಂತಿದ್ದವರು ಸಾದಾವೇಷದಲ್ಲಿದ್ದ ಪೋಲೀಸಿನವರು. ಎತ್ತರ ಮೈಕಟ್ಟು, ಶಕ್ತ ಮೀಸೆ. "ಅನೂಪ್ ರವೀಂದ್ರ ನೀವೇನಾ?" ಕೇಳಿದರು.

"ಹೌದು," ಇವನು ಉತ್ತರಿಸಿದ.

"ಈಗ ಸ್ವಲ್ಪ ಹೊತ್ತಿನಲ್ಲಿ ಇರಲಿಲ್ಲ. ಎಲ್ಲಿಗೆ ಹೋಗಿದ್ದಿರಿ?"

"ನಮ್ಮ ತಂದೆಗೆ ಫೋನ್ ಮಾಡುಕ್ಕೆ ಹೋಗಿದ್ದೆ."

"ನೀವೇನಾ ನಾಲ್ಕು ಹುಡುಗರ ಮೇಲೆ ಕಂಪ್ಲೇಂಟ್ ಕೊಟ್ಟಿರೋರು?"

"ಹೌದು."

"ನನ್ನ ಜೊತೆ ಸ್ಟೇಶನ್ನಿಗೆ ಬಂದು ಅದೇ ಕಂಪ್ಲೇಂಟನ್ನ ಬರೆದುಕೊಡಬೇಕು."

"ಬರ್ತೀನಿ," ಎಂದು ಹೊರಟ.

ಸಬ್‌ಇನ್‌ಸ್ಪೆಕ್ಟರ ಬೈಕಿನ ಹಿಂಬದಿಯಲ್ಲಿ ಕೂತು ಹೋಗುವಾ
ತಾನು ಎಷ್ಟು ಪ್ರಭಾವಶಾಲಿ ವ್ಯಕ್ತಿ, ಬೆಂಗಳೂರಿಗೆ ಫೋನ್ ಮಾಡಿ
ಐದು ನಿಮಿಷದಲ್ಲೇ ಪೋಲೀಸರು ಎಷ್ಟು ಚುರುಕಾಗಿ ಕಾರ್ಯಪ್ರವೃತ್ತರಾ
ಈಗ ಅವರೇ ಬಂದು ನನ್ನನ್ನು ಕೂರಿಸಿಕೊಂಡು ಹೋಗಿ, ಎಂ
ಖುಷಿಯಲ್ಲಿ ತಾನೊಂದು ಮೋಟರ್ ಬೈಕು ಕೊಳ್ಳಬೇಕು, ಆ ರೆಡ್ಡಿ
ಸ್ಪೀಡ್ ಕಿಂಗ್ ಅನ್ನುವ ಟೈಟಲನ್ನ ಹೊಡಕೊಂಡು ಬರಬೇಕು ಎಂ
ಆಲೋಚನೆ ಬಂತು. ಸ್ಟೇಶನ್ನಿನಲ್ಲಿ ಸಬ್‌ಇನ್‌ಸ್ಪೆಕ್ಟರು ತಮ
ಕುರ್ಚಿಯಲ್ಲಿ ಕೂತು ಇವನನ್ನು ಎದುರಿನ ಕುರ್ಚಿಯಲ್ಲಿ ಕೂರುವಂ
ಹೇಳಿ ಏನಾಯಿತೆಂದು ಕೇಳಿದರು. ಇವನು ಎಲ್ಲವನ್ನೂ ಹೇಳಿದ. ಅದ
ಬರೆದು ಕೊಡುವಂತೆ ಅವರು ಕಾಗದ ಪೆನ್ನನ್ನು ಮುಂದಿಟ್ಟರು. ಇವ
ನಿಧಾನವಾಗಿ ಬರೆದು ರುಜು ಮಾಡಿದ ಮೇಲೆ, "ಹೀಗೆ ಕ್ಲೈಯರಾ
ಬರೆದು ಕೊಟ್ಟರೆ ಹುಟ್ಟಡಗಿಸಿಬಿಡ್ತೀವಿ. ಸ್ಟುಡೆಂಟ್ಸ್ ಪ್ರಾಬ್ಲೆಮು," ಎಂ
ಮಿಟ್ಟುಗೆ ಸೂಚಿಸಿ ಇವನ ತಂದೆ ಯಾರು ಎಂತು ಎಂಬ ಸಂಗತಿಯ
ಇವನ ಬಾಯಿಯಿಂದಲೇ ತಿಳಿದುಕೊಂಡು ಈ ಕೇಸಿನ ತಾಕೀತು ಎಲ್ಲಿ
ಯಾವ ಚಾನೆಲ್‌ನಲ್ಲಿ ಹರಿದು ಬಂತೆಂಬುದನ್ನು ಅರ್ಥಮಾಡಿಕೊಂ
ಇವನನ್ನು ತಾವೇ ಮತ್ತೆ ಬೈಕಿನ ಹಿಂದೆ ಕೂರಿಸಿಕೊಂಡು ವಾಪ
ತಂದುಬಿಟ್ಟರು.

*　　　　*　　　　*

ಬೆಳಗ್ಗೆ ಕಾಲೇಜು ಶುರುವಾದ ತುಸು ಹೊತ್ತಿಗೆ ನಾಲ್ಕು
ಮಹಾವೀರರು ಅರೆಸ್ಟ್ ಆಗಿ ಲಾಕಪ್ಪಿನಲ್ಲಿರುವ ಸುದ್ದಿ ಇಡೀ ಕಾಲೇ
ಹರಡಿ ಗುಜು ಗುಜು ಶುರುವಾಯಿತು. ರಾತ್ರಿಯಲ್ಲಿ ಹೋಗಿ ಕಂಪ್ಲೇ
ಕೊಟ್ಟು ಅರೆಸ್ಟ್ ಮಾಡಿಸಿದ ಧೀರ ಎಲೆಕ್ಟ್ರಾನಿಕ್ಸ್ ಮೊದಲ ವರ
ಅನೂಪ್ ರವೀಂದ್ರನೆಂಬುದೂ ಗೊತ್ತಾಯಿತು. ಅವನು ತಂದೆಗೆ ಫೋ
ಮಾಡಿ ಪೋಲೀಸರ ಕ್ರಿಯಾಶೀಲತೆಗೆ ಬೆಂಗಳೂರಿನಿಂದ ಚಾ

ದೊರಕಿಸಿದ ಸುದ್ದಿ ಯಾರಿಗೂ ತಿಳಿಯಲಿಲ್ಲ. ಅನೂಪನೂ ಹೇಳಲಿಲ್ಲ. ವಾಸ್ತವವಾಗಿ ಅವನು ದಿ ಇಂಡಿಯನ್ ಟ್ರಿಬ್ಯೂನಿನ ಸಂಪಾದಕರ ಮಗನೆಂಬ ಸಂಗತಿ ಬಹು ಜನಕ್ಕೆ ಗೊತ್ತೇ ಇರಲಿಲ್ಲ. ಈ ನಾಲ್ವರಿಗೆ ಮಾತ್ರವಲ್ಲ, ಇಂಥ ಇನ್ನೂ ಇಪ್ಪತ್ತು ಮೂವತ್ತು ಹುಡುಗರಿಗೆ ಓಗಾಗಬೇಕಿತ್ತೆಂದು ಪ್ರಿನ್ಸಿಪಾಲರ ಒಳಮನಸ್ಸು ಬಯಸಿದರೂ ಸಂಸ್ಥೆಯ ಮುಖ್ಯರಾದ ತಮ್ಮ ಗಮನಕ್ಕೆ ತಾರದೆ ನೇರವಾಗಿ ಪೋಲೀಸರ ಹತ್ತಿರ ಈ ಹುಡುಗ ಹೋದದ್ದು, ಪೋಲೀಸರು ಅವಕಾಶಕ್ಕೆ ಕಾಯುತ್ತಿದ್ದವರಂತೆ ತಮ್ಮ ಅನುಮತಿ ಕೇಳದೆ ನಡು ರಾತ್ರಿಯಲ್ಲಿ ಹಾಸ್ಟೆಲಿಗೆ ನುಗ್ಗಿ ಅರೆಸ್ಟ್ ಮಾಡಿಕೊಂಡು ಹೋದದ್ದು ಅವರಿಗೆ ಅಪ್ರಿಯವಾಯಿತು. ಹನ್ನೊಂದು ಗಂಟೆಯ ಹೊತ್ತಿಗೆ ಅವರು ಎಲೆಕ್ಟ್ರಾನಿಕ್ಸ್ ಎಚ್.ಒ.ಡಿ. ಅವರ ಮೂಲಕ ಅನೂಪನಿಗೆ ಹೇಳಿ ಕಳಿಸಿದರು. ಅನೂಪ ಪ್ರಿನ್ಸಿಪಾಲರನ್ನು ಇದುವರೆಗೆ ಒಂದು ಸಲ ಮಾತ್ರ ದೂರದಲ್ಲಿ ನೋಡಿದ್ದ. ಬೇಸಿಗೆಯಲ್ಲೂ ಇಗ್ಗಂಟಿನ ಟೈ, ಶರಟು ಹಾಕುವ, ದಂತವರ್ಣದ ಫಿಯಟ್ ಕಾರಿನವರೆಂದು ಮಾತ್ರ ಗೊತ್ತಿತ್ತು. ಅವರು ತನ್ನನ್ನು ಬೈಯುತ್ತಾರೆಂದು ಅವನು ನಿರೀಕ್ಷಿಸಿದ್ದ. ಬೈದರೆ ಏನಂತ ಬೈದಾರು? ಅದಕ್ಕೆ ತಾನು ಯಾವ ಸಮರ್ಥನೆ ಮಾಡಿಕೊಳ್ಳಬೇಕು ಎಂಬ ಆಲೋಚನೆ ಮನಸ್ಸಿನಲ್ಲಿ ಬಂತು. ತಾನು ಯಾವ ತಪ್ಪನ್ನೂ ಮಾಡಿಲ್ಲ, ತಪ್ಪು ಮಾಡಿರುವವರು ಅವರು. ಎಂದು ಮನಸ್ಸಿನಲ್ಲಿ ದೃಢಮಾಡಿಕೊಂಡು ಎಚ್.ಒ.ಡಿ.ಯು ತೆಗೆದು ಮುಂದೆ ನಡೆದ ಫ್ಲಾಪ್‌ಡೋರನ್ನು ಹಾಯ್ದು ಬಾಗಿಲ ದಳಗಳನ್ನು ನಿಧಾನವಾಗಿ ಹಿಂದೆ ಬಿಟ್ಟು, ಹಿಂಬಾಲಿಸಿದ. ದೊಡ್ಡ ಮರದ ಪರದೆಯ ಆ ಕಡೆಗೆ ಪ್ರಿನ್ಸಿಯ ಛೇಂಬರು. ಅವನಿಗೆ ಅಷ್ಟೇನೂ ಎದ್ದು ಕಾಣುವಷ್ಟು ಭವ್ಯವಾಗಿ ಕಾಣಲಿಲ್ಲ. ಪ್ರಿನ್ಸಿಯ ಬಿಳಿ ಕೂದಲಿಗೆ ಕರಿಬಣ್ಣ ಹಾಕಿರುವುದು ಬೈತಲೆಯ ಭಾಗದಲ್ಲಿ ಬುಡದಿಂದ ಕಾಲು ಅಂಗುಲ ಭಾಗ ಬೆಳ್ಳಗಿದ್ದುದರಿಂದ ತಕ್ಷಣ ಎದ್ದು ಕಂಡಿತು. ಮುಖದಲ್ಲಿ ಸುಕ್ಕುಗಳೂ ಇದ್ದುವು. ಎಚ್.ಒ.ಡಿ.ಯ ಕಡೆಗೆ ಸ್ನೇಹದ ಮುಗುಳ್ನಗೆ ಬೀರಿ ಇವನಿಗೆ ಸಿಟ್‌ಡೌನ್ ಹೇಳಿ ಅನಂತರ, "ಅವರು ನನಗೆ ಏನೇನು ಮಾಡಿದರು ಹೇಳು." ಎಂದರು. ಇವನು ಮತ್ತೆ ಎಲ್ಲವನ್ನೂ ಚಾಚೂ ತಪ್ಪದೆ ವಿವರಿಸಿದ. ರಾತ್ರಿ ಸಬ್‌ಇನ್ಸ್‌ಪೆಕ್ಟರನಿಗೆ

ಹೇಳುವಾಗ ನೆನಪಿನಲ್ಲಿ ಸರಣಿ ತುಸು ಹಿಂದು ಮುಂದಾಗುತ್ತಿತ್ತು. ಅದನ್ನು ಅವರೇ ಅಭಯದ ಪ್ರಶ್ನೆ ಮರುಪ್ರಶ್ನೆಗಳಿಂದ ಸರಿಮಾಡಿ ಸಹಜವಾದ ಆಕಾರ ಕೊಟ್ಟಿದ್ದರು. ಅದನ್ನೇ ಅವನು ಬರೆದು ಕೊಟ್ಟ, ನಂತರ ನೆನಪು ಬಾಗಿ ಬಳುಕುವ ಸಂಭವವಿರಲಿಲ್ಲ. ಇನ್ನು ಮೂರು ಸಲ ವಿವರವಾಗಿ ಕೇಳಿದ ನಂತರ ಪ್ರಿನ್ಸಿಪಾಲರು ಎಚ್.ಒ.ಡಿ.ಯ ಮುಖ ನೋಡಿದರು. ಅನಂತರ ಇವನಿಗೆ, "ನೀನು ಕ್ಲಾಸಿನಲ್ಲಿರು," ಎಂದು ಕಳಿಸಿ ಎಚ್.ಒ.ಡಿ.ಯನ್ನು ಉಳಿಸಿಕೊಂಡರು.

ಹೇಗಾದರೂ ಅರೆಸ್ಟಾದವರು ತಮ್ಮ ಕಾಲೇಜಿನ ವಿದ್ಯಾರ್ಥಿಗಳು, ತಾವು ಸ್ಟೇಶನ್ನಿಗೆ ಹೋಗಿ ನೋಡುವುದು ವ್ಯಾವಹಾರಿಕ ಕರ್ತವ್ಯ ಎಂದು ನಿರ್ಧರಿಸಿದ ಅವರು ಎಚ್.ಒ.ಡಿ.ಯ ಸಂಗಡ ತಮ್ಮ ದಂತವರ್ಣದ ಫಿಯಟ್‌ನಲ್ಲಿ ಸ್ಟೇಶನ್ನಿಗೆ ಹೋದರೆ ತಿಳಿಯಿತು. ನಾಲ್ವರನ್ನೂ ಕೋರ್ಟಿಗೆ ಕರೆದೊಯ್ದಿದ್ದಾರೆ. ಇವರು ಕೋರ್ಟಿಗೆ ಹೋದಾಗ ನಾಲ್ವರನ್ನೂ ಮತ್ತೆ ಪೋಲೀಸರ ಕಪ್ಪು ವ್ಯಾನಿಗೆ ಹತ್ತಿಸುತ್ತಿದ್ದರು. ಇವರೇ ಹತ್ತಿರ ಹೋಗಿ ವಿಚಾರಿಸಿದಾಗ ಸಬ್‌ಇನ್‌ಸ್ಪೆಕ್ಟರಿಂದ ತಿಳಿಯಿತು: ಮ್ಯಾಜಿಸ್ಟ್ರೇಟರು ನಾಲ್ವರು ಆಪಾದಿತರನ್ನೂ ಮೂರು ದಿನ ಪೋಲೀಸ್ ಕಸ್ಟಡಿಗೆ ಒಪ್ಪಿಸಿ ಆಜ್ಞೆ ಮಾಡಿದ್ದಾರೆ. ಪ್ರಿನ್ಸಿಪಾಲರು, ಎಚ್.ಒ.ಡಿ. ವ್ಯಾನಿನ ಹಿಂಬದಿಗೆ ಬಂದು ಬಾಗಿಲು ತೆಗೆಸಿ ನೋಡಿದರೆ ನಾಲ್ವರೂ ಬಗ್ಗಿಸಿದ ಕತ್ತನ್ನು ಮೇಲೆ ಎತ್ತದೆ ಕೂತಿದ್ದಾರೆ.

'ದನ್ರಯ್ಯಾ, ನಿಮ್ಮ ತಂದೆ ತಾಯಿಗಳಿಗೆ ವಿಷಯ ತಿಳಿಸಿದಿರಾ?' ಪ್ರಿನ್ಸಿಪಾಲರು ಕೇಳಿದರು. ಅವರಿಂದ ಉತ್ತರವಿಲ್ಲ. "ತಿಳಿಸಿ ಅಂ ಯಾರಿಗಾದರೂ ಹೇಳಿದೀರೇನಯ್ಯ?" ಎಂದರೂ ಉತ್ತರವಿಲ್ಲ. "ಅವ ಫೋನ್ ನಂಬರ್ ಇದ್ದರೆ ಹೇಳಿ, ನಾನು ತಿಳಿಸ್ತೀನಿ," ಎಂದದ್ದ ಸ್ಪೀಡ್‌ಕಿಂಗ್ ರೆಡ್ಡಿ, 'ಸಾರ್, ಪ್ಲೀಸ್, ತಿಳಿಸಬೇಡಿ,' ಎಂದ.

"ಈಗ ಕೇಸು ಬುಕ್ ಆಗಿಬಿಟ್ಟಿದೆ. ಕೋರ್ಟಿನಲ್ಲಿ ದಾಖಲಾಗಿದ ಲಾಯರಿಟ್ಟು, ವಾದ ಮಾಡಿಸಿ ಗೆದ್ದು ಬರದೆ ಬೇರೆ ದಾರಿಯೇ ಇಲ್ಲ ಇಷ್ಟರಲ್ಲೇ ನೀವು ಲಾಯರನ್ನ ಕೇಳಬೇಕಿತ್ತು. ನಿಮ್ಮ ತಂದೆ ತಾಯ ಮುಂದೆ ಬಾರದೆ ಲಾಯರನ್ನಿಡೋರು ಯಾರು, ರಕ್ಷಣೆ ಮಾಡೋ

ಯಾರು? ಆಫ್ ಕೋರ್ಸ್, ನೀವು ಮಾಡಿರೂ ಅಯೋಗ್ಯತನಾನ ನಾವು ಕ್ಷಮಿಸುತ್ತಾ ಇಲ್ಲ. ಕ್ಷಮಿಸೂದೂ ಇಲ್ಲ. ಕೋರ್ಟಿನಲ್ಲಿ ನ್ಯಾಯ ಸಿಕ್ಕಲಿ, ಎಂಥ ಕೊಲೆಗಡುಕನಿಗೂ ಒಬ್ಬ ಒಳ್ಳೆಯ ಲಾಯರ ಸಹಾಯವಿರಬೇಕು ಅನ್ನುವ ಪದ್ಧತಿಗೆ ತಕ್ಕ ಹಾಗೆ ಹೇಳಿದೆ," ಎಂದಾಗ ನಾಲ್ವರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

"ಹಾ. ಹಾ, ವಕೀಲರನ್ನಿಡಲೇ ಬೇಕು, ಲಡಾಯಿ ಮಾಡಲೇ ಬೇಕು," ಫ಼ೆರ್ ಮಾಸ್ಟರ್ ಜಸಬೀರ ಚೌಧುರಿ ಬಾಯಿಬಿಟ್ಟ: "ನನ್ನ ತಂದೆಗೆ ತಿಳಿಸೂದೇನೂ ಬೇಡಿ. ನಾನೇ ಕಾಗದ ಬರೆದು ಎಕ್ಸ್ಟ್ರಾ ದುಡ್ಡು ತರಿಸಿ ಲಾಯರಿಗೆ ಕೊಡ್ತೀನಿ," ಎಂದು ತೀರ್ಮಾನ ಹೇಳಿದ.

ರೆಡ್ಡಿ, ನಂಜುಂಡಪ್ಪ, ರಂಗನಾಥರು ಯಾವ ತೀರ್ಮಾನಕ್ಕೂ ಬರಲಾರದೆ ಒಳಗೇ ವಿಲಿವಿಲಿಗುಟ್ಟುತ್ತಿದ್ದರು. "ಇವರು ಯೋಚನೆ ಮಾಡಿ ಹೇಳಲಿ. ನಾವು ಬೇರೆ ಕೇಸ್ ಅಟೆಂಡ್ ಮಾಡಬೇಕು. ಆಮೇಲೆ ನೀವು ಸ್ಟೇಶನ್ನಿಗೆ ಬನ್ನಿ ಸಾರ್. ನಾವು ಇಂಟರ್‌ವ್ಯೂ ಕೊಡ್ತೀವಿ." ಎಂದ. ಸಬ್‌ಇನ್‌ಸ್ಪೆಕ್ಟರು ಕಾವಲಿನ ಸಿಪಾಯಿಗಳನ್ನು ಒಳಗೆ ಹತ್ತುವಂತೆ ಹೇಳಿ ಅನಂತರ ವ್ಯಾನಿನ ಬಾಗಿಲು ಮುಚ್ಚಿ, ಹೊರಗಿನಿಂದ ಅಗಳಿ ಹಾಕಿಕೊಂಡ ನಂತರ ಮುಂದೆ ಹೋಗಿ ಡ್ರೈವರನ ಪಕ್ಕ ಕುಳಿತರು. ವ್ಯಾನ್ ಹೊರಟುಹೋಯಿತು.

ಪ್ರಿನ್ಸಿಪಾಲರು ಎಚ್.ಒ.ಡಿ.ಯೊಡನೆ ಕಾಲೇಜಿಗೆ ಹಿಂತಿರುಗಿದರು. ಈ ನಾಲ್ಕು ವಿದ್ಯಾರ್ಥಿಗಳ ಪಾಲಕರಿಗೆ ತಂತಿ ವರ್ತಮಾನ ಕೊಡುವುದರಿಂದ ತಮ್ಮ ಜವಾಬ್ದಾರಿ ಪೂರೈಸಿದಂತಾಗುತ್ತದೆಂದು ಇಬ್ಬರೂ ಕೂಡಿ ದಾರಿಯಲ್ಲೇ ತೀರ್ಮಾನಿಸಿದರು. ಎಚ್.ಒ.ಡಿ. ತಮ್ಮ ವಿಭಾಗಕ್ಕೆ ಹೋದರು. ಪ್ರಿನ್ಸಿಪಾಲರು ತಮ್ಮ ಛೇಂಬರಿಗೆ ಬರುವ ಮೊದಲೇ ಪಿ.ಎ. ಅವಸರ್ಪಡುರುಗೊಂಡು ವಿನಯದಿಂದ ಬಗ್ಗಿ ಇವರೊಬ್ಬರಿಗೇ ಕೇಳುವಂತೆ, "ಸ್ಪಿನ್‌ಕಿಂಗ್ ರೆಡ್ಡಿಯ ಫಾದರ್ ಮಿಸ್ಟರ್ ಎನ್.ಟಿ. ರೆಡ್ಡಿಗಳು ಬಂದಿದಾರೆ. ಕರ್ನಾಟಕ ಗೌರ್ನ್‌ಮೆಂಟ್ ಕಮಿಶನರ್ ಆಫ್ ಇಂಡಸ್ಟ್ರೀಸ್. ಸೋಫಾದ ಮೇಲೆ ಕೂರಿಸಿದೀನಿ." ತಾವು ತಂತಿ ಕೊಡುವ ಮೊದಲೇ ಬಂದಿದಾರೆ. ಯಾರು ಸುದ್ದಿ ಮುಟ್ಟಿಸಿರಬಹುದು? ಎಂದು ಇವರ

ಮುಖದಲ್ಲಿ ಎದ್ದ ಊಹಾಪೋಹವನ್ನು ತಕ್ಷಣ ಅರ್ಥ ಮಾಡಿಕೊಂ
ಅವನು, "ಸ್ಪೀಡ್ ಕಿಂಗ್‌ನ ಸ್ನೇಹಿತ ಬೆಳಗ್ಗೆ ಫೋನ್ ಮಾಡಿ ತಿಳಿಸಿದನಂ
ರೆಡ್ಡಿಗಳು ತುಂಬ ಕೋಪದಲ್ಲಿದ್ದಾರೆ." ಎಂದ.

ಇಂಡಸ್ಟ್ರಿ ಕಮಿಶನರ್ ಅಂದರೆ ಬಹಳ ಪ್ರಭಾವಶಾಲಿ ಹಾಗ
ಕಮಾಯಿಯ ಹುದ್ದೆ ಎಂಬ ಅರಿವಿನಿಂದ ಪ್ರಿನ್ಸಿಪಾಲರು ತು
ಅಧೀರರಾದರು. ಅಲ್ಲದೆ ತಮ್ಮ ಮಗನೇ ಹೊಸದಾ
ಆರಂಭಿಸಬೇಕಾಗಿರುವ ಕಿರು ಪ್ರಮಾಣದ ಸ್ಕ್ರಿಬ್‌ಬೋರ್ಡ್ ಕೈಗಾರಿಕೆ
ಲೈಸನ್ಸ್ ಕೊಡುವ, ಬ್ಯಾಂಕಿಗೆ ಸಾಲ ಕೊಡಲು ಇದು ಅರ್ಹವಾ
ಉದ್ಯಮ ಅಥವಾ ಅರ್ಹವಲ್ಲದ್ದು ಎಂಬುದನ್ನು ಶಿಫಾರಸು ಮಾಡುವ
ಇವನೇ ಎಂಬುದೂ ಅರಿವಿಗೆ ಬಂತು. ಇವನ ವಿಷಯ, ತಮಗೆ ಗೊತ್ತಿ
ಆದರೆ ಒಮ್ಮೆಯೂ ಭೇಟಿಯಾಗಿಲ್ಲ ಎಂಬ ಎಚ್ಚರದಿಂದ ಇವರು ಹೆ
ಹಾಕುತ್ತಿರುವಾಗ ಪಿ.ಎ. ಒಳಗೆ ಓಡಿಹೋಗಿ ಎಸ್.ಟಿ.ರೆಡ್ಡಿಯ ಮುಂ
ವಿಧೇಯತೆಯಿಂದ ತನ್ನ ಐದೂ ಕಾಲಡಿ ಎತ್ತರದ, ಪ್ಯಾಂಟು ಬು
ಶರಟುಗಳ ಶರೀರವನ್ನು ನಾಲ್ಕೂವರೆ ಅಡಿಗೆ ಇಳಿಸಿಕೊಂಡು ನಿಂತ
'ಸಾಹೇಬರು ಬಂದರು ಸಾರ್,' ಎಂದು ಹಲ್ಲು ಕಿರಿದು ಅವರ ಮು
ನೋಡಿದ. ಐ ಡೋಂಟ್ ಕೇರ್ ಎಂಬ ಕೊಬ್ಬಿನ ಕೋಪವನ್ನು ತ
ಸಿಡುಬು ಕಲೆಯ ಮುಖದಿಂದ ಬೀಗುತ್ತಾ ರೆಡ್ಡಿ ಬಾಯಿಯಲ್ಲಿದ್ದ ಸಿಗರೇ
ಹೊಗೆಯನ್ನು ಹೊರಗೆ ಸುರುಳಿ ಬಿಟ್ಟ. ತನ್ನ ದಣಿ ಪ್ರಿನ್ಸಿಪಾಲ
ಬರುವಾಗ ಈತ ಎದ್ದು ನಿಲ್ಲಲಿ ಎಂಬುದು ಪಿ.ಎ.ಯ ಓಡಿಬಂ
ಮುಂಚೂಣಿ ಸುದ್ದಿ ಕೊಟ್ಟ ಉದ್ದೇಶವಾಗಿತ್ತು. ಈ ಕಾಲೇ
ಪ್ರಿನ್ಸಿಪಾಲನದು ಯಾವ ಗೋಪಾಳದ ಹುದ್ದೆ ಎಂಬ ಧಿಮಾಕ
ಬಾಯಿಯಿಂದ ಹೊರಬಂದ ಹೊಗೆಯ ಸುರುಳಿ ಸೂಚಿಸುತ್ತಾ ಮೇ
ಮೇಲೆ ಹೋಗುತ್ತಿತ್ತು. ಅಷ್ಟರಲ್ಲಿ ತಮ್ಮ ಶರಟಿನ ಕಾಲರ್ ಮ
ಟ್ಟೆಯ ಸ್ಥಾನದ ಮೇಲೆ ಬೆರಳಾಡಿಸಿಕೊಂಡು ಒಳಗೆ ಬಂದ ಪ್ರಿನ್ಸಿಪಾಲ
ಇವರ ಹತ್ತಿರ ಬಂದು, "ಬನ್ನಿ, ಬನ್ನಿ, ಒಳಗೆ ನನ್ನ ಛೇಂಬರಿಗೆ ಬ
ಈಗ ತಾನೆ ಕೋರ್ಟಿನಿಂದ ಬರ್ತಿದೀನಿ. ನಂಗೆ ಏನೂ ತಿಳಿಸದೆ
ಪೋಲೀಸರು ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಿದ

ಬಾಯಿಬಿಡಬೇಕು," ಎಂದು ತಾವೇ ವರದಿ ಒಪ್ಪಿಸಿ ನಿಂತರು. ಕಾಲ ಮೇಲೆ ಕಾಲು ಹಾಕಿ ಸೋಫಾ ಒರಗಿ ಇನ್ನೊಂದು ದಮ್ಮು ಹೀರಿಕೊಳ್ಳುತ್ತಿದ್ದ ರೆಡ್ಡಿಗಾರು, ಪ್ರಿನ್ಸಿಪಾಲರ ಜಾಗ ಯಾವುದೆಂಬುದನ್ನು ಸೂಚಿಸುವಂತೆ, ಕುಳಿತ ಭಂಗಿಯನ್ನು ಬದಲಾಯಿಸದೆ, ಅವರತ್ತ ಉಂಡೃಷ್ಟಿಯನ್ನು ಬೀರಿ ನಿಲ್ಲಿಸಿದರು. "ಇವನ ಸೊಕ್ಕೇ," ಎಂದು ಪ್ರಿನ್ಸಿಪಾಲರಿಗೆ ಒಳಗೇ ಉರಿ ಹತ್ತಿದರೂ ವಿನಯವನ್ನು ಬಿಡದೆ ಹಾಗೆಯೇ ನಿಂತಿದ್ದು, ಕಾಫಿ ತರಿಸು ಎಂದು ಪಿ.ಎ.ಗೆ ಬಾಯಿಬಿಟ್ಟು ಹೇಳಿದರು.

ಒಂದು ನಿಮಿಷದ ನಂತರ ರೆಡ್ಡಿಗಾರು ಮುಖದಲ್ಲಿ ಆಲ್‌ರೈಟ್ ಎಂಬ ಭಾವವನ್ನು ತಂದುಕೊಂಡು ಮೇಲೆ ಎದ್ದು ಛೇಂಬರಿನ ಫ್ಲ್ಯಾಪ್ ಡೋರಿನತ್ತ ಹೊರಟರು. ಒಳಗೆ ಬಂದು ಅವರು ತೋರಿಸಿದ ಅವರ ಮೇಜಿನ ಎದುರಿನ ಗಾಡ್ರೇಜ್ ಕುರ್ಚಿಯ ಮೇಲೆ ಕೂತು, ಅಷ್ಟರಲ್ಲಿ ತಮ್ಮ ಆಸನದಲ್ಲಿ ಕೂತಿದ್ದ ಪ್ರಿನ್ಸಿಪಾಲರನ್ನು ನೋಡುತ್ತಾ, "ಏನ್ರೀ ಇದೆಲ್ಲ? ಪೋಲೀಸಿನೋರು ಬಂದು ಹುಡುಗರನ್ನ ಹಿಡಕೊಂಡು ಹೋದರೆ ಇದೀ ಕಾಲೇಜಿನ ಹೆಡ್ ಆಗಿ ನೀವು ಏನು ಮಾಡ್ತಿದ್ದಿರಿ? ಅದಕ್ಕೆ ಯಾಕೆ ಅವಕಾಶ ಕೊಟ್ಟಿರಿ?" ಎಂದರು ಆರಂಭ ವಾಕ್ಯದಲ್ಲೇ ಹಲ್ಲೆ ಮಾಡುತ್ತಾ.

"ನಡುರಾತ್ರೀಲಿ ಆಗಿರೂ ಕೆಲಸ. ನನಗೆ ವಿಷಯವೇ ಗೊತ್ತಿಲ್ಲ. ವಾರ್ಡನ್ ಊರಲ್ಲಿರಲಿಲ್ಲ. ನಾನೂ ಮಂಡ್ಯಕ್ಕೆ ಹೋಗಿದ್ದೆ. ಹತ್ತು ಗಂಟೆಗೆ ಆಫೀಸಿಗೆ ಬಂದಾಗಲೇ ಗೊತ್ತಾದದ್ದು."

"ಪ್ರಿನ್ಸಿಪಾಲರ ಪ್ರಯರ್ ಪರ್ಮಿಷನ್ ಇಲ್ಲದೆ ಹುಡುಗರನ್ನ ಹಿಡಕೊಂಡು ಹೋಗಿದಾರೆ ಅಂತ ಈ ತಕ್ಷಣ ಪೋಲೀಸರ ಮೇಲೆ ಕೋರ್ಟಿಗೆ ಒಂದು ಪಿಟಿಷನ್ ಕೊಡಿ."

"ಒಳ್ಳೆ ಐಡಿಯಾ. ನಮ್ಮ ಲೀಗಲ್ ಅಡ್ವೈಸರ ಕೈಲಿ ಮಾತಾಡ್ತೀನಿ. ಆದರೆ ನಾಲ್ಕು ಜನ ಫೈನಲ್ ಇಯರ್‌ನೋರು ಒಬ್ಬ ಮೊದಲ ವರ್ಷದೋನನ್ನ ರೂಮಿಗೆ ಸೇರಿಸಿಕೊಂಡು ರ್‍ಯಾಗಿಂಗ್ ಹೆಸರಿನಲ್ಲಿ ಸ್ಟ್ರಿಪ್ ಮಾಡಿದಾರೆ. ಹುಡುಗ ನಡುರಾತ್ರೀಲಿ ಹೋಗಿ ಕಂಪ್ಲೇಂಟ್ ಕೊಟ್ಟಿದ್ದಾನೆ. ಕಂಪ್ಲೇಂಟ್ ಕೈಗೆ ತಗೊಂಡೇ ಅವರು ಬಂದು ಕರಕಂಡು ಹೋದದ್ದು."

"ರ್‍ಯಾಗಿಂಗ್ ಎಲ್ಲಿ ನಡೆಯುಲ್ಲರೀ? ಅದು ಇಂಗ್ಲಿಷ್ ವರ್ಡ್ ಅಲ್ಲವಾ? ಅಂದರೆ ಇಂಗ್ಲೇಂಡಿನಲ್ಲೇ ಶುರುವಾಗಿದೆ, ಅಲ್ಲಿಂದಲೇ ನಮ್ಮೋರೂ ಕಲಿತಿದಾರೆ. ಆ ದೇಶದಲ್ಲಿ ರ್‍ಯಾಗಿಂಗ್‌ಗೆಲ್ಲ ಪೋಲೀಸಿಗೆ ಹೋಗ್ತಾರಾ? ವಿದ್ಯಾಸಂಸ್ಥೆಯನ್ನ ಪ್ರವೇಶಿಸುಕ್ಕೆ ಪೋಲೀಸರಿಗೆ ಅಧಿಕಾರವಿದೆಯಾ? ಧೈರ್ಯವಿದೆಯಾ? ಪ್ರವೇಶಿಸಿದರೆ ಪಾರ್ಲಿಮೆಂಟಿನಲ್ಲಿ ಗಲಾಟೆಯಾಗಿ ಬಿಡುತ್ತೆ. ಗೊತ್ತಾ?"

ಪ್ರಿನ್ಸಿಪಾಲರು ತಮಗೆ ಗೊತ್ತಿಲ್ಲ ಎನ್ನುವಂತೆ ಕತ್ತು ಹಾಕಿದರು, ತಾವು ಎಂ.ಟೆಕ್., ಮಾಡಿದ್ದು ಬರ್ಮಿಂಗ್‌ಹ್ಯಾಂ ವಿಶ್ವವಿದ್ಯಾಲಯದಲ್ಲಿ ಎಂಬ ನಾಲಿಗೆಯ ತುದಿಗೆ ಬಂದ ಮಾತನ್ನು ಒಳಗೇ ಅದುಮಿಕೊಂಡು. ಅಷ್ಟರಲ್ಲಿ ಪಿ.ಎ. ಒಳಗೆ ಬಂದು, ಅನೂಪ್ ರವೀಂದ್ರನ ತಂದೆ ಬಂದಿದಾರೆ, ಎಂದು ನಿವೇದಿಸಿದ. ಒಳಗೆ ಕಳಿಸು ಎಂದ ಮೇಲೆ ಪ್ರಿನ್ಸಿಪಾಲರಿಗೆ ಅವರು ಯಾರೆಂಬ ನೆನಪು ಬಂತು. ಅದುವರೆಗೆ, ಅನೂಪನನ್ನು ಕರೆದು ಪಿಚಾರಿಸಿದಾಗ ಕೂಡ ಅವನು ಯಾರ ಮಗ ಎಂಬುದು ಜ್ಞಾಪಕಕ್ಕೆ ಬಂದಿರಲಿಲ್ಲ. ತಾಂತ್ರಿಕ ಶಿಕ್ಷಣದ ನಿರ್ದೇಶಕರು ತಮ್ಮ ಡೊನೇಶನ್ ಸೀಟನ್ನು ಕೊಡಿಸಿದ ಕಾಗದವನ್ನು ಕಳಿಸಿದ್ದಲ್ಲದೆ ಫೋನಿನಲ್ಲಿ ಈ ಹುಡುಗ ದಿ ಇಂಡಿಯನ್ ಟ್ರಿಬ್ಯೂನ್‌ನ ಸಂಪಾದಕರ ಮಗ ಎಂದು ಹೇಳಿದ್ದರು. ತಂದೆ ಮಗ ಇಬ್ಬರೂ ಮೊದಲು ತಮ್ಮ ಛೇಂಬರಿಗೇ ಬಂದು ಕಂಡಿದ್ದರು. ನನ್ನ ಜ್ಞಾಪಕ ಶಕ್ತಿ ಯಾಕೆ ಇಷ್ಟು ಹಾಳಾಗಿಬಿಟ್ಟಿದೆ! ಎಂದು ಒಳಗೇ ಕಸಿವಿಸಿಗೊಳ್ಳುತ್ತಿದ್ದಾಗ ರವೀಂದ್ರ ಒಳಗೆ ಬಂದು ಕೈ ಮುಗಿದು ನಿಂತುಕೊಂಡ. "ಬನ್ನಿ ಬನ್ನಿ, ದಯಮಾಡಿಸಿ," ಎನ್ನುತ್ತಾ ಪ್ರಿನ್ಸಿಪಾಲರೂ ಎದ್ದು ನಿಂತು ಕೈ ಮುಗಿದು ಇಂಡಸ್ಟ್ರೀಸ್ ಕಮಿಶನರ ಪಕ್ಕದ ಕುರ್ಚಿ ತೋರಿಸಿ, "ಇವರೇ ಕಂಪ್ಲೇಂಟ್ ಕೊಟ್ಟ ಹುಡುಗನ ತಂದೆ. ಮಿಸ್ಟರ್ ರವೀಂದ್ರ ಅವರು. ದಿ ಇಂಡಿಯನ್ ಟ್ರಿಬ್ಯೂನ್ ಪತ್ರಿಕೆಯ ಬೆಂಗಳೂರು ಎಡಿಟರು. ಇವರು ಮಿಸ್ಟರ್ ಎಸ್.ಟಿ.ರೆಡ್ಡಿ. ಇಂಡಸ್ಟ್ರೀಸ್ ಕಮಿಶನರ್. ಇವರ ಮಗನ ಮೇಲೆಯೇ ರ್‍ಯಾಗಿಂಗ್ ಕಂಪ್ಲೇಂಟ್ ಕೊಟ್ಟಿರೂದು," ಎಂದು ಪರಸ್ಪರ ಪರಿಚಯ ಹೇಳಿದರು. ರೆಡ್ಡಿ ಕುಳಿತೇ ಹಲೋ ಎಂದು ಬಲಗೈ ನೀಡಿದರು. ರವೀಂದ್ರ

ಪ್ರಿನ್ಸಿಪಾಲರಿಗೆ ಮುಗಿದಿದ್ದ ಕೈಯನ್ನೇ ಇತ್ತ ತಿರುಗಿಸಿದ: ತನ್ನ ಕೈ ನೀಡಿ ಅವರದನ್ನು ಕುಲುಕಲಿಲ್ಲ.

"ಟ್ರಿಬ್ಯೂನ್ ಪೇಪರಾ? ನಿಮ್ಮ ಬಿಸಿನೆಸ್ ಮ್ಯಾನೇಜರ್ ನನ್ನ ಹತ್ತಿರ ಬಂದಿದ್ದರು. ಹೊಸ ಪ್ರಿಂಟಿಂಗ್ ಮೆಶಿನರಿ ತಗೊಳ್ಳಕ್ಕೆ ಸಾಲ ಬೇಕು ಎರಡು ಕೋಟಿ ಅಂತ," ರೆಡ್ಡಿ ಗತ್ತು ಹೇಳಿದರು.

"ಸುದ್ದಿ, ಸಂಪಾದನೆ, ಎರಡನ್ನು ಬಿಟ್ಟು ಬಿಸಿನೆಸ್ ವಿಷಯ ತಿಳಿಕೊಳ್ಳಕ್ಕೆ ನಾನೆಂದೂ ಹೋಗುಲ್ಲ. ಅದು ನನಗೆ ಸಂಬಂಧಿಸಿದ್ದಲ್ಲ." ಎನ್ನುತ್ತಾ ರವೀಂದ್ರ ಕುಳಿತುಕೊಂಡ.

"ನೀವೀಗ ಯಾಕೆ ಬಂದಿರೋ ಗೊತ್ತಿಲ್ಲ. ಆದರೆ ಬಂದದ್ದು ತುಂಬ ಒಳ್ಳೇದಾಯಿತು. ಪಾಲಕರು ಪೋಷಕರೇ ಪರಸ್ಪರ ಕಲೆತು ಕೆಲವು ಸಮಸ್ಯೆಗಳನ್ನ ಚರ್ಚಿಸಿ ಆಸ್ಥೆ ವಹಿಸಿದರೆ ನಮಗೂ ಕಾಲೇಜು ಕೆಲಸ ಸುಲಭವಾಗುತ್ತೆ," ಪ್ರಿನ್ಸಿಪಾಲರು ವಿಷಯ ಪ್ರವೇಶ ಮಾಡಿದರು.

"ತಾವೂ ಹೇಳೂದು ಸರಿ. ಕಾಲೇಜಿಗೆ ಸೇರಿಸಿಬಿಟ್ಟೆವು, ಮಗ ಕೇಳಿದಷ್ಟು ದುಡ್ಡು ಕೊಡ್ತಿದೀವಿ ನಮ್ಮದಿನ್ನೇನೂ ಜವಾಬ್ದಾರಿ ಇಲ್ಲ ಅಂತ ತಂದೆತಾಯಿಗಳು ತಿಳಿಕೊಂಡಿರೂದೇ ಬಹುತೇಕ ಸಮಸ್ಯೆಗಳಿಗೆ ಕಾರಣವಾಗಿದೆ," ರವೀಂದ್ರ ಉತ್ತರಿಸಿದ.

"ಇವರ ಹುಡುಗನ್ನ ಕರೆಸಿ, ನಿಮ್ಮೆದುರಿಗೇ ವಿಚಾರಿಸ್ತೀನಿ," ರೆಡ್ಡಿ ಪ್ರವೇಶಿಸಿದರು.

ಪ್ರಿನ್ಸಿಪಾಲರು ಬೆಲ್ ಮಾಡಿ ಒಳಬಂದ ಜವಾನನಿಗೆ ಎಲೆಕ್ಟ್ರಾನಿಕ್ಸ್ ಎಚ್.ಒ.ಡಿ., ಅನೂಪ್ ರವೀಂದ್ರ ಇಬ್ಬರನ್ನೂ ಕರೆಯುವಂತೆ ಹೇಳಿದರು. ರೆಡ್ಡಿಯವರು ಮುಖ ನೋಡಿದರೆ ಬೇರೆ ಯಾವ ಕುಶಲ ಸಂಭಾಷಣೆ ಮಾಡುತ್ತಾ ಅವರು ಬರುವ ವರೆಗೆ ಸಮಯ ಕಳೆಯುವುದು ಸಾಧ್ಯವಿಲ್ಲವೆಂದು ಇಬ್ಬರಿಗೂ ಅನ್ನಿಸುತ್ತಿತ್ತು. ಅಷ್ಟರಲ್ಲಿ ಪಿ.ಎ. ಪ್ರಿನ್ಸಿಪಾಲರಿಂದ ತುರ್ತಾಗಿ ಸಹಿ ಪಡೆಯಬೇಕಾದ ಕೆಲವು ಕಾಗದಗಳನ್ನು ತಂದದ್ದರಿಂದ ಅವರಿಗೆ ಮುಜುಗರ ಕಳೆಯಿತು. ಎಚ್.ಒ.ಡಿ. ರವೀಂದ್ರನ ಪಕ್ಕದಲ್ಲಿ ಕುಳಿತರು. ಅನೂಪನನ್ನು ಎಚ್.ಒ.ಡಿ.ಯ ಪಕ್ಕದಲ್ಲಿ

ಕೂರುವಂತೆ ಪ್ರಿನ್ಸಿಪಾಲರು ಸೂಚಿಸಿದರು. ಎಲ್ಲರದೂ ಮತ್ತೊಮ್ಮೆ
ಪರಿಚಯವಾದ ಮೇಲೆ ರೆಡ್ಡಿ ಅನೂಪನನ್ನು ಕೇಳಿದರು:

"ನನ್ನ ಮಗ ಏನು ಮಾಡಿದ? ನಿಜ ಹೇಳಬೇಕು. ಸುಳ್ಳು ಹೇಳಿದರೆ
ನನ್ನ ಹತ್ತಿರ ನಡೆಯುಲ್ಲ."

"ನಾನು ಸುಳ್ಳು ಹೇಳ್ತೀನಿ ಅಂತ ನೀವು ಯಾಕೆ ತಿಳಕಂಡು
ಮಾತಾಡ್ತಿದೀರಿ?" ಅನೂಪನ ಮರು ಪ್ರಶ್ನೆಯಿಂದ ವಾತಾವರಣ
ಬಿಗಿಯಾಯಿತು. ಪ್ರಿನ್ಸಿಪಾಲರಿಗೆ ಒಳಗೇ ಸಂತೋಷವಾಯಿತು.

"ಆಯ್ತು, ಏನಾಯ್ತು ಹೇಳು," ರೆಡ್ಡಿ ತುಸು ಕೆಳಗಿಳಿದರು.

ಅನೂಪ ಯಾವ ಸರಣಿಯನ್ನೂ ತಪ್ಪಿಸದೆ ಮೊದಲಿನಿಂದ ಕೊನೆಯ
ತನಕ ಹೇಳಿದ. ಅನಂತರ ತಾನು ತಂತಿ ಕಛೇರಿಗೆ ಹೋಗಿ ತಂದೆಗೆ ಫೋನ್
ಮಾಡಿದುದನ್ನು ಹೇಳಲಿಲ್ಲ. ಅವನಿಂದ ನಾಲ್ವರು ಭಾರಿ ಗೂಂಡಾಗಳು
ಅರೆಸ್ಟ್ ಆಗಿರುವ ಸುದ್ದಿ ಇಡೀ ಕಾಲೇಜಿಗೆ ತಿಳಿದು ನೆನ್ನೆ ರಾತ್ರಿ ರ್‍ಯಾಗಿಂಗಿಗೆ
ಒಳಗಾದ ಇತರ ಕೆಲವು ಹುಡುಗರು ಬಂದು ಅವನನ್ನು ಹೊಗಳಿ
ಮಾತನಾಡಿದ್ದರು. ತಾವು ಕೂಡ ತಮ್ಮ ಅನುಭವವನ್ನು ಕುರಿತು
ಕಂಪ್ಲೇಂಟು ಕೊಡಲು ಕೆಲವರು ಧೈರ್ಯವಹಿಸಿದ್ದರು. ವಿದ್ಯಾರ್ಥಿ
ನಿಲಯಕ್ಕೆ ನುಗ್ಗಿ ಬಂಧಿಸಿಕೊಂಡು ಹೋದ ಪೋಲೀಸರ ವಿರುದ್ಧ ಮುಷ್ಕರ
ಹೂಡಿಸಲು ಕೆಲವು ಹಿರಿಯ ವಿದ್ಯಾರ್ಥಿಗಳು ಕಾರ್ಯನಿರತರಾಗಿದ್ದರು.
ಈಗಾಗಲೇ ಅನೂಪನಿಗೆ ಒಂದು ವಿಧವಾದ ನಾಯಕತ್ವ ಲಭಿಸಿಬಿಟ್ಟಿತ್ತು.
ಇಬ್ಬರು ಹುಡುಗಿಯರು ಇವನ ಹತ್ತಿರ ಬಂದು, "ಒಳ್ಳೆ ಕೆಲಸ ಮಾಡಿದಿ
ಅನೂಪ್," ಎಂದು ಮೆಚ್ಚುಗೆ ಹೇಳಿದಾಗ ಅವನಿಗೆ ರಾತ್ರಿ ಅನುಭವಿಸಿ
ಅವಮಾನವೆಲ್ಲ ಸಾರ್ಥಕವಾಯಿತು ಎನ್ನಿಸಿತ್ತು. ಇಷ್ಟೆಲ್ಲ ಪ್ರಾಮುಖ್ಯತೆ
ನಾಯಕತ್ವ ಬಂದಿರುವಾಗ ತಾನು ತಂದೆಗೆ ಫೋನ್ ಮಾಡಿ ಅವ
ಮೂಲಕ ಇಷ್ಟನ್ನು ಸಾಧಿಸಿದೆ ಎಂಬುದು ಯಾರಿಗೆ ತಿಳಿಯುವುದೂ
ಅವನಿಗೆ ಬೇಡವಾಗಿತ್ತು. ತಂದೆ ಕೂಡ ಅಕಸ್ಮಾತ್ ಇದನ್ನು
ಬಾಯಿಬಿಟ್ಟಾರೆಂದು ಅವರಿಗೂ ಸೂಚನೆಯಾಗಲಿ ಎಂಬಂತೆ ತಾನೇ
ನೇರವಾಗಿ ಸ್ಟೇಶನ್ನಿಗೆ ಹೋಗಿ ಕಂಪ್ಲೇಂಟು ಬರೆದು ಕೊಟ್ಟೆ, ಎಂದು
ಸಮಾಪ್ತಿ ಮಾಡಿದ.

"ಇದು ನಿನ್ನ ಕಾಲೇಜಿನಲ್ಲಿ ಆದ ಘಟನೆ. ಎಲ್ಲದಕ್ಕೂ ಪ್ರಿನ್ಸಿಪಾಲರು ಮುಖ್ಯಸ್ಥರು. ಹಾಸ್ಟೆಲಿಗೆ ವಾರ್ಡನ್ ಇದಾರೆ. ಅವರಿಗೆ ಹೇಳದೆ ನೀನೇ ಯಾಕೆ ಪೋಲೀಸಿಗೆ ಹೋದೆ?" ರೆಡ್ಡಿ ತಪ್ಪು ಹುಡುಕಿದರು.

"ಪಾಠ ಪ್ರವಚನದ ವಿಷಯವಾದರೆ ಪ್ರಿನ್ಸಿಪಾಲರಿಗೆ ಹೇಳಬೇಕು. ಅಡಿಗೆ ಊಟ ಸರಿಯಾಗಿಲ್ಲದಿದ್ದರೆ ವಾರ್ಡನ್ನಿಗೆ ಹೇಳಬೇಕು. ಪುಂಡು ಪೋಕರಿ ಕೆಲಸ ನಡೆದರೆ ಪೋಲೀಸರಿಗೆ ತಿಳಿಸಬೇಕು." ಅನೂಪ ಛಟಕ್ಕನೆ ಉತ್ತರಿಸಿದ.

ರೆಡ್ಡಿಯವರಿಗೆ ರೇಗಿತು. ಮೀಸೆ ಗಡ್ಡಗಳು ಇನ್ನೂ ಸರಿಯಾಗಿ ಬಲಿಯದ ಈ ಬಚ್ಚಾ, ತನ್ನಪ್ಪ ಎಡಿಟರ್ ಅನ್ನೂ ಹಮ್ಮಿನಿಂದ ಮಾತಾಡ್ತಿದಾನೆ ಎಂದು ಅರ್ಥಮಾಡಿಕೊಂಡರು. ಸರಿಯಾಗಿ ಮುಖ ಮುರಿದು ದಾರಿಗೆ ತರಬೇಕೆಂದುಕೊಂಡವರು, "ಸಬ್‌ಇನ್‌ಸ್ಪೆಕ್ಟರ ಎದುರಿಗೆ ಸುಳ್ಳು ಕಂಪ್ಲೇಂಟು ಬರೆದು ಕೊಡೂದು ಸುಲಭ. ಕೋರ್ಟಿನಲ್ಲಿ ನಿನ್ನನ್ನ ನಮ್ಮ ಕಡೆ ಲಾಯರು ಪಾಟಿ ಸವಾಲು ಮಾಡಿ ಉಚ್ಚೆ ಹುಯ್ಕಳೂ ಹಂಗೆ ಮಾಡ್ತಾರೆ. ನೀನು ಏನೂ ಮಾಡದೆ ಅವರು ಸುಮ್ಮಸುಮ್ಮನೆ ನಿನ್ನನ್ನ ಹಂಗೆ ಮಾಡಿದರಾ? ನಿನ್ನ ಮೂಗಿನ ನೇರಕ್ಕೆ ನೀನು ಹೇಳ್ತಿದೀಯ. ನಾನು ಬೆಂಗಳೂರಿನಿಂದ ಲಾಯರನ್ನ ಕರೆಸಿ ಮಡಗುಸ್ತೀನಿ. ಕೇಳಿದೀಯಾ ಕೃಷ್ಣದಾಸ್ ಅಂತ ಫೇಮಸ್ ಕ್ರಿಮಿನಲ್ ಲಾಯರ ಹೆಸರನ್ನ? ಎಂದು ಸುಳ್ಳು ಕಂಪ್ಲೇಂಟು ಅಂತ ಪ್ರೂವ್ ಆದರೆ ನಿನಗೆ ಜೈಲಾಗುತ್ತೆ. ಈಗಲೂ ಕಂಪ್ಲೇಂಟು ವಾಪಾಸು ತಗೊ ಸುಮ್ಮನೆ."

"ನೀವು ಬೆಂಗಳೂರಿನಿಂದ ಕೃಷ್ಣದಾಸರನ್ನ ಕರೆಸಿದರೆ ನಾನು ದಿಲ್ಲಿಯಿಂದ ಅಗರವಾಲನ್ನ ಕರೆಸ್ತೀನಿ. ಕೇಳಿದೀರಾ ಅಗರವಾಲ್ ಅಂತ ಸುಪ್ರೀಮ್ ಕೋರ್ಟ್ ಅಡ್ವೋಕೇಟರ ಹೆಸರನ್ನ? ಅದು ಹ್ಯಾಗರಿ ನಂದು ಸುಳ್ಳು ಕಂಪ್ಲೇಟಾಗುತ್ತೆ?" ಅನೂಪ ಪ್ರತಿಯಾಗಿ ಜಾಡಿಸಿದ. ಅವನ ಬಗೆಗೆ ಎಚ್.ಒ.ಡಿ.ಗೂ ಮೆಚ್ಚುಗೆಯಾಯಿತು. ಧೈರ್ಯ ಸತ್ಯನಿಷ್ಠೆಯಿಂದ ಮಾತ್ರ ಸಾಧ್ಯ, ಅವನು ಕಲಿತ ವಿದ್ಯಾಶಾಲೆ ಈ ಧೈರ್ಯ, ಅನ್ಯಾಯಕ್ಕೆ ಬಾಗದಿರುವ ಛಲವನ್ನು ರೂಪಿಸಿದೆ ಎಂದು ರವೀಂದ್ರ ಅರ್ಥ

ಮಾಡಿಕೊಂಡ.

ರೆಡ್ಡಿಯವರು ಭುಸುಗುಟ್ಟುತ್ತಿದ್ದರು. ಎರಡು ನಿಮಿಷ ಅವರಿಗ ಒಂದು ವಾಕ್ಯವೂ ಹೊಳೆಯಲಿಲ್ಲ. ಅನಂತರ, "ಪ್ರಿನ್ಸಿಪಾಲರ ಅನುಮತಿ ಇಲ್ಲದೆ ಪೋಲೀಸಿಗೆ ಹೋದದ್ದಕ್ಕೆ ಕಾಲೇಜು ನಿನ್ನನ್ನ ಡಿಸ್‌ಮಿಸ್ ಮಾಡುತ್ತೆ ತಿಳಕ," ಎಂದರು.

"ಡಿಸ್‌ಮಿಸ್ ಮಾಡುವಂಥ ಯಾವ ತಪ್ಪೂ ನಾನು ಮಾಡಿಲ್ಲ ಗೂಂಡಾಗಳ ವಿರುದ್ಧ ಪೋಲೀಸಿಗೆ ಕಂಪ್ಲೇಂಟು ಕೊಟ್ಟದ್ದು ತಪ್ಪು ಅಂದರೆ ಅದು ತಪ್ಪಲ್ಲ ಅಂತ ಕೋರ್ಟಿಗೆ ಹೋಗ್ತೀನಿ. ಅಗರವಾಲರನ್ನ ಕರೆಸ್ತೀನಿ. ಸುಪ್ರೀಮ್ ಕೋರ್ಟಾಗಲಿ," ಅನೂಪನೂ ಉದ್ವಿಗ್ನನಾದ.

"ಈಗ ಸ್ವಲ್ಪ ನಿಧಾನವಾಗಿ ಮಾತಾಡೋಣ. ನಾನು ಮಾತಾಡ್ತೀನಿ ಎಚ್.ಒ.ಡಿ. ಮಾತಾಡಬೇಕು," ಎಂದು ಪ್ರಿನ್ಸಿಪಾಲರು ವಿದ್ಯುತ್ ಕರೆಗಂಟೆ ಒತ್ತಿದರು. ಒಳಗೆ ಬಂದ ಪಿ.ಎ. ಗೆ, "ಕಾಫಿಗೆ ಹೇಳಿದ್ದೆನಲ್ಲ, ಬಂತೆ?" ಎಂದರು. ಕಾಫಿ ತರಿಸು ಎಂದ ತಕ್ಷಣ ತರಿಸಕೂಡದು, ಎರಡನೆ ಸಲ ಹೇಳಿದರೆ ಮಾತ್ರ ಕಾರ್ಯೋನ್ಮುಖನಾಗಬೇಕು ಎಂಬ ಶಾಶ್ವತ ಸೂಚನೆಯಂತೆ ಪಿ.ಎ. 'ತರುಸ್ತೀನಿ ಸಾರ್, ಕ್ಯಾಂಟೀನಿಗೆ ಹಾಲು ಬಂದಿರಲಿಲ್ಲ, ತಡವಾಯಿತು,' ಎಂದು ಹೇಳಿಹೋದ. ರೆಡ್ಡಿ ಕೈಗಾರಿಕಾ ಕಮಿಶನರ್, ನಿಜ; ಆದರೆ ರವೀಂದ್ರ ರಾಷ್ಟ್ರದ ಪ್ರಮುಖ ಕೇಂದ್ರಗಳಲ್ಲೆಲ್ಲ ಸಂಚಿಕೆಯುಳ್ಳ ದೊಡ್ಡ ಪತ್ರಿಕೆಯ ಸಂಪಾದಕ. ಇದನ್ನೇ ಕಾಲೇಜಿಗೆ ಮಸಿ ಬಳಿಯುವಂತೆ ದೊಡ್ಡ ಸುದ್ದಿ ಮಾಡಿ ಪ್ರಕಟಿಸಬಹುದು ತನಿಖೆಗಾರರನ್ನು ಬಿಟ್ಟು ಕಾಲೇಜಿನ ಒಳ ಸಂಗತಿಗಳನ್ನೆಲ್ಲ ಕಲೆಹಾಕಿ ಕತೆ ಎಬ್ಬಿಸಬಹುದು. ಆತ ಅದು ವರೆಗೆ ಒಂದು ಮಾತೂ ಆಡಿಲ್ಲ ಬುದ್ಧಿವಂತ ಪತ್ರಿಕೋದ್ಯಮಿಯ ಹಾಗೆ ಬರೀ ತಿಳಿದುಕೊಳ್ಳುತ್ತಾ ಕೂತಿದ್ದಾನೆ ಎಂಬ ಸಂಗತಿಗಳು ಪ್ರಿನ್ಸಿಪಾಲರ ಮನಸ್ಸಿನಲ್ಲಿ ಮೂಡಿ ಬಂದವು. ಅಲ್ಲದೆ ಪೋಲೀಸು ಕೇಸು ಮುಂದುವರೆದರೂ ಪತ್ರಿಕೆಯವರಿಗೆ ಸುದ್ದಿಯಾಗುತ್ತೆ ಹೇಗಾದರೂ ಮಾಡಿ ಬುಡದಲ್ಲೇ ಚಿವುಟಿ ಹಾಕುವುದೇ ಎಲ್ಲ ದೃಷ್ಟಿಯಿಂದಲೂ ಹಿತಕರ ಎಂಬ ತೀರ್ಮಾನ ಮಾಡಿಕೊಂಡು ಅನೂಪನ

ಕಡೆಗೆ ತಿರುಗಿ ಮಾತನಾಡಿದರು: "ನೋಡಪ್ಪ, ಎಷ್ಟೋ ಕಾಲೇಜುಗಳಲ್ಲಿ ರ್‍ಯಾಗಿಂಗ್ ಮಾಡ್ತಾರೆ. ನಮ್ಮ ಕಾಲೇಜಿನಲ್ಲಿ ಅಂಥದು ನಡೀಬಾರದು ಅಂತ ನಾವು ಬಹಳ ಎಚ್ಚರವಹಿಸಿದೀವಿ. ಹಾಸ್ಟೆಲಿನ ವಿದ್ಯಾರ್ಥಿಗಳು ಯಾವ ರೀತಿಯಲ್ಲೂ ಮಿಸ್‌ಬಿಹೇವ್ ಮಾಡಬಾರದು ಅಂತ ಅಡ್ಮಿಶನ್ ಲೆಟರ್‌ನ ಹಿಂಭಾಗದಲ್ಲೇ ಅಚ್ಚು ಮಾಡಿದೀವಿ. ಅದರ ಅರ್ಥ ರ್‍ಯಾಗಿಂಗ್ ಮಾಡಕೂಡದು ಅಂತಲೂ ಆಗುತ್ತೆ. ಈ ನಾಲ್ಕು ಜನಕ್ಕೂ ಶಿಕ್ಷೆ ಮಾಡ್ತೀನಿ. ವಿದ್ಯಾರ್ಥಿಗಳನ್ನು ಪೋಲೀಸರು ಶಿಕ್ಷಿಸೂದು ಸರಿಯಲ್ಲ. ನೀನು ಕಂಪ್ಲೇಂಟು ವಾಪಾಸು ತಗೋಳೂದು ಒಳ್ಳೇದು. ಯೋಚನೆ ಮಾಡಿ, ಎಚ್.ಒ.ಡಿ. ಏನು ಹೇಳ್ತಾರೆ ಕೇಳು."

ಎಚ್.ಒ.ಡಿ. ತಕ್ಷಣ "ಎಸ್ಸ್.ಎಸ್ಸ್. ದಟ್ ಈಸ್ ಕರೆಕ್ಟ್" ಎಂದು ಕತ್ತು ಹಾಕಿದರು.

ಅನೂಪ ಒಂದು ನಿಮಿಷ ಆಲೋಚಿಸಿದ. ಅವನೊಳಗೇ ಒಂದು ಪರಿಹಾರ ಹೊಳೆಯಿತು. ಹೇಳಿದ: "ನಾನೊಂದು ಮಾತು ಹೇಳ್ತೀನಿ. ಮಿಸ್ಟರ್ ರೆಡ್ಡಿಗಳು ಮತ್ತು ನಾಲ್ಕು ಜನ ಒಪ್ಪಿದರೆ ಆಗಲಿ."

"ಏನು ಹೇಳು."

"ಮಿಸ್ಟರ್ ರೆಡ್ಡಿಗಳು, ಅವರ ಹೆಂಡತಿ, ನಂಜುಂಡಪ್ಪ, ರಂಗನಾಥ, ಚೌಧುರಿ ಇವರ ತಂದೆ ತಾಯಿ ಎಲ್ಲ ಈ ನಿಮ್ಮ ಛೇಂಬರಿನಲ್ಲಿ ಬಂದು ಕೂತುಕೋಬೇಕು. ನೀವು, ಎಚ್.ಒ.ಡಿ. ಇಬ್ಬರೂ ಇರಬೇಕು. ಅವರು ನಾಲ್ಕು ಜನವೂ ಇಲ್ಲಿ ಸಾಲಾಗಿ ಇಷ್ಟು ಜನರ ಎದುರಿಗೆ, ನನಗೆ ಮಾಡಿದ್ದ ಹಾಗೆ, ಪೂರ್ತಿ ಬೆತ್ತಲೆಯಾಗಿ ನಿಂತುಕೊಂಡು ತಾವು ಮಾಡಿದ್ದು ತಪ್ಪಾಯಿತು ಅಂತ ಮೂರು ಸಲ ಹೇಳಬೇಕು. ಅಷ್ಟು ಮಾಡಿದರೆ ನಾನು ಕಂಪ್ಲೇಂಟ್ ವಾಪಾಸು ತಗೋತೀನಿ."

ಅಲ್ಲಿ ಕೂತಿದ್ದ ಎಲ್ಲರೂ ಅಪ್ರತಿಭರಾದರು! ಯಾವುದೋ ಒಂದು ಪರಿಹಾರ ದೊರೆಯುತ್ತದೆಂದು ನಿರೀಕ್ಷಿಸಿದ್ದ ರೆಡ್ಡಿಯ ಮುಖದಲ್ಲಿ ಕೆಂಪು, ಬಿಳುಪುಗಳು ಏಕಕಾಲದಲ್ಲಿ ಜಿನುಗಿ ಕಲಸಿಕೊಂಡವು. ಪ್ರಿನ್ಸಿಪಾಲರಿಗೆ ಇದು ಅಧಿಕ ಪ್ರಸಂಗದ ಮಾತು ಎನ್ನಿಸಿತು. ಯಾರಿಗೂ ಒಂದು ಮಾತೂ

ಹೊಳೆಯಲಿಲ್ಲ. ರವೀಂದ್ರ ಬೇಕೆಂದೇ ಸುಮ್ಮನೆ ಕುಳಿತಿದ್ದ. 'ಕ್ಷಮಿಸುವ
ಔದಾರ್ಯವಿದ್ದರೆ ಒಳ್ಳೆಯದು, ಇಲ್ಲದಿದ್ದರೆ ತಪ್ಪಿತಸ್ಥರಿಗೆ
ಶಿಕ್ಷೆಯಾಗಲೇಬೇಕೆಂದು ನೋವು ಅನುಭವಿಸಿದವನು ಕೇಳುವುದು ಸಹಜ.
ಆದರೆ ಆ ಅನೂಪ ಕೇಳುತ್ತಿರುವ ಶಿಕ್ಷೆಯು ಆಗಿರುವ ತಪ್ಪಿನಷ್ಟೇ ವಿಕ್ಷಿಪ್ತ
ಜಾತಿಯದು ಎಂದುಕೊಂಡ. ಇದು ಅನುಭವಿಸಿದ ನೋವು ರೊಚ್ಚಾಗಿ
ಉಳಿದು ಈ ರೂಪ ತಾಳಿದೆ; ಅದನ್ನು ಮರೆಯುವ ಔದಾರ್ಯ ಬರಲು
ಇನ್ನೂ ಚಿಕ್ಕ ವಯಸ್ಸು,' ಎಂಬ ವಿವರಣೆ ಕಾಣಿಸಿತು. ಅವನು
ಸುಮ್ಮನಿದ್ದ. ಅಷ್ಟರಲ್ಲಿ ಕಾಫಿ ಬಂತು. ಎಲ್ಲರೂ ಕುಡಿದರು. ಅನೂಪ
ಕುಡಿದಾದ ಮೇಲೆ ಪ್ರಿನ್ಸಿಪಾಲರು ಅವನಿಗೆ, "ನೀನು ಸ್ವಲ್ಪ ಹೊರಗಡ
ಇರು. ನಾನು ಮತ್ತೆ ಹೇಳಿಕಳಿಸ್ತೀನಿ," ಎಂದರು. ಅವನು ಹೋದ ನಂತರ
ರವೀಂದ್ರನ ಕಡೆಗೆ ಮುಖ ಮಾಡಿ, "ಸಾರ್, ನೀವೇ ಒಂದು ಪರಿಹಾರ
ಸೂಚಿಸಬೇಕು. ದೇಶದಲ್ಲಿ ಏನು ನಡೀತಿದೆ ಅನ್ನೂದು ನಿಮಗಿಂತ ಬೇ
ಯಾರಿಗೆ ಗೊತ್ತು? ನಿಮ್ಮಂಥ ಸಂಪಾದಕರು ಅಂದರೆ ಎಲ್ಲ ಸಮಸ್ಯೆಯ
ಗೊತ್ತಿರುತ್ತೆ. ಎಲ್ಲ ಟ್ರೆಂಡೂ ಗೊತ್ತಿರುತ್ತೆ." ಎಂದರು ಅನುನಯದ
ಧ್ವನಿಯಲ್ಲಿ.

ರವೀಂದ್ರ ರೆಡ್ಡಿಯ ಮುಖ ನೋಡಿದ. ಅವರು ಕಾಫಿ ಕುಡಿ
ಬಾಯಿಗೆ ಸಿಗರೇಟು ಹೊತ್ತಿಸಿಕೊಳ್ಳುತ್ತಿದ್ದರು. ಇದು ವಿದ್ಯಾಸಂಸ್ಥೆ; ಇದ
ಆವರಣದ ಯಾವ ಬಿಂದುವಿನಲ್ಲೂ ಸಿಗರೇಟು ವಗೈರೆ ಸೇದಬಾರದು
ಅದರ ಪ್ರಧಾನಾಚಾರ್ಯರ ಸಮ್ಮುಖದಲ್ಲಂತೂ ಕೂಡದೇ ಕೂಡದು
ಎಂಬ ಸಂಸ್ಕೃತಿ ಈತನಿಗೇ ಇಲ್ಲ; ಇವನ ಮಗನಿಗೆಲ್ಲಿಂದ ಉತ್ತಮ
ಸಂಸ್ಕಾರ ಬರಬೇಕು? ಎನ್ನಿಸಿ ಅವನ ಮನಸ್ಸು ಬಿಗಿತುಕೊಂಡಿತು
ಹೇಳಿದ: "ಪೋಲೀಸರು ವಿದ್ಯಾಸಂಸ್ಥೆಯ ಆವರಣವನ್
ಆಮಂತ್ರಣವಿಲ್ಲದೆ ಪ್ರವೇಶಿಸಬಹುದೋ ಬಾರದೋ ಅನ್ನುವ ಪ್ರ
ಸಾಕಷ್ಟು ಚರ್ಚೆಯಾಗಿದೆ. ನಮ್ಮ ದೇಶದ ಪರಿಸ್ಥಿತೀಲಿ ಪ್ರವೇಶಿಸದಿದ್ದ
ಅವರ ಪಾಲಿನ ಕರ್ತವ್ಯ ಲೋಪವಾಗುತ್ತೆ. ಪಶ್ಚಿಮ ದೇಶದ ಸ್ಥಿ
ನಮ್ಮದಲ್ಲ. ಮಿಸ್ಟರ್ ರೆಡ್ಡಿ ಹುಡುಗನನ್ನ ಬೆದರಿಸಿ ಗದರಿಸಿದರೇ ಹೊರ
ತಮ್ಮ ಮಗ ಮಾಡಿದ್ದು ತಪ್ಪು ಅನ್ನುವ ಭಾವನೆ ಅವರಲ್ಲಿ ಲೇಶಾಂಶ

ಇಲ್ಲ. ಬೆಂಗಳೂರಿನಿಂದ ಲಾಯರ್ ಕೃಷ್ಣದಾಸ್‌ರನ್ನ ಕರೆಸಿ ಕೋರ್ಟಿನಲ್ಲಿ ಗೆಲ್ಲಲಿ. ಏನು ಮಾಡೋಣ ಅಂತ ನೀವ್ಯಾಕೆ ಚಿಂತೆ ಮಾಡ್ತೀರಿ?"

ಪ್ರಿನ್ಸಿಪಾಲರಿಗೆ ಮುಂದೆ ಏನೂ ಹೊಳೆಯಲಿಲ್ಲ. ಎಚ್.ಒ.ಡಿ. ಮಾತಾಡಿದರು: "ಕೇಸು ಮುಂದುವರೆದರೆ ಪೋಲೀಸರು ಅದರ ವರದೀನ ವಿಶ್ವವಿದ್ಯಾಲಯಕ್ಕೆ ತಿಳಿಸ್ತಾರೆ. ಫೈಸಲಾಗೂ ವರೆಗೆ ನಾಲ್ಕು ವಿದ್ಯಾರ್ಥಿಗಳಿಗೂ ಕ್ಲಾಸಿಗೆ ಬರೂ ಹಾಗಿಲ್ಲ. ಪರೀಕ್ಷೆಗೆ ಕೂರುವಂತಿಲ್ಲ. ಅದು ಯಾವ ಕಾಲಕ್ಕೆ ಫೈಸಲಾಗುತ್ತೋ ದೇವರಿಗೇ ಗೊತ್ತು. ಆಕಸ್ಮಾತ್ ಶಿಕ್ಷೆಯಾದರೆ ಅದರ ಪರಿಣಾಮ ನಿಮಗೇ ಗೊತ್ತು."

ಎಚ್.ಒ.ಡಿ. ಈ ಮಾತನ್ನು ಯಾರಿಗೆ ಹೇಳಿದರೆಂದು ರವೀಂದ್ರನಿಗೆ ಅರ್ಥವಾಗಲಿಲ್ಲ. ತನ್ನ ಕನಿಕರವನ್ನು ಬೇಡಿ ತನಗೆ ಹೇಳಿದ್ದಾರೆಯೋ ಅಥವಾ ಸೊಕ್ಕನ್ನು ಬಿಟ್ಟು ವಾಸ್ತವತೆಗೆ ಇಳಿದು ಬಾ ಎಂದು ರೆಡ್ಡಿಗೆ ಸೂಚಿಸುತ್ತಿದ್ದಾರೆಯೋ, ಎಂಬ ಅನುಮಾನ ಅವನಲ್ಲಿ ಹುಟ್ಟಿತು. ಇದು ತನಗೆ ಕೊಟ್ಟ ಸೂಚನೆ ಎಂದು ರೆಡ್ಡಿಗೆ ಅರ್ಥವಾಯಿತು. ಇವರು ತನ್ನ ಮಗನ ಪರ ಇದ್ದಾರೆ. ಏಕೆಂದರೆ ತಮ್ಮ ಮಗ ಪ್ರತಿ ಪರೀಕ್ಷೆಗೂ ಐದು ಐದು ಸಾವಿರ ಫೀಜು ಕೊಟ್ಟು ಇವರ ಹತ್ತಿರ ಖಾಸಗಿ ಪಾಠಕ್ಕೆ ಹೋಗುತ್ತಿರುವುದು ಹಣ ಕೊಡುತ್ತಿದ್ದ ಅವರಿಗೆ ಗೊತ್ತಿತ್ತು. ಕೋರ್ಟಿನಲ್ಲಿ ಕೇಸು ದಾಖಲಾದರೆ ಗೆಲ್ಲಲಿ ಬಿಡಲಿ ಅದರ ಪರಿಣಾಮ ಸರಣಿ ಏನೆಂಬುದು ಈಗ ಅವರಿಗೂ ಸ್ಪಷ್ಟವಾಗತೊಡಗಿತು. ಎಷ್ಟೇ ಲಂಚದ ಸಂಪಾದನೆ ಬರಲಿ, ಒಬ್ಬೊಬ್ಬನಿಗೆ ಕೈಗಾರಿಕಾ ಸ್ಥಾಪನೆಗೆ ಲೈಸೆನ್ಸ್ ಕೊಡುವಾಗಲೂ, ಬ್ಯಾಂಕಿನ ಸಾಲಕ್ಕೆ ಅರ್ಹತಾ ಪತ್ರ ಕೊಡುವಾಗಲೂ ಇದೇ ಉದ್ಯಮವನ್ನು ತಾನೇ ಮಾಡಿದ್ದರೆ ಎಷ್ಟು ಲಕ್ಷ, ಕ್ರಮೇಣ ಎಷ್ಟು ಕೋಟಿ ಲಾಭ ಬರುತ್ತಿತ್ತು! ಎಂಬ ಆಶೆ ಅವರನ್ನು ಕಾಡುತ್ತಿತ್ತು. ಹಾಗೆಂದು ದಿನಾ ಚಿನ್ನದ ಮೊಟ್ಟೆ ಇಡುತ್ತಿರುವ ಈ ಹುದ್ದೆಯನ್ನು ತ್ಯಜಿಸಿ ಸ್ವಂತ ಉದ್ಯಮ ಆರಂಭಿಸುವ ಧೈರ್ಯವಿರಲಿಲ್ಲ. ಅದಕ್ಕೆ ತಕ್ಕ ವಯಸ್ಸು ತಮಗಿಲ್ಲವೆಂಬ ಅರಿವೂ ಇತ್ತು. ಮಗ ಬಿ.ಇ.,ಯ ಒಂದು ತಾಂತ್ರಿಕ ಪದವಿ ಪಡೆದುಬಿಟ್ಟರೆ ಸಾಕು ಆ ಆಧಾರದ ಮೇಲೆ ಅವನಿಗೆ ಸರ್ಕಾರದಿಂದ ಸಾಲ, ಕೈಗಾರಿಕಾ ಶೆಡ್ಡು, ಇತರ ಉದ್ಯಮಗಳಿಂದ ಬೇಕಾದ ವಾಣಿಜ್ಯದ ಸಹಕಾರಗಳನ್ನೆಲ್ಲ

ಕೊಡಿಸಿ ಕೋಟ್ಯಾಧಿಪತಿಯನ್ನಾಗಿ ಮಾಡಬೇಕು ಎಂಬುದು ಅವರ
ಕನಸಾಗಿತ್ತು. ಅದನ್ನು ಅವನಿಗೆ ಹೇಳಿಯೂ ಇದ್ದರು. ಆ ದೊಡ್ಡ
ಆಕಾಂಕ್ಷೆಯಲ್ಲಿ ಮನಸ್ಸು ಹಾಕದೆ ಇವನು ಯಾವುದೋ ಗಂಡು ಹುಡುಗನ
ಚೆಡ್ಡಿ ಕಳಚಿಸಿ ನೋಡುವದರಲ್ಲಿ ಖುಷಿಪಡ್ತಾನೆ. ಮುಂದೆ ಇವನಿಗೆ
ಜೀವನದಲ್ಲಿ ಸಿಕ್ಕಾದು ಅದೇಯ, ಮಾದರ್‌ಚೋದ್ ನನ್ಮಗನಿಗೆ, ಎಂದು
ಕೋಪ ಉರಿಯತೊಡಗಿತು. ಆದರೆ ಈಗ ತಾವು ಹಿಕಮತ್ತಿನಿಂದ
ನಡೆಯದಿದ್ದರೆ ಅವನ ಭವಿಷ್ಯ ಮಾತ್ರವಲ್ಲ, ತಮ್ಮ ಉದ್ಯಮ ಸ್ಥಾಪಿಸುವ
ಕನಸು ಕೂಡ ಮುರಿದು ಬೀಳುತ್ತದೆಂಬ ಎಚ್ಚರ ಮೂಡಿತು. ತಕ್ಷಣ
ರವೀಂದ್ರನ ಕಡೆಗೆ ತಿರುಗಿ ತಮ್ಮ ಕೈ ನೀಡಿ ಅವನ ಕೈ ಹಿಡಿದು ಹೇಳಿದರು:

"ನೋಡಿ ಸಾರ್, ನಮ್ಮ ಜಾಬ್ ಇದೆಯಲ್ಲಾ, ತಲೆ ಕೆಟ್ಟು ಓಗ್ತದೆ.
ಲಕ್ಷಾಂತರ ರೂಪಾಯಿ ಕೋಟ್ಯಾಂತರ ರೂಪಾಯಿಯ ಪ್ರಾಜೆಕ್ಟ್ ಬರ್ತವೆ.
ಇವನ್ನ ಓದಿ ತೀರ್ಮಾನ ಮಾಡೂದು ಅಂದರೆ ಏನು ಗೊತ್ತಾ? ಬರೀ
ಸುಳ್ಳು ಸುಳ್ಳು ಹೆಣೆದು ಇದು ಅಷ್ಟು ಚೆನ್ನಾಗಿ ನಡೀತದೆ, ಇಷ್ಟು ಲಾಭ
ಬರ್ತದೆ ಅಂತ ಬರೆದಿರ್ತಾರೆ. ನಾಳೆ ಮುಳುಗಿದರೆ ಯಾರಪ್ಪನ ಹಣ?
ಸರ್ಕಾರದ್ದು ತಾನೆ? ಮುಂದೆ ಜವಾಬ್ದಾರಿ ಯಾರ ತಲೆ ಮ್ಯಾಲೆ ಬರಬೇಕು?
ಆ ಪ್ರೂವ್ ಮಾಡಿ ರುಜು ಹಾಕಿದ ನನ್ನನ್ನ ತಾನೆ ನೇಣುಗಟ್ಟೋದು?
ನಾನು ಹಿಂಗೆ ಬಿಜಿಯಾಗಿದ್ದರೆ ಈ ಉಡುಗರು ಇಲ್ಲಿನೋಡಿ ಎಂಥಾ
ಕೆಲಸ ಮಾಡ್ಕ್ಯಂತರೆ? ನಾನು ನಿಮ್ಮ ಉಡುಗನ್ನ ಹಂಗೆ ಕೇಳ್ದೆ ಅಂತ
ಸಿಟ್ಟಾಕ್ಬ್ಯಾಡಿ. ನಿಮ್ಮ ಉಡುಗ ಬ್ಯಾರೆಯಲ್ಲ, ನಮ್ಮ ಉಡುಗ
ಬ್ಯಾರೆಯಲ್ಲ. ಇವತ್ತು ಫಸ್ಟ್ ಇಯರ್‌ನಲ್ಲಿರೋನು ನಾಳೆ ಫೈನಲ್
ಇಯರ್‌ಗೆ ಓಗೋದು? ಅತ್ಲಾಗ್ ಇದ ಅಮಿಕಬಲ್ ಆಗಿ ಸೆಟ್ಲ್
ಮಾಡಿಬಿಡಾಣ ಸಾರ್. ಇವತ್ತು ವಾಸ್ತವವಾಗಿ ಫೈನಾನ್ಸ್ ಕಮಿಟಿ
ಮೀಟಿಂಗ್ ಇತ್ತು. ಅದ ಬಿಟ್ಟು ಓಡಿ ಬಂದಿದೀನಿ."

ತಕ್ಷಣ ಹೀಗೆ ಬದಲಿಸಿದ ಶ್ರುತಿಯಿಂದ ರವೀಂದ್ರನಿಗೆ
ಆಶ್ಚರ್ಯವಾಗಲಿಲ್ಲ. ಎಚ್.ಒ.ಡಿ.ಯ ಎಚ್ಚರಿಕೆಯ ಮಾತು ಕೆಲಸ
ಮಾಡಿದೆ ಎಂದು ಅರ್ಥಮಾಡಿಕೊಂಡ. ಆದರೂ ಪುಂಡು ಬಿದ್ದ
ವಿದ್ಯಾರ್ಥಿಗಳ ಪ್ರಶ್ನೆಯನ್ನು ಅತಿಯಾಗಿ ಎಳೆಯುವುದೂ ಸಲ್ಲ ಎಂಬ

ಔದಾರ್ಯವೂ ಅವನ ಮನಸ್ಸಿನಲ್ಲಿ ಮೂಡಿತು. ಎರಡು ನಿಮಿಷ ಸುಮ್ಮನೆ ಕೂತಿದ್ದ. ಅಷ್ಟರಲ್ಲಿ ಪ್ರಿನ್ಸಿಪಾಲರೂ, "ನಿಮ್ಮ ಹುಡುಗನಿಗಾಗಿರೂ ಶಾಕ್ ಮತ್ತು ಅವಮಾನಕ್ಕೆ ನಾನು ಕ್ಷಮೆ ಬೇಡ್ತೀನಿ. ಇನ್ನು ಮೇಲೆ ನಾನು ಪ್ರತಿವರ್ಷದ ಶುರೂಲೇ ಎಲ್ಲಾ ಹೆಡ್ಸ್‌ನ ಮೀಟಿಂಗ್ ಕರೆದು ಬಿಗಿ ಮಾಡ್ತೀನಿ," ಎಂದರು.

ರವೀಂದ್ರ ಎಂದ: "ಆಗಲಿ. ಪ್ರಿನ್ಸಿಪಾಲರ ಮಾತಿಗೆ ಬೆಲೆ ಕೊಡೋಣ. ಪೋಲೀಸರ ವಶದಲ್ಲಿರೂ ಆ ನಾಲ್ವರು ಹುಡುಗರನ್ನ ನಾನು ನೋಡಿ ಮಾತಾಡಬೇಕಲ್ಲ."

"ಬನ್ನಿ ಬನ್ನಿ ಹೋಗಾಣ," ಪ್ರಿನ್ಸಿಪಾಲರು ಸಮಸ್ಯೆ ಪರಿಹಾರವಾದವರಂತೆ ತಕ್ಷಣ ಎಂದರು. ರೆಡ್ಡಿಯವರೂ ಕೂಡ, "ನಡೀರಿ, ನಾನೂ ನೋಡಿಲ್ಲ. ಸೀದಾ ಇಲ್ಲಿಗೆ ಬಂದೆ," ಎಂದು ನಿಟ್ಟುಸಿರು ಬಿಟ್ಟರು.

ರೆಡ್ಡಿಯವರ ಸರ್ಕಾರಿ ಕಾರಿಗೆ ಡ್ರೈವರ್ ಇದ್ದ. ನನ್ನ ಕಾರಲ್ಲೇ ಹೋಗಾಣ ಬನ್ನಿ ಎಂದು ಅವರು ಕರೆದರೂ ರವೀಂದ್ರ, "ಪ್ರಿನ್ಸಿಪಾಲರ ಕಾರು ಅನುಕೂಲ. ಅವರ ಕೈಲೂ ಮಾತಾಡಿದ ಹಾಗಾಗುತ್ತೆ," ಎಂದ. ರೆಡ್ಡಿಗೆ ಇವನ ಬಿಗಿ ಅರ್ಥವಾಯಿತು. ತಾವೊಬ್ಬರೇ ತಮ್ಮ ಕಾರಿನಲ್ಲಿ ಕೂತು ಪ್ರಿನ್ಸಿಪಾಲರ ಕಾರನ್ನು ಹಿಂಬಾಲಿಸುವಂತೆ ಡ್ರೈವರನಿಗೆ ಹೇಳಿದರು. ಸಬ್‌ಇನ್‌ಸ್ಪೆಕ್ಟರ ಕೋಣೆಯಲ್ಲಿ ಕೂತು ಅವರಿಗೆ ಇವರಿಬ್ಬರ ಪರಿಚಯ, ಬಂದ ಉದ್ದೇಶ ಹೇಳಿದ ನಂತರ ಅವರು 'ಕರೆಸುತೀನಿ, ತಾಳಿ' ಎಂದರು. "ಬ್ಯಾಡಿ ಸಾರ್. ನಾವು ಅಲ್ಲೇ ಹೋಗಿ ನೋಡ್ತೀವಿ. ಆ ನನ್ಮಗನಿಗೆ ನಾಚಿಕೆಯಾಗಲಿ ಅಂತ. ನಮ್ಮದು ಮೂಲ ನಾಗಾರೆಡ್ಡಿ ಫ್ಯಾಮಿಲಿ. ಹದಿನಾಲ್ಕು ತಲೆಮಾರಿನಿಂದ ರಿಕಾರ್ಡ್ ಇದೆ. ಅಷ್ಟು ಹಿಂದಿನ ಮರ್ಯಾದೇನ ಹಾಳು ಮಾಡಿ ಲಾಕಪ್‌ನಲ್ಲವನಲ್ಲ, ಅಲ್ಲೇ ನೋಡ್ತೀನಿ. ಸಾರ್. ತಾವು ಅಲ್ಲೇ ಬರಬೇಕು," ಎಂದು ತನ್ನ ನೈತಿಕ ಕೋಪವನ್ನ ಪರಿಗಣಿಸುವಂತೆ ರವೀಂದ್ರನನ್ನು ಆಹ್ವಾನಿಸಿದರು. ಎಲ್ಲರೂ ಸಬ್‌ಇನ್‌ಸ್ಪೆಕ್ಟರನ್ನು ಹಿಂಬಾಲಿಸಿದರು. ಸ್ಟೇಷನ್ನಿನ ಹಿಂಬದಿಯಲ್ಲಿದ್ದ ಕಬ್ಬಿಣದ ಸರಳುಗಳ ಲಾಕ್ ಅಪ್ ಕೋಣೆಯ ಬೀಗವನ್ನು ಪೇದೆ ತೆಗೆದಾಗ

ಒಳಗೆ ಆ ನಾಲ್ವರೂ ಗೋಡೆಯೊರಗಿ ನೆಲದ ಮೇಲೆ ಕೂತಿದ್ದರು. ಎಲ್ಲ ಮುಖಗಳೂ ಇಳಿದು ಜೋಲಾಡುತ್ತಿದ್ದವು. ತಮಗೆ ಬಂದಿರುವ ದಶೆಗ ಅವರ ಧೃತಿ ಕುಸಿದು ಬಿದ್ದಿತ್ತು. ಈಗ ತಾವಿರುವ ಸ್ಥಳದಲ್ಲಿ ಪ್ರಿನ್ಸಿಪಾಲರ ಮತ್ತು ಎಚ್.ಒ.ಡಿ.ಯರನ್ನು ಕಂಡು ತಲೆ ತಗ್ಗಿಸಿದರು. ತನ್ನ ತಂದೆಯನ ನೋಡಿದ ರೆಡ್ಡಿಯಂತೂ ಮುಖವನ್ನು ಮಂಡಿಯ ಸಂದಿಗೆ ಸಿಕ್ಕಿಸಿತೊಂ ಮಗನನ್ನು ನೋಡಿದ ತಕ್ಷಣ ಅವನ ತಂದೆಯ ಕೋಪ ಕೆರಳಿ ಬಿಟ್ಟಿತ "ಜೋಡಿನ ಏಟು ಬೀಳಬೇಕೆನ್ಲಾ ನಿನಗೆ ಬುದ್ದಿ ಬರಾಕೆ?" ಎಂದ ಬಗ್ಗಿ ತಮ್ಮ ಬಲಗಾಲಿನ ಪಂಪು ಶೂವನ್ನು ಕಳಚಿ ಕೈಗೆ ತೆಗೆದುಕೊಂ ಮೇಲೆತ್ತಿ ನಿಂತರು.

"ರೆಡ್ಡಿಗಳೇ, ತಾಳ್ಮೆ ತಗೋಳಿ, ತಾಳ್ಮೆ ತಗೋಳಿ. ನಾವೀ ಶಿಕ್ಷೆ ಮಾಡೋಣ. ನೀವು ಸುಮ್ಮನಿರಿ" ಎಂದು ಕೈ ಹಿಡಿಯಹೋ ಪ್ರಿನ್ಸಿಪಾಲರಿಂದ ಕೊಸರಿಕೊಂಡು ಆರ್ಭಟಿಸಿ ಮುನ್ನುಗ್ಗಿದಂತೆ ಮಾಡಿದ ರವೀಂದ್ರನಿಗೆ ಸೂಕ್ಷ್ಮ ಅರ್ಥವಾಯಿತು. ಇದು ಯಕ್ಷಗಾನದ ಶೈಲಿಯೆ ಅಥವಾ ಭಾಗವತರಾಟದ ವರಸೆಯೋ ಎಂದು ಮನಸ್ಸಿನಲ್ಲೇ ಜಿಜ್ಞಾ ಮಾಡುತ್ತಾ ನಿಂತಿದ್ದ.

ಸಬ್‌ಇನ್‌ಸ್ಪೆಕ್ಟರೇ, "ಕುಂತು ಮಾತಾಡಿ. ನಮ್ಮ ಕಸ್ಟಡೀಲಿರೂವ ತಂದೆಯಾದರೂ ಕೂಡ ಹೊಡಿಯಾಕ್ ಬಿಡೂದಿಲ್ಲ. ಶಿಕ್ಷೆ ವಿಧಿಸ ಅಧಿಕಾರ ಕೋರ್ಟಿಗೆ ಮಾತ್ರ ಇದೆ. ಒಂದು ನಾಲ್ಕು ಕುರ್ಚಿ ತಾ ಎಂದು ಪೇದೆಗೆ ಹೇಳಿದರು.

ಅವನು ಓಡಿ ಹೋಗಿ ತಂದು ಹಾಕಿದ ಸುಮಾರು ಐವತ್ತು ವ ಹಳೆಯ ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರ ಕಾ ಕುರ್ಚಿಗಳ ಮೇಲೆ ನಾಲ್ವರೂ ಕುಳಿತ ಮೇಲೆ ರೆಡ್ಡಿಯವರು ಕೇಳಿದರ "ಏಯ್, ನಿಜ ಹೇಳಿಬಿಡು, ಯಾಕೆ ಹಿಂಗ್ ಮಾಡ್ದೆ? ಆಸ್ಟಲಾಗೆ ಊ ಸರಿಯಾಗಿರುಲ್ಲ ಅಂತ ಮನೇಲಿ ಏಳಿ ದುಡ್ಡು ಇಸಕಂತಿದ್ದೆ. ಮಿಲಿ ಓಟಲಲ್ಲಿ ಚಿಕನ್ ತಿಂದು ಕೊಬ್ಬಿತ್ತಾ?"

ಮಂಡಿಗಳ ಮಧ್ಯಕ್ಕೆ ಸಿಕ್ಕಿಸಿಕೊಂಡಿದ್ದ ಮುಖವನ್ನು ಬಿ

ತ್ರದಂಥ ಸ್ಪ್ರಿಪ್‌ಕಿಂಗ್ ವಿಜಯಕುಮಾರ ಮಾತನಾಡಿದ: "ಏನಾದರೂ ಸರಿ. ನಾನಿನ್ನು ಈ ಕಾಲೇಜಲ್ಲಿ ಓದುಲ್ಲ. ಬೇರೆ ಯಾವುದಾದರೂ ಕಾಲೇಜಿಗೆ ಟ್ರಾನ್ಸ್‌ಫರ್ ಕೊಡಿಸಿ."

ಇದು ಅವನು ತನ್ನ ಮೇಲೆ ತಾನೇ ತೀರ್ಪುಮಾಡಿಕೊಂಡ ಶಿಕ್ಷೆ, ಎಂದು ಅವರೆಲ್ಲ ಅರ್ಥಮಾಡಿಕೊಂಡರು. ನಂಜುಂಡಪ್ಪ, ರಂಗನಾಥರು ಮುಖ ಎತ್ತಿ ಪ್ರಿನ್ಸಿಪಾಲರನ್ನು ನೋಡಿ, "ನಾವೇನು ಹಿಂಗೆ ಮಾಡಬೇಕು ಅಂತ ಹ್ವಂಟಿರಲಿಲ್ಲ. ನಮ್ಮ ಪಾಡಿಗೆ ನಾವು ನಮ್ಮ ರೂಮಿನಾಗಿದ್ವೆವು. ಫಸ್ಟ್ ಇಯರ್ ಒಬ್ಬ ಉಡುಗ ಬಂದವನೆ, ತಮಾಷಿ ಮಾಡಾಣ ಬನ್ನಿ ಅಂತ ವಿಜಯಕುಮಾರ ಕರದ; ನಾವು ಓದಿವಿ. ಅನೂಪನ ಪ್ಯಾಂಟು ಚಡ್ಡಿ ಬಿಚ್ಚಿದೋನು ಇವನು ಚೌಧುರಿ. ನಾವು ಸುಮ್ಮನೆ ಅಲ್ಲಿದ್ವೆವು. ನಮ್ಮದೇನೂ ತಪ್ಪಿಲ್ಲ. ನಾವು ಅಳ್ಳಿ ಉಡುಗರು. ಇಂಜಿನೀರಾಗಬೇಕು ಅಂತ ಬಂದಿದೀವಿ. ನಮ್ಮನ್ನ ಡಿಸ್‌ಮಿಸ್ ಮಾಡಬ್ಯಾಡಿ. ಕೊನೆ ವರ್ಷದಾಗೆ ಬ್ಯಾರೆ ಕಾಲೇಜಿಗೆ ಓಗು ಅಂದರೂ ಕಷ್ಟ," ಎಂದರು.

"ನೀವೇನೂ ಮಾಡದೇ ಇರಬಹುದು. ಆದರೆ ಅವನು ಇಷ್ಟೆಲ್ಲ ಮಾಡುವಾಗ ನೀವ್ಯಾಕೆ ತಪ್ಪಿಸಲಿಲ್ಲ?" ರವೀಂದ್ರ ಕೇಳಿದ್ದಕ್ಕೆ ರಾಕೆಟ್ ರಂಗನಾಥ, 'ನಮಗೆ ತಿಳೀಲಿಲ್ಲ,' ಎಂದ.

"ಕ್ಯಾ, ಕ್ಯಾ ಕಹತೇ ಹೈ? ವಾಟ್ ದೇ ಆರ್ ಸೇಯಿಂಗ್?" ಕನ್ನಡ ಮಾತು ಸರಿಯಾಗಿ ಅರ್ಥವಾಗದ ಚೌಧುರಿ ಕೇಳಿದ. ಅವರಿಬ್ಬರ ಮಾತನ್ನು ಸ್ಪಷ್ಟವಾದ ಹಿಂದಿಗೆ ತರ್ಜುಮೆ ಮಾಡಿ ರವೀಂದ್ರ ಹೇಳಿದ ನಂತರ ಅವನು ಗಟ್ಟಿಯಾಗಿ, "ಇಂಥ ನಂಬಿಕೆಗೆ ದ್ರೋಹ ಮಾಡುವ ಸ್ನೇಹಿತರೂ ನನಗೆ ಬೇಕಿಲ್ಲ. ಈ ಕಾಲೇಜೂ ಬೇಕಿಲ್ಲ. ಬೇರೆ ಕಾಲೇಜಿಗೆ ಬದಲಾವಣೆಯೂ ಬೇಡ. ನಾನು ಓದೂದ ಬಿಟ್ಟಿದೀನಿ ಅಂತ ಇವತ್ತು ಬೆಳಗ್ಗೆಯೇ ಆಣೆಮಾಡಿಕೊಂಡಿದೀನಿ. ಎಂಜಿನಿಯರ್ ಆಗಿ ನನಗೆ ಏನೂ ಆಗಬೇಕಿಲ್ಲ," ಎಂದ.

"ಕೊನೆಯ ವರ್ಷದಲ್ಲಿ ಬಿಟ್ಟು ಮುಂದೇನು ಮಾಡ್ತಿ?" ರವೀಂದ್ರ ಕೇಳಿದ.

"ಮುಂದೇನು ಮಾಡ್ತೀನೆಯೆ? ಚುನಾವಣೇಲಿ ಲಡಾಯಿ ಮಾ ಪ್ರಜಾಪ್ರತಿನಿಧಿಯಾಗ್ತೀನಿ. ಮಂತ್ರಿಯಾಗ್ತೀನಿ. ನನ್ನ ಮೇಲೆ ಹ ಕಟ್ಟಿ ಬೇಕಾದರೆ: ಮುಂಬರೂ ಚುನಾವಣೆಯಾದ ಮೇಲೆ ನಾನು ಕೊ ಪಕ್ಷ ಡೈಪ್ಯುಟಿ ಮಿನಿಷ್ಟರ್ ಆಗದಿದ್ದರೆ ನನ್ನ ಹೆಸರು ಜಸ್‌ಬೀರ ಚೌಧುರಿಯಲ್ಲ, ಜಸ್‌ಬೀರ್ ಚಮಾರ್ ಅಂತ!"

ಅನಂತರ ಅವರನ್ನು ಲಾಕಪ್ಪಿನಲ್ಲಿ ಬಿಟ್ಟು ಈ ನಾಲ್ವರ ಸಬ್‌ಇನ್‌ಸ್ಪೆಕ್ಟರ ಕೋಣೆಗೆ ಬಂದರು. "ಅವರಿಗೆ ಕೋರ್ಟಿನಲ ಶಿಕ್ಷೆಯಾಗಲೇಬೇಕು ಅನ್ನೂ ಹಟ ನನಗಿಲ್ಲ. ಅಡ್ಡ ಹಾದಿ ಬಿದ್ದಿದ್ದಾ ಅವರು ಸರಿಯಾಗೂದು ಮುಖ್ಯ. ಆದರೆ ನಾಳೆ ಲಾಕಪ್ಪಿನಿಂದ ಹೊರಬಂ ಮೇಲೆ ನನ್ನ ಮಗನ ಸುರಕ್ಷತೆಯ ಜವಾಬ್ದಾರಿ ಯಾರದ್ದು? ಕಂಪ್ಲೇಂಟ ಮಾಡಿ ಹೀಗೆ ಮಾಡಿದ ಅನ್ನೂ ರೊಚ್ಚು ಇಟ್ಟುಕೊಂಡು ಅವನಿ ಏನಾದರೂ ಅಪಾಯವಾದರೆ ಯಾರು ಹೊಣೆ?" ರವೀಂದ್ರ ಕೇಳಿದ.

"ಸಾರ್, ನಮ್ಮ ಹುಡುಗನ್ನ ಬಿಡುಗಡೆ ಮಾಡಿದ ತಕ್ಷಣ ನಾ ಬೆಂಗಳೂರಿಗೆ ಕರಕಂಡು ಹೋಗ್ತೀನಿ. ಅಲ್ಲಿಂದ ಅಲ್ಲೇ ಟ್ರಾನ್ಸ್‌ಫ ಮಾಡಿಸಿಕೊತ್ತೀನಿ. ಅವನ ರೂಮಿನಲ್ಲಿರೂ ಸಾಮಾನುಗಳನ್ನು ತಗಳ್ಳುಕ ಅವನನ್ನು ಕಳಿಸುಲ್ಲ," ರೆಡ್ಡಿ ಉತ್ತರಿಸಿದರು.

"ಹೋಗಿ ನಿನ್ನ ಸಾಮಾನು ಎತ್ತಿ ಕಟ್ಟಿಕೊಂಡು ಬಾ ಅಂದರ ಅವನು ಹಾಸ್ಟೆಲ್ ಕಾಂಪೌಂಡಿನೊಳಕ್ಕೆ ಕಾಲಿಡುಲ್ಲ. ಅಷ ನಾಚಿಕೆಯಾಗಿದೆ. ಒಬ್ಬೊಬ್ಬನನ್ನೇ ಕರೆದು ತನಿಖೆ ಮಾಡಿರೂ ನಂ ಗೊತ್ತು." ಸಬ್‌ಇನ್‌ಸ್ಪೆಕ್ಟರು ಹೇಳಿದರು. "ಹರಿಯಾಣದ ಚೌಧು ಕಳಿಸಿ ಬಿಡಿ ಸಾರ್ ಊರಿಗೆ ಹೊಂಟೋಯ್ತಿನಿ ಅಂತ ವೈಷ್ಣೋದೇ ಮೇಲೆ ಆಣೆ ಹಾಕಿ ಅಂಗಲಾಚಿಕೊಂಡಿದಾನೆ. ಉಳಿದಿಬ್ಬರು ಹಳ್ಳಿಯೋ ಕತ್ತು ಬಗ್ಗಿಸಿಕೊಂಡು ಕಾಲೇಜಿಗೆ ಹೋಗಿ ಡಿಗ್ರಿ ತಗಂಡು ನೌ ಮಾಡಬೇಕು; ಇಲ್ಲದಿದ್ದರೆ ಹೊಲಮಾರಿ ದುಡ್ಡು ಕೊಡ್ತಿರೂ ಅ ಅಣ್ಣಂದಿರು ಎಕ್ಕಡ ತಗಂಡು ಹ್ವಡೀತಾರೆ ಅನ್ನೂ ಭಯ ಹುಟ್ಟಿ ಸಾರ್ ಬಿಡುಗಡೆ ಮಾಡಿಸಿ, ನಾವಿನ್ನು ಹಾಸ್ಟೆಲಾಗಿರುಲ್ಲ. ನಾವಿಬ್ಬರ

ಹೊರಗಡೆ ರೂಮು ಮಾಡ್ಕೊಂಡು ಪ್ಲೇಟನ್ನ ತಿಂದುಕಂಡು ಈ ಎರಡು ಸೆಮಿಸ್ಟರ್ ಕಳೀತೀವಿ ಅಂತ ಗೋಗರೆಕಂಡವ್ರು."

ಈ ತೀರ್ಮಾನ ಎಲ್ಲರಿಗೂ ಒಪ್ಪಿಗೆಯಾಯಿತು. ವಿಜಯಕುಮಾರ ರೆಡ್ಡಿ ತಮ್ಮ ಕಾಲೇಜಿನಲ್ಲೇ ಮುಂದುವರೆದರೆ ತಮಗೆ ಅನುಕೂಲವೆಂದು ಪ್ರಿನ್ಸಿಪಾಲರು ಮತ್ತು ಎಚ್.ಒ.ಡಿ. ತಮ್ಮ ತಮ್ಮ ದೃಷ್ಟಿಯಿಂದ ಯೋಚಿಸಿದರಾದರೂ ಯಾರೂ ಬಾಯಿಬಿಟ್ಟು ಆಡಲಿಲ್ಲ. ಹುಡುಗ ಕಂಪ್ಲೇಂಟ್ ವಾಪಾಸು ತಗೊಂಡರೆ, 'ಬಿ' ಶೀಟ್ ಹಾಕುವುದೇನೂ ಕಷ್ಟವಲ್ಲ. ಆದರೆ ಯಾವುದಕ್ಕೂ ಎಸ್.ಪಿ.ಯವರ ಅನುಮತಿ ಬೇಕು, ಸಬ್‌ಇನ್‌ಸ್ಪೆಕ್ಟರು ಸೂಚಿಸಿದರು. ಎಸ್.ಪಿ. ಯಾರು ಇಲ್ಲಿ? ರೆಡ್ಡಿ ವಿಚಾರಿಸಿದರು. ಸಿದ್ಧರಾಜು ಅಂತ. ಸಬ್‌ಇನ್‌ಸ್ಪೆಕ್ಟರು ಹೇಳಿದ ಮೇಲೆ ಯಾರಪ್ಪ ಸಿದ್ಧರಾಜು ಅಂದರೆ? ಪರಿಚಯವಿಲ್ಲ. ಗುರುತಿಲ್ಲದೆ ನೇರವಾಗಿ ಹೋಗಿ ಅವನು ಉಲ್ಟಾ ಜಾಡಿಸಿದರೆ! ಯಾರ ಮೂಲಕವಾದರೂ ಹೇಳಿಸಬೇಕು. ಯಾರ ಕೈಲಿ ಹೇಳಿಸಿದರೆ ಆಗುತ್ತೆ? ಮೈಸೂರು ಡಿ.ಸಿ.? ಯಾರು ಮೈಸೂರಿನ ಡಿ.ಸಿ.? ಎಂಬ ಪ್ರಶ್ನೆಗಳು ಅವರ ತಲೆ ತಿನ್ನ ತೊಡಗಿದವು. ರವೀಂದ್ರ ಪ್ರಿನ್ಸಿಪಾಲರ ಕಡೆಗೆ ತಿರುಗಿ, "ವಿಜಯಕುಮಾರನಿಗೆ ಬೆಂಗಳೂರಿಗೆ ವರ್ಗ, ಚೌಧುರಿ ಕಾಲೇಜು ಬಿಡೋದು, ಉಳಿದಿಬ್ಬರು ಹಾಸ್ಟೆಲು ಬಿಟ್ಟು ಹೊರಗಡೆ ಇರೂದು. ನನ್ನ ಮಗನ ರಕ್ಷಣೆ ನಿಮಗೆ ಸೇರಿದ್ದು. ಒಟ್ಟಿನಲ್ಲಿ ಇಷ್ಟು ತೀರ್ಮಾನ ಅಲ್ಲವೆ?" ಎಂದು ಹೇಳಿ ಅವರನ್ನು ಮಾತಿಗೆ ಬಂಧಿಸಿದ.

*　　　*　　　*

ಇದ್ದಕ್ಕಿದ್ದಂತೆಯೇ ಅನೂಪನಿಗೆ ಕಾಲೇಜಿನಲ್ಲಿ ಪ್ರಸಿದ್ಧಿ ಸಿಕ್ಕಿಬಿಟ್ಟಿತು. ಕೊನೆ ವರ್ಷದ ಸ್ಪೀಡ್‌ಕಿಂಗ್, ಕಾಲೇಜಿನಲ್ಲಿ ಅವನಾರೆಂದು ತಿಳಿಯದ ವಿದ್ಯಾರ್ಥಿ ವಿದ್ಯಾರ್ಥಿನಿ ಅಧ್ಯಾಪಕರು ಯಾರಿದ್ದರು? ಹರಿಯಾಣದಿಂದ ಬಂದ ಆರಡಿ ಎತ್ತರದ ಭೀಮನನ್ನು ಲಾಕಪ್ಪಿಗೆ ಹಾಕಿಸಿ ಕಾಲೇಜನ್ನೇ ಬಿಡಿಸಿ ಓಡಿಸಿನಲ್ಲ!. ಅದೂ ಇಲ್ಲಿಗೆ ಸೇರಿ ಹದಿನೈದೇ

ದಿನಗಳಲ್ಲಿ, ಅಂದರೆ ಸಾಮಾನ್ಯ ಧೈರ್ಯವೆ? ಹುಡುಗಿಯರೆಲ್ಲ ತಿರುಗಿ ನೋಡುವಂತೆ ಯುದ್ಧ ವಿಮಾನದ ಹಾಗೆ ಸದ್ದು ಮಾಡಿಕೊಂಡು ಬುಲೆಟ್ ಮೋಟರ್ ಬೈಕ್ ನಡೆಸಲು ಸಾಹಸ ಬೇಕು ನಿಜ. ಆದರೆ ಅಂಥವನನ್ನು ಲಾಕಪ್ಪಿಗೆ ಹಾಕಿಸಿ ಕಾಲೇಜಿನಿಂದಲೇ ಓಡಿಸಬೇಕಾದರೆ!

"ಆದರೆ ನೀನು ಮಾಡಿದ್ದು ಯಾವ ದೊಡ್ಡ ಕೆಲಸ, ಅಂತ ಹುಡುಗೀರು ಮಾತಾಡ್ಕತ್ತಿದಾರಂತೆ," ಎಂದು ಅವನ ಕೋಣೆಯ ಸಹವಾಸಿ ಕಾಂತರಾಜು ವರದಿ ಮಾಡಿದ.

"ಯಾರು ಹಾಗಂತ ಹೇಳ್ತೋರು ನಿಂಗೆ?"

"ನಮ್ಮ ಮೆಕ್ಯಾನಿಕಲ್‌ನಲ್ಲಿ ಚಂದ್ರವಾಣಿ ಅಂತ ಒಬ್ಬಳಿದ್ದಾಳೆ, ತುಂಬ ಬೋಲ್ಡ್, ಹುಡುಗೀರಿಗೆಲ್ಲ ಲೀಡರ್. ಅವಳೇ ಅಂದಳು. 'ನಿಮ್ಮ ರೂಮ್‌ಮೇಟಿಗೆ ಹೇಳಿ, ಏನೋ ಸ್ವಲ್ಪ ತಮಾಷೆ ಮಾಡಿ ರ್‍ಯಾಗ್ ಮಾಡಿದ್ದಕ್ಕೆ ಹೆದರಿ ಪೋಲೀಸಿಗೆ ಕಂಪ್ಲೇಂಟ್ ಮಾಡೂ ಪುಕ್ಕಲತನಾನ ನಾವು ಇಷ್ಟ ಪಡುಲ್ಲ. ವಿ.ಕೆ.ಯ ಹಾಗೆ ಸ್ಪೀಡ್ ಹೊಡೆದು ಸೋಲಿಸುಕ್ಕೆ ಶಕ್ತಿ ಇಲ್ಲದ ಹೊಟ್ಟೆಕಿಚ್ಚಿಗೆ ಅನೂಪ್ ಪೋಲೀಸಿಗೆ ಕಂಪ್ಲೇಂಟ್ ಮಾಡಿದ ಅಂತ ಎಷ್ಟೋ ಹುಡುಗೀರು ಮಾತಾಡ್ಕತ್ತಿದಾರೆ, ಅಂತ!"

೪. ಮಾತಂಗಿ

('ದಾಟು' ಕಾದಂಬರಿಯಿಂದ)

('ವಂಶವೃಕ್ಷ'ದ ಭೈರಪ್ಪನವರ ಲೇಖನಿಯಿಂದಲೇ ಮೂಡಿಬಂದ ಇನ್ನೊಂದು ಮಹತ್ವದ ಕೃತಿ 'ದಾಟು'. ಭಾರತೀಯ ಸಮಾಜ ವ್ಯವಸ್ಥೆಯ, ವರ್ಣಗಳ, ಜಾತಿ ಉಪಜಾತಿಗಳ ಸಮಸ್ಯೆಯನ್ನು ಸಮಗ್ರ ದೃಷ್ಟಿಯಿಂದ ನೋಡಿ ಅದರ ಹತ್ತಾರು ನೂರಾರು ಮುಖಗಳನ್ನು ಎಳೆ ಎಳೆಯಾಗಿ ಬಿಡಿಸಿ ತೋರಿಸುವ ಈ ಕಾದಂಬರಿಯಲ್ಲಿ ಕಾದಂಬರಿಕಾರನ ಲೇಖನಿಯ ಸತ್ವವನ್ನು ಪೂರ್ತಿ ಅರಗಿಸಿಕೊಂಡು ಮೂಡಿಸಿರುವ ಪಾತ್ರ 'ಮಾತಂಗಿ.' ಅವಳನ್ನೇ ಕೇಂದ್ರದಲ್ಲಿರಿಸಿಕೊಂಡು ಇಲ್ಲಿಯ ಕಥನ ಮೂಡಿ ಬಂದಿದೆ.)

ವೆಂಕಟೇಶಯ್ಯನವರ ಹೆಂಡತಿ ಸತ್ತಾಗ ಮಗ ವೆಂಕಟೇಶನಿಗೆ ಎಂಟು ವರ್ಷ. ಸತ್ಯಳಿಗೆ ನಾಲ್ಕು. ಅವರಿಗಿದ್ದ ಆಸ್ತಿಯಲ್ಲಿ ಮತ್ತೆ ಹೆಣ್ಣು ಕೊಡುವವರಿಗೆ ಕಡಿಮೆ ಇರಲಿಲ್ಲ. ಇನ್ನೂ ಮೂವತ್ತು ವರ್ಷದ ಪ್ರಾಯ. ಆದರೂ ಅವರು ಎರಡನೇ ಮದುವೆ ಮಾಡಿಕೊಳ್ಳಲಿಲ್ಲ.

ಎರಡು ವರ್ಷ ಕಳೆದಿತ್ತು. ಬೇರೆ ಮದುವೆಯಾಗುವುದಿಲ್ಲವೆಂದು ಕೇಳಿದವರಿಗೆಲ್ಲ ಅವರು ಖಡಾಖಂಡಿತವಾಗಿ ಹೇಳಿಬಿಟ್ಟಿದ್ದರು. ಆದರೆ ಪತ್ನೀವಿಯೋಗದ ದುಃಖದ ಹೊಸತರಲ್ಲಿ ಮನಸ್ಸನ್ನು ಆವರಿಸಿದ್ದ ವೈರಾಗ್ಯ ದಿನಗಳೆದಂತೆ ಇಳಿಯುತ್ತಿತ್ತು. ಶರೀರದ ಕಾಮನೆಗಳು ಕೆರಳಿ ಮನಸ್ಸು ಎತ್ತೆತ್ತಲೋ ಹೋಗುತ್ತಿತ್ತು. ದೇವಸ್ಥಾನದಲ್ಲಿ ಪೂಜೆ ಮಾಡುವಾಗ ಸಹ ಕಲ್ಪನೆಯು ಬೇರೆ ಕಡೆಗೆ ಎಳೆದುಕೊಂಡು ಹೋಗುತ್ತಿತ್ತು. ತಮಗೆ ಆಗುತ್ತಿರುವುದರಲ್ಲಿ ಅಸಹಜವಾದುದೇನೂ ಇಲ್ಲವೆಂಬುದು ಅವರಿಗೆ ಗೊತ್ತು. ಇನ್ನೊಂದು ಮದುವೆಯೇ ಇದಕ್ಕೆ ಮದ್ದು ಎಂಬುದು

ತಿಳಿಯುತ್ತಿತ್ತು. ಆದರೆ ಮಕ್ಕಳಿರುವಾಗ ಎರಡನೆಯ ಮದುವೆಯಾದರೆ
ಅವುಗಳು ತಮ್ಮ ಮನೆಯಲ್ಲೇ ಪೊರಗಿನವಾಗುತ್ತವೆ ಎಂಬ ಭಯವೂ
ಜಾಗ್ರತವಾಗಿರುತ್ತಿತ್ತು. ಇದಕ್ಕಿರುವುದು ಒಂದೇ ಉಪಾಯ.
ಯಾರನ್ನಾದರೂ ಇಟ್ಟುಕೊಳ್ಳುವುದು. ಅದೇನು ಯಾರೂ ಮಾಡದ
ಕೆಲಸವಲ್ಲ. ಪುಟ್ಟೇಗೌಡರ ಸೂಳೆ, ಗುಂಡ್ಮೈಯ್ಯಂಗಾರರು ಇಟ್ಕಂಡೋಳು
ಎಂದು ಕೆಲ ಹೆಂಗಸರನ್ನು ಕರೆಯುತ್ತಿದ್ದರೂ, ಹೆಂಗಸಿಗಾಗಲಿ ಅ
ಯಜಮಾನರುಗಳಿಗಾಗಲಿ ಕೀಳು ಭಾವನೆ ತೋರಿಸುತ್ತಿರಲಿಲ್ಲ. ತಾವು
ಒಬ್ಬಳನ್ನು ಇಟ್ಟುಕೊಳ್ಳಬಹುದು. ವರ್ಷಕ್ಕೆ ಒಂದಿಷ್ಟು ರಾಗಿ, ಕಾಳು,
ತೆಂಗಿನಕಾಯಿ, ಎರಡು ಸೀರೆ ಕೊಟ್ಟರೆ ಸಾಕು. ಹೆಚ್ಚು ಹೊಣೆ ಏನೂ
ಇರುವುದಿಲ್ಲ ಎಂಬ ಯೋಚನೆ ಹಲವು ಸಲ ಬರುತ್ತಿತ್ತು.

ಇಂಥದೇ ಯೋಚನೆಯಲ್ಲಿ ನಾಲ್ಕೈದು ತಿಂಗಳು ಕಳೆಯಿತು. ಆದರೆ
ಯಾವ ಹೆಂಗಸೂ ಸಿಕ್ಕಲಿಲ್ಲ. ಶ್ರೀನಿವಾಸ ದೇವರ ಅರ್ಚಕತನವೊಂದಿಲ್ಲದಿದ್ದರೆ
ಅವರು ಏನು ಮಾಡುವುದಕ್ಕೂ ಹೆದರಬೇಕಾಗಿರಲಿಲ್ಲ. ಹಾಗೆ ನೋಡಿದರೆ
ದೇವರ ಜಮೀನು ಇಲ್ಲದಿದ್ದರೂ ಅವರ ಜೀವನಕ್ಕೆ ತೊಂದರೆ ಇಲ್ಲ.
ಸ್ವಂತದ್ದೇ ಮುನ್ನೂರು ತೆಂಗಿನ ಮರ, ಆರು ಎಕರೆ ಹೊಲ, ಎರಡು
ಎಕರೆ ಗದ್ದೆಗಳಿವೆ. ಆದರೆ ಯಾವ ಕಷ್ಟವೂ ಇಲ್ಲದೆ, ಹಿಂದಿನಿಂದ ಬಂದ
ಹತ್ತೆಂಟು ಎಕರೆ ಇನಾಮನ್ನು ಯಾಕೆ ಕಳೆದುಕೊಳ್ಳಬೇಕು ಎಂಬ ವ್ಯವಹಾರ
ಜ್ಞಾನ.

ಇದೇ ದಿನಗಳಲ್ಲಿ ಒಂದು ದಿನ ಮಾತಂಗಿ ಇವರ ಕಣ್ಣಿಗೆ ಬಿದ್ದಳು.
ಅವಳೇನೂ ಇವರು ಅದುವರೆಗೆ ಕಾಣದ ಹೆಂಗಸಲ್ಲ. ಮಾದಿಗ
ಕೇರಿಯವಳು. ಸ್ವಂತ ಗುಡಿಸಲನ್ನು ಬಿಟ್ಟರೆ ಬೇರೆ ಆಸ್ತಿ ಇಲ್ಲ. ಇಪ್ಪತ್ತಾರು
ಇಪ್ಪತ್ತೇಳು ವಯಸ್ಸಿನ ವಿಧವೆ. ಯಾರಾದರೂ ಎರಡನೇ ಮದುವೆ
ಮಾಡಿಕೊಳ್ಳುವವರು ಸಿಕ್ಕಿದರೆ ಸಿದ್ಧಳಾಗಿದ್ದಳು. ಅವಳ ಬಣ್ಣ
ಕಪ್ಪಿರಬಹುದು. ಆದರೆ ಹೊಸ ಮಳಕದಂತೆ ಮೋಪಾಗಿದ್ದಳು.

ಸಂಜೆಯ ಮಬ್ಬು ಕವಿಯುತ್ತಿತ್ತು. ಇವರು ತಮ್ಮ ಗದ್ದೆಯ ನೀರು
ನೋಡಿಕೊಂಡ ಮೇಲೆ ತೋಟಕ್ಕೆ ಹೋದರು. ಅವಳು ಇವರ ತೋಟದಲ್ಲಿ

ಸೋಗೆ ಕಟ್ಟಿಕೊಳ್ಳುತ್ತಿದ್ದಳು. ಹಿಂದಿನಿಂದ ಬಂದ ಇವರು ಅವಳಿಗೆ ಕಾಣಲಿಲ್ಲ. 'ಏನೇ ಇದು?' ಎಂದದ್ದಕ್ಕೆ ಹೆದರಿಬಿಟ್ಟಳು.

'ಇಟ್ ಬೇಸಾಕ ಸದ್ದ ಪುಳ್ಳೆ ಇರ್ಸಿಲ್ಲ ಕಣಯ್ಯಾ' ಎಂದು ಹೆದರುತ್ತಾ ನಿಂತುಕೊಂಡಳು. ಅವಳ ಮೈಕಟ್ಟು ಇವರಿಗೆ ಬೇಕಾದುದನ್ನು ಸೂಚಿಸಿಬಿಟ್ಟಿತು. ಆದರೆ ಹೇಗೆ ಮಾತನಾಡಬೇಕೆಂಬುದು ತಕ್ಷಣ ತಿಳಿಯದು.

'ತಗ. ತಗ, ನಾನೇಸ್ ಬ್ಯಾಡ ಅನ್ಲಿಲ್ಲ. ರೊಟ್ಟೆಗ್ ಕಾಯಿಗೀಯಿ ಬೇಕಾ?'

'ಕೊಟ್ರೆ ಬಡಮುಂಡೆ ಕಷ್ಕಂಡ್, ತಿಂತೀನಿ.'

ಮುಂದೆ ಮಾತಾಡಲು ಇವರಿಗೂ ತಿಳಿಯಲಿಲ್ಲ. ಇವರ ಆಶಯ ಅವಳಿಗೂ ತಿಳಿಯಲಿಲ್ಲ. ಸೋಗೆಯ ಹೊರೆಯನ್ನು ಎತ್ತಿ ತಲೆಯ ಮೇಲೆ ಇಟ್ಟುಕೊಂಡಳು.

'ಅದ್ಯಾಕ್ ಹ್ವಂಟೆ ಇರು' – ಇವರೆಂದರು.

'ಕತ್ಲಾತು ಕಣ್ರಯ್ಯಾ' - ಎಂದು ಅವಳು ಹೊರೆ ಹೊತ್ತುಕೊಂಡಳು. ಈಗ ಮಾತಾಡಲೇಬೇಕು. ಇಲ್ಲದಿದ್ದರೆ ಅವಳು ಹೊರಟು ಹೋಗುತ್ತಾಳೆ, ಎಂದು ಯೋಚಿಸಿದ ಅವರು, 'ಹ್ವರೆ ಇಳ್ಸು. ಕಾಯಿ ಕೊಡ್ತೀನಿ,' ಎಂದರು. ಅವಳು ಕೆಳಗೆ ಇಳಿಸಿ ನಿಂತಳು.

ಇನ್ನು ಮುಂದೆ ಹೇಗೆ ಮಾತನಾಡಬೇಕೆಂಬುದು ತಿಳಿಯದೆ ಇವರು ಕಾಣುತ್ತಿದ್ದರು. ಕೊನೆ 'ಇದ್ಯಾಕಿಂಥ ಹರಕು ಸೀರೆ ಉಟ್ಕಂಡಿದೀಯ?' ಎಂದರು.

'ಬಡ ಮುಂಡೆಗೆ ಯಾರ್ರಯ್ಯಾ ತಂದ್ ಕೊಡ್ತಾರು?'

'ನಾನ್ ದುಡ್ ಕೊಡ್ತೀನಿ. ಸಂತೇಲಿ ತಗ.'

ಅವಳು ಸುಮ್ಮನೆ ನಿಂತಳು. ಇವರೇ 'ತಿಳೀಲಿಲ್ವೇನೇ?' ಎಂದರು.

ಅವಳಿಗೆ ಅರ್ಥವಾಯಿತು. ಈ ಅಯ್ಯನವರ ಹೆಂಡತಿ ತೀರಿ ಮೂರು ವರ್ಷವಾಗಿದೆ. ಅವರು ಕೇಳುವುದರಲ್ಲಿ ತಪ್ಪೇನೂ ಇಲ್ಲ. ತಮ್ಮ ಕೇರಿಯ

ತನ್ನಂಥ ಹೆಂಗಸರನ್ನು ಕೆಲವು ಹಾರುವರು ಮುಟ್ಟಿಸಿಕೊಳ್ಳುವುದು ಅವಳಿ
ತಿಳಿಯದ ಮಾತಲ್ಲ. ಆದರೆ ಇವರು ದೇವರ ಪೂಜಾರಿಗಳು. ಇವ
ದೇವರು ತಮ್ಮ ಮಾರಮ್ಮನಿಗಿಂತ ಗಟ್ಟಿಯಾದುದೆಂದು ಅವಳಿಗೆ ಗೊತ್ತು
ಅದರ ಪೂಜೆ ಮಾಡುವವರು ತನ್ನನ್ನು ಮುಟ್ಟಿದ್ದರೆ, ದೇವರು ತನ
ತನ್ನ ಕೇರಿಗೆ ಏನಾದರೂ ಮಾಡಿದರೆ ಗತಿ ಏನು ಎಂಬ ಭಯ ಅವಳದು

'ಯಾಕೆ? ಏನಂತೀಯಾ?' – ಅವರು ಮತ್ತೆ ಕೇಳಿದರು.

'ನೀವು ಗುಡಿ ಪೂಜೆ ಮಾಡ್ತೀರಲ್ರಯ್ಯ?'

ಅವರಿಗೆ ಮುಖಕ್ಕೆ ಹೊಡೆದಂತಾಯಿತು. ಯಾವ ಕಸುಬು ತಮ್ಮನ
ಇಷ್ಟು ದಿನ ತೊಳಲಿ ಹಿಂತೆಗೆಯುವಂತೆ ಮಾಡಿತೋ ಅದನ್ನು ಇವ
ಹೇಳುತ್ತಿದ್ದಾಳೆ. ಇವಳಿಗೆ ಏನೆಂದು ಸಮಾಧಾನ ಹೇಳುವುದು? ಮಾತಂ
ಸುಮ್ಮನೆ ತಲೆ ತಗ್ಗಿಸಿ ನಿಂತಿದ್ದಳು. ಸುತ್ತಚೆನ್ನಾಗಿ ಕತ್ತಲು ಕವಿಯುತ್ತಿತ್ತು
'ಯಾರ್ ಕಾಣಾಕ್ ಬತ್ತಾರೆ ಅಂತ ಹೆದರ್ಕತ್ತೀಯೆ?' ಎಂದು ಮುಂ
ಹೋಗಿ ಮುಟ್ಟಿಯೇ ಬಿಟ್ಟರು.

ಬೇಲಿಯ ಸಂದಿಯಿಂದ ನುಸಿದ ಅವಳಿಗೆ ಇವರೇ ಸೋಗೆಂ
ಹೊರೆಯನ್ನು ಕೊಟ್ಟರು. ಅವಳು ಹೋದ ಮೇಲೆ ತಾವು ಕತ್ತಲ
ನಡೆದು ಮನೆಗೆ ಬಂದರು.

ಪಡಸಾಲೆಯಲ್ಲಿ ಲಾಟೀನಿನ ಮುಂದೆ ಕೂತು ವೆಂಕಟೇಶ, ಸತ್ಯ
ಓದಿಕೊಳ್ಳುತ್ತಿದ್ದುದು ಕಣ್ಣಿಗೆ ಬಿತ್ತು. ತಾವು ಇನ್ನೇನು ಹೊಸ
ದಾಟಬೇಕೆನ್ನುವಾಗ ಮಾದಿಗಿತ್ತಿಯನ್ನು ಮುಟ್ಟಿಸಿಕೊಂಡಿದ್ದ ನೆನಪಾಯಿತ
ಓೀಗೆ ಹ್ಯಾಗೆ ಒಳಗೆ ಹೋಗುವುದು? ಹಾಗೆಯೇ ಹಿಂತಿರುಗಿ ತೋಟ
ಕಡೆಗೆ ನಡೆದರು. ತೋಟದಲ್ಲಿಯೇ ಒಂದು ಸಣ್ಣ ಕೊಳವಿದೆ. ಉ
ಪಂಚೆ, ತೊಟ್ಟ ಅಂಗಿ ಮತ್ತು ಹೆಗಲಿನ ಚೌಕಗಳ ಸಮೇತ ನೀರಿನ
ಇಳಿದು, ಅನಂತರ ಅದೇ ಬಟ್ಟೆಗಳನ್ನು ಹಿಂಡಿ ಉಟ್ಟುಕೊಂಡು ಮನ
ಹಿಂತಿರುಗಿದರು. ಕಾಲಿಗೆ ಮೆಟ್ಟಿಕೊಳ್ಳುವ ಚಕ್ಕಳದ ಎಕ್ಕಡ ಮಾದಿಗ
ಮಾಡಿದುದಾದರೂ ಅದಕ್ಕೆ ಮೈಲಿಗೆ ಇಲ್ಲ.

ಏಳು ವರ್ಷದ ಹುಡುಗಿ ಸತ್ಯ ಕೇಳಿದಳು:

'ಅಪ್ಪ, ಇಷ್ಟು ಹೊತ್ನಲ್ಲಿ ಒದ್ದೆ ಬಟ್ಟೆ ಉಟ್ಕಂಡು ನೆಂದ ತಲೇಲಿ ಬಂದಿದೀಯಲ್ಲ. ಯಾಕೆ?'

'ಸ್ನಾನ ಮಾಡ್ದೇ ಪುಟ್ಟೀ ಕೆರೇಲಿ'

'ಅದ್ಯಾಕ್ ಮಾಡ್ದೆ ತಣ್ಣೀರಲ್ಲಿ? ಮನ್ಲಿ ಬಿಸಿ ನೀರು ಕಾಯ್ಸಕ್ಕಾಗ್ತಿರಲಿಲ್ವೆ?'

ಚುರುಕು ಬುದ್ಧಿಯ ಈ ಹುಡುಗಿಗೆ ಏನು ಹೇಳಬೇಕೆಂಬುದು ತಕ್ಷಣ ತಿಳಿಯಲಿಲ್ಲ. 'ದೂರದ ಒಬ್ಬ ನೆಂಟರು ಸತ್ತ ಸಮಾಚಾರ ತಿಳೀತು. ಹಾಗೇ ಸ್ನಾನ ಮಾಡಿ ಬಂದೆ' ಎಂದರು. ಅವರಿಗೆ ಒಳಗಿನಿಂದ ಒಣಗಿದ ಪಂಚೆ, ಅಂಗಿಗಳನ್ನು ತಂದುಕೊಟ್ಟ ಸತ್ಯಭಾಮೆಯೇ ಕೇಳಿದಳು, 'ಅಪ್ಪ ಸೂತಕದ ಸ್ನಾನ ಮಾಡಿದ ಮೇಲೆ ಬೇರೆ ಜನಿವಾರ ಹಾಕ್ಕಾಬ್ಯಾಡವೆ?'

ಹೌದು. ಬ್ರಹ್ಮಗಂಟು ಹಾಕಿರುವ ಜನಿವಾರ ಬರೀ ನೆನೆದರೆ ಶುದ್ಧವಾಗುವುದಿಲ್ಲ. ಮಾದಿಗಿತ್ತಿಯನ್ನು ಮುಟ್ಟಿಸಿಕೊಂಡ ಮೇಲೆ ಅದನ್ನು ಬದಲಾಯಿಸಲೇಬೇಕು. ಇಲ್ಲದೆ ನಾಳೆ ದೇವಸ್ಥಾನದಲ್ಲಿ ಪೂಜೆ ಮಾಡುವುದು ಹ್ಯಾಗೆ ಎನಿಸಿ, ರೇಶ್ಮೆಯ ಮಡಿಯುಟ್ಟು, ಮನೆಯಲ್ಲೇ ಇದ್ದ ಹೊಸ ಜತೆ ಜನಿವಾರವನ್ನು 'ಯಜ್ಞೋಪವೀತಂ ಪರಮಂ ಪವಿತ್ರಂ' ಹೇಳುತ್ತ ಹಾಕಿಕೊಂಡರು.

ಅಡಿಗೆಯ ಅಜ್ಜಿ ಬಡಿಸಿತು. ಇಬ್ಬರು ಮಕ್ಕಳೊಡನೆಯೂ ಕೂತು ಇವರು ಊಟ ಮಾಡಿದರು. ಅನಂತರ ಎಂದಿನಂತೆ ಮೂರು ಹಾಸಿಗೆ ಹಾಸಿಕೊಂಡರು. ಒಂದು ಪಕ್ಕಕ್ಕೆ ವೆಂಕಟೇಶ ಇನ್ನೊಂದು ಪಕ್ಕಕ್ಕೆ ಸತ್ಯ ಮಲಗಿಕೊಂಡರು. ಆ ದಿನ ಮನಸ್ಸಿಗೇನೋ ನೆಮ್ಮದಿ ಎನಿಸಿತ್ತು. ಹೀಗಾಗುತ್ತದೆಂಬ ಕಲ್ಪನೆ ಬರುವುದೂ ಸಾಧ್ಯವಿರಲಿಲ್ಲ. ಅಷ್ಟು ಅನಿರೀಕ್ಷಿತವಾಗಿ, ಅಷ್ಟು ಬೇಗ ಎಲ್ಲವೂ ನೆರವೇರಿ ಹೋಯಿತು. ಯುಗ ಯುಗಾಂತರವಾಗಿತ್ತೇನೋ ಆ ಸುಖ ಕಂಡು ಎನಿಸಿತ್ತು. ಕತ್ತಲಲ್ಲಿ ಏನನ್ನೋ ತಡಕಾಡುತ್ತಿದ್ದಾಗ ಆಕಸ್ಮಾತ್ ಸುಖವೇ ಮೈತಳೆದು ಕೈಗೆ ಸಿಕ್ಕಿದಂತೆ ಆಗಿತ್ತು ಇವತ್ತು. ಆದರೆ ಎಲ್ಲ ಬಿಟ್ಟು ತಾನು ಮಾದಿಗಿತ್ತಿಯನ್ನು ಮುಟ್ಟಿದೆನಲ್ಲ; ಸಾಮಾನ್ಯ ಲೌಕಿಕ ಗೃಹಸ್ಥನಾಗಿದ್ದರೆ ಬೇರೆ ಮಾತು.

ದೇವರ ಅರ್ಚನೆ ಮಾಡುವ ತಾನು ಹೀಗೆ ಮಾಡಿದುದು ನ್ಯಾಯ
ಎಂಬ ಯೋಚನೆ ಮನಸ್ಸನ್ನು ಕೊರೆಯುತ್ತಲೇ ಇತ್ತು. ಇವತ್ತು ಆದದ
ಆಯಿತು, ಇನ್ನು ಮೇಲೆ ಅವಳನ್ನು ತಿರುಗಿ ನೋಡಬಾರದೆಂಬ ಯೋಚ
ಎರಡು ಸಲ ಮನಸ್ಸಿನಲ್ಲಿ ಬಂತು. ಆದರೆ ಅದು ಸಾಧ್ಯವಿಲ್ಲವೆಂ
ಅದೇ ಮನಸ್ಸು ಆ ಯೋಚನೆಯ ಜೊತೆಗೇ ಶ್ರುತಿಯಂತೆ ನುಡಿಯಿತ

ಮರುದಿನವೂ ಅವರು ಸಂಜೆಯಾಗಿ ಕತ್ತಲಾದ ಮೇಲೆ ತೋಟ
ಹೋದರು. ಸ್ವಲ್ಪ ಹೊತ್ತಿಗೆ ಮಾತಂಗಿ ಬಂದಳು. ಸೋಗೆಯ ಒಟ್ಟಲ
ಸಂದಿಯಲ್ಲಿ ಅವಳನ್ನು ಮುಟ್ಟಿಕೊಳ್ಳುವ ಮೊದಲು ಇವರು ತಮ್ಮ ಪಂ
ಅಂಗಿಗಳನ್ನು ಬಿಚ್ಚಿ ಒಂದು ಕಡೆ ಇಟ್ಟು, ಹೆಗಲ ಮೇಲೆ ಹಾಕಿಕೊಳ್ಳ
ಚೌಕವನ್ನು ಸುತ್ತಿಕೊಂಡರು. ನೆನ್ನೆ ಅವರು ಪರಸ್ಪರ ಹೆಚ್ಚು ಮಾ
ಆಡಿರಲಿಲ್ಲ. ಈ ದಿನ ಸ್ವಲ್ಪ ವಿರಾಮವಾಗಿ ಆಡಿದರು. ತಮ್ಮ ಕೈ
ಮಡಿಸಿ ಇಟ್ಟುಕೊಂಡಿದ್ದ ಹತ್ತು ರೂಪಾಯಿಯನ್ನು ಇಸಿದುಕೊಂಡು ಅವ
ಬಾಳೆಕಾಯಿಗೆ ಗಿಡಗಿಕೊಂಡಳು.

'ದುಡ್ನ ಏನು ಮಾಡ್ತೀಯ?'

'ಮಡೀಕಣ್ತೆನಿ'

'ಶಾಲೆ (ಸೀರೆ) ತಗಾಳಾಕುಲ್ವ?'

'ನೀವು ಕೊಟ್ರಿ ಅಂತ ತಗಂಡ್ರೆ ಅಟ್ಟಿಯೋರ್ಗೆ ಶಂಕೆ ಬರಾಕಿಲ್ವ
ಮಾರಮ್ಮನ ಅಬ್ಬಕ್ಕೆ ತಗಾತೀನಿ.'

ಅವಳ ಸೂಕ್ಷ್ಮ ಬುದ್ಧಿಯನ್ನು ಕಂಡು ಅವರಿ
ಮೆಚ್ಚುಗೆಯಾಯಿತು. ಮನಸ್ಸಿಗೆ ಧೈರ್ಯವೂ ಬಂತು. 'ನೋಡ
ಮಾತಂಗಿ, ಯಾರಿಗೂ ಗೊತ್ತಾಗಾಕಾದು,'

'ಐ, ಅದ್ಯಾಕ್ ಯೇಚ್ನೆ ಮಾಡ್ತೀರ ಬುದ್ರಯ್ಯ? ಮಾತಂಗಿ ಅಂ
ನಿಯತ್ತಿನ ಎಣ್ಣು'

ಅವಳು ಹೋದ ಮೇಲೆ ಅವರು ಕೊಳದ ನೀರಿನಲ್ಲಿ ಮುಳು
ಸ್ನಾನಮಾಡಿದರು. ಮನೆಗೆ ಬಂದು ಒದ್ದೆ ಚೌಕವನ್ನು ಗಳುವಿ
ಒಣಗಹಾಕಿದ ನಂತರ ನೆನಪು ಬಂತು: ಇವತ್ತೂ ಜನಿವಾ

ಮೈಲಿಗೆಯಾಗಿದೆ ಅಂತ. ಇದಕ್ಕೇನು ಮಾಡುವುದು? ತುಂಬಾ ಯೋಚಿಸಿದ ನಂತರ ಒಂದು ಉಪಾಯ ಹೊಳೆಯಿತು. ಮನೇಲಿ ಹ್ಯಾಗೂ ರೇಶ್ಮೆಯ ಉತ್ತರೀಯ ಇದೆ. ಅವಳನ್ನು ಮುಟ್ಟಿಸಿಕೊಳ್ಳುವಾಗ ಜನಿವಾರವನ್ನು ಸೊಂಟಕ್ಕೆ ಸುತ್ತು ಹಾಕಿ ಅದರ ಮೇಲೆ ರೇಶ್ಮೆಯ ಚೌಕ ಸುತ್ತಿಕೊಳ್ಳಬೇಕು.

ಮರುದಿನ ಸಂಜೆ ಮಾತಂಗಿ ಪಿಸುಮಾತಿನಲ್ಲಿ ಕೇಳಿದಳು: 'ದಿನಾ ಬತ್ತಿದ್ರೆ ಯಾರೂ ಕಾಣಾಕಿಲ್ವ?'

'ಯಾರು ಕಾಣ್ತಾರೆ?'

'ಕಳ್ ನನ್ಮಕ್ಳು ಈ ಊರೋರು. ಅಮಾಸೆ ಮದ್ಲು ಕತ್ಲಿರ್ತೈತೆ. ದಿನಾ ಬರಾನ, ತಿಂಗಳ ಬೆಳಕು ಇರುವಾಗ ಬರಾದೆ ಬ್ಯಾಡ'

'ಅಂದ್ರೆ ತಿಂಗ್ಳಿಗೆ ಹದಿನೈದು ದಿನ ಇಲ್ದೆ ಇರಬೇಕಲ್ಲ?'

'ತೆಪಲು ಶಾನೆ ಮಾಡ್ಕ್ಯಬ್ಯಾಡ್ದು ಕಣ್ರಯ್ಯ'

ಇವಳು ತನಗೆ ಬುದ್ಧಿ ಹೇಳುವುದನ್ನು ಕಂಡು ಅವರಿಗೆ ನಗುವೂ ಬಂತು, ಸಿಟ್ಟೂ ಬಂತು. ಅವಳೇ ಎಂದಳು. 'ತ್ವಾಟದ ಬೇಲಿ ಬಂದೋಬಸ್ತ್ ಮಾಡ್ಸಿ. ಕತ್ಲಾದ ಮ್ಯಾಲೆ ಒಳಕ್ಕೆ ಬಂದ ಮ್ಯಾಗೆ ತಡ್ಬಲ ಸಂದೀಲಿ ಕೈ ಹೆಟ್ಟಿ ಬೀಗ ಅಮಿಕ್ಕಂಡ್ ಬಂದ್ರೆ ಹೈದ್ರಿಕೆ ಯಾಗಾಕುಲ್ಲ'.

ಅವಳ ತಿಳುವಳಿಕೆಯನ್ನು ಕಂಡು ಇವರಿಗೆ ಮೆಚ್ಚುಗೆಯಾಯಿತು. ಮರುದಿನವೇ ಆಳುಗಳನ್ನು ಗೊತ್ತುಮಾಡಿ ಬಿದಿರು ಮುಳ್ಳು ಕಡಿಸಿದರು. ತೋಟದ ಸುತ್ತ ಇದ್ದ ಬೇಲಿಯ ಮೇಲೆ ಎರಡು ಥೋಡಿ ಹಾಕಿಸಿದರು. ಹೊಳೆ ಬಾಗಿಲಿಗೆ ಹೊಸ ಬೀಗ ತಂದರು.

ಒಂದು ದಿನ ಮಾತಂಗಿ ಕೇಳಿದಳು: 'ಅಯ್ಯಾರೆ, ನೀವು ಗುಡಿ ಪೂಜೆ ಮಾಡ್ತೀರಲ್ಲ, ನಂಗೆ ಏನೂ ಆಗಾಕುಲ್ವ?'

'ನಿಂಗೇನಾಗುತ್ತೆ?'

'ದೇವರು ಶ್ಯಾಪ ಮಾಡ್ಕಂಡು ಬಿಡ್ದು ಬುಟ್ರೆ?'

'ಏನೂ ಆಗುಲ್ಲ. ರೇಷ್ಮೆ ಚೌಕ ಸುತ್ತಿಕಂಡಿಲ್ವಾ ನಾನು? ಎದ್ದ ಮ್ಯಾಲೆ ಕೊಳದಲ್ಲಿ ಮುಳುಗಿ ಮಡಿ ಉಟ್ಕತೀನಿ.'

ಆ ಉತ್ತರದಿಂದ ಅವಳಿಗೆ ಸಮಾಧಾನವಾಯಿತೋ ಇಲ್ಲವೊ! ಆದರೆ ಅವರ ಮನಸ್ಸಿನಲ್ಲೇ ಶಂಕೆ ಹುಟ್ಟಿತು. ಮರುದಿನ ಗುಡಿಯಲ್ಲಿ ಪೂಜೆ ಮಾಡಿ ಮಂತ್ರ ಹೇಳಿಕೊಂಡು ಮಂಗಳಾರತಿ ಎತ್ತುವಾಗ ಒಂದು ನಿಮಿಷ ಮೈ ಜುಂ ಎಂದಂತಾಗಿ ಭಯವಾಯಿತು. ದೇವರ ಕಣ್ಣಿನ ಬೆಳ್ಳಿಯ ಕಟ್ಟು, ಹಣೆಯ ನಾಮ, ತಲೆಯ ಕಿರೀಟಗಳು ಅದರ ಬೆಳಕಿನಲ್ಲಿ ಥಳಿಥಳಿಸುತ್ತವೆ. 'ಸಾಮ್ರಾಜ್ಯಂ ಭೋಜ್ಯಂ' ಹೇಳುತ್ತಾ ಆರತಿಯ ಹಲಗೆಯನ್ನು ದೇವರ ಮುಖದ ಹತ್ತಿರ ಹಿಡಿದುಕೊಂಡಾಗ ನಿನ್ನೆ ಮಾತಂಗಿ ಕೇಳಿದ ಪ್ರಶ್ನೆಯು ತಲೆಯಲ್ಲಿ ಹೊಡೆಯಲು ಶುರುವಾಯಿತು. ಮಂಗಳಾರತಿಯನ್ನು ಬೇಗ ಮುಗಿಸಿದರು. ದೇವರ ಬೆಳ್ಳಿಯ ಕಣ್ಣುಕಟ್ಟಿನ ಪ್ರಕಾಶ ಕಡಿಮೆಯಾದ ಮೇಲೆ ಅವರ ಭಯವೂ ಹಿಡಿತಕ್ಕೆ ಬಂತು. ಆದರೆ ಆ ದಿನದಿಂದ ಮಂಗಳಾರತಿ ಹಲಗೆಯನ್ನು ಹತ್ತಿರ ಹಿಡಿದಿದ್ದಾಗ ಅವರು ದೇವರ ಮುಖವನ್ನು ಸರಿಯಾಗಿ ನೋಡುವುದನ್ನೇ ಬಿಟ್ಟರು.

ಮಾತಂಗಿಯ ಜೊತೆ ಮೂರು ವರ್ಷ ಕಳೆದಿತ್ತು. ಮನೆಯಲ್ಲಿ ಅಡಿಗೆ ಮಾಡುತ್ತಿದ್ದ ಅಜ್ಜಿ ಒಂದು ತಿಂಗಳ ಹಿಂದೆ ತುಮಕೂರಿಗೆ ತನ್ನ ಮಗನ ಮನೆಗೆ ಹೊರಟು ಹೋಗಿತ್ತು. ಹತ್ತು ವರ್ಷದ ಸತ್ಯಭಾಮೆ ಮತ್ತು ಹದಿನಾಲ್ಕರ ವೆಂಕಟೇಶ ಮನೆಯಲ್ಲಿದ್ದರೂ ಹುಡುಗರಿಗೆ ಕಷ್ಟ ಕೊಡದೇ ಅವರೇ ಅಡಿಗೆ ಮಾಡುತ್ತಿದ್ದರು.

ಒಂದು ರಾತ್ರಿ ಮಾತಂಗಿ ಕೇಳಿದಳು: 'ಯಡವಟ್ಟಾಗೈತಲ್ರಯ್ಯ?'

'ಏನೇ ಅದು?'

'ನಾನು ಬಿಮನ್ಸಿಯಾಗಿರಬೈದು.'

'ಇದೇನೇ ಹೀಗಂತಿಯ?' ಅವಳು ಬಸುರಿಯಾಗಿರುವುದರಲ್ಲಿ ಅಸಹಜವಾದುದೇನೂ ಇರಲಿಲ್ಲವಾದರೂ ಅವರು ಗಾಬರಿಯಿಂದ ಕೇಳಿದರು.

'ಒಂದು ತಿಂಗಳಿಂದ ಸೀರೆಯಾಗಿಲ್ಲ, ಬಿದಿರ ಕಳವೆ ಮಾಡ್ಕ್ಯಂಡ್ ಕುಡ್‌ದೆ ಸೀರೆ ಹ್ವಂಡಲೆಯಿಲ್ಲ.'

ಆ ದಿನ ಅವರು ಅವಳನ್ನು ಸರಿಯಾಗಿ ಮುಟ್ಟಲಿಲ್ಲ. ತಲೆಯ

ಮೇಲೆ ಕೈ ಹೊತ್ತು, ಸೋಗೆ ಅಟ್ಟಿನ ಸಂದಿಯಲ್ಲಿ ಅವಳ ಪಕ್ಕದಲ್ಲಿ ಕುಳಿತುಬಿಟ್ಟರು. ಅವರು ಎಷ್ಟಾದರೂ ದುಡ್ಡು ಕೊಡಲು ಸಿದ್ಧರಿದ್ದರು. ಆದರೆ ತುಮಕೂರಿನಂಥ ದೊಡ್ಡ ಊರಿಗೆ ಹೋಗಿ, ಸರಿಮಾಡಿಸಿಕೊಂಡು ಬರುವ ಜವಾಬ್ದಾರಿ ಹೊರುವವರು ಯಾರು? ಇಂಥದ್ದೆಲ್ಲ ಅವರು ಕೇಳಿದ್ದರೇ ಹೊರತು ಕಂಡಿಲ್ಲ. ನೇರವಾಗಿ ತಿಳಿದಿಲ್ಲ.

'ನಿಮ್ಮ ಕೇರೀಲಿ ಕೇಳಿದರೆ ಇನ್ನಾರ ಹೆಸರೂ ಹೇಳಕ್ಕಾಗುಲ್ವೇನೆ?'

'ನಿಮ್ಮ ಪಾದ ಮುಟ್ಟಿದ ಮೇಲೆ ಎಂಜಲಿಗೆ ಕಣ್ಣು ಆಯ್ಲಿಲ್ಲ.'

ಅದು ಅವರಿಗೂ ಗೊತ್ತು. ಆದರೆ ಈಗ ಬಂದಿರುವ ಕುತ್ತಿನಿಂದ ಪಾರಾಗುವುದು ಹೇಗೆ?

ಮಾತಂಗಿ ವ್ಯವಹಾರದಲ್ಲಿ ತುಂಬ ಎಚ್ಚರಿಕೆಯ ಹೆಣ್ಣು. ಇವರು ಕೊಡುತ್ತಿದ್ದ ದುಡ್ಡಿನಲ್ಲಿ ಹೊಸ ಬಟ್ಟೆ, ಬರೆಗಳನ್ನು ಕೊಳ್ಳುತ್ತಿರಲಿಲ್ಲ. ಕೂಲಿ ಮಾಡುವುದನ್ನು ಬಿಡಲಿಲ್ಲ. 'ದಿಮ್ಮನೆ ಇರಾಕ್ ಪ್ಯಾಂಟ್‌ರೆ ಇಷ್ಟಗೆಲ್ಲಿ ಬಂತು ಅಂತ ಸಂಕೆ ಬರಾಕಿಲ್ವೇನ್ರಯ್ಯ ಕೇರಿಯೋರಿಗೆ?' ಎಂದು ಅವಳೇ ಹೇಳಿದ್ದಳು. ಹಗಲು ಹೊತ್ತು ಹೊಲ, ಗದ್ದೆ, ತೋಟಗಳಲ್ಲಿ ಕೂಲಿ ಮಾಡುವಾಗ ಆಕಸ್ಮಾತ್ ಇವರು ಆ ಕಡೆ ಬಂದರೂ ಕತ್ತೆತ್ತಿ ನೋಡದೆ, ತನ್ನ ನೆರಳು ಹತ್ತು ಮಾರಿಗಿಂತ ಹತ್ತಿರ ಬೀಳದಂತೆ ಜಾತಿ ಧರ್ಮವನ್ನು ಕಾಯ್ದುಕೊಂಡಿರುತ್ತಿದ್ದಳು. ಎಂದೂ ತಾನಾಗಿಯೇ ದುಡ್ಡು ಕೇಳಿಲ್ಲ. ಇವರು ತಾವಾಗಿಯೇ ಕೊಟ್ಟಿದ್ದನ್ನು ತನ್ನ ಗುಡಿಸಲಿನಲ್ಲಿ ಜೋಪಾನವಾಗಿ ಇಟ್ಟುಕೊಂಡಿರುತ್ತಾಳೆ. ಗುಡ್ಡೆ ಹಾಕಿ ಇವರ ಕೈಲೇ ಕೊಟ್ಟು, ತಾವರೆ ಕೈಯಿಂದ ಒಡವೆ ಮಾಡಿಸಿಟ್ಟುಕೊಂಡಿದ್ದಾಳೆ. ಈಗಾಗಲೇ ಅವಳ ಹತ್ತಿರ ಸುಮಾರು ಒಂದು ಸಾವಿರ ರೂಪಾಯಿಯ ನಗವಿದೆ. ಆದರೆ ಅದನ್ನು ಒಂದು ದಿನವೂ ಮೈಮೇಲೆ ಇಟ್ಟುಕೊಂಡಿಲ್ಲ.

ಮರುದಿನ ಸಂಧಿಸಿದಾಗಲೂ ಅವರು ಇದೇ ವಿಷಯ ಮಾತನಾಡಿಕೊಂಡರು. ಇವರು ಅವಳ ಕೈ ಹಿಡಿದು, 'ಮಾತಂಗಿ ನಾನು ಯಾವತ್ತೂ ನಿನ್ನ ಕೈಮೇಲೆ ಹೋದೆದಿಲ್ಲ. ನನ್ನ ಮರ್ಯಾದೆ ಕಾಪಾಡೋದು ನಿನ್ನ ಕೈಲಿದೆ' ಎಂದರು.

'ಅಯ್ಯಾ, ನಿಮ್ಮ ಪಾದ ಬ್ಯಾರೆಯಾ? ಕ್ಯರೆ ಕೆಳಗಿನ ಗುಡಿ ತಿಮ್ಮಪ್ಪನ ಪಾದ ಬ್ಯಾರೆಯಾ? ಮರ್ಯಾದಿ ಕಳೆಯೂ ಮುಂಡೆಯಲ್ಲ ನಾನು,' ಎಂದು ಅವರ ಕಾಲನ್ನು ಮುಟ್ಟಿ ಅವಳು ಹೇಳಿದಳು.

ಮರುದಿನ ಸಂಜೆ ಕಳೆದ ಮೇಲೆ ಅವರು ಎಂದಿನಂತೆ ತೋಟ ಕಾಯಲು ಹೋದರು. ಕತ್ತಲಾಯಿತು. ಅವಳು ಬರಲಿಲ್ಲ. ರಾತ್ರಿ ಏರಿತು. ಅವಳು ಬರಲೇ ಇಲ್ಲ, ಮರುದಿನ ಸಂಜೆಯೂ ಹೀಗೆಯೇ ಆಯಿತು. ಅವಳು ಬರಲಿಲ್ಲ. ಅವಳ ಹತ್ತಿರ ತೋಟದ ಒಂದು ಬೀಗದ ಕೈ ಕೊಟ್ಟಿದ್ದರು. ಒಬ್ಬರಿಲ್ಲದ ವೇಳೆಯಲ್ಲಿ ಒಬ್ಬರು ಬಂದು ಕಾದು ಹೋಗಿದ್ದರೆ ಇನ್ನೊಬ್ಬರಿಗೆ ತಿಳಿಯಲಿ ಎಂದು ಸೋಗೆಯ ಅಟ್ಟಿನ ಸಂದಿಯಲ್ಲಿ ಇರುವ ಸನ್ನೆಯ ಹೆಡೆದಿಬ್ಬಿಯನ್ನು ನೋಡಿದರು. ಅವಳು ಬಂದಿದ್ದ ಗುರುತಿರಲಿಲ್ಲ.

ಅವರು ಯೋಚಿಸಲು ಪ್ರಾರಂಭಿಸಿದರು, ತಾವರೆಯ ಕೆರೆಯ ಆಚೆ ಹೆಗ್ಗಟ್ಟದಲ್ಲಿ ಅವಳ ನೆಂಟರಿದ್ದಾರೆ ಎಂಬುದಷ್ಟು ಅವರಿಗೆ ಗೊತ್ತಿತ್ತು. 'ನಮ್ಮ ಚಿಗವ್ವ ಅವ್ಳೆ' ಎಂದು ಅವಳು ಹೇಳಿದುದೆಷ್ಟೋ ಅಷ್ಟು. ಅವಳು ಅಲ್ಲಿಗೆ ಹೋಗಿರಬಹುದು. ಮತ್ತೆಲ್ಲಿಗಾದರೂ ಹೋಗಿರಬಹುದು. ಕೂತಿರುವ ಗರ್ಭವನ್ನು ತೆಗೆಸಿಕೊಂಡು ಬರುವುದಕ್ಕೆ ಹೋಗಿದ್ದಾಳೆ. ತೆಗೆಯುವಾಗ ಅವಳ ಜೀವಕ್ಕೆ ಏನೂ ತೊಂದರೆಯಾಗದಿದ್ದರೆ ಸಾಕು, ಎಂದು ಮನಸ್ಸಿನಲ್ಲೇ ಕೇಳಿಕೊಳ್ಳುತ್ತಿದ್ದರು.

ಹದಿನೈದು ದಿನವಾದರೂ ಅವಳ ಸುದ್ದಿ ಹತ್ತಲಿಲ್ಲ. ಇಪ್ಪತ್ತು ದಿನ ಕಳೆದರೂ ತಿಳಿಯಲಿಲ್ಲ. ಮಾದಿಗರ ಕೇರಿ, ಹೊಲೆಗೇರಿಗಳವರು ಎಷ್ಟೋ ಜನ ಹೊಲಗದ್ದೆಗಳಲ್ಲಿ ಕೂಲಿ ಮಾಡುತ್ತಿದ್ದರು. ಇವರು ಯಾವುದಕ್ಕಾದರೂ ಮಾತನಾಡಿಸಿದರೆ, 'ನಿಂತಲ್ಲಿಂದ ತುಸು ದೂರ ಹೋಗಿ ನೆಲ ನೋಡುತ್ತಾ ಉತ್ತರ ಹೇಳುತ್ತಿದ್ದರು. ಉಳಿದವರ ವಿಷಯದಲ್ಲಿ ಇಂತಹ ಕಟ್ಟನ್ನು ಹೆಚ್ಚಾಗಿ ಪಾಲಿಸುತ್ತಿರಲಿಲ್ಲ. ಆದರೆ ಇವರು ಗುಡಿಯ ಪೂಜಾರರು ಎಂಬ ವಿಶೇಷ ಭಯವಿತ್ತು. 'ನಿಮ್ಮ ಕೇರಿಯ ಮಾತಂಗಿ ಎಲ್ಲಿ ಕಾಣಾಕೇ ಇಲ್ಲ. ಕೂಲಿ ಮುಡ್ಡು ತಗಾಬೇಕಿತ್ತು' ಎಂದು

ಯಾರನ್ನಾದರೂ ಕೇಳುವ ಮನಸ್ಸಾಯಿತು. ಆದರೆ ಇದರಿಂದ ಯಾರಿಗಾದರೂ ಅನುಮಾನ ಬರಬಹುದೆಂದು ಕೇಳಲಿಲ್ಲ. ಈ ಪಾಪದ ಹೆಂಗಸು ಏನಾದರೂ ಪ್ರಾಣಗೀಣ ಕಳೆದುಕೊಂಡಳೋ ಎಂಬ ದಿಗಿಲೂ ಆಯಿತು. ಅಂಥದೇನಾದರೂ ಆಗಿದ್ದರೆ ಇಷ್ಟು ಹೊತ್ತಿಗೆ ಸುದ್ದಿ ಹಬ್ಬುತ್ತಿತ್ತು ಎಂದು ಸಮಾಧಾನ ತಂದುಕೊಂಡರು.

ಒಂದು ತಿಂಗಳು ಕಳೆದ ಮೇಲೆ ತಿಳಿಯಿತು. ಶಿವಗೆರೆಯ ಕೊಪ್ಪಲಿನಲ್ಲಿ ಅವಳ ಜಾತಿಯವ ಒಬ್ಬ ಹೆಂಡತಿ ಸತ್ತವನಿದ್ದ. ಸೀರುಡಿಕೆ ಮಾಡಿಕೊಂಡು ಅವಳು ಈಗ ಅಲ್ಲಿ ಇದ್ದಾಳಂತೆ. ಹೆಗ್ಗಟ್ಟದ ಅವಳ ಚಿಗಪ್ಪ ಗೊತ್ತು ಮಾಡಿದ ಈ ಕೂಡಿಕೆ ಈಗ ಹದಿನೈದು ದಿನದಲ್ಲಿ ಆಯಿತಂತೆ. ಮಾತಂಗಿ ತಿಮ್ಲಾಪುರದ ತನ್ನ ಕೇರಿಯನ್ನು ಬಿಟ್ಟೇಬಿಟ್ಟಳು.

ಅವಳು ಬಸುರಿಯಾದ ಸಮಸ್ಯೆ ಇಷ್ಟು ಹಗುರವಾಗಿ ಬಗೆಹರಿದಿದ್ದಕ್ಕೆ ಅವರಿಗೆ ಸಮಾಧಾನವಾಯಿತು. ಎರಡು ದಿನ ಹಾಯಾಗಿದ್ದರು. ಆದರೆ ಅವಳು ಊರನ್ನೇ ಬಿಟ್ಟು ಹೊರಟುಹೋಗಿ ಇನ್ನು ಎಂದೆಂದಿಗೂ ಅವಳ ಸಂಪರ್ಕವಿಲ್ಲದಂತಾದುದಕ್ಕೆ ವ್ಯಸನವಾಯಿತು. ಎರಡು ಮೂರು ದಿನದಲ್ಲಿ ಅವಳ ಹುಚ್ಚೇ ಹಿಡಿಯಿತು. ತೋಟಕ್ಕೆ ಹೋಗಿ, ತೆಂಗಿನ ಬಿಟ್ಟಲಿನ ಸಂದಿಯಲ್ಲಿ ತಾವು-ಅವಳು ಕೂಡುತ್ತಿದ್ದ ಜಾಗವನ್ನು ನೋಡುತ್ತಾ ನಿಲ್ಲುತ್ತಿದ್ದರು. ಒಂದೊಂದು ದಿನ, ಉಟ್ಟ ಬಟ್ಟೆಯ ಸಮೇತ ಕೊಳದಲ್ಲಿ ಸ್ನಾನ ಮಾಡಿ ಏಳುತ್ತಿದ್ದರು. ಆ ಮೇಲೆ, 'ನಾನ್ಯಾಕೆ ಸುಮ್ಮ ಸುಮ್ಮನೆ ನೀರಿಗಳಿದು ಮೈ ನೆನೆಸಿಕೊಂಡೆ,' ಎಂದು ಬಟ್ಟೆ ಒಣಗಿಸಿಕೊಂಡು, ಉಟ್ಟು ಮನೆಗೆ ಬರುತ್ತಿದ್ದರು.

ಮಾತಂಗಿ ಇದ್ದ ಹೆಚ್ಚು ಕಡಿಮೆ ದಿನವೂ ಸುಧಿಸುತ್ತಿದ್ದಾಗ ಅವರಿಗೆ ಅವಳ ವೈಶಿಷ್ಟ್ಯವು ಅರಿವಿಗೆ ಬಂದಿರಲಿಲಲ್ಲ. ಒಂಭತ್ತು ವರ್ಷ ಅವರು ತಮ್ಮ ಹೆಂಡತಿಯೊಡನೆ ಸಂಸಾರ ಮಾಡಿದ್ದರು. ಮಾತಂಗಿಯನ್ನು ಮುಟ್ಟಿಕೊಳ್ಳುತ್ತಿದ್ದುದು ಸುಮಾರು ಮೂರು ವರ್ಷ. ಎರಡನ್ನೂ ಹೋಲಿಸಿಕೊಂಡಾಗ ಮಾತಂಗಿಯಲ್ಲಿ ತಾವು ಕಂಡ ಹೆಣ್ಣುತನವನ್ನು ತಮ್ಮ ಹೆಂಡತಿಯಲ್ಲಿ ಕಂಡಿರಲಿಲ್ಲವೆಂಬುದು ಅವರಿಗೇ ತಿಳಿಯಿತು. ಅವಳು

ಏನನ್ನೂ ಕೇಳದೆಯೇ ಇವರ ಮನಸ್ಸನ್ನೆಲ್ಲ ಹೀರಿಕೊಂಡು ಹೋಗಿದ್ದಳು.

ಅವರು ತೋಟಕ್ಕೆ ಹೆಚ್ಚಾಗಿ ಹೋಗುವುದನ್ನೇ ಬಿಟ್ಟುಬಿಟ್ಟರು. ವೆಂಕಟೇಶನಿಗೆ ಹದಿನೈದು ನಡೆಯುತ್ತಿತ್ತು. ಜಮೀನು ಮತ್ತು ಮನೆಯ ಆದಾಯ ವೆಚ್ಚದಲ್ಲಿ ಅವನು ಆಗಲೇ ತುಂಬ ಬುದ್ಧಿವಂತನಾಗಿದ್ದ. ಆದ್ದರಿಂದ ತಾವು ಹೆಚ್ಚು ಹೆಚ್ಚಾಗಿ ದೇವರ ಪೂಜೆ ಮಾಡತೊಡಗಿದರು. ದಿನವೂ ಸಹಸ್ರನಾಮ ಹೇಳುವರು. ಉಪವಾಸ ಮಡಿ ಮೊದಲಾದ ನಿಷ್ಠೆಗಳನ್ನೂ ಹೆಚ್ಚು ಮಾಡಿದರು. ಆದರೆ ಕಣ್ಣಿಗೆ ಕಟ್ಟು ಹಾಕಿಕೊಂಡ ದೇವರ ಮುಖವನ್ನು ದಿಟ್ಟಿಸಿ ನೋಡಲು ಮಾತ್ರ ಭಯವಾಗುತ್ತಿತ್ತು. ಮಂಗಳಾರತಿ ಮಾಡುವಾಗ ವಿಗ್ರಹದ ಪಾದ ಮೈಗಳನ್ನು ನೋಡುವರು ಮುಖದ ಕಡೆಗೆ ಮಾತ್ರ ತಮ್ಮ ದೃಷ್ಟಿಯನ್ನು ಏರಿಸುತ್ತಿರಲಿಲ್ಲ.

*　　　*　　　*

ಇದೇ ಸಮಯದಲ್ಲಿ ಊರಿನಲ್ಲಿಯೂ ಹೊಲೆ ಮತ್ತು ಮಾದಿಗರ ಕೇರಿಯಲ್ಲೂ ಕೆಲವು ಸಂಗತಿಗಳು ನಡೆದುವು. ಮಾದಿಗರ ಕೇರಿಯ ಬೆಟ್ಟಯ ಹೆಂಡತಿ ಮಕ್ಕಳನ್ನು ಬಿಟ್ಟು ಹೋಗಿದ್ದವನು, ಗಾಂಧಿ ಆಶ್ರಮದಲ್ಲಿದ್ದುಕೊಂಡು ಖಾದಿಧಾರಿಯಾಗಿ ಹಿಂತಿರುಗಿ ಬಂದನು ಆಮೇಲೆ ವೆಂಕಟರಮಣಯ್ಯನವರು ಕಾಣದ ಕೇಳದ ಸಂಗತಿಗಳೆಲ್ಲ ನಡೆದುವು. ಮಾದಿಗರ ಕೇರಿ ಹೊಲೆಗೇರಿಗಳಿಗೆ ಹರಿಜನ ಕಾಲೋನಿ ಅಂತ ಹೆಸರಿಟ್ಟು ಬೋರ್ಡ್ ಹಾಕಿದರು. ಆ ಜಾತಿಯ ಹೆಸರನ್ನೆ 'ಹರಿಜನ' ಅಂತ ಬದಲಾಯಿಸಿದರು. ಇವರೆಲ್ಲ ಹೇಳುವ ಗಾಂಧಿ ಮಹಾತ್ಮ ಇಟ್ಟ ಹೆಸರಂತೆ ಅದು. ಹರಿಜನ ಅಂದರೆ ದೇವರಿಗೆ ಸೇರಿದವರು ಹಾಗಾದರೆ ನಾವೆಲ್ಲ ದೇವರಿಗೆ ಸೇರದವರೋ...? ಎಂದು ಊರಿಗೆ ಊರೆ ಪ್ರಶ್ನಿಸಿತು. ಚಳುವಳಿ, ಮೆರವಣಿಗೆ ಮುಂತಾದ್ದನ್ನು ಮಾಡಿದವರ ಮಂತ್ರಿಗಳಾದ ಮೇಲೆ, ಈ ಹೊಲೆ ಮಾದಿಗರೆಲ್ಲ ಮನೆ ಕಟ್ಟಿಕೊಳ್ಳಲ ಖಜಾನೆಯಿಂದ ದುಡ್ಡು ಕೊಟ್ಟರು. ಅವರು ಮೂರಂಕಣದ ಮಂಗಳೂರ ಹೆಂಚಿನ ಮನೆ ಕಟ್ಟಿಸಿಕೊಂಡರು. ಈಗ ಕೆರೆ ಏರಿಯ ಆಚೆ ಕೋಡಿಯ ಹತ್ತಿರ ನಿಂತು ನೋಡಬೇಕು. ಅದನ್ನು ಮಾದಿಗರ ಕೇರಿ ಅನ್ನಬಹುದೆ

ತಿಮ್ಮಾಪುರದ ತಲೆಯ ಮೇಲೆ ಹೊಡೆಯುವ ಹಾಗಿದೆ. ಸರ್ಕಾರ ಇನ್ನು ಮೇಲೆ ದರ್ಖಾಸ್ತಿನಲ್ಲಿ ಅವರಿಗೆ ಭೂಮಿ ಕೊಡುತ್ತದಂತೆ. ಅವರೂ ಒಕ್ಕಲುವಂತರಾಗುತ್ತಾರಂತೆ. ಇತ್ತ ಊರಿಗೆ ಹೈಸ್ಕೂಲು ಬಂದಿತು. ಊರಿನ ದೊಡ್ಡ ಗೌಡರ ಮಗ ಮೇಲಗಿರಿ ಲಾಯರು, ಅಸೆಂಬ್ಲಿ ಮೆಂಬರಾದ.

ಇದೇ ಸಮಯಕ್ಕೆ ಮಾತಂಗಿ ಊರಿಗೆ ಹಿಂತಿರುಗಿದಳು. ಇಲ್ಲಿಂದ ಹೋದ ಅವಳು ಗಂಡನ ಮನೆಯಲ್ಲಿ ಗಂಡು ಮಗು ಹೆತ್ತಳು. ಮಗುವಿಗೆ ಎರಡನೆಯ ವರ್ಷ ನಡೆಯುತ್ತಿರುವಾಗ ತನ್ನ ಹಳೆಯ ಗುಡಿಸಲನ್ನು ಸೇರಿದಳು. ಅವಳ ಗಂಡ ಅತಿ ಕುಡುಕನಂತೆ. ಅಲ್ಲೂ ದುಡಿದು ತಿನ್ನುತ್ತಿದ್ದಳು. ಆ ಸಂಪತ್ತಿಗೆ ಆ ಕುಡುಕನ ಸಂಗಡ ಯಾಕೆ ನರಳಬೇಕು? ಎಂದು ಊರಿಗೆ ಬಂದು ಬಿಟ್ಟಳಂತೆ. ಮಗು ಹೆತ್ತ ಮೇಲೆ ಅವಳು ಒಮ್ಮೆ ತಿಮ್ಮಾಪುರಕ್ಕೆ ಬಂದಿದ್ದಳು. 'ಗದ್ದೆ ತ್ಯಾಪವಾಗಿತ್ತು. ಮದುವೆಯಾದ ಮೇಲೆ ಬಸುರಾದ್ಲು ಮಾತಂಗಿ' ಎಂದು ಅವಳ ಕೇರಿಯ ಹಲವು ಹೆಂಗಸರು ತಮಾಷೆ ಮಾಡಿ, ಗೆಲುವಾಗಿದ್ದ ಮಗುವನ್ನು ಎತ್ತಿ ಹೊಗಳಿದ್ದರು. ಈಗ ಸರ್ಕಾರದವರು ಮನೆ ಕಟ್ಟಿಕೊಳ್ಳಲು ದುಡ್ಡು ಕೊಡುವ ಸುದ್ದಿ ತಿಳಿಯಿತು. ಗೇಯಲು ನಾಲ್ಕೆಕರೆ ಪಾಳು ಜಮೀನು ಕೊಡುತ್ತಾರಂತೆ. ಅಂತೂ ಅವಳು ಇಲ್ಲಿಗೇ ಬಂದಳು.

ಬಂದ ನಂತರ ಜೀವನಕ್ಕೆಂದು ಕೂಲಿ ಮಾಡಲು ಪ್ರಾರಂಭಿಸಿದಳು. ಕೂಲಿಗೆ ಹೋಗುವಾಗ ತನ್ನ ಜಾತಿಯ ಇತರ ಹೆಂಗಸರಂತೆ ಮಗುವನ್ನೂ ಕಟ್ಟಿಕೊಂಡು ಹೋಗಿ ಬದುವಿನ ಮೇಲೆ ಕೂರಿಸುತ್ತಿದ್ದಳು. ಒಂದೊಂದು ದಿನ ಚೆಟ್ಟಿಗ್ಣನ ಹೆಂಡತಿ ಸುಂಕವ್ವನ ಕೈಗೆ ಕೊಟ್ಟು ಬರುತ್ತಿದ್ದಳು.

ಗುಡಿಗೆ ಪೂಜೆಗೆ ಹೋಗುವಾಗ, ಬಲಭಾಗದ ಗದ್ದೆಯಲ್ಲಿ ಮಾತಂಗಿ ಕಳೆ ಕೀಳುತ್ತಿರುವುದನ್ನು ಮೊದಲ ಸಲ ಕಂಡ ವೆಂಕಟರಮಣಯ್ಯನವರಿಗೆ ಮುಂದೆ ಹೆಜ್ಜೆ ಇಡುವುದೇ ಕಷ್ಟವಾಯಿತು. ಒಳಮನಸ್ಸಿನಿಂದ ಒಂದು ತರನಾದ ಸಂಭ್ರಮ ಉಕ್ಕಿತು. ಇವಳು ಎಲ್ಲಿಂದ ಬಂದಳು? ಯಾವಾಗ ಬಂದಳು? ಕೂಲಿ ಮಾಡಬೇಕಾದರೆ ಇಲ್ಲೇ ಇರಬೇಕು. ನನಗೆ ಸುಳಿವು ಕೊಡಲೇ ಇಲ್ಲವಲ್ಲ? ಅವಳು ತಮ್ಮ ಕಡೆ

ನೋಡಿಯಾಳೆಂದು ಐದು ನಿಮಿಷ ನಿಂತರು. ಬೆನ್ನು ಬಗ್ಗಿಸಿ ಕಳೆ ಕೀಳುತ್ತಿದ್ದ
ಅವಳು ಸೊಂಟವನ್ನು ನೆಟ್ಟಗೆ ಮಾಡಲಿಲ್ಲ. ಉಳಿದ ಕೂಲಿಯವರೂ
ಹಾಗೆಯೇ ಕೆಲಸ ಮಾಡುತ್ತಿದ್ದರು. ಹಾಗೆಯೇ ಹೆಚ್ಚು ಹೊತ್ತು ನಿಲ್ಲಲು
ಸಂಕೋಚವಾಗಿ ಅವರು ದೇವಸ್ಥಾನಕ್ಕೆ ಹೊರಟು ಹೋದರು. ಪೂಜೆ
ಮಾಡುವಾಗಲೆಲ್ಲ ಅವಳದೇ ಧ್ಯಾನ, ಪೂಜೆ ಮುಗಿಸಿ ಹಿಂತಿರುಗುವಾಗಲೂ
ಅವಳು ಕಳೆ ಕೀಳುತ್ತಿದ್ದಳು. ಆಗಲೂ ಈ ಕಡೆಗೆ ನೋಡಲಿಲ್ಲ.

ಆ ದಿನದಿಂದ ಅವರು ಮನಸ್ಸಿನಲ್ಲೇ ಕೇಳಿಕೊಳ್ಳುತ್ತಿದ್ದರು. ಇಲ್ಲೇ
ಇದ್ದರೆ ತಾನು ಬಂದಿರುವ ಸೂಚನೆಯನ್ನು ಯಾಕೆ ಕೊಡಲಿಲ್ಲ? ಅಥವಾ
ಇವನ ಸುಡುಗಾಡು ಸಂಬಂಧ ಬ್ಯಾಡ ಅಂತ ಹೀಗೆ ಮಾಡ್ತಿದಾಳೊ?
ಅವಳಿಗೇ ಬ್ಯಾಡವಾದರೆ ನಾನ್ಯಾಕೆ ಹೀಗೆ ಧಾವಂತಪಡಬೇಕು ಎಂಬ
ಉದಾಸೀನವನ್ನು ಸೃಷ್ಟಿಸಿಕೊಂಡು ಸಮಾಧಾನಮಾಡಿಕೊಳ್ಳಲು
ಯತ್ನಿಸಿದರಾದರೂ ಅದು ಹೆಚ್ಚು ಹೊತ್ತು ನಿಲ್ಲುತ್ತಿರಲಿಲ್ಲ. ಒಂದು
ಸಂಜೆ ತೋಟದ ಕಡೆಗೆ ಹೋದಾಗ ಮಾದಿಗರ ಕೇರಿಯ ಜುಟ್ಟಗ ಸಿಕ್ಕಿದ.
ಮಾತಂಗಿಯ ಸುದ್ದಿಯೂ ಮಾತಿನಲ್ಲಿ ಬಂದಿತು. ಅವಳು ಊರಿಗೆ ಬಂದು
ಎರಡು ತಿಂಗಳಾಯಿತಂತೆ. ಮಗುವಿನ ಜೊತೆ ಇನ್ನು ಮೇಲೆ ಇಲ್ಲೇ
ಇರುತ್ತಾಳೆ. ಸ್ವಂತ ಮನೆ ಮತ್ತು ದರ್ಖಾಸ್ತಿನ ಜಮೀನಿಗೆ ಬೆಟ್ಟಯ್ಯ
ಅರ್ಜಿ ಹಾಕಿಸಿದ್ದಾನೆ.

ಈಗ ಸರ್ಕಾರದೋರು ಅವರಿಗೆ ಇಷ್ಟೆಲ್ಲ ಮಾಡ್ತಿದಾರೆ.
ಹಿಟ್ಟುಬಟ್ಟೆಗೆ ಅನುಕೂಲವಾಯ್ತು. ಅವಳು ಇನ್ಯಾಕೆ ಬಂದಾಳು? ಆದರೆ
ಬರೀ ಹಿಟ್ಟು ಬಟ್ಟೆಗಾಗಿ ಅವಳು ತಮ್ಮ ಹತ್ತಿರಕ್ಕೆ ಬರುತ್ತಿದ್ದಳೆಂಬುದನ್ನು
ಅವರ ಮನಸ್ಸೇ ಒಪ್ಪಲಿಲ್ಲ. ಅವಳಾಗಿಯೇ ಎಂದೂ ಇವರನ್ನು ದುಡ್ಡು
ಕೇಳಿರಲಿಲ್ಲ. ಇವರು ಕೊಟ್ಟದ್ದನ್ನು ಹಿಟ್ಟು ಬಟ್ಟೆಗೆಂದು ಖರ್ಚು ಮಾಡಿ
ತಿನ್ನಲಿಲ್ಲ. ಆಗಲೂ ಕೂಲಿ ಮಾಡುತ್ತಿದ್ದಳು. ಈಗಲೂ ಮಾಡುತ್ತಿದ್ದಾಳೆ.
ಈಗ ಯಾಕೆ ಹೀಗೆ ನನ್ನನ್ನು ತಪ್ಪಿಸುತ್ತಾಳೆ? ಮತ್ತೆ ಬಸುರಿಯಾದೇನೆಂಬ
ಹೆದರಿಕೆಯೆ? ಹೆಂಗಸರಿಗೆ ಈ ಒಂದು ಹಾಳು ಇಲ್ಲದಿದ್ದರೆ- ಎಂದು
ಪ್ರಕೃತಿಯನ್ನೇ ಬೈದರು.

ಸುಮಾರು ಒಂದು ತಿಂಗಳು ಹೀಗೆಯೇ ಕಳೆಯಿತು. ವೆಂಕಟೇಶ ಹೈಸ್ಕೂಲಿಗೆ ಹೋಗುತ್ತಿದ್ದ. ಹನ್ನೆರಡು ವರ್ಷದ ಸತ್ಯಭಾಮ ಮಿಡಲ್ ಸ್ಕೂಲಿನಲ್ಲಿ ತುಂಬ ಬುದ್ಧಿವಂತೆಯಾಗಿ ಓದುತ್ತಿದ್ದಳು. ಅಡಿಗೆ ತಿಂಡಿಯನ್ನು ಮಕ್ಕಳೇ ಹೇಗೋ ಮಾಡಿಕೊಂಡು ಹೋಗುತ್ತಿದ್ದವು. ಮಾತಂಗಿಯಿಂದ ಮನಸ್ಸನ್ನು ಎಳೆದಿಡುವುದು ವೆಂಕಟರಮಣಯ್ಯನವರಿಗೆ ಸಾಧ್ಯವೇ ಆಗಲಿಲ್ಲ. ಇತ್ತೀಚೆಗೆ ಅವರು ದಿನಾ ಸಂಜೆಯ ಹೊತ್ತು ತೋಟಕ್ಕೆ ಹೋಗುತ್ತಾರೆ. 'ಸಂಜೆ ಎಲ್ಲೂ ಹೋಗಬೇಡ. ಕೂತುಕೊಂಡು ಓದಿಕೋ' - ಎಂದು ಮಗನಿಗೆ ಹೇಳುತ್ತಾರೆ.

ಒಂದು ದಿನ ತೋಟಕ್ಕೆ ಹೋಗಿ ಬರುವಾಗ ಅದೃಷ್ಟವೆಂಬಂತೆ ಮಾತಂಗಿ ಎದುರಿಗೆ ಸಿಕ್ಕಿದಳು. ಮತ್ತೆ ಯಾರೂ ಇರಲಿಲ್ಲ. ಅವಳನ್ನು ಕಂಡ ಇವರಿಗೆ ಎದೆ ಡವಗುಟ್ಟಿತು. ಅವಳು ತಲೆ ತಗ್ಗಿಸಿಕೊಂಡು ಇವರಿಗೆ ದಾರಿ ಬಿಟ್ಟು ಬದುವಿನ ಕಡೆಗೆ ತಿರುಗಿದಳು. ಇವರೇ, 'ಮಾತಂಗಿ, ತುಸು ನಿಂತ್ಕೋ' ಎಂದರು. ಅವಳು ನಿಲ್ಲಲಿಲ್ಲ. ನಡಿಗೆ ನಿಧಾನ ಮಾಡಿದಳು. 'ನಿನ್ನ ಕೈಲಿ ಮಾತಾಡಬೇಕು. ವಸಿ ತ್ವಾಟಕ್ಕೆ ಬಾ' ಎಂದರು. 'ಬ್ಯಾಡಿ ಕಣ್ರಯ್ಯ' ಎಂದು ಅವಳು ಹೆಜ್ಜೆಯನ್ನು ಜೋರು ಮಾಡಿದಳು. 'ನೀನು ಬರದೆ ಇದ್ದರೆ ನೋಡು, ದೇವರಾಣೆ ಇಟ್ಟು ಹೇಳ್ತಿದೀನಿ,' ಎಂದು ಹೇಳಿ ಅವರು ತೋಟಕ್ಕೆ ಹೋದರು. ಅದು ತನಗೆ ಕೇಳಲೇ ಇಲ್ಲವೆಂಬಂತೆ ಅವಳು ಹೊರಟುಹೋದಳು. ಇವರು ತೋಟದಿಂದ ಹೊರಡಲಿಲ್ಲ. ಅವಳು ಬರುತ್ತಾಳೆಂಬ ನಂಬಿಕೆಯನ್ನು ಕೈ ಬಿಡಲು ಮನಸ್ಸು ಒಲ್ಲೆನೆನ್ನುತ್ತಿತ್ತು.

ಆದರೆ ಅವಳು ಬಂದೇ ಬಿಟ್ಟಳು. ಇವರು ಸುಮಾರು ಒಂದು ಗಂಟೆಗೂ ಮೀರಿ ಕಾದಿದ್ದರು. ಕತ್ತಲು ಕವಿದು ಹೊಲಗದ್ದೆಗಳಲ್ಲಿ ಒಂದು ದನವೂ ಇಲ್ಲದಂತಾಗಿತ್ತು. ಅವಳೊಬ್ಬಳೇ ಬಂದು ಅಷ್ಟು ದೂರದಲ್ಲಿ ನಿಂತಳು. ಇವರ ಎದೆ ಮಿಡಿದು ವೇಗುತ್ತಿತ್ತು. ಹತ್ತಿರ ಬಂದು ಕೈ ಹಿಡಿಯಹೋದರು. 'ಮುಟ್ಬ್ಯಾಡ ಕಣ್ರಯ್ಯ' ಎನ್ನುತ್ತಾ ಅವಳು ನಾಲ್ಕು ಹೆಜ್ಜೆ ಹಿಂದೆ ಸರಿದಳು. 'ಕ್ಯಾಮವೇನೇ?'

'ನಿಮ್ಮ ಮ್ಯಾಗೆಂತಾ ಕ್ಯಾಪವಯ್ಯ,' ಇವರು ಹೋಗಿ ತೊಟ್ಟ
ಬಟ್ಟೆಯಲ್ಲೇ ಅವಳ ಕೈ ಹಿಡಿದಾಗ ಗೊತ್ತಾಯಿತು; ಅವಳು ಸಣ್ಣಗೆ
ಬಿಕ್ಕಿ ಬಿಕ್ಕಿ ಅಳುತ್ತಿದ್ದಳು.

'ಅಳಬ್ಯಾಡ ಅದ್ಯಾಕ್ ಹಂಗ್ ಹೇಳದೆ ಕೇಳದೆ ಹ್ವಂಟ್
ಹೋಗಿಬಿಟ್ಟೆ?'

'ಏನ್ಮಾಡಾದು' ಎಂದು ಅವಳೇ ಸೆರಗಿನಿಂದ ಕಣ್ಣು
ಒರೆಸಿಕೊಂಡಳು!

'ನಾನ್ ನಿನ್ನ ಏಟೊಂದು ತರ ಗ್ಯಾಪಿಸ್ಕತಿದ್ದೆ ಗೊತ್ತಾ?' ಅವಳು
ಉತ್ತರ ಹೇಳಲಿಲ್ಲ. ಅವರೇ ಕೇಳಿದರು. 'ಇನ್ ಮ್ಯಾಲೆ ಇಲ್ಲೇ
ಇರ್ತೀಯ?'

'ಊಂ.'

'ಗಂಡನ್ನ ಯಾಕೆ ಬಿಟ್ ಬಂದೆ?'

'ನಾನಿನ್ನ ಯಾವನ ಕುಟ್ಲೂ ಇರಾಕಿಲ್ಲ.'

'ನನ್ ಕುಟ್ಲೆ?'

'ಅಕ್ಲಾಸ್ ಮಾಡಬ್ಯಾಡ ಕಣ್ರಯ್ಯ' – ಎನ್ನುವಾಗ ಅವಳಿಗೆ
ಮತ್ತೆ ಅಳು ಬಂದದ್ದು ಅವರಿಗೆ ಕೇಳಿಸಿತು. ಅವಳನ್ನು ಸಮಾಧಾನ
ಮಾಡಿ ಕೈ ಹಿಡಿದು ಕರೆದರು.

'ಎಲ್ಗೆ?'

'ಸ್ವಾಗೆ ಒಟ್ಟಲಿನ ಮರೆಗೆ.'

ಅವಳು ಮೊದಲು ಎರಡು ಹೆಜ್ಜೆ ಪಾಲಿದರೂ ಅನಂತರ ದೃಢವಾಗಿ
ನಿಂತು ಹೇಳಿದಳು. 'ಅದ ಮಾಡಬ್ಯಾಡ್‌ದು ಕಣ್ರಯ್ಯ.'

'ಯಾರ್ ಸಿಂಗ್ ಹೇಳ್ಳೋರು ಹಂಗಂತ.'

'ಸುಂಕವ್ವ ಅಂದ್ಲು, ಬೆಟ್ಟಣ್ಣ ಗಾಂದಿ ಗುಡಿಯಿಂದ ಬಂದಮ್ಯಾ
ಅವಳನ್ನ ಮುಟ್ಟಿಲ್ಲಂತೆ. ಮಕ್ಳಾದ ಮ್ಯಾಲೆ ಗಂಡ ಎಂಡ್ತಿ ಜೋಡೀ
ಮನಿಕಾಬ್ಯಾಡ್‌ದಂತೆ.'

'ಅವಳಿಗೆ ತೆವಲಾಗಾಕಿಲ್ವ?'

'ಗಂಡ ವಲ್ಲದಿದ್ರೆ ನಾನೂ ವಲ್ಲೆ. ಅದರಾಗೇನೈತೆ ಅಂತಾಳೆ. ಸುಂಕಪ್ಪ ಅಂದ್ರೆ ಸಲೀಸುಗಾರ ಎಣ್ಣು.'

'ಅವ್ರೇನೊ ಗಂಡ ಹೆಂಡ್ತಿ. ಹೆಂಗೆ ಬೇಕಾದ್ರೂ ಮಾಡ್ಕಳ್ಳಿ, ಈಗ ನೀನು ಬಾ' - ಎಂದು ಅವಳನ್ನು ತಪ್ಪಿಕೊಂಡು ಮುಂದೆ ಹೆಜ್ಜೆ ಹಾಕಿಸಿದರು.

ಮೊದಲ ಹೆಜ್ಜೆಗೇ ಮತ್ತೆ ತಡೆದು ನಿಂತು ಅವಳು ಕೇಳಿದಳು: 'ಹಂಗಾರೆ ನಾನ್ ನಿಮ್ಗೆ ಸೂಳೆ ಏನ್ರಯ್ಯ?'

ಅವರಿಗೆ ಛೆಛ್ಛೆಛ್ಛೆ ಎನ್ನುವಂತಾಯಿತು. ಇವಳೆಂಥ ಸೆಡವಿನ ಮಾತನಾಡುತ್ತಿದ್ದಾಳೆ ಎನ್ನಿಸಿತು. ಆದರೆ ಧ್ವನಿಯಲ್ಲಿ ಸೆಡವಿನ ಛಾಯೆಯೂ ಇರಲಿಲ್ಲ. ಮುಂದೆ ಏನೂ ಮಾತನಾಡಲಾರದೆ ಅದೃಶ್ಯ ಗೋಡೆಯೊಂದರಿಂದ ತಡೆಯಲ್ಪಟ್ಟವರಂತೆ ನಿಂತರು. ಅವಳು ಮೈತುಂಬ ಮಾತನ್ನು ಸೂಸುವ ಕರಿಯ ಕಲ್ಲಿನ ವಿಗ್ರಹದಂತೆ ನಿಂತಿದ್ದಳು. ಹತ್ತು ನಿಮಿಷವಾದರೂ ಹೀಗೆ ಸರಿದಿರಬೇಕು. ಕೊನೆಗೆ ಅವಳೇ 'ನಾನ್ ಓಯ್ತೀನಿ ಕಣ್ರಯ್ಯ' ಎಂದರು. ಹೋಗಬೇಡ ಇರು ಎನ್ನಲು ಇವರಿಗೆ ನಾಲಗೆ ಬರಲಿಲ್ಲ. ಎರಡು ನಿಮಿಷ ಕಾಯ್ದು, 'ಮದ್ಯಾನನೇ ರೊಟ್ಟಿ ಕೊಟ್ಟು, ಬಿಟ್ ಬಂದದ್ದು. ಉಡುಗ ನಮ್ಮವ್ವ ಎಲ್ಲಿ ಅಂತ ಬಡಕತ್ತೈತೆ. ಓಯ್ತೀನಿ' ಎಂದು ಹೊಳೆ ಬಾಗಿಲಿನ ಕಡೆಗೆ ಹೊರಟುಹೋದಳು. ಆಗೂ ಇವರು ಸುಮ್ಮನೆ ಆ ಕಡೆ ನೋಡುತ್ತಾ ನಿಂತಿದ್ದರು. ಆದರೆ ಹೋದ ತುಸು ಹೊತ್ತಿನ ನಂತರ ಅವಳೇ ಹಿಂತಿರುಗಿ ಬಂದು, 'ಹಾದೀಲಿ ಅಡ್ಡಾದ್ರೂ ಇನ್ನಾವತ್ತೂ ಮಾತಾಡುಸ್ ಬ್ಯಾಡಿ ಕಣ್ರಯ್ಯ. ನಿಮ್ಮ ಮರ್ವಾದಿ ಹ್ವಾಗಬ್ಯಾಡ್ ದು' ಎಂದು ಹೇಳಿ ತಿರುಗಿ ಹೊರಟು ಹೋದಳು.

ವೆಂಕಟರಮಣಯ್ಯನವರು ಮನೆ ಸೇರುವ ಹೊತ್ತಿಗೆ ರಾತ್ರಿ ಒಂಭತ್ತು ಗಂಟೆ ಕಳೆದಿತ್ತು. ಬಿಸಿಯಾಗಿ ಅನ್ನ ಮಾಡಿಟ್ಟು, ಮಕ್ಕಳಿಬ್ಬರೂ ಅವರನ್ನು ಕಾಯ್ದುಕೊಂಡಿದ್ದರು. ಕೈಕಾಲು ತೊಳೆದು ಎರಡು ಆಚಮನದ ಶಾಸ್ತ್ರ

ಮಾಡಿ ಮಕ್ಕಳೊಡನೆ ಊಟಮಾಡಿ ಮಲಗಿಕೊಂಡರು. ಮಕ್ಕಳಿಬ್ಬರಿಗೂ ಬೇಗ ಬೇಗ ನಿದ್ದೆ ಬಂತು. ಅವರಿಗೆ ಬರಲಿಲ್ಲ. 'ಹಂಗಾರ್ ನಾನ್ ನಿಮ್ಮ ಸೂಳೆ ಏನ್ರಯ್ಯ?' ಎಂಬ ಅವಳ ಪ್ರಶ್ನೆ ಅಂತರಂಗವನ್ನು ಕೊರೆಯುತ್ತಿತ್ತು. ಅವಳ ಮತ್ತು ತಮ್ಮ ಸಂಬಂಧ ಬರೀ ದುಡ್ಡಿಗೆ ನಡೆಯುತ್ತಿರಲಿಲ್ಲವೆಂಬುದು ಅವರಿಗೆ ಸ್ಪಷ್ಟವಾಗಿ ಗೊತ್ತಿತ್ತು. ಇದೊಂದು ತರಹ ಸ್ನೇಹ ಸಂಬಂಧ? ಆದರೆ ತಮ್ಮಿಂದ ಅವಳಿಗೆ ಒಂದು ಮಗುವೂ ಆಗಿದೆ. ಅಲ್ಲಿಂದ ಬರೀ ಸ್ನೇಹ ಸಂಬಂಧವಾಗಿರೋದು ಹೇಗೆ? ಹಾಗಾದರೆ ಇದು ದಾಂಪತ್ಯವೆ? ಅಲ್ಲ, ಶಾಸ್ತ್ರದಲ್ಲಿ ಎಷ್ಟೋ ರೀತಿಯ ವಿವಾಹಗಳನ್ನು ಹೇಳಿದೆ, ಅಂಗಸಂಗವಾಗಿ, ಗರ್ಭಿಣಿಯಾಗಿ ಶಿಶುವಿನ ಜನನವಾಗಿದ್ದರೂ ಅಜ್ಞಾತವಾಗಿರುವುದು ಯಾವ ರೀತಿಯ ವಿವಾಹದ ಲಕ್ಷಣದಲ್ಲೂ ಹೇಳಿಲ್ಲ, ನನ್ನ -ಅವಳ ಸಂಬಂಧ ಎಂಥದು? ಯೋಚಿಸಿ, ಯೋಚಿಸಿ ಅವರು ಅದನ್ನು ಕೈಬಿಟ್ಟರು. ಆದರೆ ಅದರಲ್ಲಿ ಅವಳೇ ಪ್ರಧಾನಳಾಗಿ ತಾವು ಗೌಣರಾಗಿರುವಂತೆ ಅನುಭವವಾಗುತ್ತಿತ್ತು.

ನಡುರಾತ್ರಿ ಕಳೆದರೂ ನಿದ್ರೆ ಬರಲಿಲ್ಲ. ಬೆಳಿಗ್ಗೆ ಎಚ್ಚರವಾದಾಗ ಹೊತ್ತು ಎರಡಾಳುದ್ದ ಏರಿತ್ತು. ಅವತ್ತು ಶನಿವಾರ. ಊರಿನ ಪಟೇಲ ತಿರುಮಲೇಗೌಡರು ದೇವಸ್ಥಾನಕ್ಕೆ ಬಂದು ಸ್ವತಃ ಪೂಜೆ ಮಾಡಿಸುವ ದಿನ. ಗಡಿಬಿಡಿಯಿಂದ ಸ್ನಾನಮಾಡಿ ಮಕುಟ ಉಟ್ಟು ರೇಶ್ಮೆಯ ಚೌಕ ಹೊದೆದು, ಸತ್ಯ ಹಿತ್ತಿಲಿನಲ್ಲಿ ಕುಯ್ದಿಟ್ಟಿದ್ದ ಮಲ್ಲಿಗೆಯ ಹೂವು, ವೆಂಕಟೇಶ ಮಾಡಿಟ್ಟಿದ್ದ ನೈವೇದ್ಯ ಮತ್ತು ಪೂಜಾ ಸಾಮಗ್ರಿಗಳನ್ನು ತೆಗೆದುಕೊಂಡು ದೇವಸ್ಥಾನಕ್ಕೆ ಹೋದರು. ಇವರು ಹೋಗುವ ಹೊತ್ತಿಗೆ ದೊಡ್ಡ ಗೌಡರು ಬಂದು ಜಗುಲಿ ಮೇಲೆ ಕಾಯುತ್ತಾ ಕುಳಿತಿದ್ದರು. ಶನಿವಾರವಾದುದರಿಂದ ಇನ್ನು ಕೆಲವು ರೈತರೂ ಬ್ರಾಹ್ಮಣರೂ ಬಂದಿದ್ದರು.

ಇವರು ಮಂತ್ರ ಹೇಳಿಕೊಂಡು ಪೂಜೆ ಮಾಡುವಾಗ ಗೌಡರು ಗರ್ಭಗುಡಿಯ ಬಾಗಿಲಿನಲ್ಲಿ ಪ್ರಥಮ ಸ್ಥಾನದಲ್ಲಿ ನಿಂತಿದ್ದರು. ಅನಂತರ ಬ್ರಾಹ್ಮಣರು, ಅವರ ಹಿಂದೆ ಉಳಿದ ಗೌಡರು, ಇತರರು. ಹತ್ತಿರವೇ ನಿಂತಿದ್ದ ಕುಪ್ಪಣ್ಣಯ್ಯಂಗಾರರು ದೊಡ್ಡ ಗೌಡರನ್ನು ಕೇಳಿದರು:

'ಎಲ್ಲೆಲ್ಲೂ ಹೊಲೇರು ಮಾದಿಗರನ್ನ ದೇವಸ್ಥಾನದೊಳಗೆ ನುಗ್ಗುಸ್ತಾ ಇದಾರಂತಲ್ಲ.'

'ನಮ್ಮೂರಲ್ಲಿ ನುಗ್‌ಸಾಕ್ ಬಂದ್ರೆ ಒನಕೆ ತಗಾತೇವಿ' ಗೌಡರು ನಿಶ್ಚಯವನ್ನೇ ಹೇಳಿದರು. ಊರವರು ಕೂಡ ಅದೇ ನಿಶ್ಚಯ ಮಾಡಿದ್ದರು. ಹಾಗೆ ನೋಡಿದರೆ ಗುಡಿಗೆ ಪ್ರವೇಶ ಮಾಡಲು ಊರಿನ ಹೊಲೆಯ ಮಾದಿಗರು ಮುಂದೆ ಬಂದೇ ಇಲ್ಲ. ಬೆಳಿಗ್ಗೆ ಎದ್ದರೆ ಕೋಟೆಯೊಳಗಿನವರ ಜಮೀನಿನಲ್ಲಿ ದುಡಿದೇ ಮಧ್ಯಾಹ್ನದ ಮುದ್ದೆಯನ್ನು ಸಂಪಾದಿಸಬೇಕಾದ ಸ್ಥಿತಿ ಅವರಲ್ಲಿ ಬಹುಪಾಲು ಜನರಿಗೆ ತಪ್ಪಿರಲಿಲ್ಲ. ದೇವಸ್ಥಾನ ಪ್ರವೇಶಕ್ಕೆ ಹರಿಜನರಿಗೆ ಸಮಾನಾವಕಾಶ ಬೇಕೆಂಬ ತೀರ್ಮಾನ ಸರಕಾರದಿಂದಲೇ ಆಗಿ, ಅನೇಕ ಕಡೆ ಅದರ ಕಾರ್ಯಾನ್ವಯವು ಸರ್ಕಾರೀ ನಾಯಕರ ಮುಂದಾಳ್ತನದಲ್ಲೇ ಆಗುತ್ತಿತ್ತು.

ಆದರೆ ತಿರುಮಲಾಪುರದ ದೇವಸ್ಥಾನದ ಪ್ರವೇಶಕ್ಕೆ ಒತ್ತಾಸೆ ಸರ್ಕಾರದ ಅಮಲ್ದಾರರಿಂದ ಬರಲಿಲ್ಲ; ಹಾಲಿ ಅಸೆಂಬ್ಲಿ ಮೆಂಬರಾದ ಲಾಯರ್ ಮೇಲಗಿರಿಗೌಡರಿಂದ ಬಂತು: "ನಮ್ಮ ಗೌಡಿಕೆ ಮರ್ಯಾದಿ ಹಾಳು ಮಾಡ್ಬೆ ನನ್ ಮಗನೇ, ಎಂದು ದೊಡ್ಡ ಯಜಮಾನರು ಮಗನನ್ನು ದಾಕ್ಷಿಣ್ಯವಿಲ್ಲದೆ ಖಂಡಿಸಿದರು. ವೆಂಕಟರಮಣಯ್ಯನವರಂತೂ ಸ್ವಲ್ಪವೂ ಸಮ್ಮತಿಸಿರಲಿಲ್ಲ. ತಮ್ಮ ಹಿಂದಿನ ಸಹಪಾಠಿಯೇ ಆಗಿದ್ದ ಮೇಲಗಿರಿಗೌಡರನ್ನು ಪ್ರತ್ಯೇಕ ಕಂಡು, 'ಮಾಡಬಾರದ್ದು ಮಾಡಿದರೆ ಊರಿಗೆ ಆಗಬಾರದ್ದು ಆಗುತ್ತೆ. ನೀನೇನೋ ತುಮಕೂರು ಬೆಂಗಳೂರಲ್ಲಿರ್ತಿ. ಇಲ್ಲಿರುವ ನಾವು, ನಿನ್ನ ತಂದೆ ತಾನೇ ನರಳಬೇಕಾದೋರು?' ಎಂದು ವಾದ ಮಾಡಿದ್ದರು.

'ಚೀಫ್ ಮಿನಿಸ್ಟರಿಂದಲೇ ಬಂದದೆ. ತಾಲೂಕಿನ ಎಂ.ಎಲ್.ಎ. ಅಂತ ನನ್ನನ್ನ ಮುಂದೆ ಬಿಟ್ಟಿದ್ದಾರೆ. ನಾನು ವಲ್ಲೆ ಅಂದ್ರೆ ಮಿಲಿಟ್ರಿ ಕರುಸ್ತಾರೆ. ಗುಡಿ ಪೂಜಾರಿಯಾಗಿ ನೀವು ಬ್ಯಾಡ್ ಅಂದ್ರೆ ಪೂಜಾರಿಕೆ ಕಿತ್ತು ಹಾಕ್ತಾರೆ. ಕಾಲ ಬದಲಾಯಿಸಿದೆ. ಏನು ಮಾಡೋದು?'

ಆತೂ ವೆಂಕಟರಮಣಯ್ಯನವರು ಮತ್ತೆ ಏನೂ ಮಾಡಲಿಲ್ಲ.

ಪಾಪ-ಪುಣ್ಯ ಏನಿದ್ದರೂ ಮಾಡಿದವರಿಗೆ ಮಾಡಿಸಿದವರಿಗೆ ಎಂದುಕೊಂಡ ಆ ದಿನ ಪೂಜೆಗೆ ಬಂದರು. ಬೆಂಗಳೂರಿನಿಂದ ಬಂದಿದ್ದ ಪೇಪರಿನವರು ಝಳಕ್ ಝಳಕ್ ಅಂತ ಬೆಳಕು ಎರಚಿ, ಮುಂದಿದ್ದ ತಮ್ಮನ್ನು ಸೇರಿಸಿ ದೇವರ ಫೋಟೋ ತೆಗೆದರು. ಅವತ್ತಿನ ವಿಶೇಷ ಪೂಜೆಯ ಖರ್ಚೆಲ್ಲ ಮೇಲಗಿರಿ ಗೌಡರದು.

ಅನಂತರ ಒಬ್ಬೊಬ್ಬರಾಗಿ ಎಲ್ಲ ಹರಿಜನರ ಪ್ರವೇಶ. ಅವರಿಗೆಲ್ಲ ಒಂದೊಂದು ಉದ್ಧರಣೆ ತೀರ್ಥ ಕೊಡುತ್ತ ನಿಂತರು. ಒಬ್ಬೊಬ್ಬರ ಮುಖದ ಮೇಲೆ ಒಂದೊಂದು ಥರದ ಭಾವ. ಸಾಲಾಗಿ ಒಬ್ಬರ ಹಿಂದೆ ಒಬ್ಬರು ಬರುತ್ತಿರುವಾಗ ಮಾತಂಗಿ ವೆಂಕಟರಮಣಯ್ಯನವರ ಕಣ್ಣಿಗೆ ಬಿದ್ದಳು. ಹಳದಿ ಅಂಚಿನ ಕರಿ ಬಣ್ಣದ ಸೀರೆ ಉಟ್ಟಿದ್ದಾಳೆ. ತನ್ನ ಜಾತಿಯ ಉಳಿದ ಎಷ್ಟೋ ಜನ ಹೆಂಗಸರಂತಲ್ಲದೆ ರವಿಕೆಯನ್ನೂ ತೊಟ್ಟಿದ್ದಾಳೆ. ಕಂಕುಳಲ್ಲಿ ಗಂಡು ಮಗು. ಹುಡುಗನಿಗೆ ಷರಟು ಹಾಕಿಲ್ಲ. ಅದರ ಮೈಗೂ ಬರುವಂತೆ ತನ್ನ ಸೀರೆಯ ಸೆರಗನ್ನು ಹೊದ್ದಿಸಿ ಕೊಂಡಿದ್ದಾಳೆ. ಸ್ವಲ್ಪ ಹೊತ್ತಿಗೆ ಮುಂಚೆ ಸ್ನಾನ ಮಾಡಿದ್ದರಿಂದ ಅವಳ ಮತ್ತು ಹುಡುಗನ ತಲೆಯ ಕೂದಲು ಒದ್ದೆಯಾಗಿದೆ. ಆದರೆ ಮುಖಕಟ್ಟಿನಲ್ಲಿ ವೆಂಕಟೇ... ಮೂರು ವರ್ಷ ಮಗುವಾಗಿದ್ದಾಗ ಇದ್ದಂತೆಯೇ ಇದೆ. ವೆಂಕಟರಮಣಯ್ಯನವರ ಮೈ ಬೆವರಿತು. ಮಾತಂಗಿಗಿಂತ ಹಿಂದೆ ಮುಂದೆ ಬರುವವರೆಲ್ಲ ದೇವರನ್ನು ನೋಡುತ್ತಾ ಹೆಜ್ಜೆ ಇಡುತ್ತಿದ್ದರೆ ಇವಳ ದೃಷ್ಟಿ ನೆಲದ ಕಡೆ ಇದೆ. ವೆಂಕಟರಮಣಯ್ಯನವರಿಗೆ ತಮ್ಮ ದೃಷ್ಟಿಯನ್ನು ಮಾತಂಗಿ ಮತ್ತು ಮಗುವಿನಿಂದ ಬೇರ್ಪಡಿಸುವುದು ಸಾಧ್ಯವಾಗಲಿಲ್ಲ. ಮಾತಂಗಿ ಸುಮ್ಮನೆ ತನ್ನ ಬಲಗೈ ನೀಡಿ ದೋಣಿಯಂತೆ ಮಡಿಸಿದಳು. ಉದ್ಧರಣೆ ಹಿಡಿದಿದ್ದ ಅವರ ಕೈ ನಡುಗುತ್ತಿತ್ತು. ತೀರ್ಥ ಹಾಕಿದರು. ಅವಳು ಮುಂದೆ ಹೆಜ್ಜೆ ಹಾಕುವದರಲ್ಲಿದ್ದಳು. ಆದರೆ ಹಿಂದಿದ್ದ ಹೆಂಗಸು 'ಉಡುಗ್ಗೆ ಒಸಿ ಬಿಡಿಸ್ಕಳಗ್ಯಾ' ಎಂದಳು. ಜ್ಞಾಪಕ ಬಂದವರಂತೆ ಅವರು ಅವಳ ಕೈಗೆ ಇನ್ನೊಂದು ಉದ್ಧರಣೆ ಹಾಕಿದರು. ಒಂದು ನಿಮಿಷ... ಅವಳು ಗರ್ಭಗುಡಿಯಿಂದ ಹೊರಟುಹೋದಳು.

ಅವರ ಮನಸ್ಸು ಈಗ ಮಾತಂಗಿಯ ನೆನಪಿನಿಂದ ತುಂಬಿಹೋಯಿತು. ಬರೀ ಅವಳ ನೆನಪಲ್ಲ. ಅವಳ ಸೊಂಟವನ್ನು ಏರಿ ಬಂದು ತಮಗೆ ದರ್ಶನ ಕೊಟ್ಟ ಹುಡುಗನ ಚಿತ್ರವು ಮನಸ್ಸನ್ನು ಕಲಕಿ ಬಿಟ್ಟಿತು.

* * *

ಇದು ನಡೆದು ಹತ್ತು ವರ್ಷಗಳಾಗಿವೆ. ಈ ಅವಧಿಯಲ್ಲಿ ಎಷ್ಟೋ ಬದಲಾವಣೆಗಳು ನಡೆದಿವೆ. ಮೋಲಗಿರಿಗೌಡರು ಈಗ ಮಂತ್ರಿಗಳಾಗಿದ್ದಾರೆ. ಚೆಟ್ಟಯ್ಯನವರ ಮಗ ಮೋಹನದಾಸ ಬಿ.ಎ. ಫೇಲಾಗಿ ತುಮಕೂರಿನಲ್ಲಿ ಬೂಟು ಅಂಗಡಿಯ ಮಾಲಿಕನಾಗಿದ್ದಾನೆ. ಅವನ ತಂಗಿ ಮೀರಾ ಹೈಸ್ಕೂಲು ಓದುತ್ತಿದ್ದಾಳೆ. ವೆಂಕಟೇಶ ಇಂಟರ್ ಓದಿ, ಬಿಟ್ಟು, ಅವನಿಗೆ ಮದುವೆಯಾಗಿ ಈಗ ಗಂಡು ಮಗುವಾಗಿದೆ. ಸತ್ಯ ಇತಿಹಾಸದಲ್ಲಿ ಎಂ.ಎ. ಓದಿ, ಬೆಂಗಳೂರಲ್ಲಿ ಲೆಕ್ಚರರ್ ಆಗಿದ್ದಾಳೆ.

ತಾವು ಕಲಿತಿದ್ದ ಸಂಸ್ಕೃತ, ಮಂತ್ರ, ವೇದಾಂತಗಳನ್ನು ವೆಂಕಟರಮಣಯ್ಯನವರು ತಮ್ಮ ಇಬ್ಬರು ಮಕ್ಕಳಿಗೂ ಸಮಾನವಾಗಿ ಹೇಳಿಕೊಟ್ಟಿದ್ದರು. ವೆಂಕಟೇಶನಿಗೂ ಅವಳಿಗೂ ವ್ಯತ್ಯಾಸವಿತ್ತು: ಅವನು ಹೇಳಿ ಕೊಟ್ಟಿದ್ದನ್ನು ಬಾಯಿಪಾಠ ಮಾಡುತ್ತಿದ್ದ. ಅವಳು ಅದರ ಅರ್ಥ ಕೇಳಿ ಪ್ರಶ್ನಿಸುತ್ತಿದ್ದಳು. ಹೈಸ್ಕೂಲಿನಲ್ಲಿದ್ದಾಗ ಆಕೆಗೆ ವೆಂಕಟರಮಣಯ್ಯನವರು ಚತುರ್ವರ್ಣಗಳು ಹುಟ್ಟಿದ ಬಗೆಯನ್ನು ಹೇಳತೊಡಗಿದರು:

'ಬ್ರಾಹ್ಮಣೋಸ್ಯ ಮುಖಮಾಸೀತ್ ಬಾಹೂ ರಾಜನ್ಯಃ ಕೃತಃ ಊರೂತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ, ಅಂದರೆ ಬ್ರಾಹ್ಮಣರು ಬ್ರಹ್ಮನ ಬಾಯಿಯಿಂದಲೂ ಕ್ಷತ್ರಿಯರು ತೋಳುಗಳಿಂದಲೂ ವೈಶ್ಯರು ತೊಡೆಯಿಂದಲೂ ಶೂದ್ರರು ಕಾಲುಗಳಿಂದಲೂ ಹುಟ್ಟಿದರು-' ಎಂದು ಅವರು ಹೇಳಿದಾಗ ಸತ್ಯಭಾಮೆ ಕೇಳಿದಳು: 'ಹಾಗಾದರೆ ಸಾಬರು ಕ್ರಿಶ್ಚಿಯನ್ನರು ಎಲ್ಲಿಂದ ಹುಟ್ಟಿದರು?'

ಈ ಪ್ರಶ್ನೆಗೆ ವೆಂಕಟರಮಣಯ್ಯನವರಿಗೆ ತಕ್ಷಣ ಉತ್ತರ

ಹೊಳೆಯಲಿಲ್ಲ. ಮುಂದೊಮ್ಮೆ 'ಚಾತುರ್ವರ್ಣ್ಯಂ ಮಯಾ ಸೃಷ್ಟಂ
ಎಂಬುದನ್ನು ಹೇಳುವಾಗಲೂ ಇದೇ ಪ್ರಶ್ನೆಯನ್ನು ಆಕೆ ಕೇಳಿದ್ದಳು
ಪ್ರಶ್ನಿಸುವುದು ಅವಳಿಗೆ ಸಹಜವಾಗಿಯೇ ಬಂದಿತ್ತು. ಹಾಗೆಂದು ದೇವರು
ಮಂತ್ರ, ಪೂಜೆ- ಪುನಸ್ಕಾರಗಳ ಬಗೆಗೆ ಅವಳು ಅಶ್ರದ್ಧೆ ಪಡುತ್ತಿರಲಿಲ್ಲ,
ತಮಾಷೆ ಮಾಡುತ್ತಿರಲಿಲ್ಲ.

ಮೈಸೂರಿನಲ್ಲಿ ಕಾಲೇಜು ಓದುವಾಗ ಅವಳು ಪ್ರತಿ ರಜಕ್ಕೂ
ಊರಿಗೆ ಬರುತ್ತಿದ್ದಳು. ಬಂದಾಗ ಅಡಿಗೆಮನೆಯ ಕೆಲಸವನ್ನು ತಾನೆ
ಮಾಡುತ್ತಿದ್ದಳು. ಅವಳು ಏನೇನು ಓದುತ್ತಿದ್ದಾಳೆಂದು ಅವರು
ಕೇಳುತ್ತಿದ್ದರು.

ಒಂದು ದಿನ ಹೇಳಿದಳು: 'ಭಗವದ್ಗೀತೇಲಿ ಜ್ಞಾನಯೋಗ,
ಕರ್ಮಯೋಗ, ಭಕ್ತಿಯೋಗಗಳ ಸಮನ್ವಯ ಇದೆಯಲ್ಲ; ಅದರ ನಿಜವಾದ
ಕಾರಣ ಬೇರೆ ಇದೆ'

'ಅದೇನು?'

'ಆಗ ದೈಹಿಕ ಕೆಲಸ ಮಾಡ್ತಿದ್ದ ಶೂದ್ರರು, "ನಮ್ಮದು ಕೀಳು
ಕೆಲಸ. ನಿಮ್ಮದಾದರೆ ಮೇಲು ಕೆಲಸ. ನಾವು ಇದನ್ನ ಮಾಡುಲ್ಲ. ಹೊಲ
ಗದ್ದೇಲಿ ಗೇಯಲ್ಲ" - ಅಂತಿದ್ದರಂತೆ. "ನಿಮ್ಮ ಕೆಲಸ ಮಾಡಿದೋರಿಗೂ
ಸಮಾನ ಮುಕ್ತಿ ಸಿಕ್ಕುತ್ತೆ; ಇದು ಮೇಲು ಇದು ಕೀಳು ಅಂತ ಯಾವ
ಕಸಬನ್ನೂ ಬಿಡಬಾರದು" ಎಂದು ತಿಳಿಸಿದರಂತೆ. ಅದೆಲ್ಲ ಆಗಿನ ಸಮಾಜ
ರಚನೆಯ ರೂಪವಷ್ಟೆ.' ಅವಳು ಹೇಳುತ್ತಿದ್ದ ಅರ್ಥವನ್ನು ಒಪ್ಪಲು
ಅವರ ಬುದ್ಧಿಯೂ ನಿರಾಕರಿಸುತ್ತಿತ್ತು. ಒಪ್ಪಲು ಹೋದರೆ ಅಂತರಂಗದಲ್ಲಿ
ತಳಮಳವಾಗುತ್ತಿತ್ತು.

ಕಳೆದ ಹತ್ತು ವರ್ಷಗಳಲ್ಲಿ ಅವರು ಮಾತಂಗಿಯನ್ನು ಹೆಚ್ಚು
ಕಡಿಮೆ ಮರೆತೇ ಬಿಟ್ಟಿದ್ದಾರೆ. ಅವಳ ಹುಡುಗ ಹೊನ್ನೂರೇಶನನ್ನು
ತುಮಕೂರಿನಲ್ಲಿ ಅವರ ಜಾತೀಯ ಹುಡುಗರಿಗೇ ಮಾಡಿರುವ
ಹಾಸ್ಟೆಲಿನಲ್ಲಿ ಬಿಟ್ಟಿದಾರೆ. ಹುಡುಗ ಚೆನ್ನಾಗಿ ಓದುತ್ತಾನಂತೆ. ಅವಳಿಗೆ
ಹಾಲ್ಕೆರೆ ಸ್ವಂತ ಭೂಮಿ ಇದೆ. ಮೂರಂಕಣದ ಮನೆ ಇದೆ. ಈಗ ಈ

ಕಡೆಗೆ ಬೇರೆಯವರ ಭೂಮಿಯಲ್ಲಿ ಕೂಲಿ ಮಾಡಲು ಬರುವುದಿಲ್ಲ. ಹೀಗಾಗಿ ಅವಳನ್ನು ನೋಡದೆ ವರ್ಷಗಳೇ ಆಗಿವೆ. ಜೀವನದಲ್ಲಿ ಇಂಥವು ನಡೆಯುವವೇ. ಕಾಮತೃಷೆಯಾದಾಗ ಚಂಡಾಳಿಯೇ ಆಗಬಹುದು. ಋಷಿಮುನಿಗಳೇ ಹಾಗೆ ಮಾಡಿದ್ದಾರೆ. ಅನಂತರ ಸಿದ್ಧಿ ಪಡೆದು ಜಗದ್ವಂದ್ಯರಾಗಿದ್ದಾರೆ ಎಂದುಕೊಂಡು ಅವರು ಆ ಘಟನೆಯನ್ನು ಮರೆಯತೊಡಗಿದರು.

ಆದರೆ ಈಗ ಸತ್ಯ ಮಾಡಿರುವ ಒಂದು ಕೆಲಸದಿಂದ ಅದು ಮತ್ತೆ ಅಂತರಂಗವನ್ನು ಕಲಕಲು ಮೊದಲು ಮಾಡಿದೆ. ಅಂದು ವೆಂಕಟೇಶನ ಮಗುವಿನ ನಾಮಕರಣ. ಸತ್ಯ ಬಂದಿರಲಿಲ್ಲ. ಬದಲಾಗಿ ಅವಳ ಪತ್ರ ಬಂದಿತ್ತು. ಬ್ರಾಹ್ಮಣರೆಲ್ಲ ಊಟಕ್ಕೆ ಕುಳಿತಿದ್ದರು. ಅಲ್ಲಿಯೇ ಕವರನ್ನು ಒಡೆದು ಓದಿದರು; ತನಗೆ ಬೆಂಗಳೂರಿನ ದೇಶಿಯ ಕಾಲೇಜಿನಲ್ಲಿ ಲೆಕ್ಚರರ್ ಕೆಲಸ ಸಿಕ್ಕಿದೆ, ಸೇರಿದ್ದೇನೆ - ಎಂಬ ತಾತ್ಪರ್ಯದ ಮೊದಲ ಪ್ಯಾರಾ ಓದಿ ಮನಸ್ಸಿಗೆ ಸಮಾಧಾನವಾಯಿತಾದರೂ ಇವಳ್ಯಾಕೆ ನೌಕರಿ ಮಾಡಬೇಕೆಂಬ ತುಸು ಅಸಮಾಧಾನವೂ ಉಂಟಾಯಿತು. ಎರಡನೆಯ ಪ್ಯಾರಾ ಓದುವಾಗ ಮನಸ್ಸಿಗೆ ಕಸಿವಿಸಿಯುಂಟಾಯಿತು. ಕಣ್ಣುಗಳನ್ನು ಓಡಿಸಿಕೊಂಡು ಹೋದರು. ಮಂತ್ರಿಯಾಗಿರುವ ಮೇಲಗಿರಿಗೌಡರ ಮಗ ಶ್ರೀನಿವಾಸ ಮತ್ತು ತಾನು ಮದುವೆಯಾಗಲು ನಿಷ್ಕರ್ಷಿಸಿರುವುದಾಗಿಯೂ ತಾವು ಆಶೀರ್ವದಿಸಬೇಕೆಂದೂ ಬರೆದಿದ್ದಳು.

ತಾವು ಯಾವುದನ್ನು ಕಲ್ಪಿಸಿಕೊಳ್ಳಲು ಸಹ ಅಸಮರ್ಥರಾಗಿದ್ದರೋ ಅಂಥದನ್ನು ತಮ್ಮ ಮಗಳು ನಿಶ್ಚಯಿಸಿದ್ದಾಳೆ. ಅದನ್ನು ನಂಬುವುದು ಒಂದು ನಿಮಿಷ ಕಷ್ಟವಾಯಿತು. ಆದರೆ ಮಗಳ ಹಟದ ಸ್ವಭಾವವನ್ನು ಅರಿತಿದ್ದುದರಿಂದ ಅವರ ಅಂತಃಪ್ರಜ್ಞೆಯೇ ಹೇಳಿತು. ತಲೆ ಸುತ್ತಿಬಂದಂತೆ ಆಯಿತು.

'ಯಂಕ್‌ಟೇಶ, ಬಾ ಇಲ್ಲಿ ಒಂದಿಷ್ಟು' ಎಂದು ಯಜಮಾನರು ಹಿತ್ತಿಲ ಕಡೆಗೆ ಹೋದರು. ಅವರ ಮುಖವನ್ನು ನೋಡಿಯೇ ಗಾಬರಿಯಾದ ಮಗ ಹಿಂದೆ ಹಿಂದೆ ಬಂದ. ಅವರು ಕಾಗದವನ್ನು ಮಗನ

ಕೈಲಿ ಕೊಟ್ಟರು. ಅವನು ಓದಿಕೊಳ್ಳುತ್ತಿದ್ದ: "ಜಾತಿ ಕುಲಗಳ ಬಗೆಗೆ ನನ್ನ ಅಭಿಪ್ರಾಯ ನಿಮಗೆ ಗೊತ್ತೇ ಇದೆ. ನೀವು ಮತ್ತು ಊರಿನ ಇತರರು ಇದನ್ನು ಅನೀತಿ ಎನ್ನಬಹುದು. ಆದರೆ ಇದು ಅತ್ಯಂತ ನೀತಿಯುತ ನಿರ್ಣಯ ಎಂದು ನನ್ನ ಶುದ್ಧ ನಂಬಿಕೆ...."

ತಂದೆ ಮಾತನಾಡಿದರು: 'ಬೆಂಗಳೂರಿಗೆ ಹೋಗಿ ಈ ಕತ್ತೆ ಲೌಡಿಗೆ ನಾಲ್ಕು ಒದ್ದು ಎಳಕೊಂಡು ಬಾ ಹೋಗು.'

'ಅಪ್ಪ, ಈಗ ನೀನು ತಾಳ್ಮೆ ತಂದುಕೊಳ್ಳದೆ ಇದ್ರೆ ನಮ್ಮ ಮರ್ಯಾದೆಯೇ ಹೋಗುತ್ತೆ.'

'ನಮ್ಮ ಮರ್ಯಾದೆ ಕಳಿಯೊಕ್ಕೆ ತಾನೆ ಈ ಮುಂಡೆ ಹುಟ್ಟಿರೋದು. ತಾಳ್ಮೆಯಂತೆ ಗೀಳ್ಮೆ' ಎಂದು ಅಲ್ಲಿದ್ದ ಬಿದಿರುದಡಿಯನ್ನು ಎಳೆದುಕೊಂಡರು. 'ಈ ಮುಂಡೆ ಹೀಗೆ ಮಾಡ್ತೀನಿ ಅಂತ ಬರೆದಿರುವಾಗ ಹ್ಯಾಗೆ ಸುಮ್ಮನಿರೂದು?' ಎಂದು ಮಗನನ್ನು ಜಬರಿಸಿ ಕೇಳುವಾಗ ಅವರ ಕಣ್ಣಿನಲ್ಲಿ ನೀರು ಬಂದು ಬಿಟ್ಟಿತು. 'ತಾಯಿ ಇಲ್ಲದ ಹುಡುಗಿ ಅಂತ ನಾನೇ ತಾಯಿಯಾಗಿ ಸಾಕಿದೆ. ಪಾಪಿ ಲೌಡಿ....' ಎಂದು ಬಿಕ್ಕಿಬಿಕ್ಕಿ ಅಳಲು ಪ್ರಾರಂಭಿಸಿದರು.

ಮರುದಿನ ವೆಂಕಟರಮಣಯ್ಯನವರು ತಾವೇ ಬೆಂಗಳೂರಿಗೆ ಹೊರಟರು. ಬಸ್ಸಿನಲ್ಲಿ ಕುಳಿತಾಗ, ಮಗಳು ತನ್ನ ಕೈಬಿಟ್ಟಳು; ತಾನು ಒಂಟಿಯಾದೆ ಎಂಬ ಭಾವನೆ ಅವರ ಮನಸ್ಸನ್ನು ತುಂಬಿ ಬಿಟ್ಟಿತ್ತು. ಹೆಂಡತಿ ಸತ್ತಾಗ ಬಂದಿದ್ದ ಶೂನ್ಯ ಭಾವನೆಯು ಆಗಲೂ ಕವಿದಿತ್ತು.

ಆಕಸ್ಮಾತ್ ಅದೇ ಬಸ್ಸಿನಲ್ಲಿದ್ದ ಬೆಟ್ಟಯ್ಯನವರನ್ನೂ ಕರೆದುಕೊಂಡು ಬಸವನಗುಡಿಯಲ್ಲಿದ್ದ ಅವಳ ರೂಮಿಗೆ ಬಂದರು ಒಳಗೆ ಬಂದದ್ದೇ ತಡ, ಅವಳ ಕಾಗದವನ್ನು ತೆಗೆದು ಮಂಚದ ಮೇಲೆ ಎಸೆದು ಕೇಳಿದರು:

'ಇದೇನು ಬರೆದಿರೂದು?'

ಅವಳು ಉತ್ತರ ಹೇಳಲಿಲ್ಲ. ಅವರಿಗೆ ಮುಖ ಕೊಡದೆ ಬೇರೆ ಕಡೆ ತಿರುಗಿ ನಿಂತಳು. 'ಇದೇನು ಬರೆದಿರೋದು ಬಗುಳೇ' - ಎಂದು

ತಂದೆ ಧ್ವನಿ ಏರಿಸಿದರು.

'ಅಪ್ಪ, ಆಡೂ ಮಾತನ್ನು ಮೆಲ್ಲಗೆ ಆಡು, ಪಟ್ಟಣವಾಸದಲ್ಲಿ ಎಲ್ಲ ಹತ್ತಿರ ಹತ್ತಿರ ಮನೆಗಳು.'

'ನೀನು ಮಾಡೂ ಕೆಲ್ಸಕ್ಕೆ ಮರ್ಯಾದೆಯೊಂದು ಕೇಡು, ಹೋಲೆ ಮುಂಡೆ' ಎಂದು ಬಾಗಿ, ತಮ್ಮ ಎಕ್ಕಡವೊಂದನ್ನು ತೆಗೆದುಕೊಂಡು ಅವಳ ನೆತ್ತಿ, ಬೆನ್ನು, ಭುಜಗಳ ಮೇಲೆ ಎತ್ತಿ ಎತ್ತಿ ಬಾರಿಸಿಬಿಟ್ಟರು. ಹೊರಗೆ ನಿಂತಿದ್ದ ಬೆಟ್ಟಯ್ಯನವರಿಗೆ ಏನು ಮಾಡಲೂ ತೋಚದು. ಮಗಳು ಮಾತ್ರ ಸ್ವಲ್ಪವೂ ವಿರೋಧಿಸದೆ ತನ್ನನ್ನು ಪೂರ್ತಿಯಾಗಿ ಅವರ ಶಿಕ್ಷೆಗೆ ಸಮರ್ಪಿಸಿಕೊಂಡು ತಲೆಬಾಗಿ ನಿಂತಿದ್ದಳು. 'ಮಾತಾಡೇ' ಎಂದು ಅವರು ಅರಚಿದರೂ ತುಟಿ ಪಿಟಕ್ ಎನ್ನಲಿಲ್ಲ. ಅವಳ ಭುಜ ಬೆನ್ನುಗಳಲ್ಲಿ ಸಣ್ಣಗೆ ರಕ್ತ ಬಂದು ರವಿಕೆ ಮತ್ತು ಸೀರೆಯ ಸೆರಗು ನೆನೆಯುತ್ತಿತ್ತು. ವೆಂಕಟರಮಣಯ್ಯನವರು ಅಷ್ಟಕ್ಕೆ ನಿಲ್ಲಿಸದೆ ಆವೇಶ ಬಂದವರಂತೆ ಬಾಗಿ ಇನ್ನೊಂದು ಎಕ್ಕಡವನ್ನೂ ಕೈಗೆ ತೆಗೆದುಕೊಂಡು ಎರಡೂ ಕೈಗಳಿಂದ ಹುಯ್ಯಲು ಪ್ರಾರಂಭಿಸಿದರು. ಮಗಳ ಭುಜದಿಂದ ಈಗ ಇನ್ನೂ ಹೆಚ್ಚು ಹೆಚ್ಚು ರಕ್ತ ಹನಿಯಲು ಪ್ರಾರಂಭವಾಯಿತು.

ಅಷ್ಟರಲ್ಲಿ ಮಹಡಿಯ ಮೇಲಿದ್ದ ಸಂಸಾರದ ಹೆಂಗಸು ಓಡಿ ಬಂದಳು. ಬೆಟ್ಟಯ್ಯನವರೇ, 'ಅಮ್ಮಾ, ಒಳಗೆ ಹೋಗಿ ವಸಿ ಬಿಡಿಸ್ಕಳಿ' ಎಂದು ಆಕೆಗೆ ಅಂಗಲಾಚಿದರು. ಬಿಡಿಸಿಕೊಳ್ಳದಿದ್ದರೆ ಈ ಹುಡುಗಿ ಉಳಿಯುವುದಿಲ್ಲವೆಂಬ ಭಯ ಅವರಿಗೆ. ಆದರೆ ಅಷ್ಟರಲ್ಲಿ ವೆಂಕಟರಮಣಯ್ಯನವರೇ ಇದ್ದಕ್ಕಿದ್ದ ಹಾಗೆ ಕೆಳಗೆ ಬಿದ್ದು ಬಿಟ್ಟರು. ಅವರ ಹೊಡೆತಕ್ಕೆ ಬೆನ್ನು ಕೊಟ್ಟು ನಿಂತಿದ್ದ ಸತ್ಯಳಿಗೆ ಅದು ತಿಳಿದಿರಲಿಲ್ಲ. ಬೆಟ್ಟಯ್ಯನವರೇ, 'ಅಯ್ನೋರು ಗ್ಯಾನ ತಪ್ಪಿ ಬಿದ್ದವ್ರೆ ನೋಡವ್ವ' ಎಂದಾಗ ತಿರುಗಿ ನೋಡಿದಳು. ಪ್ರಾಣ ಹೋದಂತೆ ಅವರು ಬಿದ್ದಿದ್ದಾರೆ. ಎರಡು ಕಾಲು ಒಂದೊಂದು ಕಡೆಗೆ ಚಾಚಿವೆ. ಬಲಗೈ ಮಂಚದ ಕೆಳಗೆ ಹೋಗಿದೆ. ಮುಖವೆಲ್ಲ ಬೆವೆತು, ಹನಿಗಳು ಹಣೆ, ಕೆನ್ನೆ, ಮೂಗುಗಳ ಮೇಲೆ ಕೂಡಿ ನಿಂತಿವೆ.

ಸತ್ಯ ಗಾಜಿನ ಜಾಡಿಯಲ್ಲಿದ್ದ ನೀರನ್ನು ತೆಗೆದುಕೊಂಡು ಬೇಗ ಅವರ ತಲೆಗೆ ತಟ್ಟಿದಳು. ಗಾಳಿ ಹಾಕತೊಡಗಿದಳು. ಇನ್ನೊಂದು ಸಲ ನೀರು ತಟ್ಟಿ, ಅವರ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡಳು. 'ಬೆಟ್ಟಯ್ನೋರೆ, ಇವರು ಬೇಕಾದರೆ ಮತ್ತೆ ಸ್ನಾನ ಮಾಡ್ತಾರೆ. ನೀವು ಒಳಗೆ ಬನ್ನಿ. ಗಾಳಿ ಹಾಕಿ' ಎಂದಳು.

ತುಸು ಹೊತ್ತಿನಲ್ಲಿಯೇ ಯಜಮಾನರಿಗೆ ಪ್ರಜ್ಞೆ ತಿಳಿಯಿತು. ಕಣ್ಣುಬಿಟ್ಟರು. ಎದ್ದು ಗೋಡೆಯನ್ನೊರಗಿ ಮಂಚದ ಮೇಲೆ ಕುಳಿತರು ಅವರ ಕೋಪ ಎಳ್ಳಷ್ಟೂ ಆರಿರಲಿಲ್ಲ.

'ಅದೇನು ಮಾತನಾಡೇ.'

'ನಾನು ಎಲ್ಲಾನೂ ಕಾಗದದಲ್ಲಿ ಬರೆದಿದ್ದೇನೆ.'

'ನೀನೊಬ್ಬೇ ಅಲ್ಲ ಬರವಣಿಗೆ ಕಂಡಿರೋಳು. ನನ್ನೆದುರಿಗೆ ಬಾಯಿ ಬಿಟ್ಟು ಬಗುಳು.'

'ಕಾಗದದಲ್ಲಿ ಬರೆದಿರೂದ ಮತ್ತೆ ನನ್ನ ಬಾಯಲ್ಲಿ ಹೇಳಿಸಬೇಕು ಅಂತ ನೀವು ಹಟ ಮಾಡಿದ್ರೆ ಹೇಳ್ತೀನಿ ಕೇಳಿ. ನನಗೆ ಜಾತಿಮತದಲ್ಲಿ ನಂಬಿಕೆ ಇಲ್ಲ. ಶ್ರೀನಿವಾಸ ನನ್ನ ಮಾಡ್ಕಂಡ್ರೆ ತಪ್ಪಿಲ್ಲ.'

'ಜಾತಿಮತ ಸುಳ್ಳೆ? ಧರ್ಮ ಸುಳ್ಳೆ?'

'ಧರ್ಮ ಸುಳ್ಳು ಅಂತ ಯಾರೂ ಅನ್ನೊಕ್ಕಾಗುಲ್ಲ. ಆದರೆ ಜಾತಿ ಮತ ಅಧರ್ಮ, ಅದು ಸುಳ್ಳು.'

'ಜಾತಿ ಮತ ಸುಳ್ಳೆ? ನಾನು ಬ್ರಾಹ್ಮಣನಾಗಿರೋದು, ನೀನು ನನ್ನ ಹೊಟ್ಟೇಲಿ ಹುಟ್ಟಿದ್ದು, ಆ ಚಾಂಡಾಲ ಶೂದ್ರನಾಗಿರೂದು ಸುಳ್ಳೆ? ತಿರುಮಲೇಗೌಡ ಅಂತ ಅವನ ಹುಟ್ಟು ಹೆಸರು. ಶ್ರೀನಿವಾಸಮೂರ್ತಿ ಅಂತಲೋ ಶ್ರೀನಿವಾಸರಾವ್ ಅಂತಲೋ ಹೆಸರು ಬದಲಾಯಿಸ್ಕಂಡ್ರೆ ಅವನು ಬ್ರಾಹ್ಮಣನಾಗ್ತಾನೆಯೆ?'

'ನಿಮ್ಮ ಕಷ್ಟ ನನಗೆ ಅರ್ಥವಾಗುತ್ತೆ. ತುಂಬ ದಿನದಿಂದ ಪದ್ಧತಿ ಬೆಳೆದು ಬಂದಿದೆ. ಮಧ್ಯ ಯಾರೇ ಮುರಿಯಲಿ, ಮುರಿದೋರಿಗೂ ಕಷ್ಟವಾಗುತ್ತೆ. ಉಳಿದೋರಿಗೂ ಆಗುತ್ತೆ. ಒಂದು ಸಲ ಕಷ್ಟ ಅನುಭವಿಸುಕ್ಕೆ

ಯಾರೂ ತಯಾರಿಲ್ಲದಿದ್ರೆ ರೂಢಿ ಮುರಿಯೋದು ಹ್ಯಾಗೆ? ನೀವು ಯಾವುದನ್ನ ಧರ್ಮ ಅಂತೀರೊ ಅದೆಲ್ಲ ರೂಢಿ. ಈ ವ್ಯತ್ಯಾಸದ ಮೂಲ ತತ್ವ ಯಾವುದು? ಜನಾಂಗವೇ, ಬಣ್ಣವೇ, ರೂಪಲಕ್ಷಣವೇ? ನೋಡಿ, ಬೆಟ್ಟಯ್ಯನೋರ ಬಣ್ಣ ಕಪ್ಪು. ನಿಮ್ಮ ಬಣ್ಣವೂ ಕಪ್ಪು. ನನ್ನ ಬಣ್ಣ ನೋಡಿ. ನಾನು ಕಪ್ಪಗಿದೀನಿ. ಇವರ ಮಗಳಿದ್ದಾಳಲ್ಲ, ಅವಳ ಹೆಸರೇನು?' - ಎಂದು ಬೆಟ್ಟಯ್ಯನವರ ಕಡೆ ತಿರುಗಿದಳು.

ಅವರು, 'ಮೀರಾ' ಎಂದರು.

'ಹೂಂ. ಮೀರಾ. ಅವಳಿಗೂ ನನಗೂ ಬಣ್ಣ, ರೂಪ, ನಿಲುವಿನಲ್ಲಿ ವ್ಯತ್ಯಾಸವಿಲ್ಲ' ಎಂದು ಏನೋ ಜ್ಞಾಪಿಸಿಕೊಂಡು ಹೇಳಿದಳು: 'ಬೆಟ್ಟಯ್ಯನೋರ ಕೇರೀಲಿ ಇದ್ದಾಳಲ್ಲ ಮಾತಂಗಿ, ನಿಮ್ಮ ಕೇರೀಲೇ ಒಬ್ಬರಿಗೆ ಕೊಟ್ಟು, ಚಿಕ್ಕ ವಯಸ್ಸಿನಲ್ಲೇ ಗಂಡ ಸತ್ತು ಹೋಗಿದ್ದ. ಅವಳು ಒಂದು ದಿನ...."

'ನಿಂಗೆ ಇನ್ನೊಂದು ಸಲ ಯಾಕ್ಸಿಡ ತಗಂಡು ಹೊಡೀಬೇಕೇನು?' ಎಂದು ತಂದೆ ನಡುವೆಯೇ ಕೋಪದಿಂದ ಕೇಳಿದರು. 'ನಿನ್ನ ಭಾಷಣ ಬೇಕಾಗಿಲ್ಲ ಇದೀಗ. ನಮ್ಮೆಲ್ಲರ ಬಣ್ಣವೂ ಕಪ್ಪು ನಿಜ. ಕಸ್ತೂರಿಯೂ ಕಪ್ಪು, ಇದ್ದಿಲೂ ಕಪ್ಪು, ಇದ್ದಿಲು ಕಸ್ತೂರಿಯಾಗುತ್ತೆಯೆ?'

'ಸ್ವಾಮಿಗಳಿಗೆ ಹೊಟ್ಟೆ ಹಸಿದ್ಹಂತೆ, ಸಿಟ್ಟು ಬತ್ತದೆ. ಮುಡಿಗೆ ನೀರು ಕೊಟ್ಟು, ಅವರಿಗೆ ಏನಾದರೂ ಊಟಕ್ಕೆ ಮಾಡ್ಸಿ, ನಾನು ಹೋಯ್ತೀನಿ' ಎಂದು ಬೆಟ್ಟಯ್ಯನವರು ಎದ್ದರು.

ಸತ್ಯ ಹೇಳಿದಳು, 'ಬಿಡಬೇಡಿ ಕೂತ್ಕಳ್ಳಿ, ಈ ವಿಷಯ ಎಷ್ಟು ಅಡಿದ್ರೂ ಹತ್ತಲ್ಲ. ಹರಿಯಲ್ಲ. ನನ್ನ ವಿಚಾರ ತಿಳ್ಕೊಳ್ಳಕ್ಕೆ ಅವರು ಪ್ರಯತ್ನಾನೇ ಮಾಡಲ್ಲ. ನಾನು ಹೇಳ್ತಿದ್ದೇನಲ್ಲ. ನನಗೆ ಎಂಟು ವರ್ಷವಾಗಿತ್ತು. ಒಂದು ದಿನ ಸಂಜೆ ತೋಟಕ್ಕೆ ಹೋಗಿದ್ದೆ --- ಅಪ್ಪನ್ ಹುಡಿಕ್ಕೊಂಡು. ಅಪ್ಪ ಇರ್ಲಿಲ್ಲ. ಮಾತಂಗಿ ನಮ್ಮ ತೋಟದಲ್ಲಿ ಸೋಗೆ ಕುರುಂಬಾಳೆ ಕಟ್ಕೊತಿದ್ಲು. ನನ್ನ ಮಾತಾಡಿಸಿದ್ಲು. ಮಾದಿಗರು ಅಂತ ಗೊತ್ತಿದ್ರೂ ನಾನು ಹತ್ರ ಹೋದೆ. ಅವಳದ್ದು ಮೊದಲಿನಿಂದ ಕ್ಲೀನು.'

'ಹೌದಮ್ಮ. ಅವಳು ಈಗ್ಲೂ ದಿನಾ ಮಡಿ ಉಟ್ಕೊಂತಳೆ.'

'ನಾನು ಅವಳ ಹತ್ತಿರ ನಿಂತಿದ್ದೆ. ಅದೇ ದಾರೀಲಿ ಬರ್ತಿದ್ದ ಯಾವುದೋ ಊರಿನವರು, ಅವಳೇ ತೋಟದ ಯಜಮಾಂತಿ ಅಂತ ತಿಳ್ಕೊಂಡು ಕುಡಿಯಕ್ಕೆ ಎಳನೀರು ಕೇಳಿದರು. ತಾನು ಯಜಮಾಂತಿಯಲ್ಲ ಅಂತ ಅವಳು ಹೇಳಿದರೆ ಕೇಳಲೇ ಇಲ್ಲ. ಕೊನೆಗೆ ನನ್ನ ತೋರಿಸಿ, 'ಏನಮ್ಮಾ, ನಿಮ್ಮ ಮಗಳೇ?' ಅಂತ ಕೇಳಿದರು. 'ಅಲ್ಲ, ತ್ವಾಟದ ಯಜಮಾನರ ಮಗಳು' ಅಂದ್ಳು. ಆದರೆ ಅವರು, 'ಎಳ್ನೀರು ಕೊಟ್ರೆ ಖರ್ಚಾಯ್ತದೆ ಅನ್ನೋ ಹಂಗಿದ್ರೆ ಇಲ್ಲ ಅನ್ನವ್ವ. ಹೊಟ್ಟೇಲಿ ಹುಟ್ಟಿದ ಮಗಳನ್ನ ಯಾಕೆ ಅಲ್ಲ ಅಂತೀಯ?' ಅಂದು ಮುಂದೆ ಹೋದರು. ನಾನು ಹೋದ ಸಲ ಊರಿಗೆ ಹೋದಾಗ ಕೆರೆ ಏರಿ ಮೇಲೆ ಅವಳನ್ನ ನೋಡಿದೆ. ಈ ಮಾತು ಜ್ಞಾಪಕಕ್ಕೆ ಬಂತು. ಯಾಕಂದ್ರೆ ಅವಳ ಮುಖ, ಮೂಗು, ಬಣ್ಣ ಎಲ್ಲ ನನ್ನ ಹಾಗೇ ಇದೆ. ನಾನು ಹ್ಯಾಗೆ ಬ್ರಾಹ್ಮಣಿತಿಯಾದೆ? ಅವಳು ಹ್ಯಾಗೆ ಮಾದಿಗಿತ್ತಿಯಾದಳು? ಹಿಂದುಸ್ಥಾನದಲ್ಲಿರೂ ಒಂದೊಂದು ವ್ಯತ್ಯಾಸ ಕಾಣೋದೇ ಇಲ್ಲ. ಒಂದೇ ಚಹರೆ ಇರತ್ತೆ.'

ಇವೆಲ್ಲ ಬೆಟ್ಟಯ್ಯನವರು ಕೇಳದ ಮಾತಲ್ಲ. ಆದರೆ ಮೊದಲ ದರ್ಜೆಯಲ್ಲಿ ಎಂ.ಎ. ಪಾಸು ಮಾಡಿರುವ ಈ ಬ್ರಾಹ್ಮಣ ಹುಡುಗಿಯು ಗ್ರಾಮದೇವರ ಅರ್ಚಕರಾದ ತನ್ನ ತಂದೆಯೊಡನೆ ಆಡುತ್ತಿರುವುದನ್ನು ಕೇಳಿ ಅವರಿಗೆ ಆಶ್ಚರ್ಯವೂ ಆಯಿತು. ಸಂತೋಷವೂ ಆಯಿತು. ಅವಳ ತಂದೆ ಮಾತ್ರ ಮೌನವಾಗಿದ್ದರು. ಇದುವರೆಗೂ ಉರಿಯುತ್ತಿದ್ದ ಸಿಟ್ಟು ಈಗ ಮುಖದಲ್ಲಿ ಕಡಿಮೆಯಾದಂತೆ ಕಾಣುತ್ತಿತ್ತು.

ಐದು ನಿಮಿಷದ ನಂತರ ಗಸ್ತ್ರೀ ಮಾತಾಡಿದಳು. 'ವ್ಯತ್ಯಾಸವೆಲ್ಲ ಸುಳ್ಳು ಅಂತ ವೇದಾಂತವೂ ಹೇಳುತ್ತೆ. ದಾಸರೆಲ್ಲ ಅದನ್ನೇ ಅಂದ್ರೋರು. ನಮ್ಮ ನಮ್ಮ ಅಂತರಂಗವೇ ನಿಜ ನುಡಿಯುತ್ತೆ. ನಮ್ಮ ನಮ್ಮ ಅನುಭವವೇ ದಿಕ್ಕು ತೋರಿಸುತ್ತೆ. ಆದರೆ ರೂಢಿ ಅಂತರಂಗಾನ ಮುಚ್ಚಿ ಹಾಕುತ್ತೆ. ಅನುಭವದ ಅರ್ಥವನ್ನು ಕೈ ತಪ್ಪಿಸುತ್ತೆ. ಧೈರ್ಯವಿದ್ದೋರು

ರೂಥೀನ ಗೆಲ್ತಾರೆ. ಗೆದ್ದು ಬದುಕ್ತಾರೆ. ಹೇಡಿಗಳು ಮನಸ್ಸಿನ ಮೇಲೆ ಮಣ್ಣು ಮುಚ್ಚಿಕೊಂಡು ಮಣ್ಣು ಹುಳುವಿನ ಹಾಗೆ ಜೀವನ ಮಾಡ್ತಾರೆ. ಹೋಗಲಿ ಅಪ್ಪಾ. ನನಗೆ ತಿಳಿದ ಹಾಗೆ ನಾನು ಮಾಡೋಳೇ. ನನ್ನ ಹೊಡೆದದ್ದಕ್ಕೆ ನೊಂದುಕೋಬ್ಯಾಡ. ನನ್ನ ಹೊಡೆಯುಕ್ಕೆ ನೀನಲ್ಲದೆ ಮತ್ತೆ ಯಾರು ಬಾಧ್ಯರು?'

ಕೊನೆಯ ಮಾತನ್ನು ಹೇಳುವಾಗ ಅವಳ ಕಣ್ಣು ಹನಿಗೂಡಿತು. ಅದನ್ನು ತಟ್ಟಬೇಕೆಂದು ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ. ರಕ್ತದ ಕಲೆಗಳಿಂದ ಕೂಡಿದ ಸೀರೆಯ ಸೆರಗನ್ನು ಕಣ್ಣಿಗೆ ಒತ್ತಿಕೊಂಡಳು.

'ಅಪ್ಪಾ, ನೀವೆದ್ದು ಆಸ್ಪತ್ರೆಗೂ ಶಾಪಿಗೂ ಹ್ವಾಗಿ ಗಾಯಕ್ಕೆ ಔಷ್ಧ ಆಕಸ್ಕೊಳಿ. ಗಾಯ ಕೀತ್ ಗೀತ್ ಕಂಡಾತು' --- ಚೆಟ್ಟಿಯ್ಯನವರೆಂದರು.

'ಇದು ಏಟಿನಿಂದಲೇ ಆದ ಗಾಯ ಅಂತ ತಕ್ಷಣ ಗೊತ್ತಾಗುತ್ತೆ. ಯಾರು ಹೊಡೆದರು ಅಂತ ಕೇಳಿದರೆ ನಮ್ಮಪ್ಪ ಅಂತ ಹೇಳಲೆ? ಇಷ್ಟು ಪ್ರೀತಿಯಿಂದ ಸಾಕಿದ ನಮ್ಮಪ್ಪ ಇವತ್ತೊಂದು ದಿನ ಸಿಟ್ಟಿನಲ್ಲಿ ಹೊಡೆದಿದ್ದಾರೆ. ನಾನು ಯಾವ ಡಾಕ್ಟರ ಹತ್ತಿರಕ್ಕೂ ಹೋಗಲ್ಲ. ಅದೇ ವಾಸಿಯಾಗುತ್ತೆ.' ಎಂದಳು.

ಮತ್ತೆ ಮೌನ ಬಿಸಿಯೇರಿಸಿತು. ಗಂಭೀರವಾಗಿ ಅಂತರ್ಮುಖಿಯಾಗಿ ಕುಳಿತಿದ್ದ ತಂದೆ ಇದ್ದಕ್ಕಿದ್ದ ಹಾಗೆ ಮೇಲೆ ಎದ್ದು, 'ಎಷ್ಟೊತ್ತಾಯ್ತೋ ಏನೋ. ಚೆಟ್ಟಿಯ್ಯಾ. ನನ್ನ ಮೋಟಾರ್ ಸ್ಟ್ಯಾಂಡಿಗೆ ತಲುಪಿಸಿ ಬಿಟ್ಟು ಹೋಗಪ್ಪ' ಎನ್ನುತ್ತ ತಮ್ಮ ಚೀಲವನ್ನು ಕೈಲಿ ಹಿಡಿದು ದಾಪುಗಾಲು ಹಾಕಿ ಹೊಸಲನ್ನು ದಾಟಿಬಿಟ್ಟರು.

* * *

ಮಗಳನ್ನು ಆವೇಶದಲ್ಲಿ ಹೊಡೆದು ಬಂದ ನಂತರವೂ ವೆಂಕಟರಾಮಯ್ಯನವರ ಕೋಪ ಆರಲಿಲ್ಲ. ಈ ಅಪಮಾನ ಊರಿನಲ್ಲಿ ಹಬ್ಬುವ ಮೊದಲೇ ಅವಳು ಯಾವದರೂ ರೋಗ ಬಂದು ಸತ್ತಿದ್ದರೆ ಚೆನ್ನಾಗಿತ್ತು ಎಂದುಕೊಳ್ಳುತ್ತಿದ್ದರು. ಈ ಮದುವೆ ಹೇಗಾದರೂ ತಪ್ಪಲಿ

ಎಂದು ದಿನವೂ ಪೂಜೆ ಮಾಡುವಾಗ ತಿರುಮಲ ಸ್ವಾಮಿಯನ್ನು ಅನನ್ಯ ಭಕ್ತಿಯಿಂದ ಬೇಡಿಕೊಳ್ಳುತ್ತಿದ್ದರು. ಕೋಪ, ಅಪಮಾನ ಮತ್ತು ನಿಸ್ಸಹಾಯಕತೆಗೆ ಸಿಕ್ಕಿ ಅವರಿಗೆ ಊಟದಲ್ಲಿ ರುಚಿ ಹೊರಟುಹೋಗಿತ್ತು, ರಾತ್ರಿಯ ನಿದ್ದೆ ಹಾರಿ ಹೋಗಿತ್ತು.

ಅವರ ಪ್ರಾರ್ಥನೆ ಹದಿನೈದು ಹದಿನೆಂಟು ದಿನಗಳಲ್ಲೇ ನೆರವೇರಿತು. ಅವಳನ್ನು ಮದುವೆಯಾಗುವುದಿಲ್ಲವೆಂದು ತಿರುಮಲೇಶನು ಅಜ್ಜ ಮತ್ತು ತಾಯಿಯ ಕೈ ಮುಟ್ಟಿದನಂತೆ. ಈ ಖಚಿತ ಸುದ್ದಿಯನ್ನು ವೆಂಕಟೇಶನೇ ತಂದಿದ್ದ. ಇನ್ನು ರಾತ್ರಿ ನಿಶ್ಚಿಂತೆಯಿಂದ ನಿದ್ದೆ ಮಾಡಬಹುದು. ಆದರೆ ಅವರಿಗೆ ಆ ರಾತ್ರಿಯೂ ಕಣ್ಣು ಹೊತ್ತಲಿಲ್ಲ. 'ಬುದ್ಧಿವಂತೆಯಾಗಲಿ ಅಂತ ಸ್ಕೂಲಿಗೆ ಕಳಿಸಿದೆ. ಫಸ್ಟ್ ಕ್ಲಾಸಿನಲ್ಲಿ ಪಾಸು ಮಾಡಿತು. ಹೆಡ್ಮಾಸ್ತರೇ ಹೇಳಿದರು ಅಂತ ಕಾಲೇಜಿಗೆ ಕಳಿಸಿದೆ. ಅದು ವಿದ್ಯಾ ಕಲೀತು. ಏನು ಸಾರ್ಥಕ? ಜಾತಿ ಮತ ಸುಳ್ಳು, ಮೊದಲು ಹಾಗಿತ್ತು ಆಮೇಲೆ ಹೀಗಾಯ್ತು, ಭಗವದ್ಗೀತೇಲಿ ಹೇಳಿರೊ ಅರ್ಥ ಬೇರೆಯೇ ಇದೆ- ಅಂತ ರಜದಲ್ಲಿ ಬಂದಾಗ ನನ ಕೈಲೇ ವಾದ ಮಾಡ್ತಿತ್ತು. ಏನೋ ಹೆಣ್ಣು ಹುಡುಗಿ ಮಾತಾಡ್ತಾಳೆ ಅಂತ ಸುಮ್ಮನಿದ್ದೆ. ಕೊಂಚ ಬೆಳೆದು ಕೊಡಲಿ ಕಾವಾಗಿ ಬುಡಕ್ಕೇ ಮೃತ್ಯುವಾಯ್ತು.'

ನಾಲ್ಕಾರು ದಿನಗಳಲ್ಲಿ ಅವರು ನಿರೀಕ್ಷಿಸಿದ ಹಾಗೆಯೇ ಊರಿನವರು ಮಾತಾಡಿಕೊಳ್ಳಲು ಶುರು ಮಾಡಿದರು. 'ಎಂಜಲಾಸೆಗೆ ಹೋದ ಇದೆ ಕೆಟ್ಟಿತು,' ಎಂಬ ಮಾತು ವೆಂಕಟೇಶನ ಕಿವಿಗೆ ಬಿದ್ದು ಅವನು ದಿನಾ ತಂದು ಹೇಳುತ್ತಿದ್ದ. ಅದನ್ನು ಕೇಳಿ ಕೇಳಿ ಅವರಿಗೆ ಶ್ರೀನಿವಾಸನ ಮೇಲೆ ಕೋಪ ಬಂತು. ಎರಡೂ ಕೈ ಸೇರಿದರೆ ಚಪ್ಪಾಳೆ. ಇವನು ಜೊತೆ ಸೇರಿ ಗದ್ದಲಾನೂ ಮಾಡಿಸಿದ. ಈಗ ಪೆಟ್ಟಿಗೆ ಸಿಕ್ಕದೆ ತಪ್ಪಿಸಿಕೊಂಡು ಬಿಟ್ಟ. ಏಟಿಗೆ ಗುರಿಯಾದದ್ದು ಇದೇ. ಇದಕ್ಕೆ ಅಗಾಧ ಬುದ್ಧಿ ಇದೆ. ದಪ್ಪ ದಪ್ಪ ಪುಸ್ತಕ ಓದಿದೆ. ಇಷ್ಟೆಲ್ಲ ಆದರೂ ಈ ಹುಚ್ಚು ಯಾಕೆ ಬಂತು? ತಮ್ಮಿಂದ ಏಟು ತಿಂದ ಮೇಲೂ ಸಮಾಧಾನವಾಗಿಯೇ ಹೇಳಿತು. ಜಾತಿ ಮತ ವ್ಯತ್ಯಾಸವೆಲ್ಲ ಸುಳ್ಳು ಅಂತ ಎಲ್ಲ ವೇದಾಂತವೂ ಹೇಳುತ್ತೆ ಅಂದಳಲ್ಲ, ಇನ್ನೊಂದು ಹೇಳಿದಳಲ್ಲ- ಯಾರೋ ಪರ ಊರಿನವರು

ಅವಳನ್ನೂ ಮಾತಂಗಿಯನ್ನೂ ಜೊತೆಯಾಗಿ ನೋಡಿ ತಾಯಿ - ಮಗಳು ಅಂತ ತಿಳ್ಕಂಡ್ರಂತೆ....

ಈ ಯೋಚನೆ ಬಂದಂದಿನಿಂದ ಅವರ ಅಂತರಂಗವು ಕದಡಿತು. ಮಾತಂಗಿಯ ನೆನಪೇ ತುಂಬಿಕೊಂಡು, ಮಗಳು ಈಗ ಮಾಡಿರುವ ಹಲ್ಲಂಡೆ ಮರೆಗೆ ಸರಿಯಿತು. ಮಾತಂಗಿಯ ನೆನಪು ವಿವರ ವಿವರವಾಗಿ ಬರಲು ಆರಂಭವಾಯಿತು! ರಾತ್ರಿ ಮಲಗಿದಾಗ, ಸ್ನಾನ ಮಾಡುವಾಗ, ಯಜ್ಞೋಪವೀತದ ಬ್ರಹ್ಮಗಂಟನ್ನು ಕೈಲಿ ಹಿಡಿದು ಓಂ ತತ್ ಸವಿತ್ರ್ವರೇಣ್ಯಂ ಹೇಳುವಾಗ. ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿ ಮಂಗಳಾರತಿ ಹಲಗೆಯನ್ನು ಎತ್ತಿ ದೇವರ ಮುಖಕ್ಕೆ ಹಿಡಿಯುವಾಗ...

ಮಗಳು ಮತ್ತು ತಿರುಮಲೇಶನ ವಿಷಯದಲ್ಲಿ ಜನರಲ್ಲೆಲ್ಲ ಗುಲ್ಲೋ ಗುಲ್ಲು. ತಮ್ಮ ವಂಶ, ಮನೆ, ಜಾತಿಯ ಮರ್ಯಾದೆ ಹೋದದ್ದಕ್ಕೆ ಅವರು ಹಿಂಡಿ ಹೋಗಿದ್ದಾರೆ. ಯಾರ ಕೈಲೂ ಮಾತನಾಡುವುದಿಲ್ಲ, ತೋಟಕ್ಕೂ ಹೋಗುವುದಿಲ್ಲ. ತಮ್ಮಲ್ಲಿ ತಾವೇ ಹಲುಬುತ್ತಾ ಮನೆಯಲ್ಲಿರುತ್ತಾರೆ. ರಾತ್ರಿಯ ನೀರವತೆಯಲ್ಲಿ, ಈ ಮನೆಗೆ ಅಪರೂಪವಾಗಿದ್ದ ಚಿಕ್ಕ ಮೊಮ್ಮಗುವನ್ನು ಸಹ ಎತ್ತಿ ಮಾತನಾಡಿಸಲು ಹೋಗುತ್ತಿಲ್ಲ. ಬೆಳಿಗ್ಗೆ ಎದ್ದು ಸ್ನಾನ ಮಾಡಿ ದೇವಸ್ಥಾನದ ಪೂಜೆಗೆ ಹೋಗುತ್ತಾರೆ.

ಒಂದು ದಿನ ಗರ್ಭಗುಡಿಯಲ್ಲಿ ನಿಂತು ಮಂತ್ರ ಹೇಳಿಕೊಂಡು ದೇವರ ಪಾದಕ್ಕೆ ಒಂದಾದ ಮೇಲೆ ಒಂದರಂತೆ ಹೂವು ಹಾಕುತ್ತಿದ್ದರು. ಯಾರೋ ಇಬ್ಬರು ಬಂದಂತಾಯಿತು. ಅವರ ಕಡೆಗೆ ಗಮನ ಕೊಡದೆ ಪೂಜೆ ಮಾಡುತ್ತಿದ್ದರು. ತಾವು ತಂದಿದ್ದ ಬಾಳೆ ಹಣ್ಣುಗಳ ತೊಟ್ಟು ಮುರಿದು ಮಂಗಳಾರತಿ ಹಚ್ಚುವಾಗ, 'ನಮ್ಮ ಹಣ್ಣುಕಾಯಿನೂ ಮಾಡಿ' ಎಂಬ ಹೆಂಗಸಿನ ಧ್ವನಿಯಾಯಿತು. ತಿರುಗಿ ನೋಡಿದರೆ ಮಂತ್ರಿ, ಮೇಲಗಿರಿಗೌಡರ ಹೆಂಡತಿ ರಂಗಮ್ಮ ಮತ್ತು ಮಗ ತಿರುಮಲೇಶ. ಅವರು ಹಣ್ಣುಕಾಯಿಗಳನ್ನು ಮಾಡಿ ಕೊಟ್ಟರು. ಆದರೆ ಮಾತನಾಡಿಸಲಿಲ್ಲ. ಮಂಗಳಾರತಿ ಹಚ್ಚಿ ಎಡಗೈಲಿ ಗಂಟೆ ಬಾರಿಸ ತೊಡಗಿದರು. ಮಂಗಳಾರತಿ ಮಾಡುವಾಗ ಅವರು ದೇವರ ಮುಖವನ್ನು ನೋಡಿ ಹತ್ತು ಹನ್ನೆರಡು

ವರ್ಷದ ಮೇಲೆ ಆಗಿದೆ. ಆದರೆ ಆ ದಿನ ಅನ್ಯಮನಸ್ಕರಾಗಿ ತಲೆ ಎತ್ತಿ ಆ ಕಡೆ ನೋಡಿದರು. ಎದ್ದು ಕಾಣುವ ಜರಿಯ ಪಂಚೆ, ಹೊಳೆಯುವ ಭುಜ ಕೀರ್ತಿ, ಎದೆಯ ಮೇಲೆ ಇಳಿ ಬಿದ್ದಿರುವ ಮೂರು ಹಾರಗಳು. ಕಪ್ಪು ಮುಖದ ಕಣ್ಣುಗಳನ್ನು ಥಳಥಳನೆ ಮುಚ್ಚಿರುವ ಬೆಳ್ಳಿಯ ಕಟ್ಟುಗಳು. ಹಣೆಯ ಮೇಲೆ ಹೊಳೆಯುವ ನಾಮ. ಕಣ್ಣು ಕೋರೈಸುವಂತಹ ಕೆಂಪು, ಬಿಳುಪು, ನೀಲಿ, ಹಸರು, ಹಳದಿ ಮಣಿಗಳ ಕಿರೀಟ. ಮುಖದ ಹತ್ತಿರ ಬಂದ ಮಂಗಳಾರತಿ ಹಾಗೆಯೇ ನಿಂತಿತು. ಅವರ ಕಣ್ಣು ದೇವರ ಮುಖದಲ್ಲಿ ನೆಟ್ಟಿತು. ಗಂಟೆ ಮಾತ್ರ ಒಂದೇ ಲಯದಲ್ಲಿ ನಿಂತಂತೆ ನುಡಿಯುತ್ತಿತ್ತು. ನಿಂತ ಮಂಗಳಾರತಿ ನಿಂತಲ್ಲಿಯೇ ಇತ್ತು. ಅವರ ಧ್ಯಾನವು ದೇವರ ಮುಖದಲ್ಲಿ ನೆಟ್ಟು ತಾನೂ ಧ್ಯಾನದಿಂದ ಬದ್ಧವಾದಂತೆ ಬಲಗೈಯ ಮಂಗಳಾರತಿಯ ಹಲಗೆಯನ್ನು ಚಲಿಸದೆ ಹಿಡಿದುಬಿಟ್ಟಿತ್ತು. ನೋಡು ನೋಡುತ್ತಾ ಅವರು ಕಣ್ಣು ಮುಚ್ಚಿದರು. ಒಂದು ಕ್ಷಣ ತಲೆಯಲ್ಲಿ ಏನೋ ಪ್ರಜ್ವಲಿಸಿದಂತೆ ಆಗಿ ಅನಂತರ ಸರಿಯಾಯಿತು. ಇದ್ದಕ್ಕಿದ್ದ ಹಾಗೆಯೇ ಮನಸ್ಸಿಗೆ ಎನಿಸಿಬಿಟ್ಟಿತು- ಇದು ಕಲ್ಲು -ಬರೀ ಕರಿಯ ಕಲ್ಲು; ಇದಕ್ಕೆ ಪೂಜೆ ಮಾಡೂದು ವ್ಯರ್ಥ.

ಮಂಗಳಾರತಿಯನ್ನು ಮುಗಿಸಿ, ಲಂಗಮ್ಮ ಒಬ್ಬಳ ಮುಂದೆ ಹಿಡಿದರು. ಭಕ್ತಿಯಿಂದ ಆಕೆ ನಾಲ್ಕಾಣೆಯನ್ನು ಹಾಕಿ ಕೈಯಾಡಿಸಿ ಕಣ್ಣಿಗೆ ಒತ್ತಿಕೊಂಡಳು. ಅವರು ತಿರುಮಲೇಶನ ಮುಂದೆ ಮಾತ್ರ ಹಿಡಿಯಲಿಲ್ಲ. ಒಳಗೆ ತೂರಟು ಹೋದರು, ಅನಂತರ ಅವಳಿಗೆ ತೀರ್ಥ ಕೊಟ್ಟರು. ಅವನ ಇರುವನ್ನೇ ಅಲಕ್ಷಿಸಿದವರಂತೆ ಒಳಗೆ ಹೋದರು.

ಅವನ ತಾಯಿಯೇ, 'ಅಯ್ನೋರೇ, ಅದು ಹುಡುಗ ಬುದ್ಧಿ. ನೀವು ಕ್ವಾಪ ಮಾಡ್ಕಬ್ಯಾಡಿ. ಅದ್ಕೂ ತೀರ್ಥ ಕೊಡಿ,' ಎಂದಳು. ಅವರು ಮಾತೂ ಆಡಲಿಲ್ಲ, ತೀರ್ಥವನ್ನೂ ಕೊಡಲಿಲ್ಲ. ಒಂದು ನಿಮಿಷ ಕಾದು ಅವಳೆ, 'ಅದರ ಮಕ ನೋಡಬ್ಯಾಡಿ. ನಾವೆಲ್ಲ ಇರುವಾಗ ಈ ಮದುವೆ ಆಗಾಕ್ ಬುಡಾಕಿಲ್ಲ. ನೀವು ತೀರ್ತ ಕೊಡಿ' ಎಂದಳು.

ಅವರು ಒಳಗಿನಿಂಗ ತೀರ್ಥ ಪಾತ್ರೆ ಹಿಡಿದುಕೊಂಡು ಬಂದರು. ಆದರೆ ಅವನು ಕೈ ನೀಡಲಿಲ್ಲ.

'ದೇವರ ಮುಂದಲ್ಲಿ ನಿನ್ನ ಜಂಬ, ಕೈ ನೀಡೋ' ಎಂದು ತಾಯಿ ಸಿಟ್ಟಿನಿಂದ ಕಿರುಚಿ, ಅವನ ಕೈಗೆ ಬಂದು ಪಾವಲಿಯ ನಾಣ್ಯ ತುರುಕಿದರು.

ಅವನಿಗೆ ತೀರ್ಥ ಕೊಡಿಸಿದ ಮೇಲೆ ಅವಳು ತಮ್ಮ ಕೈಲಿ ಮಾತನಾಡಬಯಸುತ್ತಿರುವಂತೆ ತೋರಿತು. ಆದರೆ ಇವರು ಎರಡು ಕಡೆಯೂ ಉರಿಯುತ್ತಿದ್ದ ಕಂಬದ ದೀಪದ ಬೆಳಕಿನಲ್ಲಿ ವಿಗ್ರಹದ ಮುಖವನ್ನೇ ದಿಟ್ಟಿಸುತ್ತ ನಿಂತರು. ಐದು ನಿಮಿಷ ಕಾದು ಅವರು ಹೊರಟು ಹೋದ ಮೇಲೆಯೂ ಇವರು ವಿಗ್ರಹದ ಮುಖವನ್ನು ದಿಟ್ಟಿಸುತ್ತಿದ್ದರು.

ಮಗ ಸಲೀಸಾಗಿ ನಮ್ಮ ಜಾತಿಯದೇ ಕನ್ಯೆಯನ್ನ ಮದ್ವೆಯಾದ್ರೆ ದೇವಸ್ಥಾನಕ್ಕೆ ಗ್ಯಾರೆ ಕಟ್ಟುಸ್ತೀನಿ ಅಂತ ರಂಗಮ್ಮ ಹರಕೆ ಹೊತ್ತಿದ್ದಳು. ಅವಳ ಹರಕೆ ಸಂದಿತು. ಮಂಡ್ಯದ ಕೆಂಪಣ್ಣನವರ ಮಗಳೊಡನೆ ಮದುವೆ ಅದ್ದೂರಿಯಿಂದ ನಡೆಯಿತು. ಮುಂದಿನ ಮೂರು ತಿಂಗಳಲ್ಲಿಯೇ ದೇವಸ್ಥಾನದ ಹಿಂಭಾಗದ ಗೋಡೆಗೆ ಒತ್ತಾಸೆಯಾಗಿ, ಮುಜರಾಯಿ ಇಲಾಖೆಯ ಇಂಜಿನಿಯರುಗಳು ಸಿಮೆಂಟಿನ ಕೆಲಸ ಮುಗಿಸಿದರು. ನಾಲವತ್ತು ಸಾವಿರ ರೂಪಾಯಿಯ ಸರಕಾರೀ ಗ್ರಾಂಟಿನಲ್ಲಿ ಕೆಲಸವಾಗಿ ರಂಗಮ್ಮನ ಹರಕೆ ಸಂದಿತ್ತು. ಅದಕ್ಕೋಸ್ಕರ ದೇವರಿಗೆ ವಿಶೇಷ ಪೂಜೆ-ಅಭಿಷೇಕಾದಿಗಳು ನಡೆಯಬೇಕಾಗಿತ್ತು. ಅದಕ್ಕೆ ಮಂತ್ರಿಗಳು, ರಂಗಮ್ಮ, ಅವರ ಹೊಸ ಬೀಗರು. ಮಗ. ಸೊಸೆ ಎಲ್ಲರೂ ಬರುತ್ತಾರೆ.

ಅಭಿಷೇಕ ನಾಳೆ ಎನ್ನುವಾಗ ವೆಂಕಟರಮಣಯ್ಯನವರು ಮಗನನ್ನು ಕರೆದರು: "ಬಾ ಇಲ್ಲಿ. ಒಂದಿಷ್ಟು ಮಾತನಾಡಬೇಕು."

ಸುಮಾರು ಆರು ತಿಂಗಳಿನಿಂದ ವೆಂಕಟರಮಣಯ್ಯನವರು ಯಾರ ಕೈಲೂ ಮಾತನಾಡುತ್ತಿರಲಿಲ್ಲ. ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಕೊಂಡು ಬರುತ್ತಿದ್ದರು. ಈಗ ಅಪ್ಪ ಮಾತನಾಡುವುದನ್ನು ಕಂಡ ಅವನಿಗೆ ಸಂಭ್ರಮವಾಯಿತು. ಅಡಿಗೆಮನೆಯಲ್ಲಿ ಸೊಸೆ ಹಿಟ್ಟು ತಿರುವುತ್ತಿದ್ದ ಒರಳಿನ ಹತ್ತಿರ ಕೂತು ಮಗುವನ್ನು ಆಡಿಸುತ್ತಿದ್ದ ಅವನು, ಅದನ್ನು ಎತ್ತಿಕೊಂಡೇ ನಡುಮನೆಗೆ ಬಂದು ಅಪ್ಪನ ಎದುರು ನಿಂತ.

'ನೋಡು, ನಾನು ತುಂಬ ಯೋಚನೆ ಮಾಡಿದೀನಿ. ಈ ದೇವರು

ಅನ್ನೋದೊಂದು ಕಲ್ಲು. ಅದನ್ನು ಪೂಜೆ ಮಾಡಬಾರ್ದು. ಅದೊಂದು ಸುಳ್ಳು ಕಸಬು, ನಾಳೆಯಿಂದ ನಾನು ಆ ಚಾಕ್ರಿ ಮಾಡುಲ್ಲ! ಎಂದು ತಮ್ಮ ಜನಿವಾರಕ್ಕೆ ಕಟ್ಟಿಕೊಂಡಿದ್ದ ಗುಡಿಯ ಬೀಗದ ಕೈಯನ್ನು ಬಿಚ್ಚಿ ಅವನ ಕಾಲಿನ ಹತ್ತಿರ ಎಸೆದರು. 'ಅಲ್ಲ ಕಣಪ್ಪಾ....' ಎಂದು ಅವನು ಮಾತನಾಡುತ್ತಿದ್ದುದಕ್ಕೆ ಇನ್ನೇನೂ ಆಡಬೇಡವೆಂದು ಸೂಚನೆ ಕೊಟ್ಟು, ಹೆಗಲ ಮೇಲೆ ಒಂದು ಚೌಕ ಹಾಕಿಕೊಂಡು ಹೊರಗೆ ಹೋದರು.

ಅಪ್ಪನ ಈ ವರ್ತನೆ ವೆಂಕಟೇಶನಿಗೆ ಅರ್ಥವಾಗಲಿಲ್ಲ. ದೇವರು ಅನ್ನೋದೆ ಸುಳ್ಳು ಎಂಬಂತೆ ಮಾತನಾಡಿದನಲ್ಲ, ಇವನಿಗೆ ಬುದ್ಧಿ ಗಿದ್ಧಿ ವಿಕಲ್ಪವಾಗಿದೆಯೇ? ಈಗ ಆರು ತಿಂಗಳಿಂದ ಒಂದು ಥರಾ ಇದ್ದಾನೆ. ಸತ್ಯನ ವಿಷಯದಲ್ಲಿ ಏನಾದರೂ ಹರಕೆ ಮಾಡಿಕೊಂಡಿರಬಹುದು, ಅದನಂತೆ ಆಗದೆ ಇರೂದ್ರಿಂದ ಅವನಿಗೆ ಈ ದೇವರ ಮೇಲೆ ಅಪನಂಬಿಕೆ ಬಂದಿದೆಯೇ? ಮಾಡಿಕೊಂಡ ಹರಕೇನೆಲ್ಲ ಯಾವ ದೇವರೂ ಪೂರೈಸುಲ್ಲ. ಹಾಕಿಕೊಂಡ ಅರ್ಜೀನೆಲ್ಲ ಯಾವ ಸರ್ಕಾರವೂ ಮಾಡುಲ್ಲ. ಅಪ್ಪನಿಗೆಲ್ಲೋ ಭ್ರಾಂತು ಎಂದುಕೊಂಡ.

ಮರುದಿನ ಅವರೆಲ್ಲ ದೇವಸ್ಥಾನಕ್ಕೆ ಹೋದ ಸ್ವಲ್ಪ ಹೊತ್ತಿಗೆ ವೆಂಕಟರಮಣಯ್ಯನವರು ಮನೆಯ ಆಳಿನ ಕೈಲಿ ಹಾರೆ, ಗುದ್ದಲಿಗಳನ್ನು ತೆಗೆಸಿಕೊಂಡು ತೋಟಕ್ಕೆ ಹೋದರು. ಸೋಗೆ ಒಟ್ಟಿಲಿದ್ದ ಜಾಗವನ್ನು ತೋರಿಸಿ ಹೇಳಿದರು, 'ನೋಡು, ಇದೆಲ್ಲ ತೆಗೆದು ಇನ್ನೊಂದು ಕಡೆ ಒಟ್ಟು, ಈ ಜಾಗದಲ್ಲಿ ಒಂದು ಗುಡಿಸಲು ಕಟ್ಟಬೇಕು.'

'ಈಗ ಯಾಕ್ರಯ್ಯಾ ಗುಡ್ಲು?' - ಆಳು ಕೆರಗ ಕೇಳಿದ.

'ನಾನ್ ಇನ್ ಮ್ಯಾಲೆ ಇಲ್ಲೇ ವಾಸ ಮಾಡ್ತೀನಿ.'

ಆ ದಿನ ಸಂಜೆ ವೆಂಕಟೇಶ ಮನೆಯಲ್ಲಿ ಅಪ್ಪನನ್ನು ಕೇಳಿದ. 'ಈಗ್ಯಾಕಪ್ಪ ತ್ವಾಟದಲ್ಲಿ ಗುಡ್ಲು ಕಟ್ಟುಕ್ ಹೇಳಿದೆಯಂತೆ?'

'ಇನ್ ಮ್ಯಾಲೆ ಅಲ್ಲೇ ನನ್ನ ವಾಸ.'

'ಮನ್ಲಿ ಏನಾಗಿದೆ ನಿನಗೆ ಕಷ್ಟ?'

'ಕಷ್ಟವೇನಿಲ್ಲ, ಅಲ್ಲಿರಬೇಕು ಅನ್ನಿಸಿದೆ. ದೇವರ ವಿಷಯ ನೆನ

ಹೇಳಿದೆನಲ್ಲ. ಇನ್ನು ಮ್ಯಾಲೆ ಗೃಹಕೃತ್ಯವೆಲ್ಲ ನಿಂದು. ಯಾವುದಕ್ಕೂ ನನ್ನ ಕೇಳಬ್ಯಾಡ.'

ಹಾಗೆ ನೋಡಿದರೆ ಗೃಹಕೃತ್ಯದ ವಿಷಯ ಅವರು ನೋಡುಕೊಳ್ಳುತ್ತಿದ್ದುದು ಇತ್ತೀಚೆಗೆ ಕಡಿಮೆಯೇ ಆಗಿತ್ತು. ಎಂಟು ದಿನದಲ್ಲಿ ಗುಡಿಸಲು ಸಿದ್ಧವಾಯಿತು. ಮನೆಯಿಂದ ಎರಡು ಚರುಕಲು, ಒಂದು ಸೌಟು, ಚೊಂಬು, ಒಂದೆರಡು ಪುಡಿಪಾತ್ರೆ, ಹಾಸಲು ಗೋಣಿ ಚೀಲ, ಹೊದೆಯಲು ಒಂದು ದುಪ್ಪಟಿಯನ್ನು ತೆಗೆದುಕೊಂಡು ಅವರು ಅಲ್ಲಿಗೆ ಹೊರಟುಹೋದರು.

'ಅಪ್ಪ, ನಿಂಗೆ ಬೇಕಾದ್ರೆ ತ್ಯಾಟದಾಗಿರು. ಊಟ ತಿಂಡಿ ಮನೆಯಿಂದ ಕಳುಸ್ತೀವಿ' ಎಂದು ಮಗ ಹೇಳಿದರೆ ಕೇಳಲಿಲ್ಲ. ವೆಂಕಟೇಶನೇ ಒಂದು ಕುಕ್ಕೆಯಲ್ಲಿ ಅಕ್ಕಿ, ಬೇಳೆ, ಮೆಣಸಿನಪುಡಿಗಳನ್ನು ಇರಿಸಿ ಆಳಿನ ತಲೆಯ ಮೇಲೆ ಕಳಿಸಿದ. ಅಪ್ಪ ಹೋದ ಮೊದಲನೆಯ ದಿನ ಅವನಿಗೆ ಮನೆ ಬಿಕೋ ಎನಿಸುತ್ತಿತ್ತು. ಏನೋ ಆಯಿತು, ಹೋಯಿತು. ಅವಳೊಬ್ಬ ಕತ್ತೆ ಲೌಡಿ ಹೀಗೆ ಮಾಡಿದಳು ಅಂತ ಇವನು ಇಷ್ಟೊಂದು ಯಾಕೆ ಹಚ್ಚಿಕೋಬೇಕು? ಅವರ ತಲೆಯ ಮೇಲೆ ಮೆಟ್ಟಿ ಹಾರಿದ ಹಾಗೆ ಇವಳಿಗೆ ಒಂದು ಒಳ್ಳೇ ಗಂಡು ನೋಡಿ ಮದುವೆ ಮಾಡಿದರೆ ಮುಗೀತು, ಎಂದು ರಾತ್ರಿ ಎಲ್ಲ ಯೋಚಿಸಿದ. ಅವನ ಹೆಂಡತಿ ಜಯಲಕ್ಷ್ಮಿಯೂ ಮಾವನ ಬಗೆಗೆ ಕೊರಗಿದಳು.

ವೆಂಕಟೇಶ ಬೆಳಗ್ಗೆ ಎದ್ದವನೇ ತೋಟಕ್ಕೆ ಹೋದ. ಅಪ್ಪ ಕೊಳದಲ್ಲಿ ಮುಳುಗಿ ಸ್ನಾನ ಮಾಡುತ್ತಿದ್ದರು. ಅವರ ಜನಿವಾರ ಕೊರಳಲ್ಲಿರದೆ ಕೊಳದ ಕಟ್ಟೆಯ ದಡದಲ್ಲಿತ್ತು. ಅವನೇ ಕೇಳಿದ: "ಇದೇನಪ್ಪ, ಹೀಗೆ ಜನಿವಾರ ತೆಗೆದಿಟ್ಟಿದೀಯ? ಹೀಗೆ ಮಾಡಭೌದೆ?'

'ಅದರಲ್ಲೇನಿದೆ, ಆರೆಳೆ ನೂಲಿನ ದಾರ.'

'ಶಾಸ್ತ್ರಸಂಬಂಧ, ದೇವರು, ಮಡಿ, ಮೈಲಿಗೆ ಆಚಾರಗಳಲ್ಲಿ ಅವರು ಎಂದಿಗೂ ಕಟ್ಟು ನಿಟ್ಟು. ಅಂಥವರು ಜನಿವಾರವನ್ನು ಬರೀ ನೂಲಿನ ದಾರ ಎನ್ನುತ್ತಿದ್ದಾರಲ್ಲ? ಶಾಸ್ತ್ರಕರ್ಮಗಳನ್ನು ಹೀಗೆ ತಿರಸ್ಕರಿಸುವವರು

ಎರಡೇ ರೀತಿಯ ಜನ; ಬುದ್ಧಿ ಭ್ರಮಣೆಯಾಗಿರುವವರು ಅಥವಾ ಸನ್ಯಾಸಿಗಳು. ಪೂರ್ತಿ ಸನ್ಯಾಸಿಯೇ ಆಗಿದ್ದರೆ ನಮ್ಮ ತೋಟದಲ್ಲೇಕೆ ಇರುತ್ತಿದ್ದರು.? ಅವರು ಸ್ನಾನ ಮುಗಿಸಿ ಸ್ವಲ್ಪ ಎಳೆ ಬಿಸಿಲಿನಲ್ಲಿ ನಿಂತಿದ್ದು ನಿನ್ನೆ ಉಟ್ಟಿದ್ದ ಆ ಪಂಚೆಯನ್ನೇ ಉಟ್ಟುಕೊಂಡರು. ಕಟ್ಟೆಯ ಮೇಲಿದ್ದ ಜನಿವಾರ ತೆಗೆದುಕೊಂಡು ಎರಡು ಕೈಲೂ ಬಿಡಿಸಿ ಹಿಡಿದುಕೊಂಡು, ಹೊಸತನ್ನು ಧರಿಸುವವರಂತೆ 'ಯಜ್ಞೋಪವೀತಂ ಪರಮಂ ಪವಿತ್ರಂ' ಹೇಳುತ್ತಾ ಕೊರಳಿಗೆ ಹಾಕಿಕೊಂಡು, ಮತ್ತೆ ಕೊಳಕ್ಕೆ ಇಳಿದು ಆಚಮನ ಮಾಡಲು ಪ್ರಾರಂಭಿಸಿದರು.

ಇದು ಬುದ್ಧಿ ಭ್ರಮಣೆಯೇ ಎಂದು ವೆಂಕಟೇಶನಿಗೆ ಅನಿಸಿತು. ಅವರು ಸಂಧ್ಯಾವಂದನೆ ಮುಗಿಸಿ ಬಂದ ಮೇಲೆ ಹೇಳಿದ, 'ಅಪ್ಪ, ವಾರಕ್ಕೊಂದು ದಿನ ತಲೆಗೆ ಎಣ್ಣೆ ತಿಕ್ಕಿಕೊಂಡು ನೀರು ಹಾಕ್ಕೊ ಅಂದೆ: ಕೇಳ್ತೀಯ? ನಿಂಗೆ ಎಷ್ಟು ಉಷ್ಣವಾಗಿದೆ ಗೊತ್ತಾ?' ಅವರು ಮಾತಾಡಲಿಲ್ಲ. ಅವರ ಹಿಂದೆಯೇ ಗುಡಿಸಲಿಗೆ ಹೋದ: 'ತುಂಬ ಉಷ್ಣವಾದೋರು ತಲೆಗೆ ನಿಂಬೆ ಹಣ್ಣು ತಿಕ್ಕಿಕೊಂಡು ಸ್ನಾನ ಮಾಡಬೇಕು. ಹೀಗೆ ಮುಳುಗಬಾರದು. ಯಾರಾದರೂ ತುಂಬಿ ತುಂಬಿ ಹಾಕಬೇಕು,' ಎಂದನು.

ಅವರು ಈಗಲೂ ಮಾತನಾಡಲಿಲ್ಲ. ಮತ್ತೆ ಏನು ಹೇಳುವುದಕ್ಕೂ ತಿಳಿಯದೆ ಅವನು ಸುಮ್ಮನೆ ನಿಂತಿದ್ದ. ಐದು ನಿಮಿಷದ ನಂತರ ಅವರು ಹೇಳಿದರು: 'ನಿಂಬೆ ಹಣ್ಣು ತಿಕ್ಕಿ ತಣ್ಣೀರು ಹೊಯ್ಯೋದು ಹುಚ್ಚು ಹಿಡಿದೋರಿಗೆ. ನಂಗೆ ಏನೂ ಆಗಿಲ್ಲ. ಸುಮ್ಮನೆ ನಿನ್ನ ಕೆಲಸಕ್ಕೆ ಹೋಗು. ಹೀಗೆ ಬಂದು ನನ್ನ ಕಾಡಿಸಬ್ಯಾಡ.'

* * *

ವೆಂಕಟೇಶಯ್ಯನವರು ಊರೊಳಕ್ಕೆ ಬರುವುದೇ ಇಲ್ಲ. ತೋಟಕ್ಕೆ ಆಳುಗಳು ಬಂದು ಕೆಲಸ ಮಾಡಿ ಹೋಗುತ್ತಾರೆ. ಅವರು ಮಾತ್ರ ಯಾವ ಸಂಪರ್ಕವೂ ಇಲ್ಲದೆ ಇದ್ದು ಬಿಟ್ಟಿದ್ದಾರೆ. ಒಂದೊಂದು ದಿನ ಕಾಲುವೆಯ ಏರಿಯ ಮೇಲೆ ನಡೆದು ದೇವಸ್ಥಾನಕ್ಕೆ ಹೋಗುತ್ತಾರೆ. ಇಡೀ

ದೇವಸ್ಥಾನವನ್ನು ಪ್ರದಕ್ಷಿಣೆ ಹಾಕಿದಂತೆ ಒಂದೆರಡು ಸುತ್ತು ಹಾಕುತ್ತಾರೆ. ಮಂತ್ರಿಗಳು ಕಟ್ಟಿಸಿದ ಗೋಡೆಯನ್ನು ಪರೀಕ್ಷಿಸುವವರಂತೆ ನೋಡುತ್ತಾ ನಿಲ್ಲುತ್ತಾರೆ, ಸುಮಾರು ಮೂವತ್ತು ವರ್ಷಕ್ಕೂ ಮಿಕ್ಕಿ ಪೂಜಿಸಿದ್ದ ದೇವರ ಗುಡಿಯ ಬಾಗಿಲಿಗೆ ಸಹ ಕೈಮುಗಿಯುವುದಿಲ್ಲ. ವಿಧರ್ಮಿ, ವಿದೇಶೀಯ ಪ್ರಾಚ್ಯ ಸಂಶೋಧಕನೊಬ್ಬನು ಈ ದೇಶದ ದೇವಾಲಯವನ್ನು ಗಮನಿಸಿ ನೋಡುವಂತೆ ಅದರ ಹೊರಗೋಡೆಯ ಮೇಲಿನ ದೇವದೇವತೆಯರು, ಯಕ್ಷ ಯಕ್ಷಣಿಯರು, ನರ್ತಕ ನರ್ತಕಿಯರು, ಯುದ್ಧದ ಕಾಲಾಳುಗಳ ಕೆತ್ತನೆಯನ್ನು ನೋಡುತ್ತಾ ನಿಲ್ಲುತ್ತಾರೆ. ಅನಂತರ ನಡೆದು, ಸೂತಕ ಕಳೆದವರಂತೆ ತೊಟ್ಟ ಬಟ್ಟೆಯಲ್ಲೇ ಪಕ್ಕದಲ್ಲಿ ಹರಿಯುವ ಕಾಲುವೆಯಲ್ಲಿ ಮುಳುಗಿ ಸ್ನಾನ ಮಾಡಿ ತಮ್ಮ ತೋಟಕ್ಕೆ ಹೋಗುತ್ತಾರೆ. ಅವರಿಗೆ ಹುಚ್ಚು ಹಿಡಿದಿದೆಯೆಂದು ಊರಿಗೆ ಊರೇ ನಂಬಿದೆ. ಆದರೆ ಸದಾ ತೋಟದಲ್ಲೇ ಇರುವ ಅವರು ಒಂದು ಸೋಗೆಯ ಗರಿ ಸರ್ ಎಂದರೂ ಗುಡಿಸಲಿನಿಂದ ಹೊರಗೆ ಬಂದು ಸುತ್ತ ನೋಡುತ್ತಾರೆ ಎಂದು ಎಲ್ಲರೂ ತಮ್ಮಲ್ಲಿ ಮಾತನಾಡಿಕೊಳ್ಳುತ್ತಾರೆ. ಹೀಗಾಗಿ ಊರಿನ ಇತರ ತೋಟಗಳಲ್ಲಿ ಆಗೀಗ ಕಳ್ಳತನವಾದರೂ ಅವರ ತೋಟದಲ್ಲಿ ಒಂದು ಕುರುಂಬಾಳೆಯನ್ನು ಸಹ ಯಾರೂ ಎತ್ತುವುದಿಲ್ಲ.

ಒಂದು ರಾತ್ರಿ ಹತ್ತು ಗಂಟೆಯಾಗಿತ್ತು. ಅವರು ತಮ್ಮ ಗುಡಿಸಲು ಬಾಗಿಲು ಹಾಕಿಕೊಂಡು ತೋಟದಿಂದ ಹೊರಗೆ ಬಂದರು. ಅಮಾವಾಸ್ಯೆಯ ಮುಂದಿನ ದಿನಗಳಾದ್ದರಿಂದ ಕತ್ತಲೆ ಮುಚ್ಚಿಕೊಂಡಿತ್ತು. ಗದ್ದೆಗಳ ಬದುವಿನ ಮೇಲೆ ಏರಿ ನಡೆದುಕೊಂಡು ಮುಂದೆ ಸಾಗಿದರು. ತೋಟದ ಸಂದಿಯ ಓಣಿಯಲ್ಲಿ ನಡೆದು ಮುಂದೆ ಹೋದರು. ಅಲ್ಲೇ ಹೊಸದಾಗಿ ಮಂಗಳೂರು ಹೆಂಚು ಹಾಕಿ ಕಟ್ಟಿರುವ ಹರಿಜನ ಕಾಲೊನಿ. ಅಲ್ಲಿಯ ಜನರೆಲ್ಲ ಎಚ್ಚರವಾಗಿದ್ದಂತೆ ಕಂಡಿತು. ಬೀದಿಯ ಮಧ್ಯೆ ಬೆಂಕಿ ಉರಿಸುತ್ತಿದ್ದರು. ಕೆಲವು ಮನೆಗಳ ಜಗುಲಿಯ ಮೇಲೆ ಲಾಟೀನು ಉರಿಯುತ್ತಿದ್ದುವು. ಇವರು ಹತ್ತಿರ ಹೋದರು. ಏಳೆಂಟು ನಾಯಿಗಳು ಭೌವ್ ಎಂದುವು. 'ಥೂ ಮುಂಡೇವ' ಎಂದುಕೊಂಡು, ಕೇರಿಯ

ಮಧ್ಯಕ್ಕೆ ಬಂದಾಗ ತಿಳಿಯಿತು, ಬೆಂಕಿಯ ಹತ್ತಿರ ಗುಂಪು ಕಟ್ಟಿ ಕುಳಿತು ಗಂಡಸರು ಹೆಂಗಸರು ಕುಡಿಯುತ್ತಿದ್ದಾರೆ. ಅವರ ಕಣ್ಣುಗಳೆಲ್ಲ ಕೆಂಪಗೆ ತುಂಬಿ ತೇಲುತ್ತಿರುವುದು ಬೆಂಕಿಯ ಬೆಳಕಿನಲ್ಲಿ ಕಂಡಿತು.

'ಅದ್ಯಾರಪ್ಪಯ್ಯಾ? ಎಂದು ಒಬ್ಬ ಕೂಗಿ ಕೇಳಿದ.

'ಗುಡಿ ಹಾರುವಯ್ಯ ಕಣ್ಳೇ' ಎಂದು ಒಬ್ಬ ಗುರುತು ಹಿಡಿದ. ತಕ್ಷಣ ಎಲ್ಲರೂ ಎದ್ದು ನಿಂತರು.

'ಉಚ್ಚು ನಾಯಿ ಕೇರೀಗ್ ಬಂದದೆ ಲಕ್ಷ್ಮಿ ಕದಿಯಾಕೆ. ಮಡಗು ತೊಪ್ಪೆಯಾಗೆ' ಎಂದು ಒಬ್ಬ ಕಿರುಚಿದ.

ಅವರೆಲ್ಲ ಎದ್ದು ಎತ್ತೆತ್ತಲೋ ಹೋದರು. ಒಂದು ನಿಮಿಷದಲ್ಲಿ ಸಂದಿಗೊಂದಿಗಳಿಂದ ಬಂದವರು ಸಗಣಿ ತೊಪ್ಪೆಗಳನ್ನು ಬೀಸಿ ಬೀಸಿ ಇವರಿಗೆ ಹೊಡೆದರು. ಒಬ್ಬ ಹೆಂಗಸಂತೂ ತನ್ನ ಮನೆಯ ಹಿಂಭಾಗದಲ್ಲಿದ್ದ ತಿಪ್ಪೆಯಲ್ಲಿ ಒಂದು ಮಂಕರಿ ಸಗಣಿ ತುಂಬಿ ತಂದಳು. ನಾಲ್ಕು ಜನ ಗಂಡಸರು ಅದನ್ನು ತೆಗೆದುಕೊಂಡು ಗುರಿ ಇಟ್ಟು ಇವರ ಮುಖ, ಮೈಗಳಿಗೆ ಬೀಸಿ ಹೊಡೆದರು. ಹಸಿ ಸಗಣಿಯು ಬೀಸಿ ಬಂದು ಬಿದ್ದ ರಭಸಕ್ಕೆ ಮೈ ಕೈಗಳಿಗೆ ನೋವೂ ಆಯಿತು. ಅವರು ಹಿಂತಿರುಗಿ ಹೊರಟರು. ಆದರೆ ಬೆನ್ನಿನ ಮೇಲೆ ಸುಯ್ ಸುಯ್ ಎಂದು ಸಗಣಿ ಉಂಡೆಗಳು ಬಂದು ಬೀಳುತ್ತಲೇ ಇದ್ದುವು. ಯಾರೊ ಒಬ್ಬ 'ಗ್ಯಾ ಗ್ಯ ಗ್ಯ' ಎಂದು ಕೂಗಿ ಸಿಳ್ಳು ಹಾಕಿದ. ದೂರದಲ್ಲೇ ನಿಂತು ಬಗಳುತ್ತಿದ್ದ ನಾಯಿಗಳು ಈಗ ನುಗ್ಗಿ ಬಂದುವು. ಒಂದು ನಾಯಿ ಮೇಲೆ ಬಿದ್ದು ಇವರ ಮೊಣಕಾಲಿನ ಮೀನುಖಂಡಕ್ಕೆ ಹಲ್ಲು ಹಾಕಿಬಿಟ್ಟಿತು. 'ಅಯ್ಯಯ್ಯಪ್ಪಾ' ಎಂದು ಇವರು ಬಡಿದುಕೊಂಡರು. ಕುಡುಕರ ಪೈಕಿಯೇ ಒಬ್ಬ ನಾಯಿಗಳಿಗೆ ಮಪ್ಪಿರಿದು ಕರೆದಾಗ ಅವು ಹಿಂತಿರುಗಿದವು.

ಅವರು ತೋಟದ ಓಣಿಯಲ್ಲಿ ಹಿಂತಿರುಗಿದರು. ನಾಯಿಯು ಹಲ್ಲು ಊರಿದ ಜಾಗದಲ್ಲಿ ರಕ್ತ ಬರುತ್ತಿತ್ತು. ಕತ್ತಲೆಯಲ್ಲಿ ಯಾವುದೂ ಸರಿಯಾಗಿ ಕಾಣುತ್ತಿಲ್ಲ. ಬೇಗ ಬೇಗ ಹೆಜ್ಜೆ ಹಾಕಿ, ಸಿಕ್ಕಿದ ಗದ್ದೆಗಳನ್ನು ದಾಟಿ, ಸಣ್ಣ ಕಾಲುವೆಯೊಂದರಲ್ಲಿ ಇಳಿದು ದಾಟುವಾಗ ಮೀನುಖಂಡದ ಗಾಯ

ಉರಿಯ ಹತ್ತಿತು. ಅದನ್ನು ಲೆಕ್ಕಿಸದೆ ಮುಂದೆ ನಡೆದು ಗದ್ದೆಗಳನ್ನು ಪರಿ ತಮ್ಮ ತೋಟದ ಹೊಳೆಬಾಗಿಲನ್ನು ತೆಗೆದುಕೊಂಡು ಒಳಗೆ ಹೋದರು. ಉರಿಯುತ್ತಿದ್ದ ಲಾಟೀನಿನಲ್ಲಿ ಕಾಲನ್ನು ನೋಡಿಕೊಂಡರು. ರಕ್ತವೀಗ ಹೆಪ್ಪುಗಟ್ಟಿದ್ದುದು ಕಾಣಿಸುತ್ತಿತ್ತು. ಕೈಕಾಲು, ಭುಜ, ಬೆನ್ನಿಗೆಲ್ಲ ಸಗಣಿಯ ತೊಪ್ಪೆ ಮೆತ್ತಿಕೊಂಡಿತ್ತು. ಆದರೂ ಒಂದು ತಾಸು ಸುಮ್ಮನೆ ಕುಳಿತುಬಿಟ್ಟರು. ಅನಂತರ ಎದ್ದು ಕೊಳಕ್ಕೆ ಹೋಗಿ ಸ್ನಾನ ಮಾಡಿದರು. ಸಗಣಿಯಾದ ಬಟ್ಟೆಗಳನ್ನು ಕುಕ್ಕಿ ಒಣಗಹಾಕಿದರು. ಉಡಲು ಬೇರೆ ಬಟ್ಟೆ ಇಲ್ಲದ್ದರಿಂದ ಒಂದು ಚೌಕ ಸುತ್ತಿಕೊಂಡು ಮೈಗೆ ದುಪಟಿ ಹೊದೆದರು.

ಅಷ್ಟರಲ್ಲಿ ಯಾರೋ ತೋಟದೊಳಗೆ ನಡೆದು ಇವರ ಗುಡಿಸಲು ಕಡೆಗೆ ಬಂದಂತೆ ಶಬ್ದವಾಯಿತು. ಲಾಟೀನನ್ನು ಹೊರತಂದು ನೋಡುತ್ತಾರೆ. ಮಾತಂಗಿ ಬರುತ್ತಿದ್ದಾಳೆ. ಕರಿ ಸೀರೆಯುಟ್ಟು ಹಸಿರು ರವಿಕೆ ತೊಟ್ಟಿದ್ದಾಳೆ, ಎಣ್ಣೆ ತಿಕ್ಕಿ ಕೂದಲು ಬಾಚಿದ್ದಾಳೆ. ಹಣೆಯಲ್ಲಿ ಅಗಲವಾದ ಕುಂಕುಮವಿದೆ. ಆದರೆ ಹತ್ತಿರಕ್ಕೆ ಬಂದಾಗ ಭಟ್ಟಿ ಮದ್ಯದ ಗಬ್ಬುವಾಸನೆ ಹೊಡೆಯುತ್ತಿತ್ತು. ಅವರು ಅವಳನ್ನೇ ನೋಡುತ್ತಾ ನಿಂತುಬಿಟ್ಟರು. ಮಾತಂಗಿ ಕೇಳಿದಳು:

"ನೀವ್ಯಾಕ್ ಬಂದಿದ್ರಯ್ಯ ನಮ್ ಅಟ್ಟಿಗೆ?"

ಅವರು ಉತ್ತರ ಹೇಳಲಿಲ್ಲ. ಅವಳ ಪ್ರಶ್ನೆ ಅರ್ಥವಾಗದಂತೆ ನೋಡಿದರು. ಅವಳೇ ಕೇಳಿದಳು: 'ಈಟು ವರ್ಸದ ಮ್ಯಾಗೆ ಮಾತಂಗಿ ಗ್ಯಾನ ಬಂತಾ? ಮದ್ದು ಹ್ವಲೇರ ಹಟ್ಟಿಗೆ ನುಗ್ಗಿ ಬಿಟ್ರಾ? ಆರುವರು ಹ್ವಲೇರ ಅಟ್ಟಿಗೆ ಬಂದ್ರೆ ಮಹಾಲಕ್ಷ್ಮಿ ಹ್ವಂಟ್ ಹೋಯ್ತಳೆ ಅಂತ ಗೊತ್ತಿರ್ನಿಲ್ವಾ?'

ಹಾರುವರು ತಮ್ಮ ಹಟ್ಟಿಗೆ ಬಂದರೆ ಲಕ್ಷ್ಮಿ ಮುನಿಸಿಕೊಂಡು ಹೋಗುತ್ತಾಳೆ. ಆದುದರಿಂದ ಅವರಿಗೆ ಸಗಣಿಯಲ್ಲಿ ಹೊಡೆದು ಓಡಿಸಬೇಕೆಂಬ ಶಾಸ ಹೊಲೆಯರಲ್ಲಿದೆ, ಇದು ವೆಂಕಟರಮಣಯ್ಯನವರಿಗೆ ಗೊತ್ತಿದ್ದುದೇ. ಆದರೆ ತಮಗೆ ಇತ್ತೀಚೆಗೆ ಯಾವುದೂ ಸರಿಯಾಗಿ

ಜ್ಞಾಪಕಕ್ಕೆ ಬರುತ್ತಿಲ್ಲ.

ಮಾತಂಗಿ ಕೇಳಿದಳು: 'ಅಯ್ಯಾ ಯಾಕ್ ಬಂದಿದ್ರಿ ಏಳಿ?

'ಸುಮ್ಕೆ ಬಂದಿದ್ದೆ.'

'ಹಂಗಾದ್ರೆ ನಾನು ಹ್ವಂಟೋಯ್ತೀನಿ'---ಎಂದು ಅವಳು ಹಿಂತಿರುಗಿ ನಡೆದಳು.

ಅವಳು ಹತ್ತು ಹೆಜ್ಜೆ ಹಾಕಿದ್ದಳು. ಅವರು, 'ಲೇ ನಿಂತ್ಕ' ಎಂದು ಕೂಗಿ, ಹೇಳಿದರು, 'ನಿನ್ನ ನೋಡಬೇಕು ಅನುಸ್ತು ಅದಕ್ಕೆ ಬಂದೆ.'

ಅವಳು ಹಿಂತಿರುಗಿ ಬಂದಳು. ಯಾವ ಸಂಕೋಚವೂ ಇಲ್ಲದೆ ಇವರ ಕೈ ಹಿಡಿದುಕೊಂಡು, 'ಹಂಗ ಏಳ್ರಯ್ಯಾ. ಮಾತಂಗಿಗ್ ನಿಮ್ಮ ನೆನಪು ಬತ್ತೈತೆ. ನಿಮ್ಮ ಮರ್ಯಾದಿಗ್ ಅಂಜಿ ನಾನು ನಿಮ್ತಕ್ಕೆ ಬರಾಕಿಲ್ಲ....' ಎಂದು ಚಾಪೆ ಮೇಲೆ ಅವರನ್ನು ಕೂರಿಸಿ ಗುಡಿಸಲಿನ ಬಾಗಿಲು ಮುಚ್ಚಿ, ತಾನೂ ಕೂತಳು. ಅವಳ ಮುಖ ಅಮಲಿನಿಂದ ಉಬ್ಬಿಕೊಂಡು ಜ್ವರ ಬಂದವಳಂತೆ ಆಗಿತ್ತು. ಕೇಳಿದಳು; 'ನಾಯಿ ಕಡೀತಾ!'

ಅವರು ತಮ್ಮ ಬಲಗಾಲು ನೀಡಿದರು. ಅದನ್ನು ತೆಗೆದು ತನ್ನ ತೊಡೆಯ ಮೇಲಿಟ್ಟುಕೊಂಡು ನೋಡಿ, 'ಕಳ್ಳ ನನ್ನ್ ಹೆಡ್ತಿ ಮಗನ ನಾಯಿ ಹ್ಯಂಗ್ ಕಚ್ಯದೆ! ಅದರವ್ವನ್ನಾ?' ಅವರ ಕಾಲನ್ನು ಕೆಳಗೆ ಇಟ್ಟು ಲಾಟೀನನ್ನು ಕೈಲಿ ಹಿಡಿದು ಅವಳು ಹೊರಗೆ ಹೋದಳು. ಬೇಲಿಯ ಹತ್ತಿರ ಹೋಗಿ ಹುಡುಕಿ ಎಳೆ ಚದರಂಗದ ಸೊಪ್ಪು ತಂದು, ಅದರ ರಸ ಹೊರಡಿಸಿ ಗಾಯದ ಮೇಲೆ ಒಂದ ಸಲ ಹಿಂಡಿದಳು. ತೊಟತೊಟನೆ ಬಿದ್ದ ಹಸುರು ರಸದಿಂದ ಉರಿಹತ್ತಿ, ಅವರು 'ಹಾಂ' ಎಂದರು. 'ಉರೀತೈತೆ, ಬ್ಯಾಗ ಮಾಯ್ತದೆ. ನಾಯಿ ಅಲ್ಲು ನನ್ ಮಗಂದು ಇಸ

----' ಎಂದ ಅವಳು, ಹೊಸಗಿದ್ದ ಸೊಪ್ಪನ್ನು ಗಾಯಕ್ಕೆ ಕಟ್ಟಿ ಒಂದು ಪಟ್ಟೆ ಹರಿದು ಕಟ್ಟಿದಳು.

ಸ್ವಲ್ಪ ಹೊತ್ತಿನ ನಂತರ ಕೇಳಿಧಳು: 'ನನ್ ಯಾಕ ಉಡಿಕ್ಕಂಡ್ ಬಂದಿದ್ರಯ್ಯ?'

'ಸುಮ್ಕೆ'

'ಸುಮ್ ಸುಮ್ಕೆ ಯಾಕ್ ಬತ್ತೀರಯ್ಯ? ನಿಜ ಏಳಿ. ಈಟು ವರ್ಸ ಮಾತಂಗಿ ನೆಪ್ಪು ಅತ್ಲಿಲ್ವಾ?'

'ನನ್ ಕಂಡ್ರೂ ನೀನೇ ಕಾಣದ ಹಂಗೆ ಹೋಗ್ತಿದ್ಯಲ್ಲೇ?'

'ಶಿಟ್ ಮಾಡ್ಕಬ್ಯಾಡಿ. ಬರಬೇಕು ಅಂತಿದ್ದೆ, ಧೈರ್ಯವಾಗ್ತಿರ್ನಿಲ್ಲ. ನಿಮ್ಮ ಉಡ್ರೂ ದೊಡ್ಡವರಾಗಿಯವ್ರೆ. ನನ್ನ ಮಗನೂ....' ಎಂದು ತಡೆದಳು.

'ನಿನ್ನ ಮಗ ಏನ್ಮಾಡ್ತವ್ನೆ?'

'ನಿನ್ನ ಮಗ ಅಂತ ಯಾಕಂತೀರಯ್ಯ?' -- ಎಂದು ಅವಳು ಕೇಳಿದಾಗ ಅವರಿಗೆ ಕಸಿವಿಸಿಯಾಯಿತು. ಅವಳೇ ತಕ್ಷಣ ಹೇಳಿದಳು: 'ಹ್ಯದರ್ಕಬ್ಯಾಡಿ. ನಿಮ್ಮ ಮರ್ವಾದಿ ನಂದು ಅಂತ ಏಳ್ಲಿಲ್ವಾ ಅವತ್ತೇ? ನಾವು ಯಾರ ಕುಟ್ರೂ ಏಳಾಕಿಲ್ಲ. ಮಣ್ಣೊಳಿಕ್ ಬೀಜ ಬಿದ್ ಮುಚ್ಕಿದ ಮ್ಯಾಗೆ ಯಾವ ಅಕ್ಕಿ ಕಚ್‌ಕಂಡ್ ತಂದ್ ಆಕ್ತು ಅಂತ ಮಣ್ಣವ್ವ ಬಾಯಿ ಬುಟ್ಟಾಳಾ? ನೀನು ಗುಬ್ಬಚ್ಚಿ ಕಣ್ರಯ್ಯ. ಗುಬ್ಬಚ್ಚಿ ಬೀಜ ಗುಬ್ಬಚ್ಚಿಯಾಯ್ತದೆ. ಮಾತಂಗಿ ಎಂತೋಳು?'

ಅವಳ ಗಮನ ಬೇರೆ ಕಡೆ ಹೋಯಿತು. ಹಿಂಭಾಗದ ಗೋಡೆಯ ದಡದಲ್ಲಿ ಮೂರು ಕಲ್ಲುಗಳನ್ನಿಟ್ಟು ಒಲೆ ಹೂಡಿದ್ದರು. ಅದರಲ್ಲಿ ಬೂದಿ ಇರಲಿಲ್ಲ. 'ಇವತ್ತು ನೀವು ಉಂಡಿದ್ರೇನಯ್ಯಾ?' ಅವಳು ಕೇಳಿದಳು.

'ನಾನು ದಿನಾ ಅಡಿಗೆ ಮಾಡ್ಕಳುಲ್ಲ.'

'ಹಂಗಾರೆ ನಾನು ಈಗ ಮಾಡಿ ನೀಡ್ತೀನಿ. ಉಣ್ತೀರೇನ್ರಯ್ಯ?'

ಅವರು ಕುತೂಹಲದಿಂದ ಅವಳ ಮುಖವನ್ನು ದಿಟ್ಟಿಸಿ ನೋಡಿದರು. ಅವಳ ಬುದ್ಧಿ ಉತ್ತೇಜಿತವಾಗಿದ್ದುದು ಸ್ಪಷ್ಟವಾಗಿತ್ತು. ಅವರು ಮತ್ತೆ ಸುಮ್ಮನೆ ಕುಳಿತರು. ಅವಳೇ ಕೇಳಿದಳು.: 'ಈಗ ಬೋನ ಬೇಯಿಸ್ಲೇನ್ರಯ್ಯ?'

ಅವಳು ಇದೇ ಮಾತನ್ನು ಎರಡನೇ ಸಲ ಕೇಳುತ್ತಿದ್ದಾಳೆ. ಯೋಚಿಸುತ್ತಾ ಕೂತರು. ಅವಳೇ, 'ನಮ್ಮ ತಾವ ಮುನಿಕತ್ತೀರ. ನಾವು

ಮಾಡಿದ್ದು ಯಾಕ್ ಉಣ್ಣಾಕಿಲ್ರಯ್ಯ?' ಎಂದಳು. ಈ ಮಾತನ್ನು ಕೇಳಿ ಅವರು ಬೆಚ್ಚಿದರು. ಹಣೆ ಮತ್ತು ಕುತ್ತಿಗೆಗಳು ಬೆವೆತವು. ಮಾತಂಗಿ ಈಗ ಕುಡಿದಿದ್ದಾಳೆ.

ಅವಳೇ ಅಂದಳು: 'ಮೈ ತೊಕ್ಕಂಡು ಒಂದು ಬೋನ ಬೇಯಿಸ್ತಿನಿ ಕಣ್ರಯ್ಯ. ಅವತ್ತು ಗುಡಿಗೆ ಬರುವಾಗ ತೊಕ್ಕೊಂಡಿದ್ವಲಾ, ಹಂಗೆ.'

ಮಾತಂಗಿ ಹಟವನ್ನೇ ಮಾಡುತ್ತಿದ್ದಾಳೆ. ಉಣ್ಣುವುದಿಲ್ಲವೆಂದರೆ ಏನು ಮಾಡಬಹುದು? ಅಳಬಹುದು. ಅದು ಅವರಿಗೆ ಸಹಿಸಲಿಲ್ಲ. ಉಣ್ಣುತ್ತೇನೆಂದರೆ ಇವತ್ತು ಮಾಡಿ ಹಾಕುತ್ತಾಳೆ. ಅದರಂತೆ ದಿನಾ ಮಾಡಿ ಬಡಿಸುತ್ತೇನೆಂದರೆ ಏನು ಮಾಡುವುದು? ಊರಿನವರಿಗೆಲ್ಲ ಗೊತ್ತಾಗುತ್ತೆ. ಗೊತ್ತಾದರೆ ಏನು? ಅವರಿಗೆ ತಕ್ಷಣ ಸಿಟ್ಟು ಬಂತು. ಎದ್ದು ಹೊರಗೆ ಹೋಗಿ ಈ ಗುಡಿಸಲಿಗೆ ಬೆಂಕಿ ಹಾಕಿ ಸುಟ್ಟು ಊರೊಳಗಿನ ಮನೆಗೆ ಹೊರಟು ಹೋಗಬೇಕೆನಿಸಿತು.

ಮಾತಂಗಿ ಹತ್ತಿರದ ಕೊಳದ ನೀರಿನಲ್ಲಿ ಇಳಿದ ಲಪಲಪ ಸದ್ದು ಕೇಳಿಸಿತು. ಅವರಿಗೆ ಮತ್ತೊಮ್ಮೆ ಅಗಾಧವಾದ ಸಿಟ್ಟು ಬಂತು. ಈ ಮಾದಿಗಿತ್ತಿಯ ಕೈಯ ಅನ್ನವನ್ನು ಇವತ್ತು ತಿಂದರೆ ಮುಗಿಯಿತು. ನಾಲಿಗೆಯನ್ನು ಏಳು ಸಲ ದರ್ಭೆಯಲ್ಲಿ ಸುಡಿಸಿಕೊಂಡರೂ ಪಾಪ ಹರಿಯುವುದಿಲ್ಲ.

ಆದರೆ ಇವತ್ತು ತಾವು ಅವಳನ್ನು ಹುಡುಕಿಕೊಂಡು ಹೋದದ್ದೇಕೆ? ಕಾಮತೃಪ್ತಿಗೆ? ಇತ್ತೀಚೆಗೆ ಎಂಟು, ಹತ್ತು ವರ್ಷದಿಂದ ಆ ಆಶೆಯೇ ಆಗುತ್ತಿಲ್ಲ. ಇಷ್ಟೂ ಹೊತ್ತು ಅವಳು ಎದುರಿಗೆ ಕೂತಿದ್ದರೂ ಆ ಆಶೆಯಾಗಲಿಲ್ಲ. ಈಗಲೂ ಇಲ್ಲ. ಹಾಗಿದ್ದೂ ನಾನು ಅವಳನ್ನು ಯಾಕೆ ಹುಡುಕಿಕೊಂಡು ಹೋದೆ?

ಅವರಿಗೆ ಉತ್ತರ ಹೊಳೆಯುಲಿಲ್ಲ. ಹೊರಗೆ ಅವಳು ಸ್ನಾನ ಮಾಡುತ್ತಿರುವ ಸದ್ದು ಕೇಳಿಸಿತು. ಸ್‌ಸ್‌ಸ್ ಎಂದು ನಾಲಗೆಯಲ್ಲಿ ನುಡಿದುಕೊಂಡು ಛಪ್ ಛಪ್ ಎಂದು ಶಬ್ದವಾಗುವಂತೆ ತೋಳು-ಮೈಗಳನ್ನು ಜೋರಿನಿಂದ ತಿಕ್ಕಿಕೊಳ್ಳುತ್ತಿದ್ದಾಳೆ. ಮತ್ತೆ ಮತ್ತೆ ಮುಳುಗಿ

ಬೀಳುತ್ತಿದ್ದಾಳೆ. ಈ ರಾತ್ರಿಯ ಚಳಿಯಲ್ಲಿ ಅದೆಷ್ಟು ಸ್ನಾನ ಮಾಡುತ್ತಿದ್ದಾಳೆ? ಏ ಮಾದಿಗತ್ವ ಕಳೆದು ಬ್ರಾಹ್ಮಣತ್ವ ಬರಬೇಕಾದರೆ ಅದೆಷ್ಟು ಮುಳುಗು ಹಾಕಬೇಕೊ! ಈ ಮಾತಂಗಿಯನ್ನು ಬ್ರಾಹ್ಮಣಿಯಾಗಿ ಮಾಡಲು ಸಾಧ್ಯವಿಲ್ಲವೇ? ಎಂಬ ಯೋಚನೆ ಇದ್ದಕ್ಕಿದ್ದ ಹಾಗೆಯೇ ಮನಸ್ಸಿನಲ್ಲಿ ಹುಟ್ಟಿತು. ಯಾಕೆ ಸಾಧ್ಯವಿಲ್ಲ? ಖ್ಯಾತ ಬ್ರಹ್ಮರ್ಷಿ ವಸಿಷ್ಠರು ಮಾದಿಗಿತ್ತಿ ಅರುಂಧತಿಯನ್ನೇ ಮದುವೆಯಾಗಿ, ಪರಮ ಬ್ರಾಹ್ಮಣಿಯಾಗಿ ಮಾಡಿದರಲ್ಲ. ವಸಿಷ್ಠರ ತಪಶ್ಶಕ್ತಿ ಅಂಥದು. ನಾನು ಈ ಮಾತಂಗಿಯನ್ನು ಮದುವೆಯಾಗಬೇಕು. ಆಗಿದ್ದೇನೆ ಅಂತ ಪ್ರಪಂಚದ ಜನರೆದುರಿಗೆ ಘೋಷಿಸಬೇಕು. ದಿನಾ ಹೋಮ ಮಾಡಬೇಕು. ಅದರಲ್ಲಿ ಸಹಧರ್ಮಿಣಿಯಾಗಿ ಅವಳನ್ನೂ ಕೂಡಿಸಬೇಕು. ಅವಳಿಗೂ ಯಜ್ಞೋಪವೀತ ಧಾರಣೆ ಮಾಡಿಸಿ ಗಾಯತ್ರಿಯನ್ನುಪದೇಶಿಸಬೇಕು. ನಾನು ಊರಲ್ಲಿಲ್ಲದ ದಿನ ದೇವರನ್ನು ಅರ್ಚಿಸುವ ಅಧಿಕಾರ ಅವಳಿಗೆ ಪ್ರಾಪ್ತವಾಗಬೇಕು. ಈ ಗುಡಿಸಲೇ ಪರ್ಣಶಾಲೆಯಾಗಬೇಕು.

ಈ ಯೋಚನೆಯಿಂದ ಅವರಿಗೆ ತುಂಬಾ ಸ್ಥೈರ್ಯ ಮೂಡಿತು. ಮಾತಂಗಿಯ ಸದ್ದು ಕೇಳುತ್ತಿಲ್ಲ. ಉಡಲು ಬೇರೆ ಸೀರೆ ಇಲ್ಲದ ಅವಳು ಸಂಕೋಚದಿಂದ ಹೊರಗೇ ನಿಂತಿರಬಹುದು. ಒದ್ದೆ ಬಟ್ಟೆಯೇ ಬ್ರಾಹ್ಮಣಿಗೆ ಶ್ರೇಷ್ಠ ಉಡುಗೆ. ಅದಕ್ಕೇಂಥಹ ಸಂಕೋಚ ಎಂದು ಅವರು ಲಾಟೀನು ಕೈಲಿ ಹಿಡಿದು ಹೊರಗೆ ಬಂದರೆ ಕೊಳದ ಹತ್ತಿರ ಮಾತಂಗಿ ಇಲ್ಲ. ಅದರ ತುಸು ದೂರದಲ್ಲಿ ಹೋಗುತ್ತಿರುವ ಅವಳ ಅಸ್ಪಷ್ಟ ಆಕೃತಿ ಕಾಣಿಸಿತು. 'ಮಾತಂಗೀ' ಎಂದು ಕೂಗುತ್ತಾ, ದಾಪುಗಾಲು ಹಾಕಿ ಹಿಂಬಾಲಿಸಿ, ಅವಳ ಒದ್ದೆ ಸೆರಗನ್ನು ಹಿಡಿದು ನಿಲ್ಲಿಸಿದರು.

'ನನ್ನ ಬಿಟ್ರಯ್ಯಾ,' ಅವಳು ಕೊಸರಿಕೊಂಡಳು.

'ಯಾಕೆ ಇದ್ದಕ್ಕಿದ್ದ ಹಂಗೆ ಹ್ವಂಟೆ?'

'ಕುಲ್ಲು ಮಾದ್ಗೋಳನ್ನ ಹಿಂಗ್ ತ್ವಾಟದ ಗುಡ್ಸಿಗೆ ಕರ್ಕಂಡ್ ಬರಬೌದೇನ್ರಯ್ಯಾ? ಜಾತಸ್ತರು ಕಂಡ್ರೆ, ಏನಂತಾರ? ನಿಮ್ಮ ಜಾತಿಯೋರು ಸುಮ್ಕಿರ್ತಾರಾ?'

'ಜಾತಿ-ಹೆದರಿಕೆ ಬ್ಯಾಡ, ನಿನ್ನ ಬ್ರಾಹ್ಮಣಿ ಮಾಡ್ತೀನಿ. ಬಾ.'

ಅವಳು ಗೊಳ್ಳೆಂದು ನಕ್ಕಳು. ಸ್ನಾನ ಮಾಡಿದ ಮೇಲೆ ಅವಳ ಬಾಯಿಂದ ವಾಸನೆ ಹೊರಡುತ್ತಿರಲಿಲ್ಲ. ಕಣ್ಣಿನ ಕೆಂಪೂ ಇಳಿದಿತ್ತು.

'ಮಾದಿಗಿತ್ತೀನ ಹಾರುವಗಿತ್ತಿ ಮಾಡಾಕ್ ಆಯ್ತದೇನ್ರಯ್ಯಾ ಓಯ್ತೀನಿ' - ಎಂದು ಮುಂದೆ ನಡೆದುಬಿಟ್ಟಳು. ಇವರು ಗರಬಡಿದವರಂತ ನಿಂತು, ಅವಳು ಹೋದ ದಿಕ್ಕನ್ನೇ ನೋಡುತ್ತಿದ್ದರು.

೫. ನಿಯೋಗ

('ಪರ್ವ'ದಿಂದ)

ಪತಿಯು ಅಶಕ್ತ ಅಥವಾ ಷಂಢನಿದ್ದರೆ, ಇಲ್ಲವೆ ಮಕ್ಕಳಿಲ್ಲದೆ ಸತ್ತರೆ ಬೇರೊಬ್ಬರಿಂದ ಗರ್ಭ ಧರಿಸುವುದಕ್ಕೆ ನಿಯೋಗವೆಂದು ಹೆಸರು. ಒಮ್ಮೆ ಗರ್ಭ ನಿಂತಿತೆಂದರೆ ಆ ಗರ್ಭದಾನಿಯು ಅವಳ ಪಾಲಿಗೆ ಪಿತೃ ಸಮಾನ. ಕುಂತಿಯು ತನ್ನ ಮಕ್ಕಳನ್ನು ಪಡೆದದ್ದು ಈ ರೀತಿಯಾಗಿ. ಇಲ್ಲಿ ಹಿರಿಯವನಾದ ಧರ್ಮನನ್ನು ಕುಂತಿಯು ಪಡೆದದ್ದರ ಹಿನ್ನೆಲೆ ಇದೆ. ಆ ಮೂಲಕ ಮಹಾಭಾರತ ಕಾಲದ ರಾಜಮನೆತನಗಳವರ ಬದುಕಿನ ಬಗೆಯು ಸೊಗಸಾಗಿ ಮೂಡಿ ಬಂದಿದೆ.

ಪಟ್ಟಣದ ಪೂರ್ವ ದಿಕ್ಕಿಗೆ ನದಿಯ ದಡದಲ್ಲಿ ವಿದುರನ ಮನೆ. ಸೂರ್ಯ ಹುಟ್ಟುವ ಕಡೆಗೆ ಮುಂಬಾಗಿಲು, ಬಾಗಿಲಿನಿಂದ ಮುಂದೆ ಕಲ್ಲು, ಗಾರೆ ಕಟ್ಟಡದ ಅಗಲವಾದ ಅಂಗಳ. ಮೂವತ್ತು ಮೆಟ್ಟಿಲು ಕೆಳಗೆ ಗಂಗಾನದಿ. ಹರಿಯುವ ನೀರಿನ ದಡದಲ್ಲಿ ಕುಳಿತಿರುವುದು ಕುಂತಿಯ ಅಭ್ಯಾಸ. ನೀರಿನ ಮೇಲಿನ ಪ್ರೀತಿಯೋ ಅಥವಾ ಹೊತ್ತು ಹೋಗದ ಬವಣೆಯೋ, ಮಧ್ಯಾಹ್ನದ ಬಿಸಿಲಿನಲ್ಲಿ ಮರದ ಕೆಳಗೆ ಕುಳಿತಿದ್ದಳು. ಎರಡು ಪಾದಗಳೂ ಮೀನು ಆಟವಾಡುವ ನೀರಿನಲ್ಲಿ. ಕೊಳೆ ಇಲ್ಲದಿದ್ದರೂ ಬಂದು ಬಂದು ಕೆರೆಯುತ್ತವೆ. ಮೀನು ಮೇಲೆ ನೆಗೆದು ನೀರನ್ನು ಕಲಕದಿದ್ದಾಗ ತನ್ನ ಬಿಂಬ ಸ್ಪಷ್ಟವಾಗಿ ಕಾಣುತ್ತದೆ. ವಿಸ್ತಾರಕ್ಕೆಅಗಲವಾದ ಶರೀರ. ಎತ್ತು ಮುಖ. ಬಿಳಿಗೂದಲು. ಈ ಬಿಂಬವನ್ನೇ ನೋಡಿ ನೋಡಿ ಬೇಸರವಾಗಿದೆ. ನೀರಿನ ಮುಂದೆ ಕೂತರೆ

ಬೇರೆ ಏನೂ ಕಾಣುವುದಿಲ್ಲವಲ್ಲ. ಸಂಧಿಯ ಮಾತನಾಡಲು ಕೃಷ್ಣ
ಹೋಗಿದ್ದಾನೆ. ಆಗದ ಕೆಲಸಕ್ಕೆ ಇವನೇಕೆ ಬಂದ, ಎನಿಸುತ್ತದೆ ತನಗೆ.
ಅಲ್ಲಿ ಇನ್ನೂ ಏನೇನು ಮಾತು ನಡೆಯುತ್ತಿದೆಯೋ! -
ಎಂದುಕೊಳ್ಳುತ್ತಿರುವಲ್ಲಿ ವಿದುರ ಬಂದ. ಆಸ್ಥಾನಕ್ಕೆ ಕೃಷ್ಣನ ಜೊತೆಯ
ಹೋಗಿದ್ದವನು. ಕುಂತಿ ತಿರುಗಿ ನೋಡಿದಳು. ಹತ್ತಿರ ಬಂದು ಸುತ್ತ
ತಿರುಗಿ ಯಾರೂ ಇಲ್ಲದ್ದನ್ನು ಖಾತ್ರಿ ಮಾಡಿಕೊಂಡು ಕುಳಿತ, ಆಸ್ಥಾನದ
ವೇಷ ಮೇಲುಹೊದಿಕೆಯನ್ನು ತೆಗೆದು ಎದೆಭುಜಗಳನ್ನು ತಣ್ಣಗ
ಮಾಡಿಕೊಳ್ಳುತ್ತಾ.

'ಕೃಷ್ಣ ಎಲ್ಲಿ?'

'ದುರ್ಯೋಧನ ಅವನನ್ನು ಹಿಡಿದು ಕಟ್ಟಿ ಹಾಕಿಸುವ ಹವಣಿ
ಮಾಡಿದ. ನೀನು ನನ್ನ ಊರಿಗೆ ಬಂದು ಒಬ್ಬೊಬ್ಬರ ಮನೆಗೂ ಹೋಗ
ನನ್ನ ಬೆಂಬಲಿಗರ ಮನಸ್ಸನ್ನು ಒಡೆಯುವ ಕೆಲಸ ಮಾಡ್‌ತೀಯಾ ಅಂತ
ತನ್ನ ಅಂಗರಕ್ಷಕರ ಮುನ್ನೆಚ್ಚರಿಕೆಯಿಂದ ಪಾರಾದ. ನೀನು ಇನ
ಇಲ್ಲಿರುವುದು ಕ್ಷೇಮವಲ್ಲ ಅಂತ ನಾನೂ ಹೇಳಿದೆ. ಅವನು ಆಗಲೆ
ಹೊರಟು ಹೋದ. ನಿನ್ನ ಕರ್ತವ್ಯವೇನು ಅಂತ ನಿನಗೆ ನಿನ್ನೆ ರಾತ್ರಿಯೆ
ಹೇಳಿದ್ದನಂತಲ್ಲ, ಜ್ಞಾಪಿಸು ಅಂದ ಆತುರಾತುರದಲ್ಲಿ.'

'ಹೂಂ' ಅಂದಳು ಕುಂತಿ. ಮಂಕು ಹಿಡಿದಂತೆ ಎದುರಿಗೆ ಕುಳಿ
ವಿದುರನನ್ನು ಕೇಳಿದಳು: 'ಏನಾಯಿತು ಅಲ್ಲಿ?'

'ದೂತ ಕೃಷ್ಣನನ್ನೇ ಕಟ್ಟಿಹಾಕಲು ಹೊರಟ ಅಂತೀನಿ. ಏನಾಯಿತ
ಅಂತ ಹೇಳೂದೇನಿದೆ?'

'ಗೊತ್ತೇ ಇತ್ತಲ್ಲ. ಮತ್ತೆ ಯಾಕೆ ಕಳಿಸಿದರು ಇವರು
ಭ್ರಮೆಯಲ್ಲವೆ?'

'ಇನ್ನೊಂದು ಮಾತಾಡಿದ ದುರ್ಯೋಧನ. ಅದನ್ನು ಕೇ
ಪಿತಾಮಹರು ನಿಬ್ಬೆರಗಾದರು. ಧೃತರಾಷ್ಟ್ರನ ಮುಖ ನೋಡಿದ
ಒಳಗೊಳಗೇ ಸಂತೋಷವಾಗಿದೆ ಈ ಮಾತು ಕೇಳಿ ಅಂತ ನನಗೆ ಅನ್ನಿಸಿತು
ಪಾಂಡವರ್ಯಾರೂ ಅಪ್ಪನಿಗೆ ಹುಟ್ಟಿದವರಲ್ಲ. ಅವರನ್ನು ಪಾಂಡವರು ಅಂ

ಕೂಡ ನಾನು ಕರೆಯಲೊಪ್ಪುವುದಿಲ್ಲ. ಈ ವಂಶಕ್ಕೇ ಸೇರದ ನೀವು ಅನ್ಯಾಯವಾಗಿ ಪಾಲು ಕೇಳಿಸಿದ್ದೀರಿ. ಆ ನ್ಯಾಯವನ್ನು ನಾನು ಜೂಜಾಡಿ ಸರಿಪಡಿಸಿದೆ. ಈಗ ಮತ್ತೆ...'

'ಅಂದರೆ ಕುಂತಿ ಹಾದರಗಿತ್ತಿ ಅಂದನೆ?'

'ಅದಲ್ಲ ಅವನ ಅರ್ಥ. ನಿಯೋಗದ ಮಕ್ಕಳು ಧರ್ಮವಾಗಿ ಸಂತತಿಯಲ್ಲ ಅಂತ. ಸನಾತನ ನಡೆವಳಿಕೆಯನ್ನೇ ಅಲ್ಲಗಳೆಯುವ ಮಾತನಾಡಿದ -ಅವನ ತಮ್ಮಂದಿರ, ಕರ್ಣ, ಶಕುನಿಯರ ಅನುಮೋದನೆ ಇದೆ ಇದಕ್ಕೆ.'

'ರಾಜ್ಯ ಬಿಡಲಾರದ ಸಂಕಟಕ್ಕೆ.....'

'ಹೌದು ಹೌದು. ಅಧರ್ಮದ ಮಾತು' - ವಿದುರ ಅರ್ಥಕ್ಕೆ ಪೂರ್ತಿ ಮಾಡಿದ.

ಕುಂತಿ ಮತ್ತೆ ಮಾತನಾಡಲಿಲ್ಲ. ಪಾದಗಳು ಮುಳುಗಿದ್ದ ನೀರನ್ನು ನೋಡುತ್ತಾ ಮೂಕಳಾದಳು. ಸ್ಪಷ್ಟವಾಗಿ ಕಾಣುವ ತನ್ನ ಬಿಂಬವನ್ನು. ವಿಸ್ತಾರಕ್ಕೆ ಅಗಲವಾದ ಶರೀರ. ಪೃಥಾ ಅಂತ ಹೆಸರಿಟ್ಟಿದ್ದೇ ಅದಕ್ಕೆ. 'ನೊಂದುಕೋ ಬೇಡ. ಅವನಂದದ್ದನ್ನ ನಿನಗೆ ವರದಿ ಮಾಡ್ತಿದೀನಿ', ವಿದುರ ತಲೆ ತಗ್ಗಿಸಿ ಹೇಳಿದ, 'ಇವತ್ತಿನ ವರ್ತನೆಯಲ್ಲಿ ನಾನು ಉದ್ದೇಶವನ್ನ ಗಮನಿಸಿದೆ. ಕುಂತಿಯ ಮಕ್ಕಳು ಅಂದ. ಪಾಂಡವರು ಅನ್ನುವ ಶಬ್ದವನ್ನ ಒಂದು ಸಲ ಕೂಡ ನುಡಿಯಲಿಲ್ಲ.' ಹೂಂ. ಈ ಸುತ್ತು ಮುಚಿದ ಬೀಗುವವಳ ಹೆಂಗಸಿನ ಮಕ್ಕಳು ಪಾಂಡವರಲ್ಲ, ಕೌರವ ವಂಶಕ್ಕೆ ಸೇರಿದವರೂ ಅಲ್ಲ.' ಮನಸ್ಸಿನಲ್ಲೇ ಅಂದುಕೊಂಡಳು. ಪೃಥೆಯ ಮನಸ್ಸಿನ ಶಕ್ತಿ ಏನು ಅಂತ ಗೊತ್ತಿಲ್ಲ ಈ ನಾಯಿಮರಿಗಳಿಗೆ.

'ವಿದುರ, ಊಟ ಮಾಡು ಹೋಗು. ಎಷ್ಟಾಯಿತು ಹೊತ್ತು' --- ಎನ್ನುತ್ತಾ ಕತ್ತೆತ್ತಿ ಮೇಲೆ ನೋಡಿದಳು. ನೆತ್ತಿಯಿಂದ ಮೇಲೆ ಹಾಲಿದ್ದ ಸೂರ್ಯ ಮರದ ಎಲೆಗಳ ಸಂದಿಯಲ್ಲಿ.

'ಏಳು, ನೀನೂ.'

ವಿದುರನ ಹೆಂಡತಿ ಪಾರಶವಿ ಕಾಯುತ್ತಿದ್ದಳು. ಅವನ ಮಕ್ಕಳು

ಮೊಮ್ಮಕ್ಕಳು ಮರಿಮಕ್ಕಳೆಲ್ಲ ಆಗಲೇ ಮುಗಿಸಿದ್ದರು. ಈ ಮೂವರಿಗೂ ಬಾಣಸಿಗ ಬಡಿಸಿದ. ಹಲ್ಲಿಲ್ಲದೆ ನವಣಿಸುವ ಮೆತ್ತನೆಯ ಅನ್ನ. ನುಂಗುವ ಗಟ್ಟಿ ಪಾಯಸ. ಊಟವಾದ ಮೇಲೆ ಕುಂತಿ ಮಲಗಲಿಲ್ಲ. ಮೆಟ್ಟಿಲುಗಳನ್ನಿಳಿದು ಮತ್ತೆ ನದಿಯ ದಡಕ್ಕೆ ಬಂದು ನೀರಿನ ಪಕ್ಕದ ಕಲ್ಲುಚಪ್ಪಡಿಯ ಮೇಲೆ ಕುಳಿತಳು. ಕುಂತಿಯ ಮಕ್ಕಳು, ಸಿಟ್ಟು ಬಂತು, ಅಲ್ಲ ಸಿಟ್ಟಿನ ನೆನಪು ಬಂತು. ಹೆತ್ತ ಸೊಸೆಯ ಮಕ್ಕಳಲ್ಲದೆ ಹುಟ್ಟಿಸಿದವನ ಮಕ್ಕಳಾಗುತಾರೆಯೇ ಈ ವಂಶಕ್ಕೆ ಸೇರಿದ ಮೇಲೆ? ಅವನ ಅಪ್ಪ ಕುರುಡ. ಮದುವೆಗೆ ಮುಂಚೆ ಅವ್ವೆ ಎಂದರೇನಂತ ತಿಳಿದಿರಲಿಲ್ಲ. ಹೆಂಡತಿ ಬಸುರಾಗಿ ರುಚಿ ಹೊತ್ತಿದ ಮೇಲೆ ದಾಸಿಯರನ್ನು ಮೇಯಲು ಶುರುಮಾಡಿದ. ಇಲ್ಲದಿದ್ದರೆ ಇವನು? ಬರೀ ಗಾಂಧಾರಿಯ ಮಗನಾಗುತ್ತಿದ್ದ, ಇವನ ಅಪ್ಪ ಅಂಬಿಕೆಯ ಮಗನಲ್ಲವೇ; ಹಾಗೆ. ಸಿಟ್ಟು ಬಂತು. ಆದರೆ ಸನಾತನ ಧರ್ಮವನ್ನು, ತಾನು ಸೊಸೆಯಾಗಿ ಸೇರಿರುವ ಕುರುವಂಶದ ಪಿತೃಗಳನ್ನು ಬೈಯಬಾರದೆಂದು ತಾಳ್ಮೆ ತಂದುಕೊಂಡಳು. ವಂಶ ಬೆಳೆಸಲಿಕ್ಕೆ ಅಂತಲೇ ಜಾತ್ರೆಯಲ್ಲಿ ದಷ್ಟಪುಷ್ಟ ಮೊಳಕ ತರುವ ಹಾಗೆ ಸೊಸೆಯನ್ನು ತಂದರು.ನನ್ನ ಕೈಲಿ ಈ ಮಕ್ಕಳನ್ನು ಹೆರಿಸಿದರು. ಈಗ ಪಾಂಡವರಲ್ಲವಂತೆ. ಕೇಳಿ... ಥುತ್ ಉಗಿಯಬೇಕೆನ್ನಿಸಿತು. ಏನು ಈ ಕುರುವಂಶದ ಹೆಸರು! ದುಷ್ಯಂತ, ಭರತ, ಹಸ್ತಿನ, ಅಜಮಿಳ,.ಮಹಾಭೌಮ, ದಿಲೀಪ, ಹಿಂದಕ್ಕೆ ನೂರು ವಂಶಾವಳಿ ಇದೆಯಂತೆ. ಸದ್ಯಕ್ಕೆ ಪದ್ಮಾಸನದಲ್ಲಿ, ಕುಡಿಮೀಸೆ ಚಿಗುರು ಗಡ್ಡದ ಯುವಕ. ಈ ವಯಸ್ಸಿಗೇ ಸುತ್ತ ರಾಜ್ಯಗಳನ್ನು ಒತ್ತರಿಸಿರುವ ವೀರ, ನೇರವಾಗಿ ಹೋಗಿ ಅವನಿಗೆ ಮಾಲೆ ಹಾಕು. ಅಪ್ಪನ ಸೂಚನೆಗೆ ಅಮ್ಮನದೂ ಅನುಮೋದನೆ: ಅವನಣ್ಣ ಕುರುಡ. ಮುಂದೆ ಸಿಂಹಾಸನ ಏರುವವನು ಇವನೇ ಅಂತೆ. ರಾಜಸೂಯವೋ ಅಶ್ವಮೇಧವೋ ಮಾಡುವ ದೊರೆಯ ಪಟ್ಟಮಹಿಷಿಯಾಗ್ತೀಯ. ನಿನ್ನದೇ ಮೊದಲನೆಯ ಮದುವೆ ಅವನಿಗೆ: ಪಟ್ಟಮಹಿಷಿ.

ಸಖಿಯ ಮನಸ್ಸೂ ಅತ್ತ ಕಡೆಗೇ: ಪ್ರಥಾ, ನಿನ್ನ ಎತ್ತರ ಅಗಲಗಳಿಗೆ ತಕ್ಕ ಮೈಕಟ್ಟು ಅವನದು. ಗಂಡಸು ಅಂದರೆ ಹಸಿದು ಮೇಲೆ

ಬೀಳುವ ಸಿಂಹದ ಹಾಗಿರಬೇಕು. ನಿನಗೆ ಜೋಡಿಯಾಗುವ ಮೈಕಟ್ಟಿನ ದೊರೆಗಳು ನನ್ನ ಕಣ್ಣಿಗೆ ಬೇರೆ ಯಾರೂ ಕಾಣುತ್ತಿಲ್ಲ. ಅವನಾದರೆ, ನೀನು ಮೊದಲ ರಾತ್ರಿಗೇ ಹಿಸುಕಿಹೋಗ್ತೀಯ, ಎಂದು ಕಣ್ಣು ಮಿಟುಕಿಸಿ ಎಡಪಕ್ಕೆಯನ್ನು ಚಿಗುಟಿ. ಸ್ವಲ್ಪ ಒಣಗಿದ ಬಿಳಿಬಣ್ಣ. ಆದರೆ ಎಂಥ ಮೈಕಟ್ಟು, ಚಿಕ್ಕ ವಯಸ್ಸು, ನನ್ನಷ್ಟೆಯಂತೆ ಹೆಚ್ಚು ಕಡಿಮೆ. ಹದಿನೆಂಟೋ ಹತ್ತೊಂಬತ್ತೋ. ಸಭೆಯ ಮಧ್ಯೆ ನಡೆಯುವಾಗ ಎಲ್ಲ ಕಣ್ಣುಗಳೂ ನನ್ನ ಅಂಗಾಂಗಗಳನ್ನು ಮೆತ್ತಿಕೊಂಡಂತಹ ಇರಸುಮುರಸು. ಗಡ್ಡ ಬಲಿತವರು, ನರೆಗೂದಲು ಕಾಣಿಸಿಕೊಂಡವರು, ನೀಳದಾಡಿಯವರು, ಹೊಳೆಯುವ ಕೆಂದುಗೂದಲಿನವರು, ಎಂತೆಂತಹ ಅರಸರ ಗುಂಪು. ಒಬ್ಬೊಬ್ಬರನ್ನಾಗಿ ನೋಡಿಕೊಂಡು ಹೋಗುವಾಗ ಸಖಿಯ ಮಾತು ನಿಜವೆನ್ನಿಸಿತು. ಹಾರಿ ಮೇಲೆ ಬೀಳುವ ಸಿಂಹದಂತಹ ಎದೆಕಟ್ಟು, ಭಾರವಾದ ಬಿಲ್ಲನ್ನು ಬಗ್ಗಿಸಿ ಬಗ್ಗಿಸಿ ಹೊಡೆದ ಉಬ್ಬುಮಾಂಸದ ತೋಳು. ಬಿಲ್ಲಿನ ಚಕ್ಕಳದ ಹುರಿ ಪುಟವಿಟ್ಟು, ಹೊಡೆದು ಊದಿ ಗಾಯವಾಗಿ ಒಣಗಿ ಕಲೆಗಟ್ಟಿದ ಭುಜ. ಬೇರೆ ಯೋಚನೆ ಬರಲಿಲ್ಲ. ನನ್ನ ದೊಡ್ಡ ತೋಳುಗಳು ತಮಗೆ ತಾವೇ ಮುಂದೆ ಹೋದುವು. ಹೆಮ್ಮೆಯಿಂದ ಮುಖವೆತ್ತಿ ತನ್ನ ದೃಷ್ಟಿಯನ್ನು ಸಂಧಿಸಿ ಜಯಮಾಲೆಗೆಂದು ತಲೆಬಾಗಿದ. ಈ ಪೃಥೆಯನ್ನು ಗೆದ್ದ. ಬೇರೆ ಯಾವುದಾದರೂ ರಾಜನು ಎದ್ದು ನಿಂತು ಛಲ ಸಾಧಿಸಿ ಸವಾಲು ಹಾಕಿ ನನ್ನನ್ನೇಕೆ ಹೊತ್ತುಕೊಂಡು ಹೋಗಲಿಲ್ಲ.

ಏನು ವೈಭವದ ಮದುವೆ ! ಪಟ್ಟದರಸಿಯಾಗುತ್ತಾಳೆ ಮಗಳು ಎಂಬ ಉಬ್ಬು ಬೇರೆ. ಹೆಣ್ಣುಮಕ್ಕಳಿಲ್ಲವೆಂದು ಬಯಸಿ ಬಯಸಿ ದತ್ತು ಪಡೆದ ಮಗಳ ಮೇಲಿನ ಪ್ರೀತಿ. ಅದೆಷ್ಟು ಗಾಡಿಗಟ್ಟಳೆ ತುಂಬಿ ಕಳಿಸಿದ ಕುರುಗಳ ಅರಮನೆಯನ್ನು ತುಂಬಲು. ನನ್ನ ಜೊತೆಗೆ ಹತ್ತು ಜನ ಸುಂದರಿ ದಾಸಿಯರು, ಈ ಗಂಡುಸಿಂಹದ ವ್ಯಂಜನಕ್ಕೆ.

ಮೊದಲ ರಾತ್ರಿಯೇ ಅನ್ನಿಸಿತು. ತಿಳಿಯಲಿಲ್ಲ. ಎದೆ ತೋಳುಗಳ ಗಟ್ಟಿಯಾದ ಬಿಗಿ ತಬ್ಬು. ನಡುವಯಸ್ಸಿನ ಎದೆಯ ತುಂಬೆಲ್ಲ ಬೆವರು. ಕೂದಲಿನ ಮೃದುತೋಳಿನ ಸುಖವು ಮಾಗುತ್ತಿದುವಲ್ಲ. ಕುಂತಿ, ನನ್ನ

ಮುಖ ಚಂದ, ನಿನ್ನ ಕುಡಿಹುಬ್ಬು ಚಂದ, ನಿನ್ನ ದೊಡ್ಡ ಎದೆಗಟ್ಟು
ಚಂದ ಎಂದು ಉಬ್ಬಿಸಿ ಉಬ್ಬಿಸಿ ಮನತಣಿಸುವ ಮಾತುಗಳೆಷ್ಟು, ಆದರ
ಸಖಿ ಹೇಳಿದ್ದುದು ನಾನು ಬಯಸಿದ್ದುದು ನನಗೆ ಗೊತ್ತಿದ್ದುದು ಆಗಲಿಲ್ಲ
ಸ್ವಲ್ಪ ಹೊತ್ತಿಗೆ ಮಲಗಿ ಬಿಟ್ಟನಲ್ಲ, ಸೋತ ಎತ್ತಿನಂತೆ. ಒಂದೇ ಸಮ
ಪ್ರಯಾಣ ಮಾಡಿ ಆಯಾಸವಾಗಿದೆ, ನಿದ್ರೆ ಬರುತ್ತಿದೆ ಎಂದು ಅತ್ತ
ತಿರುಗಿ, ಮುಖದಲ್ಲಿ ಚಿಂತೆ ತುಂಬಿಕೊಂಡು, ನನಗೆ ತಿಳಿಯಲಿಲ್ಲ. ನಾಚಿ
ಬಿಡುವ ಕ್ಷಣ ಮುಂದೆ ಹೋಯಿತೆಂಬ ಸಮಾಧಾನ. ನಿದ್ದೆ ಮಾಡಿದ
ಮಾಡಿದನೋ ಇಲ್ಲವೋ, ಕಣ್ಣು ಮುಚ್ಚಿ ಮಲಗಿದ. ನನಗೆ ಹೇ
ನಿದ್ದೆ ಬರಬೇಕು? ಆಶೆ, ನಾಚಿಕೆ, ಪಟ್ಟಮಹಿಷಿಯಾಗುವ ಕನಸು.

ಬೆಳಗ್ಗೆ ಸಖಿ ಚುಚ್ಚಿ ಚುಚ್ಚಿ ಕೇಳಿದರೂ ಯಾಕೆ ನಿಜ ಹೇಳಲಿಲ್ಲ
ನಾನು? ಹಾಗೆ ಮಾಡಿದಿರಾ ಹೀಗೆ ಮಾಡಿದಿರಾ ಆಗ ನೀನೇನು ಮಾಡಿದೆ
ಏನಂದೆ ಅಂತ ಅವಳು ಕೇಳಿದ್ದಕ್ಕೆಲ್ಲ ತಲೆ ಬಗ್ಗಿಸಿ ಹೂಂ ಅಂದು ಬಿಟ್ಟೆನಲ್ಲ.
ಪೂರ್ತಿ ತಿಳಿಯಲಿಲ್ಲವೋ! ಗಂಡನ ಮರ್ಯಾದೆ ಕಾಪಾಡು
ಬಯಕೆಯೋ, ಅದೇನು ಹೇಳೇ ಅಂತ ಅವಳು ತಿವಿದು ತಿವಿದು ಕೇಳಿದ್ದಕ್ಕೆ
ನಾನೇ ಕಲ್ಪಿಸಿಕೊಂಡು, ಅಲ್ಲ, ಹಿಂದಿನದನ್ನು ಜ್ಞಾಪಿಸಿಕೊಂಡು
ಒಂದೊಂದು ಮಾತಿನಲ್ಲಿ ವರ್ಣನೆಯನ್ನು ಕೊಟ್ಟೆನಲ್ಲ. ಅದೃಷ್ಟ ಸ
ಮೋಸ ಮಾಡಿತೆಂದು ಸಕಾಲದಲ್ಲಿ ಬಾಯಿ ಬಿಡದೆ ನನಗೆ ನಾನೇ
ಮೋಸಮಾಡಿಕೊಂಡೆನಲ್ಲ. ಆ ಒಂದು ದಿನವಲ್ಲ, ಊರಿನಿಂದ ಇದೇ
ಹಸ್ತಿನಾವತಿಗೆ ಪಯಣ ಮಾಡಿ ಬಂದು ತಿಂಗಳುಗಳುರುಳಿದಂತೆಲ್ಲ ಸಖಿಯ
ಕೈಲಿ ಸುಳ್ಳನ್ನು ಹೆಚ್ಚು ಹೆಚ್ಚು ಬೆಳೆಸುತ್ತಲೇ ಹೋದೆನಲ್ಲ. ಊರಿನಲ್ಲೇ
ಸಖಿಯ ಕೈಲಿ ನಿಜ ಹೇಳಿದ್ದರೆ ಅವಳು ಅಮ್ಮನಿಗೆ ಹೇಳಿ ಅಮ್ಮನಿಂದ
ಅಪ್ಪನಿಗೆ ತಿಳಿದು ಇವನ ಮಾನ ಹೊರಗೆ ಹಾಕಿ ಮಗಳಿಗೆ ಬೇರೆ ಮದುವೆ
ಮಾಡುತ್ತಿದ್ದರು. ಆಹಾ, ಹೊರನೋಟಕ್ಕೆ ಎಂತಹ ಗಂಡು!

ಭೀಷ್ಮನಿಗೋ ಮಹಾ ಆತುರ, ಸೊಸೆ ಬಂದ ಮೇಲೆ ಮೊದಲ
ಸಲ ಮುಟ್ಟಾದದ್ದು ತಿಳಿದಾಗ ಕಸಿವಿಸಿಪಟ್ಟನಂತೆ, ಕುರುವಂಶದ ಬೀಜ
ಮೊಳೆಯದೆ ಕೊಚ್ಚಿಹೋಯಿತೆಂದು. ಎರಡನೆಯ ಮುಟ್ಟಾದಾ

ಹಾರಾಡಿದನಂತೆ. ಮೂರನೆಯದು ಕಳೆಯುವಾಗ ತಪ್ಪನ್ನೆಲ್ಲ ಸೊಸೆಯ ಮೇಲೆ ಹಾಕಿ ತನ್ನ ವೀರಾಧಿವೀರ ಮಗನಿಗೆ ತಕ್ಕ ಕ್ಷೇತ್ರ ದೊರೆಯಲಿಲ್ಲವೆಂದನಂತೆ. ಇಷ್ಟಾದರೂ ನಾನೇಕೆ ನಿಜ ಹೇಳಲಿಲ್ಲ ಸಖಿಯಿಂದ ಕೂಡ ಬಚ್ಚಿಟ್ಟು, ಗಂಡನ ವೀರ್ಯವನ್ನು ಉತ್ಪ್ರೇಕ್ಷಿಸಿ ಕಥೆಕಟ್ಟುತ್ತಿದ್ದೆನಲ್ಲ. ನನ್ನ ಸಂಗಡ ಬಂದಿದ್ದ ಯಾವ ದಾಸಿಯ ತೋಳನ್ನೂ ಅವನು ಒಂದು ದಿನವೂ ಮುಸುಕಿದವನಲ್ಲವಂತೆ. ಅವನ ಮೋಹ ವೀರ್ಯಗಳನ್ನೆಲ್ಲ ಒಳಗೊಳ್ಳುವ ಸಾಮರ್ಥ್ಯದ ಹೆಂಡತಿ ಸಿಕ್ಕಿರುವಾಗ ದಾಸಿಯರ ಕಡೆ ಏಕೆ ಹರಿಯಬೇಕು ಅವನ ಚಪಲ ಎಂದು ಅರ್ಥಮಾಡಿಕೊಂಡಳಂತೆ ಸಖಿ...

ಕುಂತಿ ಒಂದು ಶಾರೆ ನೀರಿನಲ್ಲಿ ಬೆವರಿಗೆ ಅಂಟುವ ತನ್ನ ಮುಖ ತೊಳೆದಳು. ಬಿಳೀಸೀರೆಯ ಸೆರಗಿನಲ್ಲಿ ಒರೆಸಿಕೊಂಡು ಕುಳಿತಳು. ಧೃತರಾಷ್ಟ್ರನೂ ತನಗೆ ತಾನೇ ಮೋಸಮಾಡಿಕೊಳ್ಳುತ್ತಿದ್ದಾನೆ, ನಿಜ ಗೊತ್ತಿದ್ದೂ. ತಾನೂ ಹಾಗೆಯೇ ಮಾಡಿಕೊಂಡೆ ಬವಣೆಗೆ ಬಿದ್ದೆ ಎಂದುಕೊಳ್ಳುವಾಗ ನೆನಪು ಹರಿಯಿತು: ಜೀವನದುದ್ದಕ್ಕೂ ಹಿಂಸೆ, ಬವಣೆ, ಸುಖಪಟ್ಟಿದ್ದು ಯಾವತ್ತು? ಮದುವೆಯಾದ ಹೊಸತರಲ್ಲಿ ಎಲ್ಲರೂ ಗಂಡನ ಸುಖಪಟ್ಟರೆ ನನಗೆ ಗಂಡನ ಹಿಂಸೆ. ಸುಮ್ಮನಾದರೂ ಬಿಡುತ್ತಿರಲಿಲ್ಲ ಮಹಾರಾಯ. ಮೇಲೆ ಬೀಳುವುದು. ಪೌರುಷ ತೋರಿಸುವುದು, ಲೇ ಕುಂತಿ ಹೀಗೆ ಬಾ, ಲೇ ಕುಂತಿ ಹಾಗೆ ಬಾ, ನೋಡು ಹೀಗೆ ಮಾಡು, ಹಾಗೆ ಮಾಡು. ಏನೇನೋ ವಿಕೃತ ಕರ್ಮಗಳಿಗೆ ನನ್ನನ್ನು ಹಚ್ಚಿ ತಾನೂ ಮುಲುಕಿ ಮುಲುಕಿ ಕೊನೆಗೂ ಏರಲಾರದ ಹೋರಿಯಂತೆ ಸೋತು ತನಗೆ ತಾನೇ ಅವಮಾನಿತನಾಗಿ ಕೊನೆಗೆ ವಿನಾಕಾರಣ ನನ್ನ ಮೇಲೆ ಸಿಟ್ಟಾಗಿ ನೀನು ನನಗೆ ತಕ್ಕ ಹೆಂಡತಿಯಲ್ಲವೆಂದು ಬೈದು ತಪ್ಪನ್ನೆಲ್ಲ ನನ್ನ ಮೇಲೆ ಹಾಕಿ. ಈ ಮಧ್ಯೆ ಅವನ ಚೇಷ್ಟೆಗಳಿಂದ ಉದ್ರಿಕ್ತಳಾದ ನಾನು ಶಮನವಿಲ್ಲದೆ ಬೇಯಲೋ ಅವನ ದೋಷಾರೋಪಣೆಯಿಂದ ಹತ್ತಿರವೂ ಇದೇ. ಯುದ್ಧವಿಲ್ಲದ ವಿಜೃಂಭಣೆಯನ್ನು ಕಂಡು ಶತ್ರುವಿಗೆ ಸುಟ್ಟುಹೋಗಲೋ। ರಾತ್ರಿಯಾದರೆ ಇದೇ ಹಿಂಸೆ, ಬೇರೆ ಕಡೆಯಾದರೂ

ಬಿದ್ದು ಕೊಬಾರದು ಈ ಷಂಡ ಎಂಬ ಮೂಕ ತಿರಸ್ಕಾರ. ಆಗಲಾದರೂ
ಸಖಿಗೆ ಹೇಳಿದೆನೆ ನಾನು!

ಒಂದು ದಿನ ತಿರುಗಿಬಿದ್ದೆ : 'ಆರ್ಯಪುತ್ರ, ತಕ್ಕ ಹೆಂಡತಿಯಲ್ಲ
ಅಂತ ಬೈಯ್ತೀಯಲ್ಲ, ಬೇರೆ ಯಾವ ಹೆಂಗಸಿನಲ್ಲಿ ಇನ್ನೇನಿರುತ್ತೆ?
ನಿನ್ನಲ್ಲಿ ಶಕ್ತಿಯಿದ್ದರೆ ನಾನು ತಕ್ಕವಳೇ ಆಗುತ್ತಿದ್ದೆ.'

ಅವನ ಕೋಪ ಮಿತಿ ಮೀರಿತು. ಫಟ್ಟನೆ ಕೆನ್ನೆಗೆ ಹೊಡೆದು
ಅಂದುಬಿಟ್ಟ: 'ಶಕ್ತಿ ಇಲ್ಲ ಅನ್ನುವ ಮಾತು ನಿನ್ನ ಬಾಯಲ್ಲಿ ಬಂತೇನು?
ನನ್ನರಮನೆಯ ಯಾವ ದಾಸಿಯನ್ನೂ ನಾನು ಬಿಟ್ಟಿಲ್ಲವನಲ್ಲ. ಈಗ ಒಂದು
ವರ್ಷದಿಂದ ಬ್ರಹ್ಮಚರ್ಯೆಯಲ್ಲಿದ್ದೆ ತಿಳಿದುಕೊ. ನೂರು ದಾಸಿಯರನ್ನು
ಸೋಲಿಸಿ ಕೆಡವಿರಬಹುದು ಒಟ್ಟಿನಲ್ಲಿ.'

ಆ ರಾತ್ರಿಯೆಲ್ಲ ಅತ್ತೆ ನಾನು. ಗಂಡ ನೂರು ದಾಸಿಯರನ್ನು
ಮುಟ್ಟಿದ್ದನೆಂದಲ್ಲ. ಸುಳ್ಳು ಪ್ರತಾಪ ಕೊಚ್ಚಿಕೊಳ್ಳುತ್ತಾ ನನ್ನನ್ನು ಹೊಡೆದ
ಅಂತ. ಆ ದಿನದಿಂದ ಅವನ ಸಿಟ್ಟಿಗೆ ಮಿತಿ ಇರಲಿಲ್ಲ. ವಿನಾ ಹತ್ತಿರ
ಮಲಗುವನು. ವಿನಾಕಾರಣ ಬೈಯುವನು. ನನ್ನ ಸಾಕುತಂದೆ ಭೋಜರು,
ಹೆತ್ತ ತಂದೆ ಶೂರಸೇನರನ್ನೆಲ್ಲ ಕೀಳಾಡುವನು. ಸದ್ಯ ನನಗೆ ಚೇಷ್ಟೆ
ತಪ್ಪಿತ್ತು. ಕ್ರಮೇಣ ನಾನೇ ಸಮಾಧಾನಪಡಿಸಿ ಎಲ್ಲವನ್ನೂ ಕೇಳಿದೆ.
ಬಾಯಿಬಿಟ್ಟ, ಪ್ರತಾಪ ಕೊಚ್ಚಿಕೊಳ್ಳುವಂತೆ. ನನಗೆ ಅರ್ಥವಾಯಿತು:
ಹದಿನೈದನೇ ವಯಸ್ಸಿಗೆ ದಾಸಿಯರನ್ನು ಕೆಣಕಿದನಂತೆ. ರಾಜಕುಮಾರನ
ಪ್ರೇಮವನ್ನು ಗೆದ್ದುಕೊಳ್ಳಲು ಒಬ್ಬರಿಗಿಂತ ಒಬ್ಬರು ಮೇಲೆ ಬಿದ್ದು
ಕಾಮದ ಸಕಲ ಕಲೆಗಳನ್ನೂ ಪ್ರಯೋಗಿಸಿ ಇವನನ್ನು ರಂಜಿಸಿದ್ದರು.
ಇವನ ಶಕ್ತಿ ಸಾಮರ್ಥ್ಯಗಳನ್ನು ಹೊಗಳಿ ಉಬ್ಬಿಸಿ ಉತ್ತೇಜಿಸಿ
ದುಡಿಸಿದ್ದರು. ಮೂರು ವರ್ಷದಲ್ಲಿ ಇವನಿಗೇ ಅಸ್ತ್ರ ಕಡಿಮೆಯಾಯಿತಂತೆ.
ಕೊನೆಕೊನೆಗೆ ಏನೂ ಸಾಧ್ಯವಾಗದಂತಾಯಿತಂತೆ. ಈ ವೀರ್ಯನಷ್ಟನೊಡನೆ
ನಾನು ಏನು ಮಾಡುವುದು? ಆಗ ಸಖಿಯೊಡನೆ ಬಾಯಿ ಬಿಟ್ಟೆ, ಗಂಡನ
ಮನೆಗೆ ಬಂದ ಎರಡು ವರ್ಷದ ನಂತರ, ಅಳುತ್ತಾ.

ಸಖಿ ಎಂದಳು: 'ಹುಚ್ಚಿಮುಂಡೆ. ಕೆಲವು ದಿನದಿಂದ ಯುವರಾಜರು
ನಮ್ಮೂರಿನ ದಾಸಿಯರನ್ನು ಬೇರೆ ಕಡೆ ಕರೆಯುತ್ತಿದ್ದಾರಂತೆ. ಅವರ

ತಿರಸ್ಕಾರ ಹುಟ್ಟುವಂತೆ ಅವರಿಗೂ ಆಗಿದೆ. ಯುದ್ಧವೇನಿದ್ದರೂ ಪಟ್ಟಮಹಿಷಿಯೊಡನೆ ಮಾತ್ರ ಇರಬಹುದು ಎಂದು ಭಾವಿಸಿ ನಾನು ಸುಮ್ಮನಿದ್ದೆ.

ಸಖೀ ಇಷ್ಟು ದಿನ ನಾನು ನಿನಗೆ ಹೇಳಿದ್ದೆಲ್ಲ ಸುಳ್ಳು, ಬರೀ ಸುಳ್ಳು, ಆತ್ಮವಂಚನೆಯ ಸುಳ್ಳು, ಎಂದು ಬಿಕ್ಕಿ ಬಿಕ್ಕಿ ಅತ್ತು ತಬ್ಬಿಕೊಂಡಳು.

'ಯಾಕೆ ಅಂಥಾ ಆತ್ಮವಂಚನೆ ಮಾಡಿಕೊಂಡೆ? ಮೊದಲೇ ಯಾಕೆ ನನ್ನ ಕೈಲಿ ಹೇಳಲಿಲ್ಲ?'

'ಗೊತ್ತಿಲ್ಲ, ಗಂಡಸ ವೀರ್ಯವನ್ನು ಕಲ್ಪಿಸಿಕೊಂಡು ಹೇಳಿಕೊಳ್ಳುವುದರಲ್ಲೇ ಒಂದು ಥರಾ ಸುಖ ಸಿಕ್ಕುತ್ತಿತ್ತೇನೋ! ಅಲ್ಲದೆ ಪ್ರಸಿದ್ಧ ಕುರುವಂಶದ ಯುವರಾಜ.'

'ನೋಡು, ನನಗೆ ಅನ್ನಿಸುತ್ತೆ. ಈ ರಾಜರುಗಳೇ ಹಾಗೆ. ನಷ್ಟವೀರ್ಯರು, ಗತಪುಂಗವರು. ಇವರಿಗಿಂತ ಬ್ರಹ್ಮಚರ್ಯದಿಂದ ವೀರ್ಯಸಂಚಯ ಮಾಡಿ ತಪೋನಿರತರಾಗಿರುವ ಋಷಿಗಳ ಹೆಂಡತಿಯಾಗುವುದು ಮೇಲು. ಅವರ ಗಮನ ಇತ್ತ ತಿರುಗಿದಾಗ ಎಷ್ಟು ಗಟ್ಟಿಗರು ಕೇಳಿದ್ದೀಯಾ?'

ನಾನು ಹೂಂ ಅನ್ನಲಿಲ್ಲ. ಅವಳ ಮಾತನ್ನು ನಿತ್ಯ ನಿಜವಾಗಿಸಿತು. ಗಮನ ನೀರಿನೊಳಗಣ ಬಿಂಬದ ಕಡೆಗೆ ಹರಿಯಿತು. ಇದೆಲ್ಲ ಜ್ಞಾಪಕಕ್ಕೆ ಬರುತ್ತಿದೆ. ಇದೇ ಮೊದಲ ಸಲವೇನಲ್ಲ. ಆದರೆ ಇಷ್ಟು ವಿವರವಾಗಿ ಬರುತ್ತಿರಲಿಲ್ಲ. ಆದರೆ ಯಾಕೆ ಬರುತ್ತಿದೆ? – ಅಂದುಕೊಂಡಳು ತನಗೆ ತಾನೇ. ಯಾರಿಗೋ ಹೇಳುತ್ತಿರುವಂತೆ, ಕೇಳುವ ಅವರು ಹೂಂ ಹೂಂ ಅನ್ನುವಂತೆ ಆಗುತ್ತಿದೆ. ಯಾರು ಕೇಳುವವರು? ಸುಖಿ ಸತ್ತ ಮೇಲೆ ಅಂಥಹ ಆಪ್ತರು ಮತ್ತೆ ಯಾರೂ ಸಿಗಲಿಲ್ಲ. ಒಂದು ಜೀವಮಾನದಲ್ಲಿ ಒಬ್ಬಳು ತಾನೇ ಸ್ನೇಹಿತೆ ಸಿಕ್ಕುವುದು! ಮುಂದೆ ಮೂರು ವರ್ಷ ಇದ್ದಳು. ನನ್ನ ಜೊತೆಗೆ ಹಿಮವತ್ಪರ್ವತದ ತಪ್ಪಲಿಗೆ ಬಂದಳು. ಚಳಿ ತಡೆಯಲಾರದೆ ಸತ್ತಳು. ಇಂಥ ವಿಷಯವನ್ನು ಯಾರ ಕೈಲಿ ಹೇಳಿಕೊಳ್ಳುವುದು! ಕೊನೆ

ದ್ರೌಪದಿಯ ಜೊತೆಗಿದ್ದಾಗ ಅಲ್ಪಸ್ವಲ್ಪ ಹೇಳುತ್ತಿದ್ದೆ. ಅವಳೂ ಕಷ್ಟಪಟ್ಟಳು. ಹನ್ನೆರಡು ವರ್ಷ ವನವಾಸ, ಒಂದು ವರ್ಷ ಊಳಿಗ. ಆದರೆ ನಾನು ಪಟ್ಟಂತಹ ಕಷ್ಟವಲ್ಲ. ಐವರು ಗಂಡಂದಿರು. ಒಬ್ಬೊಬ್ಬರೂ ನಾಲ್ವರು ಹೆಂಡಂದಿರನ್ನಾಳಬಲ್ಲ ವೀರ್ಯವಂತರು. ಆಳಬಲ್ಲ ಗಂಡನಿದ್ದರೆ ಸಾಕು, ಉಳಿದ ಯಾವುದೂ ಕಷ್ಟವಲ್ಲ...

ಈ ಮಧ್ಯೆ ಇನ್ನೊಂದು ಸುದ್ದಿ ತಲೆಯ ಮೇಲೆರಗಿತ್ತು. ಮುದುಕ ಮಾವ ಭೀಷ್ಮ ಸೈನ್ಯ, ಜೊತೆಗೆ ಇಪ್ಪತ್ತು ಗಾಡಿ ವಸ್ತ್ರ, ಪಾತ್ರೆ, ಕಂಬಳಿ, ಒಡವೆ ಮೊದಲಾದುವನ್ನು ಹೇರಿಸಿಕೊಂಡು ಮದ್ರದೇಶಕ್ಕೆ ಹೋದ. ಈ ಕುಂತೀಭೋಜನ ಮಗಳಿಂದ ತನ್ನ ವಂಶ ಬೆಳೆಯಲಿಲ್ಲ. ತನ್ನ ವೀರ್ಯವಾನ್ ಮಗನಿಗೆ ಸರಿಯಾದ ಗರ್ಭಶಕ್ತಿಯುಳ್ಳ ಇನ್ನೊಬ್ಬಳನ್ನು ತರಬೇಕೆಂದು. ನನಗೆ ನಗುಬಂತು. ಹೆದರಿಕೆಯೂ ಆಯಿತು. ಈತ ಯಾರಲ್ಲಿಯೂ ಮಕ್ಕಳನ್ನು ಸೃಷ್ಟಿಸಲಾರ. ಆದರೆ ಬಂದವಳು ಬೇಳ್ವೆ ಮಾಡಿ ಇವನ ಮನಸ್ಸನ್ನು ವಶಪಡಿಸಿಕೊಂಡರೆ ನನ್ನ ಬಾಳು ಇನ್ನಷ್ಟು ನರಕವಾಗುತ್ತದೆ. ಈ ಕ್ಷತ್ರಿಯರು ಎಷ್ಟು ಹೆಂಡಿರನ್ನಾದರೂ ತರಬಹುದು, ಎಷ್ಟು ದಾಸಿಯರನ್ನಾದರೂ ಇಡಬಹುದು, ಬೇಡ ಅನ್ನುವವರಾರು? ಈತ ನನ್ನನ್ನು ಸಂಧಿಸುವುದನ್ನೇ ಬಿಟ್ಟುಬಿಟ್ಟಿದ್ದ. ನನ್ನ ಮುಖ ತಪ್ಪಿಸಿ ದೂರವಿರುತ್ತಿದ್ದ. ಆದರೂ ಒಮ್ಮೆ ನಾನೇ ಹತ್ತಿರ ಹೋಗಿ ಕೇಳಿದೆ: 'ಇದೇನು ಹೀಗಂತೆ?'

'ದೊಡ್ಡಪ್ಪ ಮನೆಗೆ ಯಜಮಾನ. ಅವನು ಮಾಡುವುದನ್ನು ನಾನು ಹೇಗೆ ಬೇಡ ಅನ್ನಲಿ?'

'ಸುಮ್ಮಸುಮ್ಮನೆ ಬೇರೆ ಹೆಂಡತಿ ಯಾಕೆ, ಇವಳದೇನೂ ತಪ್ಪಿಲ್ಲ, ಅನ್ನು.'

'ಇನ್ನೇನು ತಪ್ಪು, ನನ್ನದು ಅಂತೀಯಾ? ನೂರು ದಾಸಿಯರನ್ನು ಆಳಿದ್ದೆ ನಾನು' --ಎಂದು ಕಣ್ಣು ಮರಳಿಸಿದ. ನಾನು ಹಿಂತಿರುಗಿದೆ ತಿರಸ್ಕಾರದಿಂದ.

ಮಾದ್ರಿಯನ್ನು ಕರೆತಂದು ಕುರುವಂಶ ಬೆಳೆಸುವ ಸಂಕಲ್ಪಶಕ್ತಿಯ

ಮಾದ್ರಿಯನ್ನು ಕರೆತಂದು ಕುರುವಂಶ ಬೆಳೆಸುವ ಸಂಕಲ್ಪ ಶಕ್ತಿಯ ಭೀಷ್ಮ. ನನಗಿಂತ ತೆಳ್ಳಗೆ ಎರಡು ವರ್ಷಕ್ಕೆ ಚಿಕ್ಕವಳು. ನನ್ನ ಮೈಕಟ್ಟಿಲ್ಲ. ಆದರೆ ಆಕರ್ಷಕ ಮಾಟ. ಚೆಬುಕು ಕಣ್ಣುಗಳು. ಅರಮನೆಯವರೆಲ್ಲ ವಾಹ್‌ವಾಹ್ ಎಂದರು ಅವಳ ರೂಪ ನೋಡಿ. ಮದುವೆಯ ಶಾಸ್ತ್ರವನ್ನಷ್ಟೇ ನೋಡಿ ನಾನು ನನ್ನರಮನೆಗೆ ಹಿಂತಿರುಗಿದೆ. ಇನ್ನೂ ನಾನೇ ಪಟ್ಟದರಸಿ, ಬೇಕಿದ್ದರೆ ಅವಳು ಬಂದು ನನ್ನನ್ನು ನೋಡಬಹುದು, ಇಲ್ಲದಿದ್ದರೆ ದೂರವೇ ಇರಬಹುದು ಎಂಬ ಬಿಗಿಮನಸ್ಸಿನಿಂದ. ಅವನೂ ಇತ್ತ ಸುಳಿಯಲಿಲ್ಲ. ಅವಳ ಹೊಸ ಪುಟ್ಟ ಅರಮನೆಯಲ್ಲೇ ಇದ್ದ. ಒಂದು ತಿಂಗಳಾಯಿತು. ಮಾದ್ರಿ ಮುಟ್ಟಾದಳು. ಭಾರವಾಗಿದ್ದ ನನ್ನ ಮನಸ್ಸು ಹಗುರವಾಯಿತು. ನಾನಂತೂ ತಪ್ಪದೆ ಆಗುತ್ತಿದ್ದೆ, ಇಪ್ಪತ್ತೊಂಬತ್ತನೆಯ ದಿನ ಚಂದ್ರನು ಕ್ರಮತಪ್ಪದೆ ಪೂರ್ಣವಾಗಿ ತೋರಿಸಿಕೊಳ್ಳುವಂತೆ. ಸ್ನಾನಮಾಡಿದ ಮೇಲೆ ಅವಳೇ ನನ್ನ ಅರಮನೆಯನ್ನು ಹುಡುಕಿಕೊಂಡು ಬಂದಳು. ಮಾತಿನಲ್ಲೂ ಜಾಣೆ. 'ಅಕ್ಕ' -ಎಂದಳು ಮೊದಲ ಮಾತಿಗೇ. 'ನಿನ್ನ ಮನೆಯಲ್ಲಿ ಸಾಲುಗಾಡಿಗಳ ತುಂಬ ಹೊರಿಸಿ ಕಳಿಸಿದರಂತೆ. ಸ್ವಯಂವರಮಾಡಿ ಕಳಿಸಿದರಂತೆ. ನಿನ್ನ ಸಮ ನಾನಲ್ಲ. ನಮ್ಮ ಕಡೆ ಕನ್ಯಾಶುಲ್ಕ ತೆಗೆದುಕೊಂಡು ಹೆಣ್ಣು ಮಾರುತ್ತಾರೆ. ಮದುವೆಯನ್ನೂ ಹೆಣ್ಣಿನ ಮನೆಯಲ್ಲಿ ಮಾಡಿಕೊಡುವುದಿಲ್ಲ. ಆ ಕಡೆಯ ಪದ್ಧತಿ ಅದು. ನನಗೆ ನೀನೇ ದಿಕ್ಕು. ಕನಿಕರದಿಂದ ನಡೆಸಿಕೊಳ್ಳಬೇಕು' --ಎಂದಳು.

'ಕನಿಕರವೇನು ಬಂತು?' ನನಗೆ ನಾನೇ ಹೇಳಿಕೊಂಡೆ. ಮನಸ್ಸು ತಡೆಯದೇ ಕೇಳಿಬಿಟ್ಟೆ: 'ಮುಟ್ಟಾದೆಯಂತೆ?'

'ಇನ್ನೇನು ಮಾಡಲಿ?' --ನನ್ನ ಕಣ್ಣನ್ನು ದಿಟ್ಟಿಸಿದಳು: 'ನೀನೂ ಆಗುತ್ತಿಲ್ಲವೆ ಹಾಗೆಯೆ'

ಒಂದು ತಿಂಗಳಿಗೆ ಎಲ್ಲವನ್ನೂ ತಿಳಿದುಕೊಂಡಿದ್ದಾಳೆ. ನನ್ನಂತೆ ತನಗೆ ತಾನು ಮೋಸಮಾಡಿಕೊಳ್ಳುತ್ತಿಲ್ಲ.

'ಇಬ್ಬರಿಗೂ ದ್ವೇಷ ತಪ್ಪಿತು. ಹೊಟ್ಟೆಕಿಚ್ಚಿಗೆ ಅವಕಾಶವೇ

ಇಲ್ಲವಲ್ಲ? ಅವಳ ಊರು, ರಾಜ್ಯ, ಹುಟ್ಟಿದ್ದು, ಬೆಳೆದದ್ದು ಮೊದಲಾಗಿ ಎಲ್ಲವನ್ನೂ ಹೇಳಿದಳು. ನನ್ನ ತಂದೆ ತಾಯಿ ಮೊದಲಾಗಿ ವಿಚಾರಿಸಿದಳು. 'ಅಕ್ಕ, ನಾನು ನೀನಾದರೂ ಆಗಾಗ್ಗೆ ಕೂತು ಮಾತನಾಡಬೇಕು. ಇಲ್ಲದಿದ್ದರೆ ಬೇರೆ ದಿಕ್ಕಾರು?' ಎಂದಳು. ಇದಾದ ಮರುದಿನ ಅತ ನನ್ನ ನಿವಾಸಕ್ಕೆ ಬಂದ. ಏನೋ ವಿಜಯದ ದರ್ಪ ಮುಖದಲ್ಲಿ. 'ಎಷ್ಟು ದಿನವಾಯಿತು ಈ ಕುಂತಿಯ ನೆನಪು ಬಂದು?' ಎಂದೆ.

'ನಿನಗಿಂತ ಅವಳು ಹೆಣ್ಣು. ನೀನು ಹೇಗೆ ಹೆಣ್ಣಾಗಿ ಹುಟ್ಟಿದೆಯೋ ನಾ ಬೇರೆ ಕಾಣೆ' -- ಎಂದ ಛೇಡಿಸುತ್ತಾ.

'ಅವಳೂ ಮುಟ್ಟಾಗಿದ್ದಾಳಲ್ಲ' --ನಾನೆಂದೆ. ಅತ ಕೂಡ ತಪ್ಪನ್ನು ನನ್ನ ಮೇಲೆ ಹಾಕುವ ಭರದಲ್ಲಿ ಸುಳ್ಳು ಹೇಳುತ್ತಿದ್ದಾನೆ: ತನಗೆ ತಾನೇ ಮೋಸಮಾಡಿಕೊಳ್ಳುತ್ತಿದ್ದಾನೆಯೆ? ಇದುವರೆಗೆ ನನ್ನಲ್ಲಿ ಆತನ ಬಗೆಗೆ ಒಂದು ತೆರನಾದ ಮರುಕವೂ ಇತ್ತು. ಈಗ ಅದು ಹೋಗಿ ಪೂರ್ತಿ ತಿರಸ್ಕಾರ ತುಂಬಿತು. ಮುಖ ನೋಡಲು ಕೂಡ ಅಸಹ್ಯ. ಬಿಲ್ಲಿನ ಚರ್ಮದ ಹುರಿ ಹೊಡೆದು ಹೊಡೆದು ಕಪ್ಪಗೆ ಗಟ್ಟಿಕಟ್ಟಿದ ಕಲೆಯು ತುಂಬು ಭುಜ. ಉಬ್ಬಿದ ಮಾಂಸಖಂಡದ ತೋಳು. ದಿಟ್ಟಿಸಿ ಆತನ ಕಣ್ಣುಗಳನ್ನು ನೋಡಿದೆ. ನನ್ನ ದೃಷ್ಟಿಯಲ್ಲಿ ಅಷ್ಟೊಂದು ಶಕ್ತಿ ಇದೆ ಅಂತ ಅದುವರೆಗೆ ನನಗೆ ಗೊತ್ತಿರಲಿಲ್ಲ. ನಿಜ ತಿಳಿದಿರುವವನು ಸುಳ್ಳುಗಾರನನ್ನು ಬರೀ ದೃಷ್ಟಿಯಲ್ಲೇ ಹೊಡೆದು ಇಲ್ಲವಾಗಿಸಬಹುದೆಂಬುದು ಆ ದಿನ ತಿಳಿಯಿತು. ಅವನ ಕಣ್ಣುಗಳಲ್ಲಿ ಈರ್ಷ್ಯೆ ತುಂಬಿತ್ತು. ಅನಂತರ ಸಿಟ್ಟು. ಸೋತವನು ಗೆದ್ದವನ ಮೇಲೆ ಉರಿಹಾಯಿಸುವ ನಿಸ್ಸಹಾಯಕ ಸಿಟ್ಟು. ನಾನು ದೃಷ್ಟಿ ಕದಲಿಸಲಿಲ್ಲ. ಅವನ ನೋಟವೇ ಕಂಪಿಸಲು ಶುರುವಾಯಿತು. 'ಅವಳಲ್ಲ, ಇನ್ನು ನಾಲ್ವರು ಹೆಂಡಿರನ್ನು ತಂದರೂ ಮುಟ್ಟಿನ ರಕ್ತವನ್ನು ನೀನು ನಿಲ್ಲಿಸಲಾರೆ. ಒಂದೊಂದು ಸಲ ಆ ರಕ್ತ ನೆಲಕ್ಕೆ ಬಿದ್ದಾಗಲೂ ನಿನ್ನ ಜನ್ಮಜನ್ಮಾಂತರಕ್ಕೂ ಪಾಪ ಸಂಚಯವಾಗುತ್ತಿರುತ್ತೆ. ಅವನ್ನು ಮುಚ್ಚಿಕೊಂಡು ಹಿರಿಯ ಹೆಂಡತಿಯ ಕೈಲಿ ಸುಳ್ಳು ಹೇಳುವುದು ಇನ್ನಷ್ಟು ಪಾಪ. ಅವನ ನೋಟ ಕುಸಿಯಿತು. ನೆಲವನ್ನು ಕೊರೆದು ಅಡಗಿಕೊಳ್ಳಲು

ಹೊಮ್ಮಿಸಿತು. ಮೂಗಿ ದೇವತೆ ಹಾಸೆಯ ಮೇಲೆ ಸಣ್ಣ ಹೂಗಳು ಉದುರಿದವು. ಕುತ್ತಿಗೆಯ ಮೇಲಿದ್ದ ರೇಷ್ಮೆವಸ್ತ್ರ ಅಂಟಿಕೊಂಡಿತು. ನಾನು ಎದ್ದು ಬರಲಿಲ್ಲ. ಎದುರಿಗೇ ಕುಳಿತಿದ್ದೆ, ಬೆನ್ನು ಹುರಿ ಸಡಿಲಿಸದೆ. ಆತ ಮತ್ತೆ ಮಾತನಾಡಲೇ ಇಲ್ಲ. ಇಡೀ ಕೋಣೆ ಜಡದ ಮುದ್ದೆಯಾಗಿತ್ತು. ಕಿಟಕಿಯಿಂದ ಬರುವ ಬಿಸಿಲು. ಕೋಣೆಯಲ್ಲಿ ಹರಡಿದ್ದ ಸುಗಂಧ, ಇಬ್ಬರೂ ಕುಳಿತಿದ್ದ ಮೆತ್ತೆ, ಎಲ್ಲವೂ ಗಡ್ಡೆ ಕಟ್ಟಿದ ಲೋಹವಾಗಿದ್ದವು. ಆತ ಮೇಲೆ ಎದ್ದು, ದಡ ದಡ ಹೆಜ್ಜೆ ಹಾಕಿಕೊಂಡು ಹೊರಗೆ ಹೊರಟುಹೋದ. ನನಗೆ ಒಂದು ತೆರನಾಗಿ ಗೆದ್ದ ಭಾವ.

ಮರುದಿನ ಮಧ್ಯಾಹ್ನ ಸುದ್ದಿ ಬಂತು. ಆ ದಿನ ಬೆಳಗ್ಗೆಯೇ ಆತ ಅಶ್ವ, ರಥ, ಕಾಲಾಳುಗಳ ಪಡೆಯೊಡನೆ ದಿಗ್ವಿಜಯಕ್ಕೆ ಹೋದನಂತೆ. ಸುತ್ತ ರಾಜ್ಯಗಳನ್ನು ಗೆದ್ದು, ಕಾಡು ಜನರನ್ನು ಓಡಿಸಿ, ಕುರುನಾಡನ್ನು ವಿಸ್ತರಿಸಿ ಸ್ವರ್ಗದಲ್ಲಿರುವ ಕುರುಪಿತೃಗಳಿಗೆ ಆನಂದವುಂಟುಮಾಡುವ ಸಲುವಾಗಿ ಕ್ಷತ್ರಿಯೋಚಿತ ವೀರ್ಯನಿಜೃಂಭಣೆಗೆ ಹೋದನಂತೆ. ಪುರಜನರಿಗೆ ಹಿಗ್ಗೋ ಹಿಗ್ಗು. ತಮ್ಮ ಊರಿನ ಕೀರ್ತಿ ಮೆರೆಯುತ್ತದೆ. ತಮ್ಮ ರಾಜ್ಯದ ಎಲ್ಲೆ ಅರಳುತ್ತದೆ. ಭೀಷ್ಮನು ತಲೆಸವರಿ ಬೆನ್ನು ತಟ್ಟಿ, ತಬ್ಬಿ, ಆಶೀರ್ವದಿಸಿದನಂತೆ. ಮಂತ್ರಿಗಳು, ಮಾಗಧರು, ಸೂತರು ಸ್ತುತಿಸಿದರಂತೆ. ಪುರೋಹಿತರು ಬಲವೀರ್ಯ ಕೀರ್ತಿವೃದ್ಧಿಗಳ ಮಂತ್ರವನ್ನು ಆಕಾಶಕ್ಕೂ ಕೇಳುವಂತೆ ಘೋಷಿಸಿದರಂತೆ. ಯುವರಾಜ ದಿಗ್ವಿಜಯಕ್ಕೆ ಹೊರಡುವಾಗ ಅವನ ಅರಸಿಯರು ಮಾತ್ರ ಹೊರಗೆ ಬರಲಿಲ್ಲವೆಂದು ಕೆಲವರು ಆಕ್ಷೇಪಿಸಿದರಂತೆ. ಇನ್ನೂ ಹೊಸ ಪ್ರಾಯ, ಗಂಡ ಈಗಲೇ ತಮ್ಮನ್ನು ಅಗಲಿ ಯುದ್ಧಕ್ಕೆ ಹೋಗುವುದು ಅವರಿಗೆ ಇಷ್ಟವಿಲ್ಲವೆಂದು ಕೆಲವರು ವ್ಯಾಖ್ಯೆ ಮಾಡಿದರೆ, ಇದು ಕ್ಷತ್ರಿಯೋಚಿತ ರೀತಿಯಲ್ಲವೆಂದು ಇತರರು ನಮ್ಮನ್ನು, ವಿಶೇಷವಾಗಿ ನನ್ನನ್ನು, ಆಡಿಕೊಂಡರಂತೆ.

ದಿಗ್ವಿಜಯ ಸುಮಾರು ಆರು ಚಾಂದ್ರ ಮಾಸಗಳು ನಡೆಯಿತು. ಒಂದು ಕಾಡು ನಮ್ಮ ದೇಶವಾಯಿತಂತೆ. ಅದರ ವಾಸಿಗಳು ಹಲವು

ಕಾಲ್ತೆಗೆದರಂತೆ. ಇನ್ನೊಂದು ನೆರೆರಾಜ್ಯದ ಅರಸು ಸೋತು ಹೊಳೆಯಿಂದೀಚೆಗೆ ತನ್ನ ಅಧಿಕಾರವಿಲ್ಲವೆಂದು ಒಪ್ಪಿಕೊಂಡನಂತೆ. ಅವನು ಒಪ್ಪಿಸಿದ ಕುದುರೆ, ರಥ, ಆಭರಣಾದಿಗಳು ಹಸ್ತಿನಾವತಿಗೆ ಬಂದವು. ಪುರಜನರು ಮೆರವಣಿಗೆ ಮಾಡಿ ಅದನ್ನು ಸ್ವಾಗತಿಸಿದರು. ಇನ್ನೊಂದು ಕಡೆ ಗುಡ್ಡಗಾಡಿನ ಜನರು ಸೋತು ಒಂದು ನೂರು ಕಂಬಳಿ ಅರ್ಪಿಸಿದರು. ಕುರುನಾಡಿನ ವೀರ್ಯದ ಕೀರ್ತಿ ಆರ್ಯಾವರ್ತದಲ್ಲೆಲ್ಲ ಹರಡಿದೆಯಂತೆ. ಪಾಂಡುರಾಜ ದಿಗ್ವಿಜಯ ಮಾಡುತ್ತಾ ಹೊರಗೇ ಸುತ್ತುವರಿಯುತ್ತಿದ್ದಾನೆ. ನಡುವೆ ಒಂದು ದಿನವೂ ಊರಿಗೆ ಬಂದು ಹೋಗಿಲ್ಲ. ಕುದುರೆ ಏರಿ ವೇಗವಾಗಿ ಹೊರಟರೆ ಒಂದು ಹಗಲಿನಲ್ಲಿ ಮುಟ್ಟಬಹುದಾದ ದೂರ. ಆದರೂ ಬಂದಿಲ್ಲ. ಸೋತ ದೊರೆಗಳು ತಮ್ಮ ತಮ್ಮ ಹಿಡುವಳಿಯ ಇಬ್ಬರೋ ಮೂವರೋ ನಾಲ್ವರೋ ಯುವತಿಯರನ್ನು ಕಾಣಿಕೆಯಾಗಿ ಒಪ್ಪಿಸುತ್ತಿದ್ದಾರಂತೆ. ಯುವರಾಜನಿಗೆ ಹೆಂಡಿರನ್ನು ನೆನಸಿಕೊಂಡು ಊರಿಗೆ ಬರುವ ಅಗತ್ಯವೇನು? ಪುರಜನರು ಹೆಮ್ಮೆಯಿಂದ ಆಡಿಕೊಳ್ಳುತ್ತಿದ್ದುದು ಅರಮನೆಯ ದಾಸಿಯರಿಂದ ಸುಳಿಗೆ ತಿಳಿದು ನನಗೆ ಮುಟ್ಟುತ್ತಿತ್ತು. ಇತ್ತ ಬಡಗಣಕ್ಕೆ ಹಿಮಪರ್ವತದ ಗಂಗಾದ್ವಾರದ ಆಚೆ ಒಬ್ಬ ಗಂಧರ್ವನನ್ನು ಸೋಲಿಸಿ ಯುವರಾಜರು ಹಾಡು ಕುಣಿತ ಅಲಂಕಾರಗಳಲ್ಲಿ ಚತುರೆಯರಾದ ಐವರು ಗಂಧರ್ವ ಸುಂದರಿಯನ್ನು ಪಡೆದರಂತೆ. ಮೇಲೆ ಅಪ್ಪಟ ಕೆಂಪು ಆಡಿನ ಉಣ್ಣೆಯ ಚಿತ್ರಚಿತ್ರದ ಕಸೂತಿಯ ಪತ್ತು ತೆಳುಗಂಬಳಿಗಳು.

ಮಾದ್ರಿ ದಿನಾ ನನ್ನಲ್ಲಿಗೆ ಬರುತ್ತಿದ್ದಳು. ಇಬ್ಬರಿಗೂ ಆಗಿರುವ ಒಂದೇ ಅದೃಷ್ಟವನ್ನು ಮಾತನಾಡುತ್ತಿದ್ದಳು. ನಾನು ಬರಿದೇ ಅವಳು ಹೇಳುವುದನ್ನು ಕೇಳುತ್ತಿದ್ದೆ. ಗುಡ್ಡಗಾಡಿನ ಗಂಧರ್ವ ಸುಂದರಿಯರನ್ನು ಯುವರಾಜನು ಸೋಲುಗಾಣಿಕೆಯಾಗಿ ಪಡೆದನೆಂದು ತಿಳಿದಾಗ ಅವಳು ಸ್ವಲ್ಪ ಅಂಜಿದಳು. 'ಎಂಥಾ ಸುಂದರಿ ಸಿಕ್ಕಿದರೆ ತಾನೆ ಏನು, ಯಾಕೆ ಹೆದರ್ತೀಯ ಸುಮ್ಮನೆ?' — ನಾನು ಕೇಳಿದೆ.

'ಹಾಗಲ್ಲ. ಆ ಗಂಧರ್ವ ಜಾತಿಯ ಹೆಂಗಸರಿಗೆ ತುಂಬ ರಹಸ್ಯದ

ಕಾಮಕಲೆ ಗೊತ್ತಿರುತ್ತಂತೆ. ಮನಸ್ಸಿಲ್ಲದ ಗಂಡಸರನ್ನು ಕೂಡ ಪ್ರಚೋದಿಸಿ, ಹೆದೆ ಏರಿಸಿ ಸಿದ್ಧಗೊಳಿಸಿದ ಬಿಲ್ಲಿನಂತೆ ಮಾಡಬಲ್ಲರಂತೆ.'

'ಬಿಲ್ಲಿನಲ್ಲಿ ಸಹಜಶಕ್ತಿ ಇಲ್ಲದಿದ್ದರೆ ಹೆದೆ ಏನು ಮಾಡುತ್ತೆ?'

'ಅಕ್ಕ, ನಿನಗೆ ಗೊತ್ತಿಲ್ಲ. ನಮ್ಮ ಕಡೆ ಬಿಲ್ಲನ್ನೂ ಹದ ಮಾಡುತಾರೆ?' --ಎಂದು ನಕ್ಕಳು.

'ಹಾಗಾದರೆ ಇಷ್ಟು ದಿನ ನೀನು ಹದಮಾಡದೆ ಯಾಕೆ ಸುಮ್ಮನಿದ್ದೆ?'

'ನನ್ನ ತಿಳಿವಳಿಕೆ ಇದ್ದಷ್ಟು ದುಡಿದೆ. ಅದರಿಂದ ಮಹಾರಾಜನಿಗೂ ಸಂತೋಷವಾಗುತ್ತಿತ್ತು. ಫಲವಾಗಲಿಲ್ಲ ಅಷ್ಟೆ. ವೈದ್ಯರ ಔಷಧಿಯನ್ನು ರೋಗಿ ತುಂಬ ಮೆಚ್ಚಿದರೂ ರೋಗ ಗುಣವಾಗಲಿಲ್ಲ ಅನ್ನುವ ಹಾಗೆ.'

'ಏನೇನು ಮಾಡಿದೆ?'

ಮಾದ್ರಿ ನಾಚುತ್ತಾ ನಾಚುತ್ತಾ ವರ್ಣಿಸತೊಡಗಿದಳು. ನಾನು ಕಲ್ಪಿಸಿಕೊಳ್ಳಲು ಕೂಡ ಆಗದ ವಿಧಾನಗಳು! ಆಮೇಲೆ ಅದನ್ನು ಕೇಳಿದ ಸಖಿ ಕೂಡ ಆಶ್ಚರ್ಯಪಟ್ಟಳು.

'ಮಾದ್ರಿ, ಇವೆಲ್ಲ ನಿಮಗೆ ಹೇಗೆ ಗೊತ್ತಾಯಿತು?'

'ನಮ್ಮ ದೇಶದಲ್ಲಿ ಹಿರಿಯ ಹೆಂಗಸರು ಕಿರಿಯರಿಗೆ ಹೇಳಿಕೊಡುತ್ತಾರೆ. ಯಾಕೆ, ನಿನ್ನ ತಾಯಿಯ ಮನೆಯಲ್ಲಿ ಯಾರೂ ಏನೂ ಕಲಿಸಲಿಲ್ಲವೆ ನಿನಗೆ?' ಸಹಜವಾಗಿ ಕೇಳಿದಳು.

ನನ್ನ ಅಜ್ಞಾನಕ್ಕೆ ನಾನೇ ತಡೆದು ನಿಟ್ಟುಸಿರಿಟ್ಟೆ. ಮಾದ್ರಿಯ ಮೇಲೆ ಮತ್ಸರ ಹುಟ್ಟಿತು. ಒಂದಲ್ಲೊಂದು ದಿನ ಇವಳು ಗಂಡನ ರೋಗ ಗುಣಪಡಿಸಿ ಅದರ ಫಲ ತಾನು ದೊರಕಿಸಿಕೊಂಡು ಬಿಟ್ಟರೆ! ನನಗಿಂತ ಮೊದಲು ಬಸುರಾಗಿ ಗಂಡು ಹೆತ್ತು ನನ್ನ ಪಟ್ಟಮಹಿಷಿಯ ಪದ ಸುಲಭವಾಗಿ ಹಾರಿಸಿಕೊಂಡರೆ! ಉಪಾಯದಿಂದ ಅವಳನ್ನು ಬಿಡಿಸಿ ಬಿಡಿಸಿ ಕೇಳಿದೆ. ತನಗೆ ತಿಳಿದದ್ದನ್ನೆಲ್ಲ ವಿವರಿಸಿದಳು. ಆ ದಿನದಿಂದ ದಿನಾ ನಾವಿಬ್ಬರೂ ಏಕಾಂತದಲ್ಲಿ ಕೂರುವುದು. ಅವಳು ಗುರುವಾಗಿ ಮಾತಿಗೆ ತೊಡಗುವುದು. ನಾನು ಅದನ್ನೆಲ್ಲ ಕಲ್ಪಿಸಿಕೊಂಡು ಗ್ರಹಿಸುವುದು. ಹಂತ

ಗಂಡನ ಜೊತೆಗಿರುವ ಯಾವ ಹೆಂಗಸಿಗೆ ತಾನೇ ಹಿಂಸೆ ಇರುವುದಿಲ್ಲ!
ಆದರೆ ಮಾದ್ರಿಯಿಂದ ಕಲೆಗಳನ್ನು ಕೇಳಿ ತಿಳಿದ ಮೇಲೆ ಕೂತಲ್ಲಿ ನಿಂತಲ್ಲಿ
ಉದ್ರಿಕ್ತಳಾಗಿ ಹುಚ್ಚು ಹಿಡಿದವಳಾದೆ. ಕೊನೆಕೊನೆಗೆ ಈ ಸುಂದರಕಾಯದ
ತರುಣ ಯುವರಾಜನ ಚಿತ್ರವೇ ಮನಸ್ಸಿನಿಂದ ಮರೆಯಾಗಿ, ಮದುವೆಗೆ
ಮುನ್ನ ರುಚಿಯು ಜಾಗ್ರತವಾಗುವ ಮೊದಲೇ ತಣಿಸಿ ತುಂಬಿಸಿದ್ದ ಆ
ಋಷಿಯ ನೆನಪಿನೊಡನೆ ಕಲೆಗಳನ್ನು ಪ್ರಯೋಗಿಸಿ, ಋಷಿಗೆ ಯಾವ
ಕಲೆಯ ಅಗತ್ಯವೂ ಇಲ್ಲ. ಅವನಾದರೂ ಇತ್ತ ಸುಳಿಯಬಾರದೆ, ಎಂಬ
ಬಯಕೆಯಿಂದ ಬೇಯುತ್ತಿದ್ದೆ.

ಆರು ತಿಂಗಳಾದ ಮೇಲೆ ದಿಗ್ವಿಜೇತ ಯುವರಾಜ ನಗರಕ್ಕೆ
ಹಿಂತಿರುಗಿದ. ಊರಿಗೆ ಊರೇ ಅಲಂಕೃತವಾಯಿತು. ಮನೆಗಳ
ಹೊರಭಾಗಕ್ಕೆಲ್ಲ ಕೆಮ್ಮಣ್ಣಿನ ಪಟ್ಟೆ ಪಟ್ಟೆ ಬಳಿದು, ಬೀದಿಗಳಿಗೆ ನೀರು
ಎರಚಿ ಧೂಳು ಅಡಗಿಸಿ, ಎಲ್ಲೆಲ್ಲೂ ಹಸುರು ಚಪ್ಪರ ತೋರಣ ಕಟ್ಟಿ,
ಆನೆ ಕುದುರೆಗಳನ್ನು ಅಲಂಕರಿಸಿ, ಮುದುಕ ಭೀಷ್ಮನೇ ಹೆಬ್ಬಾಗಿಲಿಗೆ
ಹೋಗಿ ನಿಂತು, ಬೇಡವೆಂದರೂ ಸಂಭ್ರಮದಲ್ಲಿ ನನ್ನ ಮನಸ್ಸೂ
ಪಾಲುಗೊಳ್ಳುತ್ತಿತ್ತು. ಸಜ್ಜೆಯಲ್ಲಿ ನಿಂತು ನಾನೂ ನೋಡಿದೆ. ಮಾದ್ರಿಯೂ
ನೋಡಿದಳು. ಅವನು ಗೆದ್ದ ವಸ್ತುಗಳೆಲ್ಲ ಗಾಡಿಗಾಡಿಗಳ ಮೇಲೆ ಮೊದಲೇ
ಮೆರವಣಿಗೆಯಲ್ಲಿ ಬಂದುವು. ಗೆದ್ದ ಸುಂದರಿಯರೆಲ್ಲ ರಥಗಳಲ್ಲಿ. ಕೊನೆಗೆ
ಅವನು. ಯುವರಾಜ ಸೊರಗಿದ್ದ. ಚಿಂತೆಯಲ್ಲಿರುವಂತೆ ಕಾಣುತ್ತಿದ್ದ.

ಊರಿಗೆ ಬಂದ ಎರಡನೆಯ ದಿನ ನನ್ನರಮನೆಗೆ ಬಂದ. ಹಿಂದಿನ
ದಿನವೆಲ್ಲ ನನಗೆ ಕನಸುಗಳು. ಹೊಸ ಔಷಧಿಯನ್ನು ಸಿದ್ಧಪಡಿಸಿಕೊಂಡ
ವೈದ್ಯನ ಕನಸು. ಹತ್ತಿರ ಬಂದ. ಎದುರಿಗೆ ಕುಳಿತ. ಮುಖದಲ್ಲಿ
ಅಹಂಕಾರವಿದೆ. ಅಂದು ಒಡೆದ ಸುಳ್ಳಿನ ಪೊರೆ ಮತ್ತೆ ಬೆಳೆದಿದೆ. ನನಗೆ
ಅಸಹ್ಯವೆನಿಸಿತು. ನನ್ನ ದೃಷ್ಟಿಯನ್ನು ಸಂಧಿಸದೆ ಉಪೇಕ್ಷಿಸುವವನಂತೆ
ಎತ್ತಲೋ ನೋಡುತ್ತಾ ಕುಳಿತ. ನಾನು ಕೂಡ ಸುಮ್ಮನಿದ್ದೆ. ಕೊನೆಗೆ
ಅವನೇ ಎಂದ: "ಕುಂತೀ, ಆರು ಮಾಸಗಳಾದವು ನಾನು ದಿಗ್ವಿಜಯಕ್ಕೆ
ಹೊರಟು."

ನನಗೆ ಇನ್ನಷ್ಟು ಅಸಹ್ಯವಾಯಿತು. ಸುಮ್ಮನೆ ಇದ್ದೆ. ಸ್ವಲ್ಪ ಹೊತ್ತಿನ ಮೇಲೆ ಅವನೇ ಮತ್ತೆ ಅಂದ: 'ಕೇಳಿತೇ ಕುಂತಿ, ಆರು ಮಾಸಗಳು ದಿಗ್ವಿಜಯ ಮಾಡಿದೆ.'

'ಆರು ಸಲ ನನಗೆ ಋತುಸ್ರಾವವಾಯಿತು', ನನ್ನ ಬಾಯಿಂದ ತನಗೇ ತಾನೇ ಬಂತು.

ಅವನು ಕತ್ತು ತಿರುಗಿಸಿ ನನ್ನ ಕಡೆಗೆ ನೋಡಿದ. ಬಲಗೈ ಎತ್ತಿ ಛಟಾರನೆ ನನ್ನ ಕೆನ್ನೆಗೆ ಹೊಡೆದ, ಬಿಸಿಯಾಗಿ ಊದುವಂತೆ. ಬಲಿತ ಗಟ್ಟಿ ಕ್ಷತ್ರಿಯ ಬೆರಳುಗಳು. ನಾನು ಮಾತನಾಡಲಿಲ್ಲ. ಅಳಲಿಲ್ಲ. ಪ್ರತಿ ಆಡಲಿಲ್ಲ. ನನ್ನ ಕಣ್ಣಿನಲ್ಲಿ ನೀರಾದರೂ ಜಿನುಗಿತೋ ಇಲ್ಲವೋ.

ನೀರಿನ ಬಿಂಬದಲ್ಲಿ ಕುಂತಿ ನೋಡಿಕೊಂಡಳು. ಒಂದು ಸಂವತ್ಸರಚಕ್ರ, ಅರವತ್ತು ವರ್ಷ ಕಳೆದಿದೆ. ಯಾರಿಗೆ ನೆನಪಿದ್ದೀತು! ಆದರೆ ಇಷ್ಟು ಮಾತ್ರ ಸ್ಪಷ್ಟವಾಗಿ ಜ್ಞಾಪಕವಿದೆ: ನನ್ನ ದೃಷ್ಟಿ ಚಲಿಸದೆ ಅವನ ಕೋಪದ ನೋಟವನ್ನು ಎದುರಿಸಿದೆ. ಅವನ ಕೋಪಕ್ಕೆ ತುಪ್ಪ ಹುಯ್ದಂತಾಯಿತು. ಆ ನೋಟ ಹೊಗೆಯಾಡಿತು. ಹಣೆಯ ಮೇಲೆ ಬೆವರ ಹನಿಗಳು. ಕುತ್ತಿಗೆಯ ಸುತ್ತೆಲ್ಲ ಒದ್ದೆ ಒದ್ದೆ. ನನಗೇ ನಾಚಿಕೆ ಎನಿಸಿತು. ಮಹಾರಾಜಾ, ಶಖೆಯಾಗುತ್ತಿದೆ ಎಂದು ಮೇಲೆ ಎದ್ದು ನನ್ನ ಸೆರಗಿನಿಂದ ಅವನ ಕುತ್ತಿಗೆ ಎದೆ ಬೆನ್ನುಗಳನ್ನು ಸವರಿ ಒರೆಸಿದೆ. ಅವನಿಗೆ ಬಿಕ್ಕಿ ಅಳು ಬಂದಂತಾಯಿತು. ಕುಂತೀ, ಎಂದು ಕೈ ಹಿಡಿದ. ಹತ್ತಿರ ಕೂತ. ನನ್ನ ಎದೆಗೆ ಮುಖವಿಟ್ಟ, ಮಗುವಿನಂತೆ. ಮಾತನಾಡಲಿಲ್ಲ. ನನಗೂ ನನ್ನ ಮೇಲೆಯೇ ಕೋಪ ಬಂತು. ತಬ್ಬಿ ಹಿಡಿದುಕೊಂಡೆ. ಆ ಕ್ಷಣದಲ್ಲಿ ಅನ್ನಿಸಿತು: ಈ ಧಢಿಗೆ ಇರುವ ಅಗಲವಾದ ಎದೆಕಟ್ಟು, ಭುಜ, ದೊಡ್ಡ ಮೈ. ಇವನನ್ನು ತಬ್ಬಿಕೊಳ್ಳುವ ಹರಹು ಮಾದ್ರಿಗಿಲ್ಲ. ಬೇರೆ ಯಾವ ಹೆಂಗಸಿಗೂ ಇಲ್ಲ. ತಬ್ಬಿ ಮುಚ್ಚಿಕೊಂಡೆ ಬೆಚ್ಚಗೆ. ನನಗೂ ಬೆಚ್ಚಗಾಯಿತು. ಒತ್ತುವರೆದ ನನ್ನ ಮೊಲೆಗಳ ಮಧ್ಯಕ್ಕೆ ಗಟ್ಟಿಯಾಗಿ ಮೂಕ ಉಸಿರು ಬಿಡುತ್ತಾ ಬಿಸಿಬಿಸಿ ಕಣ್ಣೀರಿನಿಂದ ನೆನೆಸಿ ಅತ್ತುಬಿಟ್ಟ. ನನಗೂ ಅಳು ಬಂತು. ದಿಗ್ವಿಜಯದ ಬಾಣಗಳು ಚುಚ್ಚಿ ಎದೆ ಭುಜಗಳಲ್ಲೆಲ್ಲ ಗಾಯದ

ಕಲೆಗಳಾಗಿದ್ದವು. ಇನ್ನೂ ಪೂರ ಮಾಯದ ಕೆಲವು ಊದುಗಾಯಗಳು
ಸಂಜೆಯ ತನಕ ಹೀಗೆಯೇ ಮೌನದಲ್ಲಿ ಇದ್ದು ಹೋದವನು
ಮತ್ತೆ ಒಂದು ಮಾಸ ಇತ್ತ ತಿರುಗಲಿಲ್ಲ. ನಾನು ಹೇಳಿ ಕಳಿಸಿದೆ. ಬರಲಿಲ್ಲ
ಮಾದ್ರಿಯ ಹತ್ತಿರವೂ ಹೋಗಿಲ್ಲವಂತೆ. ದಿಗ್ವಿಜಯ ಮುಗಿಸಿ ಬಂದ
ಮೇಲೆ ಅವಳನ್ನು ನೋಡಿಯೇ ಇಲ್ಲವಂತೆ. ಗಂಗಾನದಿಯ ಆಚೆ
ಪರ್ಣಕುಟಿ ಕಟ್ಟಿಸಿಕೊಂಡು ಇರುತ್ತಿದ್ದನಂತೆ. ಕುಂತಿ ತಲೆ ಎತ್ತಿ ನೋಡಿದಳು
ನದಿಯ ಆಚೆ, ಪ್ರವಾಹಕಾಲದಲ್ಲಿ ಕೊಚ್ಚಿ ಮಟ್ಟಸವಾದ ಜಾಗ ಈಗಲೂ
ಗುರುತು ಸಿಕ್ಕುತ್ತದೆ. ಅರವತ್ತು ಸಂವತ್ಸರಗಳ ಒಂದು ಚಕ್ರ ಕಳೆದರೂ
ದಿಗ್ವಿಜಯ ಮಾಡಿದ ಯುವರಾಜ ಇಬ್ಬರು ಹೆಂಡಿರನ್ನು, ಹತ್ತಾರು
ಸುಂದರಿ ದಾಸಿಯರನ್ನು, ಗಂಧರ್ವಮೋಹಿನಿಯರನ್ನು ಬಿಟ್ಟು
ಪರ್ಣಕುಟಿಯಲ್ಲಿ ವಾಸಿಸುತ್ತಿದ್ದಾನೆ. ವೇದ ಪಾಠ. ಪುರೋಹಿತರು. ಇಲ್ಲಿ
ನನ್ನ ಋತುಚಕ್ರ ತಿರುಗುತ್ತಿದೆ. ನನಗೆ ಅವನ ಮೇಲಿನ ಸಿಟ್ಟು
ತಿರಸ್ಕಾರಗಳೆಲ್ಲ ಹೋಗಿವೆ. ಅವನು ಈಗ ನನಗೆ ಮೋಸಮಾಡುತ್ತಿಲ್ಲ
ತನಗೂ ಮಾಡಿಕೊಳ್ಳುತ್ತಿಲ್ಲ. ನಾನು ಅವನ ಹೆಂಡತಿಯಾಗಿದ್ದೇ
ನಿಜವಾಗಿಯೂ. ಈಗ ಏಕೆ ಇದ್ದಕ್ಕಿದ್ದಂತೆ ಪರ್ಣಕುಟಿ ಕಟ್ಟಿಕೊಂಡು
ಕುಳಿತ? ಇದ್ದಕ್ಕಿದ್ದಂತೆಯೇ ದಿಗ್ವಿಜಯಕ್ಕೆ ಹೋದ, ಇದ್ದಕ್ಕಿದ್ದಂತೆಯೇ
ಆತ್ಮವಿಜಯಕ್ಕೆ ಕುಳಿತ. ಎಲ್ಲೆಲ್ಲಿ ನೋಡಿದರೂ ಈ ಕ್ಷತ್ರಿಯರೇ ಹೀಗೆ
ಅತಿ. ದಿಕ್ಕುಗಾಣದ ಅತಿ.

ಒಂದು ದಿನ, ತಾನೇ ನನ್ನಲ್ಲಿ ಬಂದ. ಬಿಸಿಲು ಬಾಗಿ ನುಸುಳು
ಸಂಜೆ. ಒಳಗೆ ಬಂದ. ಹತ್ತಿರ ಬಂದ. ಕುಳಿತ. ನನ್ನ ಅಗಲವಾದ ಕೈಯೊಳಗೆ
ಕೈ ಇಟ್ಟ. ಮುಖದಲ್ಲಿ ಅಹಂಕಾರವಿಲ್ಲ. ನನಗೆ ಅಸಹ್ಯತರುವ ಸುಳ್ಳಿ
ಪೊರೆ ಮತ್ತೆ ಬೆಳೆದಿಲ್ಲ. ನೋಟದಲ್ಲಿ ನನ್ನನ್ನು ಉಪೇಕ್ಷಿಸಿ ತಪ್ಪಿಸಿಕೊಳ್ಳು
ಪ್ರಯತ್ನವಿಲ್ಲ. ನೇರವಾಗಿ ಮುಖ ನೋಡಿ ದೃಷ್ಟಿಯನ್ನು ಸಂಧಿಸಿ ಶಾಂ
ದೃಢಸ್ವರದಲ್ಲಿ ಹೇಳಿದ: 'ಕುಂತೀ, ರಾಜ್ಯ ಬೇಡ. ರಾಜಪದವಿ ಬೇಡ
ಹಿಮಾಲಯಕ್ಕೆ ಹೋಗಿ ತಪಸ್ಸಿನಲ್ಲಿ ನನ್ನ ಜೀವನದ ಉಳಿದ ಭಾ
ಕಳೆಯುವ ನಿಶ್ಚಯ ಮಾಡಿದೀನಿ. ನನಗೇನೂ ಹೆಚ್ಚು ವಯಸ್ಸಾಗಿಲ್ಲ

ಇಪ್ಪತ್ತನಾಲ್ಕು. ನಿನ್ನಷ್ಟೇ. ಆದರೆ ಇನ್ನು ಹೆಚ್ಚು ದಿನ ಬದುಕುವುದಿಲ್ಲ ಅಂತ ಮನಸ್ಸು ಹೇಳುತ್ತಿದೆ. ನಿನ್ನ ಅನುಮತಿ ಬೇಕು. ಅದಿಲ್ಲದೆ ಹೊರಡುವುದು ಧರ್ಮವಿರುದ್ಧ.'

ನನ್ನ ಹರವು, ಎತ್ತರ, ಗಾತ್ರಗಳೆಲ್ಲ ಕುಸಿದು ಭೂಗತವಾದಂತೆನಿಸಿತು. ಗಂಡನ ಆತ್ಮಸಮ್ಮಾನವನ್ನು ಈ ಮಟ್ಟಿಗೆ ಹುಡಿಗೊಳಿಸಬಾರದಾಗಿತ್ತು ನಾನು ಎನ್ನಿಸಿತು. ಅವನ ಎರಡು ಕೈಗಳನ್ನೂ ಜೋಡಿಸಿ ಹಿಡಿದು, 'ಕ್ಷಮೆ ಇರಲಿ ನಿನ್ನ ಈ ಹೆಂಡತಿಯ ಮೇಲೆ' ಎಂದೆ.

'ನಿನ್ನ ತಪ್ಪೇನೂ ಇಲ್ಲ. ನಾನೆಲ್ಲ ಆಲೋಚಿಸಿದ್ದೇನೆ' ಎಂದ ಆತ್ಮಪರೀಕ್ಷಣದ ಒಳಸರಿದ ಧ್ವನಿಯಲ್ಲಿ.

'ತಪಸ್ಸಿಗೆ ಹೋಗದಿದ್ದರೆ ಏನು?'

'ಇಲ್ಲಿದ್ದು ತಾನೆ ಮಾಡುವುದೇನು, ಒಂದೊಂದು ಮಾಸ ಮುಂದೆ ಸುತ್ತುವಾಗಲೂ ಆಗುವ ಋತುಸ್ರಾವವನ್ನು ತಡೆದು ಬೆಳೆಸಲಾಗದ ಮೇಲೆ?'

ನನಗೂ ಉತ್ತರ ಹೊಳೆಯಲಿಲ್ಲ. ಪಾಪದ ಭಯ ನನ್ನನ್ನೂ ಲೇಪಿಸಿತು. ಸುಮ್ಮನೆ ಕುಳಿತೆ.

'ಸ್ವಯಂವರದಲ್ಲಿ ಮೆಚ್ಚಿ ಕೈ ಹಿಡಿದು ಬಂದವಳು. ಮೊದಲ ಹೆಂಡತಿಯೇ ಧರ್ಮಪತ್ನಿ. ಅಲ್ಲದೆ ಬೇಕಾದಷ್ಟು ಉಡುಗೊರೆ ಹೇರಿಸಿ ತಂದವಳು, ನಿನ್ನ ಅನುಮತಿ ಮುಖ್ಯ.'

ನನಗೆ ಸಂತೋಷವಾಯಿತು. ಮತ್ಸರದ ಸಂತೋಷ.

ಯುವರಾಜ ಹೊರಟುಹೋದ. ನೇರವಾಗಿ ನದಿ ದಾಟಿ, ಇದೇ ನದಿ ದಾಟಿ ಪರ್ಣಕುಟಿಗೆ, ಅಲ್ಲಿ ಎದುರಿನ ಮಟ್ಟಸವಾದ ಜಾಗದ ಮೇಲೆ ಕಟ್ಟಿಸಿದ್ದ ಪರ್ಣಕುಟಿಗೆ ಹೊರಟು ಹೋದ.

ಈಗ ನನಗೆ ಅವನಿಲ್ಲದೆ ಇರುವುದು ಅಸಾಧ್ಯವೆನಿಸಿತು. ಒಂದು ಮಾಸದ ಹಿಂದೆ ಅವನು ಕಟ್ಟಿಕೊಂಡಿದ್ದ ಮೌನವು ಒಡೆದು ನಾವಿಬ್ಬರೂ ಒಂದಾದ ಮೇಲೆ ಅವನನ್ನು ಬಿಟ್ಟಿರುವುದು ಅಸಾಧ್ಯವೆನಿಸಿತು. ತಪಸ್ಸಿಗೆ

ಹೋಗುವ ಗಂಡನನ್ನು ಅನುಸರಿಸುವುದು. ಅನುಸರಿಸದೆ ಇಲ್ಲಿದ್ದು ಏನು ಮಾಡಬೇಕು? ಅವನಿಗೆ ತಟ್ಟುವ ಋತುಸ್ರಾವದ ಪಾಪದ ಕಿಂಚಿದಂಶವಾದರೂ ನನಗೆ ತಟ್ಟದೆ ಇದ್ದೀತೆ? ಅವನಂತೂ ಅದನ್ನು ತಪಸ್ಸಿನಿಂದ ಕಳೆದುಕೊಳ್ಳುವ ನಿಶ್ಚಯಮಾಡಿದ್ದಾನೆ. ಇಲ್ಲಿದ್ದು ತಾನೆ ಮಾಡುವುದೇನು ಒಂದೊಂದು ಮಾಸ ಮುಂದೆ ಸುತ್ತುವಾಗಲೂ ಆಗುವ ಸ್ರಾವವನ್ನು ತಡೆದು ಬೆಳೆಸಲಾಗದ ಮೇಲೆ? ನಾನೂ ಸ್ವಲ್ಪ ತಪಸ್ಸು ಗಿಪಸ್ಸು ಮಾಡಿ, ತಪಸ್ಸೆಂದೇನೆಂದು ನನಗೆ ಪೂರ್ತಿ ಗೊತ್ತಿಲ್ಲ. ಆದರೆ ಪಾಪದ ಭಯ ಮಾತ್ರ ಮನಸ್ಸನ್ನು ಹಿಡಿದುಬಿಟ್ಟಿತ್ತು. ನನ್ನ ಊರಿಗೆ ಹೊರಟು ಹೋಗುವ ಅಥವಾ ಇಲ್ಲೇ ಇರುವ ವಿಚಾರಗಳಿಗಿಂತ ಅವನೊಡನೆ ಹೋಗುವ ಚಿತ್ರವೇ ಕಣ್ಣ ಮುಂದೆ ಸುಳಿಸುಳಿದು ನಿಲ್ಲುತ್ತಿತ್ತು. ಮರುದಿನ ಅವನು ಬಂದಾಗ ನನ್ನ ಮನಸ್ಸನ್ನು ಹೇಳಿದೆ. ಕುಂತೀ, ನೀನು ರಾಜಕುಮಾರಿ. ಅದು ಕಷ್ಟದ ಜೀವನ ಎಂದೆಲ್ಲ ಹೇಳಿದ: ಸಾಧಾರಣವಾಗಿ ಹೆಂಡತಿಯರಿಗೆ ಗಂಡಂದಿರು ಹೇಳುವ ಮಾತುಗಳು. ಆದರೆ ನನ್ನ ನಿಶ್ಚಯದಿಂದ ಅವನ ಮುಖದ ಮೇಲೆ ಸಮಾಧಾನ ಕಂಡಿತ್ತು. ನೀನು ಬರಬೇಡ ಎಂಬುದು ಉಪಚಾರವೋ ಅಥವಾ ಹಾಗೆ ಹೇಳದೆ ತಕ್ಷಣ ಒಪ್ಪಿಕೊಂಡರೆ ತನ್ನ ಗಂಡಸುತನಕ್ಕೆ ಕಡಿಮೆ ಎಂದೋ ಅವನಲ್ಲಿ ಹುಟ್ಟಿರುವಂತೆ ತೋರಿತು. ನನಗೆ ಸಿಟ್ಟು ಬಂತು.

ಮಾದ್ರಿಯೂ ಹೊರಟಳು. ನಿನಗ್ಯಾಕೆ ತಪೋಜೀವಿಗಳ ಕಷ್ಟ, ನೀನು ಸುಕುಮಾರಿ ಎಂದು ನಾನೇ ಅವಳ ಮನಸ್ಸನ್ನು ತಿರುಗಿಸುವ ಪ್ರಯತ್ನ ಮಾಡಿದೆ. ಇಲ್ಲಿದ್ದು ನಾನು ಮಾಡುವುದೇನು, ಇರುವುದಾದರೂ ಹೇಗೆ, ಎಂದಳು. ಕೊನೆಗೆ ಬಾಯಿ ತೆರೆದೇ ಅಂದುಬಿಟ್ಟಳು. ಅಕ್ಕ, ಗಾಡಿಗಟ್ಟಳೆ ಉಡುಗೊರೆ ಹೊರೆಸಿ ತಂದ ನೀನೇ ಹೊರಟಿದೀಯ. ಗಾಡಿಗಟ್ಟಳೆ ಕನ್ಯಾಶುಲ್ಕ ಕೊಟ್ಟು ತಂದ ನಾನು ಇಲ್ಲಿ ಉಳಿದರೆ ಜನ ಏನಂದಾರು? ನನಗೆ ಅವಳ ಮೇಲೆ ಕನಿಕರವೆನಿಸಿತು. ಬಲಗೈಯಿಂದ ಬಳಸಿ ತಬ್ಬಿಕೊಂಡೆ. ಕತ್ತು ಬಗ್ಗಿಸಿ ಕಣ್ಣೀರು ಹಾಕಿದಳು. ಮಾಟವಾದ ಮೈಕಟ್ಟು, ಸೋತುಗೆಲ್ಲುವ ಮುಖದ ಮೃದು ಲಕ್ಷಣ. ಕಣ್ಣಿನಲ್ಲಿ ಜಿನುಗಿ ರೆಪ್ಪೆಯ ಕೂದಲಿನ ಸಂದಿಗಳಲ್ಲೆಲ್ಲ ತುಂತುರುನಿಂತ ಕಪ್ಪು ಹೊಳಪು ಅವಳನ್ನು ಇನ್ನೂ

ಆಕರ್ಷಕವಾಗಿ ಮಾಡಿತ್ತು. ಬಿಗಿಯಾಗಿ ತಬ್ಬಿ ಹಿಡಿದುಕೊಂಡೆ, ಬೆಚ್ಚಗೆ. 'ಅಕ್ಕಾ, ಯುವರಾಜ ಪೂರ್ತಿ ನಿನ್ನ ವಶದಲ್ಲಿದ್ದಾನೆ. ನಿನ್ನನ್ನು ಕೇಳದೆ ಏನೂ ಮಾಡುವುದಿಲ್ಲ ಅನ್ನಿಸುತ್ತೆ. ನನ್ನನ್ನೂ ಕರಕಂಡು ಹೋಗಲು. ಅಲ್ಲ, ನೀನು ಕರಕಂಡು ಹೋಗು.'

'ಅದು ನಿನಗೆ ಹೇಗೆ ಗೊತ್ತು?'

'ಅಷ್ಟು ಗೊತ್ತಾಗುವುದಿಲ್ಲವೆ ನನಗೆ?'

ತಪಸ್ಸಿಗೆ ಹೊರಟಿದ್ದರಿಂದ ತುಂಬ ಚಿಂತೆಯಾದದ್ದು ಭೀಷ್ಮನಿಗೆ. ದಿಗ್ವಿಜಯ ಮಾಡಿದಂತಹ ಮುಂದೆ ಇನ್ನೂ ವಿಸ್ತೃತ ದಿಗ್ವಿಜಯಯಾಗಾದಿ ಮಾಡಿ ಕುರುಕುಲದ ಕೀರ್ತಿ ಮೆರೆಸಬಲ್ಲಂತಹ ರಾಜ ಹೀಗೆ ರಾಜ್ಯ ಬಿಟ್ಟು ಹೊರಟು ನಿಂತಿರುವಾಗ ರಾಜ್ಯದ ಭಾರ ಹೊತ್ತ ಮುದುಕ ದೊಡ್ಡಪ್ಪನಿಗೆ ಚಿಂತೆಯಾಗುವುದು ಸಹಜವೇ. ಆದರೆ ಮಗ ಗಟ್ಟಿಯಾಗಿ ಪಟ್ಟು ಹಿಡಿದಿದ್ದಾನೆ. ದೊಡ್ಡಪ್ಪ ಮಗನಲ್ಲಿ ಚರ್ಚೆ ನಡೆಯಿತು. 'ನಾನೇನೂ ಆಜೀವಪರ್ಯಂತ ಹೋಗುತ್ತಿಲ್ಲ. ಅಲ್ಲಿ ಸಿದ್ಧರಿದ್ದಾರೆ, ಸಾಧುಗಳಿದ್ದಾರೆ. ವಿಶೇಷ ಮೂಲಿಕೆಗಳ ಆಗರ ಅದು. ಮಹಾಮಹಾ ವೈದ್ಯರಹಸ್ಯಗಳನ್ನು ಬಲ್ಲ ಯೋಗಿಗಳಿದ್ದಾರೆ. ಮಕ್ಕಳನ್ನು ಪಡೆದೇ ಹಿಂತಿರುಗುತ್ತೇನೆ ನಾನು. ಅಲ್ಲಿಯವರೆಗೆ ರಾಜ್ಯದ ಹೊರೆ ಹೊತ್ತಿರು', ಮಗ ವಾದಿಸಿದ. ದೊಡ್ಡಪ್ಪ ಒಪ್ಪಲೇಬೇಕಾಯಿತು. ಅಣ್ಣ ಧೃತರಾಷ್ಟ್ರ ಕೂಡ. ಇದೇ ದುರ್ಯೋಧನನ ಅಪ್ಪ ಧೃತರಾಷ್ಟ್ರ, ಆಗ ತಮ್ಮನ ಹತ್ತಿರ ಬಂದು ತಡಕಿತಡಕಿ ಕೈಹಿಡಿದು ನನ್ನೆದುರಿಗೇ ಕುರುಡು ಕಣ್ಣುಗಳಲ್ಲಿ ನೀರು ಸುರಿಸುತ್ತಾ ಹೇಳಿದ: 'ನೀನು ಹೋದರೆ ರಾಜ್ಯದ ಗತಿ ಏನು? ನನ್ನ ಗತಿ ಏನು? ಕುರುಕುಲದ ಭಾರವೆಲ್ಲ ನಿನ್ನ ಮೇಲಿದೆ. ಹೊರಟೇ ಇದ್ದೀಯಾದ್ದರಿಂದ ನಾನು ಅಡ್ಡನಿಲ್ಲುವುದಿಲ್ಲ. ಬೇಗ ಹಿಂತಿರುಗಿಬಿಡು.' ತಮ್ಮನಿಗಿಂತ ಈ ಅಣ್ಣ ಹತ್ತು ಹದಿನೈದು ದಿನಕ್ಕೆ ಮಾತ್ರ ದೊಡ್ಡವನಂತೆ.

ಅತ್ತೆಯರಿಗೂ ಅಜ್ಜಿಗೂ ನನಗೂ ಹೆಚ್ಚು ಸಂಪರ್ಕವೇ ಇಲ್ಲ. ಅಜ್ಜಿ ಸತ್ಯವತಿ ತನ್ನದೇ ಮನೆಯಲ್ಲಿದ್ದರೂ ಯಾರೊಡನೆಯೂ ಸೇರುತ್ತಿಲ್ಲ. ತಾನಾಯಿತು ತನ್ನ ಧ್ಯಾನವಾಯಿತು. ಅದನ್ನು ಧ್ಯಾನವೆನ್ನಬೇಕೋ

ತಪಸ್ಸೆನ್ನಬೇಕೋ ತಿಳಿಯದು. ಮೊದಲು ಮೀನುಗಾರ ಹೆಣ್ಣಂತೆ. ಈಗ ನಿಜವಾದ ಕ್ಷತ್ರಿಯ ವಿಧವೆಗಿಂತ ಹೆಚ್ಚಾಗಿ ಪರಮಾರ್ಥದೆಡೆಗೆ ತಿರುಗಿದ್ದಾಳೆ. ನಮ್ಮತ್ತೆ ಅಂಬಾಲಿಕೆ, ಧೃತರಾಷ್ಟ್ರನ ತಾಯಿ ಅಂಬಿಕೆಯರೂ ಅಷ್ಟೆ. ತಮ್ಮ ಅತ್ತೆಯದೇ ಮಾರ್ಗ. ಅವರದೇ ಸಾನ್ನಿಧ್ಯ, ಸೇವೆಯಲ್ಲಿರುತ್ತಾರೆ. ಗೃಹಕೃತ್ಯದಲ್ಲಿ ಮನಸ್ಸಿಲ್ಲ. ಸೊಸೆಯರನ್ನು ಕೂಡ ಹೆಚ್ಚು ಮಾತನಾಡಿಸುವುದಿಲ್ಲ. ಸದಾ ನಿವೃತ್ತರು. ಮಗ ತಪಸ್ಸಿಗೆ ಹೊರಟದ್ದು ಕೇಳಿ ಯಾರೂ ಖಿನ್ನರಾಗಲಿಲ್ಲ. ಆದರೆ ಮುಂದೆ ರಾಜ್ಯಕ್ಕೆ ದಿಕ್ಕಿಲ್ಲವೆಂದು ವ್ಯಥೆಪಟ್ಟರು. ಜೊತೆಯಲ್ಲಿ ಹೆಂಡತಿಯರೂ ಹೋಗುತ್ತಾರೆ. ಅಲ್ಲಿ ವೈದ್ಯರು, ವೈದ್ಯಮೂಲಿಕೆಗಳಿವೆ ಎಂದು ಕೇಳಿ ಸಮಾಧಾನವನ್ನೂ ಪಟ್ಟರು.

ನಾವು ಹೊರಟು ನಿಂತಾಗ ಪುರಜನರಿಗೆಲ್ಲ ಶೋಕ. ಇನ್ನೂ ಇಪ್ಪತ್ತನಾಲ್ಕು ವರ್ಷದ, ದೃಢಕಾಯದ ತರುಣ ರಾಜ. ದಿಗ್ವಿಜಯ ಮಾಡಿದವನು. ತಮ್ಮೂರಿನ ಹೆಮ್ಮೆ ಹೆಚ್ಚಿಸಿದವನು. ರಾಜನ ಶೌರ್ಯವನ್ನು ತಮ್ಮದೇ ಎಂದು ಬಗೆದು ಎಲ್ಲರೂ ಉಬ್ಬಿ ಕೊಚ್ಚಿಕೊಳ್ಳುತ್ತಿದ್ದರು. ಇನ್ನು ಮುಂದೆ ಬೇರೆ ಯಾರಾದರೂ ಬಂದು ತಮ್ಮ ಊರನ್ನು ಗೆದ್ದರೆ ತಮ್ಮ ಹೆಮ್ಮೆ ಹಾಳಾಗುತ್ತದಲ್ಲ. ಬೇಗ ಹಿಂತಿರುಗುವಂತೆ ಹರಸಿ ಎಲ್ಲರೂ ನದಿ ದಾಟುವ ತನಕ ಬಂದು ಕಳಿಸಿಕೊಟ್ಟರು. ಬೇಗ ಹಿಂತಿರುಗಿ ಮತ್ತೆ ವಿಶಾಲ ದಿಗ್ವಿಜಯ ಮಾಡುವಂತೆ ಕೇಳಿಕೊಂಡರು.

ಹಿಮಾಲಯಕ್ಕೆ ಹೋದ ಮೇಲೆ ತಾನೆ ಅವನಿಗೂ ದಾಂಪತ್ಯಭಾವ ಹುಟ್ಟಿದ್ದು. ಕಾಮವನ್ನು ವರ್ಜಿಸಿ ಗಂಡಹೆಂಡಿರಿಬ್ಬರೂ ಅನ್ಯೋನ್ಯವಾಗಿ ಪರಮಾರ್ಥ ಸಾಧನೆಯಲ್ಲಿ ತೊಡಗುವ ಅವಸ್ಥೆ ಇದು ಎಂದು ಇಬ್ಬರೂ ಭಾವಿಸಿದ್ದೆವು. ನಾನು ಅವನು ಒಂದೇ ಪರ್ಣಕುಟಿಯಲ್ಲಿ ಮರದ ಹಲಗೆಗಳನ್ನು ಕೂಡಿಸಿ ಮೇಲೆ ಹುಲ್ಲುಹಾಕಿ ಜೊಂಡಿನ ಮಂದಲಿಗೆ ಹಾಸಿ ಕಂಬಳಿಯಿಂದ ಮಾಡಿದ ಒಂದೇ ಹಾಸಿಗೆಯ ಮೇಲೆ ಮಲಗುತ್ತಿದ್ದೆವು. ಸದಾ ಮುಂದಿನ ಜನ್ಮದ ಕನಸು. ಮಾದ್ರಿ ಹಿಂಬದಿಯ ಪ್ರತ್ಯೇಕ ಗುಡಿಸಿಲಿನ ಒಂಟಿ ಹಾಸಿಗೆಯಲ್ಲಿ. ಗಂಡನ ಸುಖ ಇಬ್ಬರಲ್ಲಿ

ಯಾರಿಗೂ ಇಲ್ಲದಿದ್ದರೂ ಸಾನ್ನಿಧ್ಯ ಮಾತ್ರ ಸ್ವಯಂವರದಲ್ಲಿ ಕೈ ಹಿಡಿದ ಪಟ್ಟ ಮಹಿಷಿಗೆ. ಗಂಡನ ವೀರ್ಯಹೀನತೆಯು ನನ್ನ ಮನಸ್ಸಿನಿಂದ ಹೆಚ್ಚು ಕಡಿಮೆ ಮರೆಯಾಗಿತ್ತು. ಮಗುವಿನಂತೆ ವಶನಾಗಿ ಎಲ್ಲವನ್ನೂ ಒಪ್ಪಿಸಿಕೊಟ್ಟಿರುವ ಗಂಡನ ಈ ನ್ಯೂನತೆಯು ಅರಿವಿನಿಂದ ಮರೆಯಾಗದಿದ್ದರೆ ಹೇಗೆ? ಈ ನ್ಯೂನತೆಯಿಂದಲೇ ಅಲ್ಲವೆ ನಾವು ಇಲ್ಲಿಗೆ ಬಂದು ನಿಂತಿರುವುದು. ಅದು ಹೇಗೋ, ಸಂಪೂರ್ಣವಾಗಿ ಇಲ್ಲಿ ನಾನೇ ಯಜಮಾನಿ. ನಾನು ಹೇಳಿದಂತೆ ಅವನು. ಮಾದ್ರಿ ಕೂಡ ಇದನ್ನು ಗುರುತಿಸಿದ್ದಳು. ಎಂದೂ ಎದುರಾಡುತ್ತಿರಲಿಲ್ಲ. ಅಪ್ಪಣೆಯನ್ನು ಅಲ್ಲಗಳೆಯುತ್ತಿರಲಿಲ್ಲ. ನಾನು ಕೂಡ ಅವಳ ಮೇಲೆ ದರ್ಪ ಮಾಡುತ್ತಿರಲಿಲ್ಲ. ಒಂದು ಥರಕ್ಕೆ ಜೀವನ ಸುಖವಾಗಿತ್ತು. ಊರಿನಿಂದ ಭೀಷ್ಮ ಆಗಾಗ್ಗೆ ಕತ್ತೆಗಳ ಎರಡೂ ಕಡೆಗೆ ಜಗಿಯುವಂತೆ ಹೇರಿ ಹೇರಿ ಕಳಿಸುತ್ತಿದ್ದ ಅಕ್ಕಿ, ಗೋಧಿ, ಬೆಲ್ಲ, ಎಳ್ಳು, ತುಪ್ಪ, ಕಂಬಳಿ, ಸೀರೆ, ಧೋತ್ರ. ಅರಮನೆಯಷ್ಟಲ್ಲದಿದ್ದರೂ ಅಡಿಗೆ ಉಪಚಾರಗಳಿಗೆ ಆಳುಗಳು. ಹೋಮದ ಅಗ್ನಿ ನಂದದಂತೆ ಸದಾ ನೋಡಿಕೊಳ್ಳುವ ಮಂತ್ರಜ್ಞ ಪುರೋಹಿತ.

ಹಸ್ತಿನಾವತಿಯಿಂದ ಹೊರಟ ನಾಲ್ಕನೆಯ ದಿನ ಗಂಗಾದ್ವಾರ. ಗಂಡನ ಸಮಕ್ಕೇ ನಡೆದರೂ ನನಗೆ ಆಯಾಸವೆನಿಸಲಿಲ್ಲ. ಮಾದ್ರಿ ಬಳಲಿದಳು. ನೀನು ಕುದುರೆ ಹತ್ತಿ ಬಾ ಎಂದೆ. ನಾವಿಬ್ಬರೂ ನಡೆಯುವಾಗ ತಾನು ಕುದುರೆ ಏರಿದರೆ ಸೋತಂತೆ ಎನ್ನಿಸಿರಬೇಕು ಅವಳಿಗೆ, ನಾಚಿದಳು. 'ಕುಂತಿ ಹೇಳಿದ ಹಾಗೆ ಕೇಳು', ಮಹಾರಾಜ ಹೇಳಿದ. ಕಾಲಿನ ಉದ್ದ, ವೇಗಗಳು ಒಂದೇ ಆದರೆ ನಡಿಗೆಯ ಗತಿಯೂ ಒಂದೇ ಆಗಬೇಕಲ್ಲ. ನಾನು ಎಂದರೆ ಗಂಡನ ಸಮವೇ ನನ್ನ ಮೈಕಟ್ಟು. 'ಕುಂತೀ, ಅಪ್ಪನ ದೇಶದ ಹೆಸರಿನಿಂದ ಹೆಂಡತಿಯನ್ನು ಕರೆಯುವುದು ಆರ್ಯರಾಜರ ಪದ್ಧತಿ. ಇನ್ನು ಮೇಲೆ ನಿನ್ನ ಹುಟ್ಟುಹೆಸರಿನಿಂದಲೇ ಕರೀತೀನಿ, ಪೃಥಾ ಅಂತ. ನಿನ್ನ ಮೈಕಟ್ಟು ನೋಡಿದರೆ ನನಗೆ ಹೆಮ್ಮೆಯಾಗುತ್ತೆ', ನಡೆಯುವಾಗ ಕೈ ಹಿಡಿದು ಯುವರಾಜ ಎಂದ. ನನಗೆ ನಾಚಿಕೆಯಾಯಿತು. ಶರೀರವನ್ನು ತಗ್ಗಿಸಿಕೊಂಡು ಹೆಜ್ಜೆ ಹಾಕಿದೆ. ಗಂಗಾದ್ವಾರ ಹಾರಿದೆ ಎನ್ನುವಾಗಲೇ

ನೀಲ ಎತ್ತರದ ಸಾಲುಗಳು. ನೋಡಿ ಮೂಕಳಾದೆ. ಹುಟ್ಟಿದೂರಿನ, ಗಂಡನೂರಿನ ಆಚೆ ಈಚೆ ಇರುವ ಹಸಿರು ಕಾಡಲ್ಲ. ಆಕಾಶದ ನೀಲಿಯನ್ನು ಹೋಲುವ, ಆಕಾಶದ ನೀಲಿಯನ್ನು ಮುಟ್ಟಿ ಬೆರೆಯುವ ಏರು. 'ಇದೇಯಾ?' ನಾನು ಕೇಳಿದೆ.

'ಇದು ಆರಂಭ. ಇದನ್ನು ಹತ್ತಿ, ಆಚೆಗೆ ಇನ್ನೂ ಆಚೆ ಆಚೆಗೆ ಶಿಖರಶಿಖರದಾಚೆಗೆ ಹತ್ತು ಹದಿನೈದು ದಿನ ಏರಿ ಇಳಿದು ಏರಿ ದೇವಲೋಕ ಆರಂಭವಾಗುವ ಪರ್ವತದ ತಪ್ಪಲು' - ಪಾಂಡು ಎಂದ.

ನನ್ನ ಉತ್ಸಾಹ ಏರಿತು. ಹೊಸಲೋಕವನ್ನು ಹೊಕ್ಕು ಬದುಕುವ ಉತ್ಸಾಹ. ಗಟ್ಟಿಯಾಗಿ ಕಿರುಚುವ ಆಶೆ. ಅಪ್ಪನ ಮನೆಯ ಬಾಲ್ಯ. ಗಂಡನ ಮನೆಯ ಭಾರ ಎಲ್ಲದರಿಂದಲೂ ಮುಕ್ತವಾಗಿ ಬದುಕುವ ಹೊಸಜೀವನದ ಉತ್ಸಾಹ. ನಿಜವಾಗಿಯೂ ಸುಖದ ರಾಜ್ಯ ಇದು ಎಂಬ ಭಾವ ಮನಸ್ಸಿನಲ್ಲಿ ಹುಟ್ಟಿತು: ಏಕೆ, ಏನು ತಿಳಿಯದೆ, ಆಗಾಗ್ಗೆ ಹತ್ತಿರ ಬರುತ್ತಿದ್ದ ಸಖಿ ಹೇಳುತ್ತಿದ್ದಳು: 'ಪೃಥಾ, ಎಷ್ಟು ಸಂತೋಷ ಕಾಣುತ್ತಿದೆ ಗೊತ್ತಾ ನಿನ್ನ ಮುಖದಲ್ಲಿ?' ಅದನ್ನು ಅವಳು ಹೇಳಬೇಕೇ, ಒಂದೊಂದು ಬೆಟ್ಟದ ತುದಿಯ ದಾರಿಯನ್ನೂ ಏರಿ ಸುತ್ತ, ಹಿಂದೆ ಮುಂದೆ, ಅತ್ತ ಇತ್ತ ಕಾಣುವ ಇತರ ನೀಲ ತುದಿಗಳನ್ನು ಕಾಣುವಾಗ ನನಗೇ ಅರಿವಾಗುತ್ತಿತ್ತು. ಊರುದೊಣ್ಣೆಯನ್ನೆತ್ತಿ ಆಕಾಶಕ್ಕೆ ತಿವಿದು ಸುಖವನ್ನು ಇನ್ನಷ್ಟು ಸುರಿಸಲೇ ಎನ್ನಿಸುತ್ತಿತ್ತು. ಎರಡು ಅಥವಾ ಮೂರು ದಿನ. ಅನಂತರ ಮನಸ್ಸು ಮ್ಲಾನವಾಗಲು ಶುರುವಾಯಿತು. ಉತ್ಸಾಹ ಇಳಿಯಿತು. ಬಿದಿರ ದೊಣ್ಣೆಯನ್ನೂರಿ ಹತ್ತುವ ಒಂದೊಂದು ಹೆಜ್ಜೆಯೂ ಭಾವದ ಭಾರವನ್ನು ಹೆಚ್ಚಿಸುತ್ತಿತ್ತು. ಶರೀರದ ದಣಿವಲ್ಲ: ಏಕೆ ಏನು ಮಾತ್ರ ಗೊತ್ತಿಲ್ಲ. ಪರ್ವತಗಳೇ ಹಾಗೆ, ಕಾರಣವಿಲ್ಲದೆ ಸುಖ ಉಕ್ಕಿಸುತ್ತವೆ; ದುಃಖವನ್ನು ಮರುಕಳಿಸುತ್ತವೆ; ಏಕೆ ಏನುಗಳು ಗೊತ್ತಾಗುವುದಿಲ್ಲ.

ಹತ್ತಿ ಇಳಿಯಲು ಶುರುವಾದ ಹದಿಮೂರನೆಯ ದಿನಕ್ಕೋ ಹದಿನಾಲ್ಕನೆಯ ದಿನಕ್ಕೋ ಅಲ್ಲವೆ ನಾವು ತಲುಪಿದುದು. ಮೊದಲೇ ಹೋದ ಚಾರರು ಆಶ್ರಮ ನಿರ್ಮಿಸಿದ್ದರು. ದಕ್ಷಿಣಕ್ಕೆ ಒಂದು ಪರ್ವತ.

ಉತ್ತರಕ್ಕೆ ವಿಸ್ತಾರವಾದ ಪ್ರಚಂಡ ಪರ್ವತ. ನಡುವಣ ತಪ್ಪಲಿನ ಅತ್ತಲೂ ಬೆಟ್ಟದ ಇಳಿವು ಏರುಗಳು. ಇತ್ತಲೂ ಅದೇ ಏರಿಳಿವುಗಳು. ನಡುವೆ ಒಂದಿಷ್ಟು ಮಟ್ಟಸವಾದ ಜಾಗ. ಎಲ್ಲೆಲ್ಲೂ ಪಲಚಿ ಗಿಡಗಳು. ಗಮಗಮಿಸುವ ಹೂವು. ನೆನಪನ್ನು ಉಕ್ಕಿಸಿ ಉಕ್ಕಿಸಿ ಹುಚ್ಚು ಹಿಡಿಸುವ, ಕುಳಿತ ಪರ್ವತಗಳ ಹೊಟ್ಟೆಗಳನ್ನೆಲ್ಲ ಸುತ್ತಿಕೊಂಡಿರುವ ದವನದ ವಾಸನೆ. ವಿವಿಧ ವಿಧವಾದ ಬಣ್ಣಬಣ್ಣದ ಹೂವುಗಳು! 'ಇಲ್ಲೇ ನಾವು ಇರುವುದು' - - ಪಾಂಡುರಾಜ ಎಂದ.

'ಮಹಾರಾಜ, ಜಾಗವೇನೋ ಹುಚ್ಚು ಹಿಡಿಸುವಷ್ಟು ಸುಂದರವಾಗಿದೆ. ಹೂವು ದವನಗಳು ದಾರಿಯುದ್ದಕ್ಕೂ ಇದ್ದವು ಇಷ್ಟಿಲ್ಲದಿದ್ದರೂ. ನೀನು ಇದೇ ಜಾಗ ಆರಿಸಿದ ಕಾರಣವೇನು, ಊರಿನಿಂದ ಹತ್ತೊಂಬತ್ತು ದಿನಗಳ ಸತತ ಬೆವರು, ಕಾಲು ಮೀನುಖಂಡಗಳ ನೋವು, ಏದುಸಿರು ಪಡುವ ದೂರದಲ್ಲಿ?'

'ಪೃಥೇ, ನೀನೇ ಆಲೋಚಿಸು.' ಮಹಾರಾಜನಿಗೂ ದಣಿವಾಗಿತ್ತು. ಊರುದೊಣ್ಣೆಯ ಮೇಲೆ ಭಾರವೂರಿ ಉಸಿರು ಬಿಟ್ಟು ಹೇಳಿದ.

ಆಲೋಚಿಸಿದೆ. ಹೊಳೆಯಲಿಲ್ಲ. 'ನೀನೇ ಹೇಳು' ಎಂದೆ. ಸ್ವಲ್ಪ ದೊಡ್ಡದಾದ ಬಿದಿರು ಗುಡಿಸಲು. ಮಳೆಯ ನೀರು ಸ್ವಲ್ಪವೂ ಇಳಿಯದಂತೆ ಕೊಚ್ಚಿ ಹರಿಯುವ ಕಡಿದಾದ ಜಾವಣಿ. ಒಳಗೆ ಬೆಚ್ಚಗಾಗುವಷ್ಟು ಮಂದವಾಗಿ ಒಟ್ಟಿದ ಜೊಂಡಿನ ಹೊದಿಕೆ. ಅದರ ಹಿಂಬದಿಗೆ ಇನ್ನೊಂದು ಗುಡಿಸಲು. ಸ್ವಲ್ಪ ಸಣ್ಣದು. ಪಕ್ಕದ್ದು ಯಜ್ಞಶಾಲೆ ಎಂದು ನೋಡಿದರೇ ತಿಳಿಯುತ್ತಿತ್ತು. ಹತ್ತಿರದಲ್ಲೇ ಪಾಕಶಾಲೆ. ಆಳುಗಳ ಗುಡಿಸಲು. ಅದರ ಹಿಂದೆ ಕುದುರೆ ಲಾಯ. ಇವೆಲ್ಲ ಒಂದೇ ಸಮತಟ್ಟಿನಲ್ಲಿರಲಿಲ್ಲ. ಏರು ಇಳಿವುಗಳಲ್ಲಿ ಹಂಚಿಹೋಗಿದ್ದುವು. ನಡುವೆ ಸಣ್ಣ ಸಣ್ಣ ಕಲ್ಲು ಹವಿದು ಮಾಡಿದ ಮೆಟ್ಟಿಲುಗಳು.

'ನಾನು ಕೇಳಿದ್ದಕ್ಕೆ ಉತ್ತರ ಹೇಳಲಿಲ್ಲವಲ್ಲ.'

'ಏನು'

'ಈ ಜಾಗವನ್ನೇ ಏಕೆ ಆರಿಸಿದೆ ಅನ್ನುವುದನ್ನ ನೀನೇ ಅರ್ಥಮಾಡಿ

ಹೇಳು ಅಂತ.'

'ನಾನೇ ಕೇಳಿದ ಪ್ರಶ್ನೆ ನನಗೇ ಮರೆತುಹೋಯಿತು. ಈ ಜಾಗವೇ ಅಂಥದು. ಯಾಕೆ ಆರಿಸಿದ್ದು?'

'ಎದುರಿಗೆ ಕಾಣುವ ಪರ್ವತವಿದೆ ನೋಡು' ಊರುದೊಣ್ಣೆಯನ್ನು ಎತ್ತಿ ಗುರಿಮಾಡಿ ತೋರಿಸಿ ಹೇಳಿದ: 'ಅಲ್ಲಿಂದ ದೇವಲೋಕ ಆರಂಭವಾಗುತ್ತೆ. ಮೇಲೆಲ್ಲ ಅದೇ....'

'ಏನು ಹಾಗಂದರೆ?' --ನಡುವೆಯೇ ನಾನು ಕೇಳಿದೆ.

'ನಾವು ಕುರುಗಳು, ನೀವು ಯಾದವರು, ಅವರು ಮಾದ್ರರು ಅಂತ ಅಲ್ಲವೇ ಪ್ರಭೇದ. ಹಾಗೆ ದೇವ ಅನ್ನುವ ಜನದ ರಾಜ್ಯ ಈ ಪರ್ವತದಿಂದ ಮೇಲಕ್ಕೆ ಶುರುವಾಗುತ್ತೆ. ನಮ್ಮ ಆರ್ಯರ ಮೂಲರೇ ಅವರಂತೆ. ಈಗಲೂ ಅವರ ರಾಜನ ಹೆಸರು ಇಂದ್ರ. ಪುರೋಹಿತನ ಹೆಸರು ಬೃಹಸ್ಪತಿ. ಅಗ್ನಿ, ವಾಯು, ಅಂತ ಮಂತ್ರದಲ್ಲಿ ಹೇಳಲಿಲ್ಲವೇ ಅದೇ ಹೆಸರುಗಳು. ಅದೇ ರೀತಿ ರಾಜ್ಯವ್ಯವಸ್ಥೆ. ಔಷಧಿ, ಮೂಲಿಕೆಗಳು ಅವರಿಗೆ ಗೊತ್ತಿರುವಷ್ಟು ಕೆಳಗೆ ಬಯಲಿನ ಆರ್ಯಾವರ್ತದವರಿಗೆ ಗೊತ್ತಿಲ್ಲ. ಅಮೃತದ ರಹಸ್ಯವೇ ಗೊತ್ತಂತೆ ಅವರಿಗೆ. ಪ್ರಾಯವನ್ನು ಮತ್ತೆ ಗಳಿಸಿ ಕೊಡುವ ಮೂಲಿಕೆಗಳನ್ನು ಬಲ್ಲರು ಅವರು. ಅವೆಲ್ಲ ಸಿಕ್ಕುವ ಜಾಗ ಇದು. ನಮ್ಮ ಕಡೆಯ ಗೋಧಿ, ಅಕ್ಕಿ, ಕಾಳುಗಳು ಇಲ್ಲಿ ಇವರಿಗೆ ಅಪರೂಪ. ಕಂಡರೆ ಬಾಯಿಬಿಡುತ್ತಾರೆ. ಒಂದಿಷ್ಟು ಆಗಾಗ್ಗೆ ಅವರಿಗೆ ಕೊಟ್ಟು, ಔಷಧಿ ತೆಗೆದುಕೊಂಡು ನನ್ನ ಕಾಹಿಲೆ ಗುಣವಾಗಿ ಮಕ್ಕಳಾದರೆ....' ಎನ್ನುತ್ತಾ ಧ್ವನಿಯನ್ನು ಕ್ಷೀಣಿಸಿಕೊಂಡ.

ನನಗೆ ಆಧಾರ ಕುಸಿದಂತಾಯಿತು. ತಪಸ್ಸೆಂದು ಇಲ್ಲಿಗೆ ಹೊರಟ ಮೇಲೆ ಮನಸ್ಸು ಒಂದು ತೆರನಾದ ಸಮಾಧಾನಕ್ಕೆ ಬಂದಿತ್ತು. ಗಂಡ, ದಾಂಪತ್ಯ, ಮಕ್ಕಳು ಮೊದಲಾಗಿ ಎಲ್ಲ ಸುಖಗಳನ್ನೂ ವರ್ಜಿಸಿದ. ವ್ಯರ್ಥಋತುವಿನ ಪಾಪಕ್ಕೆ ಪ್ರಾಯಶ್ಚಿತ್ತ ರೂಪದ ತಪಸ್ಸೊಂದೇ ಮನಸ್ಸಿನಲ್ಲಿ ಸುಳಿಯುತ್ತಿತ್ತು. ಆ ವಿಚಾರ ಹುಟ್ಟಿದ್ದೂ ಈತನಿಂದಲೇ. ಈಗ ಇವನೇ ಮತ್ತೆ ಆಶೆ ಚಿಗುರಿಸುತ್ತಿದ್ದಾನೆ. ಬೇಡ ಬೇಡ. ಅವೆಲ್ಲ

ಬೇಡ' --- ಅಂದೆ.

'ಯಾಕೆ, ತಾಯಿಯಾಗಲು ಇಷ್ಟವಿಲ್ಲವೆ ನಿನಗೆ?'

'ಇಲ್ಲ.'

'ಕುರುಕುಲ ಬೆಳೆಯಬೇಡವೆ? ಈ ವಂಶಕ್ಕೆ ಸೊಸೆಯಾಗಿ ಬಂದ ನೀನು ಹೀಗನ್ನಬಹುದೆ?' ಈತನಿಗೆ ಹೇಗೆ ಬಿಡಿಸಿ ಹೇಳುವುದು? ಇಲ್ಲಾ ಆ ದಾರಿ ಬೇಕು, ಅಥವಾ ಈ ದಾರಿ ಖಚಿತವಾಗಿರಬೇಕು. ಯಾವುದೋ ಪರ್ವತಸೀಮೆಯ ಜನ ಔಷಧಿ ಕೊಡುತ್ತಾರೆಂಬ ಭರವಸೆಯಿಂದ ಆಶೆಯನ್ನು ಚಿಗುರಿಸಿಕೊಂಡು ನರಳಿ ನರಳಿ, ನರಳಿಕೆ ಹೆಚ್ಚಾದಷ್ಟೂ ಗಂಡನ ಮೇಲೆ ಕೋಪ ತಿರಸ್ಕಾರಗಳು ಹೆಚ್ಚಾಗಿ, ಯಾಕೆ ಈ ಎಲ್ಲ ಹಿಂಸೆ? ಆದರೆ ಇದನ್ನು ಈತನಿಗೆ ಬಿಡಿಸಿ ಹೇಳಿದರೆ ನೊಂದುಕೊಳ್ಳುತ್ತಾನೆ. ಕುರುವಂಶವನ್ನು ಮುಂದೆ ಸಾಗಿಸುವ ಭಾರ ಹೊತ್ತ ಈತ ದುಃಖಿಸಿ ಕಣ್ಣೀರು ಹಾಕುತ್ತಾನೆ ನನ್ನ ಎದೆ ನೆನೆದು ಒದ್ದೆಯಾಗುವಂತೆ. ನನ್ನಲ್ಲಿ ನಾನು ನಿಷ್ಕಾಮಿಯಾಗಿರಬೇಕು. ಈತನ ಆಶೆಯನ್ನು ಚಿವುಟಬಾರದು. ಉತ್ಸಾಹವನ್ನು ಮುರುಟಿಸಬಾರದು, ನಿಶ್ಚಯಿಸಿದೆ. ನಿಶ್ಚಯ ಸುಲಭ. ಕುರುವಂಶಕ್ಕೆ ಸೊಸೆಯಾಗಿ ಬಂದು ಇಂತಹ ನಿಷ್ಕಾಮಭಾವವಿಲ್ಲದೆ ಬದುಕುವುದು ಹೇಗೆ?

ನೀರಿನೊಳಗೆ ಕಾಣುವ ಎರಡು ಶುಭ್ರ ಕಣ್ಣುಗಳು ನಿಶ್ಚಲವಾಗಿದ್ದುವು ಉಳಿದೆಲ್ಲವನ್ನೂ ಅತ್ತ ದೂಡಿ ತನ್ನ ಆಳವನ್ನೇ ದಿಟ್ಟಿಸುತ್ತಾ. ಮರದ ಎಲೆಗಳ ಸಂದಿನಿಂದ ವಾಲಿದ ಬಿಸಿಲು ಬಿದ್ದು ತನ್ನ ಬಿಂಬವು ಒಡೆದು ಹೋಳಾದಂತೆ ಕಂಡಿತು. ತಲೆ ಎತ್ತಿ ಓರಗಿ ನೋಡಿದಳು. ನೆತ್ತಿಯಿಂದ ಎಷ್ಟೋ ಕೆಳಗೆ ವಾಲಿದೆ. ಹೀಗೆ ವಾಲಿ ವಾಲಿ ಇಳಿದು ಮರೆಯಾಗಿ ನಾಳೆ ಬೆಳಗ್ಗೆ ಹುಟ್ಟುವ ಹೊತ್ತಿಗೆ, ಕೃಷ್ಣ ಕರ್ಣನ ಕಡೆಗೆ ನಾಳೆಯೇ ಹೋಗು ತಡ ಮಾಡಬೇಡ ಅಂದಿದ್ದನಲ್ಲ. ಬೆಳಗ್ಗೆ ಸೂರ್ಯ ಹುಟ್ಟುವ ಎಷ್ಟೋ ಮೊದಲು ನದಿಯ ದಡಕ್ಕೆ ಬರುತ್ತಾನೆ ಒಬ್ಬನೇ. ಹರಿಯುವ ಇದೇ ನೀರಿನಲ್ಲಿ, ಇಲ್ಲಿಗಿಂತ ಕೆಳಭಾಗದಲ್ಲಿ ಮಿಂದು ಉದಿಸುವ ಸೂರ್ಯನಿಗೆ ಕೈಮುಗಿದು ಕಣ್ಣುಮುಚ್ಚಿ ಧ್ಯಾನಿಸುತ್ತಾನೆ. 'ಆಗ

ಒಬ್ಬಳೇ ಹೋಗು. ಅವನಿಗೆ ನಾನೆಲ್ಲ ಹೇಳಿದೀನಿ. ನೀನು ಸುಮ್ಮನೆ ಹತ್ತಿರ ನಿಂತುಕೊ. ಮಗು ಕರ್ಣ, ಅಮ್ಮ. ಪಾಂಡವರು ನಿನ್ನ ತಮ್ಮಂದಿರು, ಮರೆಯಬೇಡ. ನಾನಿನ್ನೇನೂ ಕೇಳುವುದಿಲ್ಲ ಅಷ್ಟು ಸಾಕು.' ನಿಧಾನವಾಗಿ ಕತ್ತು ತಿರುಗಿಸಿದಳು. ಬಿಂಬ ಅಲ್ಲೇ ಇತ್ತು ನೀರಿನಲ್ಲಿ. ಆದರೆ ಕಾಲು ತೊಡೆ, ಹೊಟ್ಟೆ ಎದೆಗಳೆಲ್ಲ ನಡುಗುತ್ತಿದ್ದುವು. ಕುರುವಂಶದ ಸೊಸೆಯು ಈ ಮಗ ಏಕೆ ಕೌರವನಾಗಲಿಲ್ಲ, ಎಂದು ಮನಸ್ಸು ಕೇಳಿಕೊಂಡಿತು. ಕುಂತಿ ಸೋಲಬೇಕು ಹೆತ್ತ ಮಗನೆದುರಿಗೆ ಎಂದು ಎಲ್ಲೋ ನುಡಿದಂತಾಯಿತು. ಪರ್ವತಗಳೇ ಹಾಗೆ, ಕಾರಣವಿಲ್ಲದೆ ದುಃಖವನ್ನು ಮರುಕಳಿಸುತ್ತವೆ. ಏಕೆ ಏನು ಎಂಬುದು ಮೊದಲು ಗೊತ್ತಾಗಲಿಲ್ಲ. ಅನಂತರ ಸ್ಪಷ್ಟವಾಗಿ ತೇಲಿ ತೇಲಿ ಬರುತ್ತಿತ್ತು. ಎದುರಿಗೆ ದೇವಲೋಕವು ಆರಂಭವಾಗುವ ಪರ್ವತದ ಎತ್ತರವನ್ನು ನೋಡಿದರೆ, ಹರಿಯುವ ಕಿರುಹೊಳೆಯ ನೀರಿನಲ್ಲಿ ಮೀಯಲು ಇಳಿದರೆ, ಹೂವುಗಳನ್ನು ಬಿಡಿಸಿ ಕಟ್ಟಿ ಮಾಲೆ ಮಾಡುತ್ತಿದ್ದರೆ ಅದೇ ನೆನಪು, ಏನೆಂದು ಅರಿವಾಗುವ ಮೊದಲೇ ಮೊಳೆತು ಬೆಳೆದು ಮೂಡಿ ಬಚ್ಚಿಟ್ಟುಕೊಂಡದ್ದು. ಈಗ ತಿಳಿವಳಿಕೆ ಬೇಕಾದಷ್ಟಿದೆ! ಆದರೆ ಮೊಳೆಯುತ್ತಿಲ್ಲ. ದಾರಿದ್ರ್ಯ ಸಹಿಸಿಕೊಳ್ಳಲು ನಿಷ್ಕಾಮಭಾವವನ್ನು ಸಾಧಿಸಿಕೊಳ್ಳಬೇಕು. ಹದಗೆಟ್ಟ ಕ್ಷತ್ರಿಯನಿಗಿಂತ ಹದಹಿಡಿದ ಋಷಿ ಮೇಲು ಎಂದು ಈಗಲೂ ಮನಸ್ಸು ಹೇಳುತ್ತಿದೆ. ಮೊಟ್ಟಮೊದಲು ರಹಸ್ಯ ಭೇದಿಸಿದವನ ನೆನವನ್ನು ಯಾರು ತಾನೇ ಮುಚ್ಚಬಲ್ಲರು? ಅದೂ ರಹಸ್ಯಭೇದನ ಶಕ್ತಿಯೇ ಇಲ್ಲದ ಸಂಗಡಿಗನೊಡನೆ. ರಹಸ್ಯವನ್ನು ಅನುಭವಿಸಿ ಅರಿಯಬೇಕು. ಬರೀ ಅರಿಯಲೆಳಸುವುದು ಷಂಡನ ಪೌರುಷವಿದ್ದಂತೆ. ಚಿಕ್ಕ ಹುಡುಗಿಯಿಂದಲೂ ಕುತೂಹಲ. ಜೀವನಿರ್ಮಾಣ ಹೇಗೆ ಆಗುತ್ತೆ? ಎಲ್ಲಿ ಹುಟ್ಟಿ ಹೇಗೆ ಬರುತ್ತೆ ಅಳುವ ನಗುವ ಕೈಕಾಲು ಬಡಿದು ಕೇಕೆ ಹಾಕುವ ಜೀವದ ಗೊಂಬೆ? ತೀರ ಚಿಕ್ಕವಳಿದ್ದಾಗ, ಹೆತ್ತ ತಾಯಿಯನ್ನು ಒಮ್ಮೆ ಕೇಳಿದಾಗ ನಕ್ಕಿದ್ದಳು, ನನಗೇ ಅವಮಾನವೆನಿಸುವಂತೆ. ಅಪ್ಪನನ್ನು ಕೇಳಿದ್ದಕ್ಕೆ ಅವನ ದೃಷ್ಟಿ ಹತ್ತಿರವಿದ್ದ ದಾಸಿಯ ಕಡೆಗೆ ಹರಿಯಿತು. ಮತ್ತೆ ಯಾರನ್ನೂ ಕೇಳಲಿಲ್ಲ. ಸಾಕು ತಂದೆಯ ಮನೆಗೆ ಬಂದಾಗಲೂ ಪಟಪಟ

ಮಾತನಾಡುತ್ತಿದ್ದೆ. ಎಲ್ಲಿ ಯಾರ ಮನೆಯಲ್ಲಿ ಮಕ್ಕಳಾಯಿತೆಂದರೂ ಹೋಗಿ ನೋಡುವ ಹುರುಪು. ಮಗು, ಹುಟ್ಟಿತು ಅಂದರೆ ಏನು, ಎಲ್ಲಿರುತ್ತೆ, ಹೇಗೆ ಬರುತ್ತೆ, ಹೆಂಗಸಿನ ಹೊಟ್ಟೆಯಿಂದ ಎಂಬುದು ಕ್ರಮೇಣ ತಿಳಿದರೂ ನಂಬಿಕೆ ಹುಟ್ಟಲಿಲ್ಲ. ಅದನ್ನು ಹೊಟ್ಟೆಯೊಳಗೆ ಇಡುವವರಾರು? ವಯಸ್ಸು ಬೆಳೆಯುತ್ತಿತ್ತು. ಯಾರನ್ನೂ ಕೇಳಬಾರದೆಂಬ ನಾಚಿಕೆಯೂ ಅದು ಹೇಗೋ ಬೆಳೆದುಕೊಂಡಿತ್ತು. ಆದರೆ ಕುತೂಹಲ ಹೋಗಲಿಲ್ಲ. ಸಾಕುತಂದೆಯ ಅರಮನೆಗೆ ದುರ್ವಾಸ ಋಷಿ ಬಂದಾಗ, ಋಷಿಸೇವೆಗೆ ಮನೆಯಲ್ಲೊಬ್ಬ ಮಗಳಿರುವುದು ಅಪ್ಪನಿಗೆ ಸಂತೋಷವೋ ಸಂತೋಷ. 'ರಾಜನ್, ಮಗಳಿಗೆ ವಯಸ್ಸೆಷ್ಟು?' 'ಹದಿನೈದು.' 'ಏನು ಬೆಳವಣಿಗೆ! ಪುಣ್ಯವಂತ ನೀನು. ಮಹಾವೀರರ ತಾಯಿಯಾಗಬಲ್ಲ ಹೆಣ್ಣಾಗುತ್ತಾಳೆ ಇವಳು.' ಅಪ್ಪನಿಗಂತೂ ಸಂತೋಷ. ನನಗೆ ಎಷ್ಟು ಹಿಗ್ಗು! ತಾಯಿಯಾಗುವ, ಮಹಾವೀರರ ತಾಯಿಯಾಗುವ, ನನಗೂ ಕೈಕಾಲು ಬಡಿದು ಕೇಕೆ ಹಾಕುವ. 'ಮಗೂ, ಇಂತಹ ಮುನಿಗಳು ಬಂದಾಗ ಮನೆಯ ಮಗಳೇ ಅವರ ಶುಶ್ರೂಷೆಗೆ ನಿಲ್ಲಬೇಕು. ಪದ್ಧತಿ ನಿನಗೆ ಗೊತ್ತಿದೆಯಲ್ಲ. ಅವರಿಗೆ ಯಾವ ವಿಷಯದಲ್ಲೂ ಅಸಮಾಧಾನವಾಗಬಾರದು'. ಅಪ್ಪನ ಆಜ್ಞಾಪನೆ. ಸ್ವಲ್ಪ ಮುಂಗೋಪಿ, ಆದರೆ ಒಳ್ಳೆಯ ಋಷಿ. ಕೆದರಿದ ಕೂದಲನ್ನು ಗಂಟುಹಾಕಿ ಕಿರೀಟವಿಟ್ಟರೆ ಎಷ್ಟು ಚೆನ್ನಾಗಿ ಕಾಣಬಹುದು! ಎಂಬ ಕಲ್ಪನೆ ನನಗೆ. ಶ್ರದ್ಧೆಯಿಂದ ಅವರ ಸೇವೆ ಮಾಡಿದೆ. ತುಂಬ ಸಲಿಗೆ ಬೆಳೆಯಿತು. ಅದೇನೋ ಅವರನ್ನು ಕೇಳುವ ಕುತೂಹಲ, ಅಲ್ಲ, ಬಯಕೆಯಾಯಿತು. ಒಂದು ದಿನ ಕೇಳಿಬಿಟ್ಟೆ: 'ಮುನಿ, ಮಗು ಹೇಗೆ ಆಗುತ್ತೆ?' ಅವರು ತಿರುಗಿ ನೋಡಿದರು. ಈ ಪ್ರಶ್ನೆಯನ್ನು ನಾನು ಕೇಳಿದ್ದಕ್ಕೇ ನಂಬದವರಂತೆ. ಸುಮ್ಮನಾದರು. ಅಲ್ಲೇ ನಿಂತೆ ನಾನು. 'ಯಾಕೆ ಕೇಳುತ್ತೀಯ?' -- ಎಂದರು.

'ಮಹಾವೀರರ ತಾಯಿಯಾಗುತ್ತೀಯ ಅಂದಿರಲ್ಲ, ಅದಕ್ಕೆ, ಹೇಗೆ ಆಗ್ತೀನಿ ಅಂತ ತಿಳಿದುಕೊಳ್ಳಬೇಕು ಅನ್ನಿಸಿದೆ.'

'ಅದು ಆಗುವಾಗ ಆಗುತ್ತೆ. ಈಗ ಯಾಕೆ?'

ನಾನು ಮಾತನಾಡಲಿಲ್ಲ. ಆದರೆ ಅಲ್ಲೇ ನಿಂತಿದ್ದೆ. ಉತ್ತರ ಬೇಕೇ ಬೇಕು ಎಂದು ಹಟ ಹಿಡಿದವಳಂತೆ.

'ಮಗು ಅಂದರೆ ತುಂಬ ಆಸೆಯೆ?'

'ಹೂಂ.'

ಅವರು ಮತ್ತೆ ಮಾತನಾಡಲಿಲ್ಲ. ನಾನೂ ಅಲ್ಲಿಂದ ಕದಲಲಿಲ್ಲ...

ಕುಂತಿ ನಿಟ್ಟುಸಿರಿಟ್ಟಳು. ನಡುಗುತ್ತಿದ್ದ ಬಿಂಬ ನಿಶ್ಚಲವಾಗಿತ್ತು. ಆದರೆ ಸೂಕ್ಷ್ಮವಾಗಿ ತೂಗುತ್ತಿತ್ತು. ತೂಗಿ ತೂಗಿ ನೋಡುತ್ತಿತ್ತು. ಹೆಚ್ಚೇನೂ ಅರ್ಥ ಹುದುಗಿಸದೆ ಕೇಳಿದ ಪ್ರಶ್ನೆ. ಅವರೇ ಇತ್ತ ಬಾ ಅಂದರು. ಹತ್ತಿರ ಕೂರಿಸಿಕೊಂಡು ಕೇಳಿದರು. ಸುಮ್ಮನೆ ನಡೆದೆ. ಕೂದಲು ತುಂಬಿದ ಎದೆ. ಗಡ್ಡ ಇಳಿಯುವ ಮುಖ. ಬಲಗೈ ನೀಡಿ ನನ್ನ ಕೈ ಹಿಡಿದರು. ಹತ್ತಿರ ಬಾ, ಇನ್ನೂ ಹತ್ತಿರ ಎಂದರು. ಹತ್ತಿರ ಕೂರಿಸಿಕೊಂಡು ಕೇಳಿದರು, 'ತುಂಬ ಆಸೆಯೆ ಮಗು ಅಂದರೆ?' ಎಂದು ಮುಖ ನೋಡಿದರು. ತಬ್ಬಿ ಹಿಡಿದುಕೊಂಡರು. ನನಗೆ ಏನಾಯಿತು? ಉದ್ರೇಕವಿಲ್ಲ. ನಾಚಿಕೆ, ನಾಚಿಕೆಯನ್ನು ಮೆಟ್ಟಿನಿಲ್ಲುವ ಕುತೂಹಲ. ಒಂದು ತೆರನಾದ ಸುಖ. ಗಾಬರಿ. ಪೃಥಾ ಪೃಥಾ ಎಂದು ಚಪ್ಪರಿಸಿದರು. ಅನಂತರ ಮುಖ ನೋಡಿ ಮುಗುಳ್ನಕ್ಕರು.

ಮರುದಿನ ಅವರೇ ಮತ್ತೆ ಹತ್ತಿರ ಕರೆದರು. ನನಗೆ ಹೆಚ್ಚು ತಿಳಿಯಲಿಲ್ಲ. ಆದರೆ ಮತ್ತೆ ಅನುಭವಿಸುವ ಆಸೆ, ರಾತ್ರಿ ಎಲ್ಲ ನಿದ್ದೆ ಮಾಡಿರಲಿಲ್ಲ. ಪೃಥಾ ಪೃಥಾ ಎಂದು ಮುದ್ದಿಸಿ ಮುದ್ದಿಸಿ ಹಿತವಾದ ಗಡ್ಡ. ಮರುದಿನವೂ ಹೀಗೆ ಆಯಿತು. ಪ್ರತಿದಿನವೂ ಹೀಗೆ. ಅವರು ಕರೆಯುತ್ತಾರೆಂದು ನನಗೆ ಗೊತ್ತು. ಕರೆಯಲೆಂದು ನಾನೇ ಹತ್ತಿರ ಹತ್ತಿರ ಹೋಗಿ ನಿಲ್ಲುತ್ತಿದ್ದೆ. ನನ್ನ ಋತುವಿನ ಲೆಕ್ಕ ನನಗೆ ಗೊತ್ತಿತ್ತು. ಆ ದಿನ ಹತ್ತಿರ ಬರುವಾಗಲೇ ಒಂದು ದಿನ ಅವರ ಸಮ್ಮುಖದಲ್ಲಿ ಕುಳಿತಿದ್ದವಳು ಓಡಿ ಹೋಗಿ ಓಕರಿಸಿ ಬಂದೆ. ಅವರು ನಕ್ಕು ಹತ್ತಿರ ಕರೆದು ಸವರಿ ಎಂದರು: 'ನಿನಗೆ ಮಗು ಆಗುವುದು ಖಂಡಿತ.'

'ಹೇಗೆ?' ನಾನು ಕೇಳಿದೆ.

'ನಿಧಾನವಾಗಿ ನಿನಗೇ ತಿಳಿಯುತ್ತೆ' ಎಂದರು. ಸಂಜೆ ಹೋಮದಲ್ಲಿ ಭಾಗಿಯಾಗಲು ಅಪ್ಪ ಬಂದಿದ್ದಾಗ ಅವರೇ ಹೇಳಿದರು: 'ಕುಂತೀಭೋಜ, ನಿನಗೊಂದು ಮೊಮ್ಮಗು ಹುಟ್ಟುತ್ತದೆ. ಕಾನೀನ ಮದುವೆಗೆ ಮುಂಚೆ ಮಗುವಾದರೆ.' ಅಪ್ಪನ ಮುಖದಲ್ಲಿ ಮೊದಲು ಸಂತೋಷ ಕಂಡಿತು. ಅನಂತರ ಖಿನ್ನತೆ. ಇದಾದ ಎರಡು ದಿನಕ್ಕೆ ಮುನಿಗಳು ಹೊರಟುಹೋದರು. ಹೋಗುವ ಮುನ್ನ ಆಶೀರ್ವದಿಸಿ ಹೇಳಿದರು: 'ಪೃಥಾ, ನಾನು ಒಂದು ಪಕ್ಷ ಮೊದಲೇ ಹೋಗಬೇಕಿತ್ತು. ಆದರೆ ನಿನ್ನ ಆಸೆಯನ್ನು ಪೂರ್ಣ ಮಾಡಿಯೇ ಹೋಗಬೇಕೆಂದು ಉಳಿದೆ. ನಿನಗೆ ಗಂಡು ಮಗುವಾದರೆ ಲೋಕೋತ್ತರ ವೀರನಾಗುತ್ತಾನೆ. ಹೆಣ್ಣಾದರೆ ನಿನ್ನಂತೆಯೇ ಸುಂದರಿಯಾಗುತ್ತಾಳೆ.' ಅಪ್ಪನ ಎದುರಿಗೆ ಹೀಗೆ ಹೇಳಿ ರಾಜಮರ್ಯಾದೆ ಪಡೆದು ಹೊರಟುಹೋದರು.

ನನಗಿನ್ನೂ ಕುತೂಹಲ. ಅಮ್ಮನ ಸಖಿ ಒಬ್ಬಳೇ ಇದ್ದಾಗ ಹತ್ತಿರ ಕರೆದು ಕೇಳಿದೆ. ಬಿಡಿಸಿ ಹೇಳಿದಳು. ಋಷಿಯಿಂದ ಹೀಗೆ ಹೀಗೆ ಆಯಿತಲ್ಲವೇ. ಅದೇ ನಿನ್ನ ಹೊಟ್ಟೆಯಲ್ಲಿ ಮಗುವಾಗಿ ಚಿಗುರಿದೆ. ಬೆಳೆಯುತ್ತಿದೆ. ಒಂಬತ್ತು ತಿಂಗಳಿಗೆ ಕೈಕಾಲು ಕಣ್ಣು ಮೂಗುಗಳ ಮಗು ಹೊರಬರುತ್ತೆ ಆ ಮಾರ್ಗವಾಗಿಯೇ. ಅಷ್ಟರಲ್ಲಿ ಅದು ನಿಜವೆಂದು ನನಗೂ ಅನ್ನಿಸಿತು. ಆದರೆ ಹೇಗೆ, ಎಂಬ ರಹಸ್ಯಪೂರ್ಣ ಕುತೂಹಲ ಮಾತ್ರ ತಣಿದಿರಲಿಲ್ಲ. ಒಂದು ತೆರನಾದ ಉತ್ಸಾಹ. ಸುಮ್ಮಸುಮ್ಮನೆ ಓಡಿಯಾಡುವ, ಮರಹತ್ತಿ ಕೊಂಬೆಯ ಮೇಲೆ ಜಗ್ಗುವ, ಮರದ ಕೊಂಬೆಗೆ ಹಗ್ಗ ಕಟ್ಟಿ ಉಯ್ಯಾಲೆ ತೂಗಿಕೊಳ್ಳುವ ಉತ್ಸಾಹ. ನನ್ನ ಸಖಿಯರನ್ನೆಲ್ಲ ಕಟ್ಟಿಕೊಂಡು ಇದೇ ಮಾಡುತ್ತಿದ್ದೆ. ನಡುನಡುವೆ ಓಕರಿಕೆಯ ಇರುಸುಮುರುಸು. ಆಕ್ಕ ಹಾಕುತ್ತಿದ್ದೆ. ಒಂದು ಎರಡು ಮೂರು ನಾಲ್ಕು ತಿಂಗಳು. ಅಮ್ಮನ ಸಖಿ ಹೇಳಿದ್ದು ನಿಜ. ನನ್ನ ಹೊಟ್ಟೆಯಲ್ಲೇ ಏನೋ ಬೆಳೆಯುತ್ತಿದೆ. ಖುಷಿ. ಆಶ್ಚರ್ಯ. ಸಂತೋಷ. ಒಂದು ದಿನ ಅಪ್ಪ ನನ್ನನ್ನು ಕರೆದು ಹೇಳಿದ, ಅಮ್ಮನ ಎದುರಿಗೇ. 'ಪೃಥಾ, ಮಗೂ.

ಇನ್ನು ಮೇಲೆ ನೀನು ಅರಮನೆಯ ಒಳಾಂಗಣದಿಂದ ಹೊರಗೆ ಹೋಗಬೇಡ. ಮದುವೆಯಾಗದೆ ತಾಯಿಯಾಗುತ್ತಿದೀಯ. ಮುಚ್ಚಿಡದಿದ್ದರೆ ನಮ್ಮ ರಾಜಕುಟುಂಬದ ಮರ್ಯಾದೆ ಉಳಿಯುವುದಿಲ್ಲ.'

'ಯಾಕೆ ಉಳಿಯುವುದಿಲ್ಲ? ಏನಾಗುತ್ತೆ?'--ಎಂದು ಕೇಳಿದೆ.

ಯಾಕೆ ಉಳಿಯುವುದಿಲ್ಲ? ಏನಾಗುತ್ತೆ?

ಎಲ್ಲವನ್ನೂ ಮೊದಲೇ ನಿಶ್ಚಯಿಸಿದ್ದರು. 'ಮಗೂ, ದುಃಖಪಡಬೇಡ. ಋಷಿಗಳು ಯಾವತ್ತೂ ಹಿಂದಿನ ಕಾಲದ ಆಚಾರ ವಿಚಾರದವರು. ನಮ್ಮ ಕಡೆ ಕ್ಷತ್ರಿಯರೆಲ್ಲ ಬಹಳ ಮುಂದುವರಿಯುತ್ತಿದಾರೆ. ಮದುವೆಗೆ ಮೊದಲು ಹೆಣ್ಣು ಮಗಳು ತಾಯಿಯಾದರೆ ಅವಮಾನ. ಅವಳನ್ನು ಮದುವೆಯಾಗುವುದಕ್ಕೆ ಕೂಡ ಒಪ್ಪುವುದಿಲ್ಲ. ನೀನೊಬ್ಬ ಸರಿಯಾದ ರಾಜನ ಹೆಂಡತಿಯಾಗಬೇಕೆಂದು ನಮ್ಮ ಆಶೆ' --- ಅಂತ ಬೇಕಾದಷ್ಟು ಸಮಾಧಾನ ಹೇಳಿ ಸಿದ್ಧಪಡಿಸಿದ್ದರು. ಹುಟ್ಟಿದ ಮಗು ಅತ್ತಿತು. ಕಣ್ಣು ಮೂಗು ಬಾಯಿ ಅಗಲ ಜೀವಂತ ಮಗು. ಕೈಕಾಲು ಆಡಿಸಿತು. ನನ್ನ ಕುತೂಹಲ ತಣಿಯಿತು. ಆದರೆ ಹೊಸ ವಿಸ್ಮಯವನ್ನು ಕೊಂಡೊಯ್ದರು. ಅಮ್ಮನ ನಂಬಿಕಸ್ಥಳಾದ ಸಖಿ ನನಗೆ ಮಗು ಹುಟ್ಟುವ ರಹಸ್ಯವನ್ನು ಬಿಡಿಸಿ ಹೇಳಿದ. ಸ್ವತಃ ಮಕ್ಕಳಿಲ್ಲದ ರಾಧೆಗೆ ತೌರಿನಲ್ಲಿ ಯಾರೋ ಹೆತ್ತು ಕೊಟ್ಟರು ಎಂದು ಗಂಡನ ಮನೆಗೆ ಒಯ್ಯುವಂತೆ. ಕಳಿಸಿ ನನ್ನ ಹೊಟ್ಟೆ ಖಾಲಿಯಾಯಿತು. ನಾಳೆ ಈ ಮಗುವಿನ ಹತ್ತಿರ ಹೋಗಿ ಭಿಕ್ಷೆ ಕೇಳಬೇಕು. ಬಂದು ಮತ್ತೆ ನಡುಗಲು ಶುರುವಾಯಿತು...

ಪರ್ವತಗಳು ನೆನಪನ್ನು ಕೆರಳಿಸುತ್ತಿರುವಾಗ ದೇವಲೋಕದ ಇಬ್ಬರು ವೈದ್ಯರು ಬಂದರು. ಒಂದೇ ತರದ ಮೈಕಟ್ಟು. ಲಕ್ಷಣ. ಅವಳಿ ಸೋದರರಂತೆ. ಹತ್ತಿಯ ಬಟ್ಟೆ ಇಲ್ಲ. ಸದಾ ಕುರಿ ಅಥವಾ ಮೇಕೆಯ ತುಪ್ಪಟದ ಕಂಬಳಿಯ ಬಟ್ಟೆ. ಯಾವಾಗಲೂ ಜೋಡಿಯಾಗಿ ಬರುತ್ತಾರೆ. ರೋಗಿಗೆ ಕೈಕಾಲು ನೋವಿದ್ದರೆ, ಮೂಳೆ ಜರುಗಿದ್ದರೆ ಒಬ್ಬ

ಹಿಡಿದುಕೊಳ್ಳುತ್ತಾನೆ, ಒಬ್ಬ ಕಟ್ಟುತ್ತಾನೆ. ಇಬ್ಬರೂ ಕೂಡಿ ಮೂಲಿಕೆಗಳನ್ನು ಹುಡುಕಿ ತರುತ್ತಾರೆ. ಒಬ್ಬ ಅರೆಯುತ್ತಾನೆ. ಇನ್ನೊಬ್ಬ ಹಿಂಡುತ್ತಾನೆ. ಅವರು ಔಷಧಿ ಪ್ರಾರಂಭಿಸಿದರು. ರಾಜನಿಗೆ ಮತ್ತೆ ವೀರ್ಯ ಹುಟ್ಟಿ ಮಕ್ಕಳಾಗುವಂತಹ ಔಷಧಿ. ನಿನ್ನ ಹೊಟ್ಟೆಯಲ್ಲಿ ಮಗುವಾಗುತ್ತದೆ. ದಪ್ಪ ಮಗು ಎಂದು ಬಂದಾಗಲೆಲ್ಲ ನನಗೆ ಹೇಳುತ್ತಿದ್ದರು. ನನ್ನ ಹೊಟ್ಟೆಯನ್ನು ಮುಟ್ಟಿ ನಗುತ್ತಿದ್ದರು. ಗಂಡು ಹೆಣ್ಣುಗಳ ಸಂಪರ್ಕದಲ್ಲಿ ನಮ್ಮ ಕಡೆಯಂತೆ ಸಂಕೋಚವಿಲ್ಲ ಈ ದೇವಲೋಕದವರಿಗೆ.

ಮಹಾರಾಜ ಭಕ್ತಿಯಿಂದ ಔಷಧಿ ಸೇವಿಸುತ್ತಾನೆ. ನನಗೂ ಭಕ್ತಿ ಹುಟ್ಟಿದೆ. ಹೊಸ ಕನಸು ಆರಂಭವಾಗಿದೆ. ಹೊಟ್ಟೆಯಲ್ಲಿ ಹೊಸತು ಚಿಗುರಿ ಮೊದಲ ಸಲ ಅದಂತೆಯೇ ಬೆಳೆದು ಉಬ್ಬಿ, ಪರ್ವತದ ಗಾಳಿಯನ್ನೆಲ್ಲ ಉಸಿರಿನಲ್ಲಿ ಒಳಗೆ ಎಳೆದುಕೊಳ್ಳುವಂತಹ ಆಸೆ. ಪೃಥೆಗೆ ಮಕ್ಕಳೆಂದರೆ ಯಾವಾಗಲೂ ಆಸೆ, ಹತ್ತು ಹದಿನೈದು ಇಪ್ಪತ್ತು. ದೇವಲೋಕದಿಂದ ಕೆಳಗೆ ಹರಿಯುವ ನೀರು, ದವನ ಎಲಚಿ ನಾನಾ ವಿಧದ ಲತೆ ವೃಕ್ಷಗಳ ಮೇಲಿಂದ ಬೀಸುವ ಪರ್ವತಗಾಳಿ, ಈ ದೇವವೈದ್ಯರ ಮೂಲಿಕಾ ಔಷಧಿ. ಪಾಂಡುವಿನ ವೀರ್ಯ ಬಲಿಯದಿರದು ಪೃಥೆಯು ಮಕ್ಕಳನ್ನು ಹೆರೆಯಲಾರಳೆ, ಮೇಲೆ ಮೇಲೆ ಏರುವವರ ಕೈ ಕಾಲು ಮುಖ ಕೆಂಪಾಗುವ ಮಕ್ಕಳನ್ನು?

ಅಲ್ಲಿಯ ಶೀತದ ಹವೆ ನನಗಂತೂ ಒಗ್ಗಿತು. ಆದರೆ ನನ್ನ ಸವತಿಗೆ ಕೆಮ್ಮು ಶುರುವಾಯಿತು. ಉಬ್ಬುಸಕ್ಕೆ ತಿರುಗಿತು. ನೀನು ಊರಿಗೆ ಹೋಗೆಂದರೂ ಕೇಳದೆ ಉಳಿದಳು. ದೇವವೈದ್ಯರು ಮೂಲಿಕೆ ತಿನ್ನಿಸಿದರೂ ಗುಣವಾಗದೆ ಸತ್ತಳು. ಅವಳ ಸಾವಿನ ದುಃಖದಲ್ಲಿ ನಾನು ಬೇಯುತ್ತಿರುವಾಗ ಹಸ್ತಿನಾವತಿಯಿಂದ ಸುದ್ದಿ ಬಂತು. ಒಂದು ನೂರು ಕತ್ತೆಗಳ ಮೇಲೆ ದವಸಿ ಧಾನ್ಯ ಕಂಬಳಿಗಳನ್ನು ಹೊರಿಸಿಕೊಂಡು ಬಂದ ಸೂತ ಮೊದಲಿನಿಂದ ಪಾಂಡುರಾಜನಲ್ಲಿ ವಿಶ್ವಾಸವಿಟ್ಟವನು. ಇದನ್ನು ಹೇಳುವುದಕ್ಕೆಂದೇ ಈ ಸಲ ತಾನೇ ಸಾಮಾನುಗಳ ಜೊತೆ ಹೊರಟುಬಂದಿದ್ದನೆ. ನಾವು ಬಿಟ್ಟು ಬಂದ ಹಿಂಗಾಯದಂತೆ. ತಾನು

ಉಳಿಸಿ ಬೆಳೆಸಿದ ಕುರುವಂಶ ಮತ್ತು ಹಸ್ತಿನಾವತಿ ಮತ್ತೆ ಸುರುಟಿ ನಿಂತಿವೆ. ಇವನ್ನು ಹೇಗಾದರೂ ಬೆಳೆಸಲೇಬೇಕೆಂದು ನಿರ್ಧರಿಸಿ ಈಗ ಧೃತರಾಷ್ಟ್ರನಿಗೆ ಮದುವೆ ಮಾಡಿದ್ದಾನಂತೆ.

'ಹೆಣ್ಣು ಎಲ್ಲಿಯದು?' - ಪಾಂಡುರಾಜ ಕೇಳಿದ.

'ಗಾಂಧಾರ ದೇಶದ್ದು. ಯಾತಕ್ಕೂ ಬಾರದ ಕುರುಡನಿಗೆ ನಮ್ಮ ಕಡೆಯ ಯಾವ ರಾಜವಂಶದವರು ಕೊಡುತ್ತಾರೆ? ಗಾಂಧಾರದ ಕಡೆ ಶುಲ್ಕ ಪಡೆದು ಮಾರುತ್ತಾರಂತೆ. ಮದ್ರ ದೇಶಕ್ಕೆ ಹೋಗಿ ನಿನಗೆ ಎರಡನೇ ಹೆಣ್ಣು ತರಲಿಲ್ಲವೇ. ಹಾಗೆಯೇ ಮಾಡಿದರು. ರಥ ಕುದುರೆಗಳ ಮೇಲೆ ಸೈನ್ಯ, ಗಾಡಿಗಳ ತುಂಬ ಐಶ್ವರ್ಯ ತುಂಬಿಕೊಂಡು ಹೋದರು. ಹೆಣ್ಣಂತೂ ಕೊಟ್ಟರು ಅವರು.'

'ಗಾಂಧಾರ ಕಡೆಯ ಹೆಂಗಸರು ತಮ್ಮ ಆರ್ಯಾವರ್ತದ ಕಡೆಯ ಹಾಗೆ ಗಂಡ ಹೇಳಿದ ಹಾಗೆ ಕೇಳುವುದಲ್ಲವಂತೆ ಹೌದೆ?' -- ಪಾಂಡುರಾಜ ಕೇಳಿದ. ಪಕ್ಕದಲ್ಲಿ ನಾನೂ ಇದ್ದೆ. ಮತ್ತೆ ಯಾರೂ ಇರಲಿಲ್ಲ.

'ಹಾಗೇನೋ ಹೇಳುತ್ತಾರೆ. ಆದರೆ ಈಕೆ ನಮ್ಮ ಕಡೆಯ ಹೆಂಗಸರಿಗಿಂತ ಮೀರಿದ ಪತಿಭಕ್ತೆ. ಗಂಡ ಕುರುಡ ಅಂತ ತಿಳಿದ ದಿನವೇ ಒಂದು ಅರಿವೆಬಳಲಿನಲ್ಲಿ ತನ್ನ ಎರಡು ಕಣ್ಣುಗಳನ್ನೂ ಕಟ್ಟಿಕೊಂಡಳಂತೆ. ಮತ್ತೆ ಈ ಪ್ರಪಂಚದ ಯಾವ ವಸ್ತುವನ್ನೂ ಕಣ್ಣು ಬಿಟ್ಟು ನೋಡಲಿಲ್ಲ. ಹಾಗೆಯೇ ಅಣ್ಣನ ಜೊತೆ ರಥದಲ್ಲಿ ಕೂತು ಹೊರಟಳಂತೆ. ಹಸ್ತಿನಾವತಿಯಲ್ಲಿ ವಿವಾಹವೇದಿಕೆಯಲ್ಲಿ ಕೂಡ ಹಾಗೆಯೇ ನಿಂತಿದ್ದಳು. ಕಣ್ಣು ಕಟ್ಟಿಕೊಂಡು. ಸಪ್ತಪದಿಯನ್ನೂ ಹಾಗೆಯೇ ಇಟ್ಟಳು ಕುರುಡಿಯಂತೆ. ಗಂಡನೇನೋ ಹುಟ್ಟು ಕುರುಡ. ಆದರೆ ಈಕೆ ಯಾಕೆ ಹೀಗೆ ಮಾಡಬೇಕು? ಹಸ್ತಿನಾವತಿಯ ಪ್ರಜೆಗಳೆಲ್ಲ, ಮಹಾಸಾಧ್ವಿ ಮಹಾಪತಿಭಕ್ತೆ ಅಂತ ಅವಳ ಕಾಲಿಗೆ ಬೀಳುತ್ತಾರೆ. ಗುಣಗಾನ ಮಾಡುತ್ತಾರೆ.

'ಅಣ್ಣನ ಪುಣ್ಯ ದೊಡ್ಡದು' -- ಪಾಂಡು ಅಂದ.

ನನಗೂ ಹಾಗೆನ್ನಿಸಿತು. ಮೈಕಟ್ಟಿನಲ್ಲಿ ಅಣ್ಣ ತಮ್ಮ ಇಬ್ಬರೂ ಒಂದೇ. ಆದರೆ ಕಣ್ಣೇ ಇಲ್ಲದವನು ಏನನ್ನು ತಾನೆ ಸಾಧಿಸಬಲ್ಲ? ಗುರಿ

ಇಟ್ಟು, ಬಾಣ ಹೊಡೆಯದ ಮೇಲೆ ಕ್ಷತ್ರಿಯ ಹೇಗಾದಾನು? ಅಂಥವನಿಗೆ ಹೀಗೆ ಭಕ್ತಿಯಿಟ್ಟ ಹೆಂಡತಿ. ಕುಂತಿಗಿಂತ ಗಾಂಧಾರಿ ಹಸ್ತಿನಾವತಿಯಲ್ಲಿ ಪೂಜ್ಯ ಸ್ಥಾನಗಳಿಸಿದ್ದಾಳೆ. ಪೂಜ್ಯತೆ ಗಳಿಸುವ ಅವಕಾಶವೇ ನನಗೆ ಆಗಿಲ್ಲ, ಗಂಡನೊಡನೆ ಹೊರಟು ಇಲ್ಲಿಗೆ ತಪಸ್ಸಿಗೆ ಬಂದೆ ಎಂಬುದನ್ನು ಬಿಟ್ಟರೆ. ಗಂಡ ಕುರುಡೆಂದು ತಾನೂ ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ಪಟ್ಟಣದ ಜನಗಳ ಮಧ್ಯದಲ್ಲೇ ಇರುವ ಅವಳು ಮಹಾಸಾಧ್ವಿ ಎನಿಸಿಕೊಳ್ಳುವುದು ನನಗೆ ಮತ್ಸರವಾಯಿತು. ಹೌದು, ಈ ಕುಂತಿಗೆ ಮತ್ಸರವಾಯಿತು. ಆಗಬಾರದೇನು?

ಸೂತ ಗುಟ್ಟಿನಲ್ಲೆಂಬಂತೆ ಧ್ವನಿ ತಗ್ಗಿಸಿ ಹೇಳಿದ: 'ಭೀಷ್ಮರು ಸ್ವತಃ ಸಿಂಹಾಸನ ಏರುವುದಿಲ್ಲ. ನೀವು ಇತ್ತ ಬಂದುಬಿಟ್ಟಿರಿ. ಅಲ್ಲಿ ವಿಧ್ಯುಕ್ತವಾಗಿ ಆಡಳಿತಕ್ಕೆ ಮುದ್ರೆ ಒತ್ತುವವರೊಬ್ಬರು ಬೇಕಲ್ಲ. ಸದ್ಯಕ್ಕೆ ಭೀಷ್ಮರು ಧೃತರಾಷ್ಟ್ರನನ್ನೇ ಸಿಂಹಾಸನದ ಮೇಲೆ ಕೂರಿಸಿದ್ದಾರೆ.'

'ದೃಷ್ಟಿಹೀನನನ್ನು?' ಪಾಂಡು ಆಶ್ಚರ್ಯದಿಂದ ಕೇಳಿದ.

'ಆಪದ್ಧರ್ಮ. ವಾಸ್ತವವಾಗಿ ಆಳುವವರಂತೂ ಭೀಷ್ಮರೇ ತಾನೆ.'

ಇದರಿಂದ ನನಗೆ ಹೆಚ್ಚೇನೂ ಅನ್ನಿಸಲಿಲ್ಲ. ರಾಜಪುತ್ರ ಧೃತರಾಷ್ಟ್ರನಿಗೆ ಬೇಕೆಂದರೆ ಅರಮನೆಯಲ್ಲಿ ದಾಸಿಯರಿಗೇನೂ ಬರವಿರಲಿಲ್ಲ. ಅವನು ಸೇವೆಗೆ ಈಗಾಗಲೇ ದಾಸಿಯರನ್ನು ಕರೆಯುತ್ತಿದ್ದನೋ ಇಲ್ಲವೋ ನಾನು ಕಾಣೆ. ಈಗ ಒಂದು ಮದುವೆಯೂ ಆಗಿದೆ. ನನ್ನ ಮನಸ್ಸು ಎಂದಿನಂತೆ ನೆನಪಿನಲ್ಲಿ, ಕನಸಿನಲ್ಲಿ, ನೆನಪು ಕನಸುಗಳಲ್ಲಿ ಮಗ್ನವಾಯಿತು. ಈ ನಡುವೆ ಚಳಿಗಾಲ ಬಂತು. ಚಳಿ ಅಂದರೆ ಏನು, ಹಸ್ತಿನಾವತಿಯಲ್ಲಾಗಲೀ, ಭೋಜನಗರದಲ್ಲಾಗಲಿ ಕುಳಿತು ಕಲ್ಪಿಸಿಕೊಳ್ಳಲಾಗದ ಚಳಿ. ಬಾನಿಂದ ಮುರಿದು ಮುರಿದು ಉದುರಿ ಪರ್ವತವನ್ನೆಲ್ಲ ಬಿಳುಪಿನಿಂದ ಮುಚ್ಚಿ ಹೋದವು. ನಾವಿದ್ದ ತಪ್ಪಲಿಗೆ ಕೂಡ ಬಿಳಿಯ ಪೊರೆಗಟ್ಟಿತು. ಚಳಿಯಾದರೂ ಒಂದು ತೆರನಾದ ಸೊಗಸು. ಹೊರಗೆ ಬಿಳಿದಾದ ಪರ್ವತಗಳನ್ನು ನೋಡಿದರೆ ಹೋ ಎಂದು ಕೂಗಿಕೊಳ್ಳುವ ಹುರುಪು. ಆಗ ದೇವಲೋಕದ ಎಷ್ಟೋ ಜನರು ಮೇಲಿಂದ ಕೆಳಗೆ ಇಳಿದು

ಬಂದರು, ತಮ್ಮ ಮೇಕೆ, ಕುದುರೆ ಕತ್ತೆಗಳ ಮೇಲೆ ಸಾಮಾನು ಹೇರಿಕೊಂಡು. ಮೇಲೆ ಸಹಿಸಲಸಾಧ್ಯ ಚಳಿಯಂತೆ. ಈ ತಪ್ಪಲು ಇದ್ದುದರಲ್ಲಿ ಬೆಚ್ಚಗಂತೆ. ಪ್ರತಿ ಚಳಿಗಾಲದಲ್ಲೂ ಅವರಲ್ಲಿ ಕೆಲವರು ಕೆಳಗೆ ಇಳಿದು ಬರುತ್ತಾರಂತೆ. ಇನ್ನು ಕೆಲವರು ಇನ್ನೊಂದು ಕಡೆಯಿಂದ ಇಳಿದಿರುತ್ತಾರಂತೆ. ನಮ್ಮ ಕಡೆ ಇಳಿದವರು, ನಮ್ಮಿಂದ ಸ್ವಲ್ಪ ದೂರ ನಡೆದರೆ ಏಳು ಎಂಟು ಘಳಿಗೆಯ ದೂರದಲ್ಲಿ, ಗುಡಿಸಲು ಕಟ್ಟಿ ಬೀಡು ಬಿಟ್ಟರು. ನಮ್ಮ ವೈದ್ಯರೂ ಈ ಗುಂಪಿನಲ್ಲೇ ಬಂದಿದ್ದರು. ಆಗಾಗ್ಗೆ ಅವರೆಲ್ಲ ಬೇಟೆಯ ಪ್ರಾಣಿಗಳನ್ನೋ ಗೆಡ್ಡೆ ಗೆಣಸುಗಳನ್ನೋ ಹುಡುಕಿಕೊಂಡು ನಮ್ಮ ಕಡೆಗೆ ಬರುತ್ತಿದ್ದರು. ನಾವು ಒಮ್ಮೊಮ್ಮೆ ಬೀಸಿದ ಹಿಟ್ಟು ರೊಟ್ಟಿಗಳನ್ನು ಕೊಟ್ಟರೆ ಅದೆಷ್ಟು ಸಂತೋಷ ಅವರಿಗೆ! ಅವರಿಗೂ ನಮಗೂ ಮಾತಿನಲ್ಲಿ ಸ್ವಲ್ಪ ವ್ಯತ್ಯಾಸ. ಅವರ ಭಾಷೆ ನಮಗೆ ತಿಳಿಯದ ಇಲ್ಲ. ವೇದದಂತಹ ಭಾಷೆ; ಆಕಾಶದಲ್ಲಿರುವ ದೇವರಿಗೆ ಕೇಳಿಸುವಂತೆ ಗಟ್ಟಿಯಾದ ಉಚ್ಚಾರ ಅವರದು. ಎಷ್ಟಾದರೂ ದೇವಜನರು.

ಅವರಲ್ಲಿ ಒಟ್ಟು ಮೂವತ್ತೆರಡು ಗಣಗಳಂತೆ. ಒಂದೊಂದು ಗಣದಲ್ಲಿರುವ ಗಂಡಸರು ಹೆಂಗಸರೆಲ್ಲ ಪರಸ್ಪರ ಗಂಡಹೆಂಡಿರಂತೆ. ಒಂದು ಗಣಕ್ಕೆ ಸೇರಿದ ಆವ ಹೆಂಗಸು ತನ್ನ ಗಣದ ಯಾವ ಗಂಡಸನ್ನಾದರೂ ಕೂಡಬಹುದು. ಗಂಡಸೇ ಆಗಲಿ, ಹೆಂಗಸೇ ಆಗಲಿ ಯಾರು ಯಾರನ್ನು ಕರೆದರೂ ನಿರಾಕರಿಸುವಂತಿಲ್ಲ. ಗಂಡಸು ಹೆಂಗಸು ಇಬ್ಬರಿಗೂ ಸಮಾನ ಅಧಿಕಾರ. ಹುಟ್ಟುವ ಮಕ್ಕಳು ಇಡೀ ಗಣಕ್ಕೆ ಸೇರಿದವುಗಳು. ಎಲ್ಲರಿಗೆ ಎಲ್ಲರೂ ಗಂಡಂದಿರು, ಎಲ್ಲರಿಗೆ ಎಲ್ಲರೂ ಹೆಂಡತಿಯರು. ಸಂಕೋಚವಿಲ್ಲ, ನಾಚಿಕೆಯಿಲ್ಲ. ಈ ವಿಷಯದಲ್ಲಿ ಯಾರೂ ಭೇದ ಮಾಡುವಂತಿಲ್ಲ. ಮಾಡಿದರೆ ಗಣಮುಖ್ಯನು ಶಿಕ್ಷಿಸುತ್ತಾನೆ. 'ಒಂದು ಥರಕ್ಕೆ ಅವರದೇ ಚನ್ನ ಅಲ್ಲವೆ?' --- ಮಾದ್ರಿ ನನ್ನ ಕೈಲಿ ಅಂದಳು: 'ಅವರಲ್ಲಿ ನೋಡು, ಎಲ್ಲ ಹೆಂಗಸೂ ಬೆನ್ನ ಮೇಲೆ ಮಗು ಹೊತ್ತುಕೊಂಡೇ ತಿರುಗುತಾರೆ. ನಮ್ಮ ಹಾಗೆ ಯಾರೂ ಬಂಜೆಯರಲ್ಲ' ಹೌದೆನಿಸಿತು. ಹತ್ತಿಯ ಬಟ್ಟೆಯಿಲ್ಲ. ಹೆಂಗಸು ಗಂಡಸು ಆದಿಯಾಗಿ ದಪ್ಪ ಕಂಬಳಿಯ ವಸ್ತ್ರ. ಕಪಿಚಿಕೊಂಡಾಗ ಗುಡ್ಡದ ಜನರಂತೆ ಕಾಣುತ್ತಾರೆ.

ತೆರೆದರೆ ಸಾಕು ಎಷ್ಟು ಸುಂದರ ಮೈಕಟ್ಟು! ಸುಂದರ ಬಣ್ಣ. ನಮ್ಮಂತೆ ಕಪ್ಪು ಕಂದುಗಳ ಮಿಶ್ರ ಆರ್ಯರಲ್ಲ. ಅವರೇ ಮೂಲ ಆರ್ಯರಂತೆ. ನಮಗಿಂತ ಶುದ್ಧರಂತೆ. ಅವರದೇ ಮೂಲ ಕುಲಾಚಾರವಂತೆ. ಕೆಳಗೆ ಬಯಲಿನ ಆರ್ಯಾವರ್ತದ ಆಚಾರಗಳು ಅವರಲ್ಲಿ ಎಷ್ಟೋ ಜನಕ್ಕೆ ಗೊತ್ತಿಲ್ಲ. ಗೊತ್ತಿರುವವರು ಮಾತ್ರ, ನಮ್ಮದನ್ನು ಮೂಲಧರ್ಮ ಬಿಟ್ಟದ್ದೆಂಬ ಹೀನಭಾವದಿಂದ ಕಾಣುತ್ತಾರೆ. ಈ ಜನರಲ್ಲಿ ಯಾರಾದರೂ ಇತ್ತ ಬಂದರೆ ಸಾಕು, ಕರೆದು ಕೂರಿಸಿ ಮಾತನಾಡುವುದೇ. ನನಗೆ ಬೇರೆ ಜನಸಂಪರ್ಕವಿಲ್ಲದಿದ್ದ ಅಲ್ಲಿ ಒಂದು ಸಂತೋಷ. ಮಾದ್ರಿ ಕೂಡ ಅದನ್ನೇ ಕಾಯುತ್ತಿದ್ದಳು. ಅವರಂತೂ ನಮ್ಮ ದಿನಸಿ ಧಾನ್ಯಗಳಿಂದ ಮಾಡಿದ ಅಡುಗೆಯೆಂದರೆ ಬಾಯಿ ಬಿಡುತ್ತಿದ್ದರು. ಅವರ ಲೋಕದಲ್ಲಿ ಇವೆಲ್ಲ ಬೆಳೆಯುವುದಿಲ್ಲವಂತೆ.

ಸೂತ ಬಂದು ಹೋದ ಮೇಲೆ ಪಾಂಡು ನನ್ನ ಕೈಲಿ ಕೂಡ ಹೆಚ್ಚು ಮಾತನಾಡುವುದಿಲ್ಲ. ತನ್ನಲ್ಲೇ ಯೋಚಿಸುತ್ತಾ ಮಲಗಿರುತ್ತಾನೆ. ನೀರು ಗಡ್ಡೆಕಟ್ಟುವ ಚಳಿ. ರಾತ್ರಿಯ ವೇಳೆ ನನ್ನನ್ನು ಬಿಗಿದು ಹೆಚ್ಚು ತಬ್ಬಿಕೊಂಡಿರುತ್ತಾನೆ. ತಾಯಿಯ ಬೆಚ್ಚನೆಯ ಮೈಯನ್ನು ಮಗು ತಬ್ಬಿಕೊಳ್ಳುವಂತೆ. ಮೊದಮೊದಲು ಎಷ್ಟೋ ಮಾತನಾಡುತ್ತಿದ್ದ. ಈಗ ತೀರ ಕಡಿಮೆ. ನಾವು ಹಗಲು ಹೊತ್ತು ಹಿಮ ಮುಚ್ಚಿದ ಪರ್ವತದ ಬೇರೆ ಬೇರೆ ಮಗ್ಗುಲುಗಳನ್ನು ನೋಡಲು ಹೋಗುತ್ತಿದ್ದೆ. ಜೊತೆಗೆ ಮಾದ್ರಿಯೂ ಇರುತ್ತಿದ್ದಳು. ಯಾರಾದರೂ ದೇವಜನರು ಸಿಕ್ಕಿದರೆ ಸಾಕು ಅವರೊಡನೆ ಮಾತನಾಡುವುದು. ಅವರ ಆಚಾರ ವಿಚಾರ ಊಟ ತಿಂಡಿ ಇತ್ಯಾದಿ. ನಮ್ಮದನ್ನು ಹೇಳುವುದು. ಒಮ್ಮೊಮ್ಮೆ ನಮ್ಮ ತಪ್ಪಲಿನಲ್ಲೇ ಪಶ್ಚಿಮದ ಕಡೆಗೆ ನಡೆದರೆ ಎರಡು ಘಳಿಗೆ ದೂರದಲ್ಲಿ ಒಂದು ಹಳ್ಳಿ. ಕಡಿದಾದ ಪರ್ವತಮಾರ್ಗದಲ್ಲಿ ಕಟ್ಟಿದ ಆರು ಗುಡಿಸಲುಗಳು. ಕೆಳಗಿನ ನದಿ ದಾಟುವ ಬದಿಯಾಗಿದೆಯಂತೆ. ಮಾತಿಗೆ ಆ ಹಳ್ಳಿಯ ಹೆಂಗಸರು ಸಿಕ್ಕುತ್ತಿದ್ದರು. ಒಂದೊಮ್ಮೆ ಅವರೇ ನಮ್ಮನ್ನು ಹುಡುಕಿಕೊಂಡು ಬರುತ್ತಿದ್ದರು. ಅವರಿಗೆ ಅಕ್ಕಿ, ಹಿಟ್ಟು, ದಿನಸಿ, ಅಂಗಿ ಬಟ್ಟೆ ಬಯಸುತ್ತಾರೆ. ಅವರಲ್ಲಿ ಇನ್ನೊಂದು ಆಚಾರ. ಹಿಮಾಲಯದಲ್ಲಿರುವ

ಅಣ್ಣತಮ್ಮಂದಿರಿಗೆಲ್ಲ ಒಟ್ಟಿಗೆ ಮದುವೆ. ನಾಲ್ಕು ಅಣ್ಣತಮ್ಮಂದಿರಿದ್ದರೆ ಅವರಿಗೆ ಒಬ್ಬಳೋ ಇಬ್ಬರೋ ನಾಲ್ವರೋ ಐವರೋ ಹೆಂಡಂದಿರನ್ನು ತರುತ್ತಾರೆ. ಅವರೆಲ್ಲರೂ ಎಲ್ಲ ಸೋದರರಿಗೂ ಒಟ್ಟಿಗೆ ಹೆಂಡಿರಾಗುತ್ತಾರೆ. ಯಾವ ಹೆಂಡತಿಯ ಹೊಟ್ಟೆಯಲ್ಲಿ ಮಗುವಾದರೂ ಸೋದರರಲ್ಲಿ ಹಿರಿಯನ ಹೆಸರಿನಿಂದ ನಾಮಕರಣ. 'ಇದೂ ಒಂದು ಥರಕ್ಕೆ ಚಂದವಲ್ಲವೆ?' -- ಮಾದ್ರಿ ಅಂದಳು. ನಾನು ಬಾಯಿಬಿಟ್ಟು ಹೂ ಅನ್ನಲಿಲ್ಲ. ಅಯ್ಯಾ ನಿನಗೆಷ್ಟು ಜನ ಹೆಂಡತಿಯರು ಎಂದು ಒಬ್ಬನನ್ನು ಕೇಳಿದರೆ ಅವನು ನಾಲ್ಕು ಬೆರಳುಗಳನ್ನು ಎತ್ತಿ ತೋರಿಸುತ್ತಿದ್ದ. ನಿನಗೆ ಗಂಡಂದಿರೆಷ್ಟು ಎಂದು ಪಕ್ಕದಲ್ಲಿದ್ದ ಅವನ ಒಬ್ಬ ಹೆಂಡತಿಯನ್ನು ಕೇಳಿದರೆ ಆರು ಜನ ಎನ್ನುತ್ತಿದ್ದಳು. ಅಂದರೆ ಆರು ಜನ ಸೋದರರು. ನಾಲ್ವರು ಹೆಂಡಂದಿರು. ನಾನು ಮಾದ್ರಿ ಪರಸ್ಪರ ಮುಖ ನೋಡಿಕೊಳ್ಳುತ್ತಿದ್ದೆವು. ಮಾದ್ರಿ ತಲೆ ಬಗ್ಗಿಸಿ, 'ಅಕ್ಕ, ನಮ್ಮ ಆಶ್ರಮಕ್ಕೆ ಹೋಗೋಣ ಬಾ' - ಎನ್ನುತ್ತಿದ್ದಳು.

ಚಳಿಗಾಲ ಕಳೆಯುತ್ತಾ ಬಂದಿತ್ತು. ನಮ್ಮ ತಪ್ಪಲಿನಲ್ಲಿ ಆಗಲೇ ಹಿಮ ಕರಗಿ ನೀರು ಹರಿಯಲು ಶುರುವಾಗಿತ್ತು. ಪರ್ವತಗಳು ಮಾತ್ರ ಇನ್ನೂ ಬೆಳ್ಳಗೆ, ಆದರೆ ನಡುನಡುವೆ ಹಿಮ ಕರಗಿದ ಭಾಗದಲ್ಲಿ ಕಪ್ಪಗೆ ಕಾಣುತ್ತಿದ್ದವು. ಒಂದು ರಾತ್ರಿ ಮಲಗಿದ್ದಾಗ ಪಾಂಡುರಾಜ ಕತ್ತಲೆಯಲ್ಲಿ ನನ್ನ ತೋಳು ಹಿಡಿದು ಎಂದ: 'ಕುಂತಿ, ನಾನು ಇಲ್ಲಿಗೆ ಬರಲೇ ಬಾರದಾಗಿತ್ತು.'

'ಯಾಕೆ, ಇನ್ನೂ ಔಷಧಿ ಫಲ ಕೊಟ್ಟಿಲ್ಲ ಅಂತಲೆ?'

'ಬರೀ ಅಷ್ಟೆ ಇಲ್ಲ. ನಾನು ಬಂದದ್ದರಿಂದ ದೊಡ್ಡಪ್ಪ ಧೃತರಾಷ್ಟ್ರನಿಗೆ ಮದುವೆ ಮಾಡಿದ. ಅವನ ಹೆಂಡತಿ ಬಸುರಿಯೂ ಆಗಬಹುದು, ಇಷ್ಟರಲ್ಲಿ ಆಗಿಯೂ ಇರಬಹುದು. ಹೇಗೂ ಅವನನ್ನು ಸಿಂಹಾಸನದ ಮೇಲೆ ಕೂರಿಸಿದಾರೆ. ಮುಂದೆ ಕುರು ರಾಜ್ಯ ಅವನ ಮಕ್ಕಳಿಗೆ. ಮೊದಲು ಪಟ್ಟಕ್ಕೆ ಕೂತ, ದಿಗ್ವಿಜಯ ಮಾಡಿ ರಾಜ್ಯ ವಿಸ್ತರಿಸಿದ ನಾನು ಈ ಪರ್ವತದ ತಪ್ಪಲಿನಲ್ಲೇ ಉಳಿಯಬೇಕಾದೀತೇನೋ!'

ನನಗೆ ಇದು ಹೊಳೆದೇ ಇರಲಿಲ್ಲ. ಗಾಬರಿಯಾಯಿತು. ಅಲ್ಲಿಂದ ದಿನಸಿ ಧಾನ್ಯ ಬಟ್ಟೆಬರೆಗಳನ್ನೆಲ್ಲ ಸರಬರಾಜಾಗುತ್ತಿರುವುದರಿಂದ ಇಲ್ಲಿ ನೆಮ್ಮದಿಯಿಂದಿದ್ದೇವೆ. ನಾಳೆ ಅವರು ಅದನ್ನೂ ನಿಲ್ಲಿಸಿಬಿಟ್ಟರೆ ಈ ದೇವಜನರಂತೆ ಅಥವಾ ಕೆಳಗಿನ ಬೆಟ್ಟಗಾಡಿನವರಂತೆ ಬರೀ ಬೇಟೆ ಗೆಡ್ಡೆ ಗೆಣಸುಗಳಲ್ಲಿರಬೇಕು, ಸ್ವತಃ ಆಡುಮೇಕೆಗಳ ಕೂದಲು ಕತ್ತರಿಸಿ ನೇಯ್ದು ಕಂಬಳಿ ಸುತ್ತಿಕೊಂಡು. ಮಹಾರಾಜ ನಿಟ್ಟುಸಿರು ಬಿಟ್ಟದ್ದು ಕೇಳಿಸಿತು. 'ವಾಪಾಸು ಹೊರಟು ಹೋಗೋಣ' --ಎಂದೆ.

'ಅದನ್ನೂ ಯೋಚಿಸಿ ನೋಡಿದೆ. ತಪಸ್ಸಿಗೆ ಅಂತ ಹೇಳಿ ಇಲ್ಲಿಗೆ ಬಂದಾಗಿದೆ. ತಪಸ್ಸಿನ ಫಲವೇನು? ಏನಾದರೂ ಸಾಧನೆ ಮಾಡಿಕೊಂಡರೆ ಹೋಗುವ ಮುಖ ಇರುತ್ತೆ. ಜನಗಳ ಎದುರಿಗೂ ಅಷ್ಟೆ. ದೊಡ್ಡಪ್ಪನ ಎದುರಿಗೂ ಅಷ್ಟೆ. ಒಂದು ಮಗುವಾದರೂ ಆಗಿದ್ದರೆ' - ಎಂದು ಮತ್ತೆ ತೋಳನ್ನು ಹಿಸುಕಿದ.

'ಔಷಧಿ ಫಲಿಸಲಿಲ್ಲವಲ್ಲ ಇನ್ನೂ' - ಎಂದೆ.

'ಬೇರೇನೂ ದಾರಿ ಇಲ್ಲವೆ?' - ನನ್ನನ್ನೇ ಕೇಳಿದ. ಕೇಳಿ ಸುಮ್ಮನಾದ. ಬೇರೆ ಯಾವ ದಾರಿಯುಂಟು? ಈ ಪರ್ವತಗಳು ನನ್ನಲ್ಲಿ ಮರುಕಳಿಸುತ್ತಿದ್ದುದು ತಕ್ಷಣ ಮನಸ್ಸಿಗೆ ಬಂತು. ಸಖಿ ಸತ್ತ ಮೇಲೆ ಅದನ್ನು ತಿಳಿದವರು ಇಲ್ಲಿ ಯಾರೂ ಇಲ್ಲ. ಗಂಡನೊಡನೆ ಹೇಳಿಬಿಡಬೇಕೆಂಬ ಬಯಕೆ ಹಲವು ಸಲ ಹುಟ್ಟಿತ್ತು. ಆದರೆ ಮುಚ್ಚಿಯೇ ಇಟ್ಟಿದ್ದೆ. ಈಗ ಹೇಳಬೇಕೆಂಬ, ಹೇಳಬಹುದೆಂಬ ಮನಸ್ಸು ಬಂತು. 'ನಿನಗೆ ಗೊತ್ತಿಲ್ಲ. ಹಾಗೆ ನೋಡಿದರೆ ನಮಗೊಬ್ಬ ಮಗ ಇದಾನೆ, ಈಗ ಒಂಬತ್ತು ಹತ್ತು ವರ್ಷದವನು' ಎಂದೆ.

'ಹೇಗೆ?'

'ಕಾನೀನ' --ಎಂದು ಸುಮ್ಮನಾದೆ.

ಮಹಾರಾಜ ಮಾತನಾಡಲಿಲ್ಲ. ಸಿಟ್ಟೋ ತಿರಸ್ಕಾರವೋ ಏನೋ ನನಗೆ ತಿಳಿಯಲಿಲ್ಲ. ನನ್ನ ಮನಸ್ಸಂತೂ ಹಗುರವಾಯಿತು. ಒಂದು ಘಳಿಗೆಯೇ ಕಳೆದ ಮೇಲೆ ಕೇಳಿದ. 'ಹೇಗೆ ಆಯಿತು? ಈಗ ಎಲ್ಲಿದೆ?'

ಆದ ರೀತಿಯನ್ನು ವಿವರಿಸಿದೆ. ಅಪ್ಪ ಅಮ್ಮ ಗುಟ್ಟು ಮಾಡಿದ್ದನ್ನೂ
ಹೇಳಿ, ಈಗ ಎಲ್ಲಿದೆಯೋ. ಆ ಸೂತ ಹೆಂಗಸು ಎಲ್ಲಿಗೆ ಕರೆದೊಯ್ದಳೋ
ಕಾಣೆ. ನಾವಿಬ್ಬರೂ ನನ್ನ ತಂದೆಯ ಊರಿಗೆ ಹೋಗಿ ಕೇಳಿದರೆ ಅವರು
ಹುಡುಕಿಸಿ ಕೊಡದೆ ಇರುವುದಿಲ್ಲ' - ಎಂದೆ. ಎಲ್ಲವನ್ನೂ ಹೇಳುತ್ತಾ
ಹೇಳುತ್ತಾ ಉತ್ಸಾಹ ಹುಟ್ಟಿತು. ನನ್ನ ಮಗುವನ್ನು ವಾಪಾಸು ತಂದು
ನಾವಿಬ್ಬರೂ ತಬ್ಬಿ ಸಾಕುವ ಸುಖವೇ ಮೈಕೈಗಳಲ್ಲೆಲ್ಲ ಜಿನುಗುತ್ತಿತ್ತು
ಮಹಾರಾಜ ಮಾತನಾಡಲಿಲ್ಲ. ಹೊರಗೆ ಪರ್ವತದ ಗಾಳಿ ಬೀಸುತ್ತಿತ್ತು
ಎರಡು ಪರ್ವತಗಳ ನಡುವಣ ತಪ್ಪಲಿನಲ್ಲಿ ಹರಿಯುವ ಗಾಳಿ. 'ಕುಂತೀ'
ಎಂದು ಅವನು ಹತ್ತಿರ ಬಂದು ಬಲಗೈಯನ್ನು ನನ್ನ ದಟ್ಟಿದೊಳಗ
ಸರಿಸಿ ವಸ್ತ್ರದೊಳಗೆ ಹಾಯಿಸಿ ನನ್ನ ಹೊಟ್ಟೆಯನ್ನು ಒತ್ತಿ ಒತ್ತಿ ಸವರ
ಹೇಳಿದ: 'ಕುಂತೀ, ನಿನ್ನದು ಸದಾ ಮೊಳೆತು ಚಿಗುರಿ ಬೆಳೆಸುವಂತಹ
ಹೊಟ್ಟೆ. ಆದರೆ ಬೀಜಶಕ್ತಿಯೇ ಇಲ್ಲವಾಯಿತಲ್ಲ.' ಅನಂತರ ಹಾಗೆಯೇ
ತಬ್ಬಿಕೊಂಡು ಮುಖವನ್ನು ನನ್ನೆರಡು ಮೊಲೆಗಳ ನಡುವಣ ಎದೆಗ
ಹುದುಗಿಸಿ ನಿಟ್ಟುಸಿರಿಡತೊಡಗಿದ ಬಿಸಿಯ ಹಿತ ಪರುವಂತೆ. ನನ್ನ ಮನಸ್ಸು
ಆ ಮಗುವನ್ನು ಕಲ್ಪಿಸಿಕೊಳ್ಳುತ್ತಿತ್ತು. ಕೈಗಳು ಮಹಾರಾಜನ ತಲೆಯನ್ನು
ಬಿಗಿಯಾಗಿ ತಬ್ಬಿ ಹಿಡಿದಿದ್ದವು. ತಪ್ಪಲಿನ ಗಾಳಿ ಒಂದೇ ಹದಕ
ಹರಿಯುತ್ತಿತ್ತು. ಹಿಂದಿನಿಂದ ಮುಂದಕ್ಕೋ ಮುಂದಿನಿಂದ ಹಿಂದಕ್ಕೋ
ತಿಳಿಯುತ್ತಿರಲಿಲ್ಲ. ಹಸ್ತಿನಾವತಿಗೆ ಬಂದ ಮೇಲೆ ತಿಳಿದಿತ್ತು. ಮಹಾರಾಜನ
ಅಜ್ಜಿ ಸತ್ಯವತಿಗೂ ಕಾನೀನ ಪುತ್ರನಿದ್ದಾನೆ. ದೊಡ್ಡ ವೇದಜ್ಞನೆನಿಸಿದ್ದಾ
ಈಗ. ನನ್ನ ಇಬ್ಬರು ವಿಧವೆ ಅತ್ತೆಯರಿಗೂ ನಿಯೋಗ ಮಾಡಿ ನನ್ನ
ಗಂಡ, ಧೃತರಾಷ್ಟ್ರರನ್ನು ಹುಟ್ಟಿಸಿದವನು ಆ ಕಾನೀನ ಪುತ್ರನೆ. ಹಸ್ತಿನಾವತಿ
ಬಂದನೆಂದರೆ ಪ್ರಜಾಸ್ತೋಮವೇ ಅವನ ಕಾಲಿಗೆರಗುತ್ತದೆ. ನನ್ನ
ಮಗನನ್ನೇಕೆ ನನ್ನ ಅಪ್ಪ ಮುಚ್ಚಿಬಿಟ್ಟರು? ಗುಟ್ಟು ಮಾಡಿ ನನ್ನನ್ನೂ
ಮುಚ್ಚಿಟ್ಟಿದ್ದರು? ಸತ್ಯವತಿ ಮೀನುಗಾರಳಂತೆ. ಅವರಲ್ಲಿ ಯಾವ
ಸಂಕೋಚವೂ ಇಲ್ಲದೆ ಕಾನೀನನೊಡನೆಯೇ ವಧುವನ್ನು
ಮದುವೆಯಾಗುತ್ತಾರೆ. ಈ ಕ್ಷತ್ರಿಯರೇಕೆ ನಾಚಿಕೆಪಟ್ಟುಕೊಳ್ಳಲ
ಶುರುಮಾಡಿದ್ದಾರೆ? ಗಾಳಿಯ ಸದ್ದು ಕಡಿಮೆಯಾಯಿತು. ಭಾ

ಪರ್ವತಗಳು ಸದ್ದಿಲ್ಲದೆ ನಿಂತಿವೆ. ಬೆಳದಿಂಗಳಿದೆಯೋ, ಮೋಡ ಮುಚ್ಚಿದೆಯೋ! ಹಸ್ತಿನಾವತಿಯವರಿಗಿಲ್ಲದ ಸಂಕೋಚ ನಮ್ಮ ಕಡೆ ಯಾಕೆ ಶುರುವಾಗಿದೆ, ಎನ್ನಿಸಿತ್ತು.

'ಮಹಾರಾಜ' -- ಎಂದೆ: 'ನನ್ನನ್ನು ನಿನಗೆ ಹೆಂಡತಿಯಾಗಿ ಕೊಟ್ಟ ಮೇಲೆ ನನ್ನ ಮಗುವೂ ನಿನ್ನದೇ ಅಲ್ಲವೆ?'

'ಹಿಂದಿನ ಶಾಸ್ತ್ರ ನನಗೆ ಗೊತ್ತಿದೆ. ಆದರೆ ಆ ಮಗುವನ್ನು ಹುಡುಕಿತಂದು ಹಸ್ತಿನಾವತಿಗೆ ಕರೆದೊಯ್ದರೂ ಜನ ಒಪ್ಪುವುದಿಲ್ಲ. ಕಾನೀನ ಸ್ವೀಕಾರ ಮದುವೆಯಲ್ಲೇ ಆಗಬೇಕಾಗಿತ್ತು ಅಲ್ಲವೆ?

ಮನಸ್ಸು ನನ್ನ ಮದುವೆಯನ್ನು ಚಿತ್ರಿಸಿಕೊಳ್ಳುತ್ತಿತ್ತು. ಒಂದು ವರ್ಷದ ಮಗುವನ್ನು ಕಂಕುಳಲ್ಲಿ ಎತ್ತಿಕೊಂಡು ಅಥವಾ ಹೆಜ್ಜೆ ಹಾಕುವ ಹುಡುಗ ಅಥವಾ ಹುಡುಗಿಯನ್ನು ಪಕ್ಕದಲ್ಲಿ ನಿಲ್ಲಿಸಿಕೊಂಡು ಆ ಮಗುವಿನೊಡನೆ ವರನ ಕೊರಳಿಗೆ ಮಾಲೆ ಹಾಕಿ ಅವನು ತಾಯಿ ಮಗುವನ್ನು ಹೆಂಡತಿ ಮಗು ಎಂದು ಸ್ವೀಕರಿಸಿ. ಎಷ್ಟು ಚೆನ್ನ ಎನ್ನಿಸಿತು. 'ಇತ್ತೀಚೆಗೆ ಗಂಡುಗಳು ಅಂತಹ ಹೆಣ್ಣುಗಳನ್ನು ಒಲ್ಲೆ ಅನ್ನುತ್ತಾರೆ. ಇಲ್ಲದಿದ್ದರೆ ನಾವ್ಯಾಕೆ ಇದನ್ನು ಮುಚ್ಚಿಡಬೇಕಾಗಿತ್ತು? ಮಗಳು ಅಳುತ್ತಾಳೆ ಅಂತ ನನಗೆ ಗೊತ್ತಿಲ್ಲವೆ?' -- ಅಪ್ಪ ತಾಯಿಗೆ ಸಮಾಧಾನ ಹೇಳುತ್ತಿದ್ದ ಮಾತು ನೆನಪಿಗೆ ಬಂತು. ಇದೇನು ತೊಡಕು ಎನ್ನಿಸಿ, ಎಲ್ಲವನ್ನೂ ಕಿತ್ತು ಹೋಗಬೇಕೆನ್ನಿಸಿತು. ಎಲ್ಲಿಗೆ ಹೋಗುವುದು? ಎದೆಗೆ ಮುಖವಿಟ್ಟು ನಿಟ್ಟುಸಿರಿಡುತ್ತಿದ್ದ ಗಂಡನ ತಲೆಯನ್ನು ತಬ್ಬಿ ಹಿಡಿದು ನಿಸ್ಸಹಾಯಕಳಾಗಿ ಮಲಗಿದ್ದೆ.

ಮಹಾರಾಜ ಮತ್ತೆ ಮತ್ತೆ ನನ್ನ ಹೊಟ್ಟೆಯನ್ನು ಸವರುತ್ತಿದ್ದ, ಮೆಚ್ಚುಗೆಯಿಂದ ಎನ್ನಿಸುವಂತೆ. ಏನೋ ಹೇಳಲು ಯತ್ನಿಸುತ್ತಿದ್ದಾನೆ. ಏನು ಹೇಳುತ್ತಾನೆಂದು ನನಗಾಗಲೇ ಅರ್ಥ ಅರಿವಾಗಿದೆ. ಅವನನ್ನು ಬಿಗಿಯಾಗಿ ತಬ್ಬಿ ಮುದ್ದಿಸಿ ಕಿವಿಯಲ್ಲಿ ಉಸುರಿದೆ: 'ಹೇಳು ಮಹಾರಾಜ. ಹೇಳು,'

'ನಮಗಿಂತ ಮೊದಲು ಧೃತರಾಷ್ಟ್ರನಿಗೆ ಮಕ್ಕಳಾದರೆ ನಾವು,

ಕೆಟ್ಟೆವು.'

'ನಾನೇನು ಮಾಡಲಿ ಹೇಳು. ನೀನು ಹೇಳಿದಂತೆ ಕೇಳ್ತೀನಿ.

'ನಿನ್ನ ಹೊಟ್ಟೆ ಎಂದಿಗೂ ಹಾಕಿದ ಬೀಜ ಒಣಗಿಸುವುದಿಲ್ಲ. ನನಗೊಂದು ಮಗು ಕೊಡು. ಬೇಗ. ಅರ್ಥವಾಯಿತೆ?'

* * *

ಶಾಸ್ತ್ರದ ಸಂಗತಿ ನಮಗೆ ಚೆನ್ನಾಗಿ ಗೊತ್ತಿತ್ತು. ಸ್ವಂತ ಪುರೋಹಿತನೇ ಬೀಜದಾನಿ. ಆದರೆ ಹಸ್ತಿನಾವತಿಯಿಂದ ನಮ್ಮೊಡನೆ ಬಂದ ಪುರೋಹಿತ ಇಲ್ಲಿಯ ಮೂಳೆ ಮರುಟುವ ಚಳಿ ತಡೆಯಲಾರದೆ ಊರಿಗೆ ಹೋಗಿದ್ದ. ಹೋಮವನ್ನು ಮಹಾರಾಜನೇ ಮಾಡುತ್ತಿದ್ದ. ಶೀತಕಾಲ ಪೂರ್ತಿ ಮುಗಿದು ಹವ ಹಿತಕರವಾದ ನಂತರವೇ ಅವನು ಬರುವುದು. ಕಾಯಲು ವ್ಯವಧಾನವಿಲ್ಲ. ಮಹಾರಾಜ ಎಲ್ಲವನ್ನೂ ಮೊದಲೇ ಆಲೋಚಿಸಿದ್ದನೆಂದು ನನಗೆ ಅರ್ಥವಾಯಿತು. ದೇವಲೋಕದ ಬ್ರಾಹ್ಮಣಮುಖ್ಯನಿಗೆ ಹೇಳಿಕಳಿಸಿದ. ಸನಾತನ ಧರ್ಮವನ್ನೆಲ್ಲ ತಿಳಿದು ಜನರ ನ್ಯಾಯ ತಪ್ಪುಗಳನ್ನು ವಿಚಾರಿಸಿ ಶಿಕ್ಷೆ ವಿಧಿಸುವ ಯಮಧರ್ಮ ನಿಯಂತ್ರವೇ ಬಂದ. ನೋಡಿದ ತಕ್ಷಣ ನನಗೆ ದೂರ್ವಾಸರ ನೆನಪಾಯಿತು. ಹಾಗೆಯೇ ಗಡ್ಡ, ಅಂಥದೇ ಮುಖ. ಆದರೆ ಮೈಕೈಗಳೆಲ್ಲಕ್ಕೂ ಭಾರವಾದ ಕಂಬಳಿಯ ನಿಲುವಂಗಿ ಹಾಕಿಕೊಂಡಿದ್ದಾನೆ. ನಡುವಯಸ್ಸು. ನೇರವಾಗಿ ಆಕಾಶಕ್ಕೆಲ್ಲ ಕೇಳಿಸುವಂಥ ಧ್ವನಿ. ನಮ್ಮ ಭೋಜನವನ್ನು ತುಂಬ ಮೆಚ್ಚಿಕೊಂಡ. ನನ್ನಲ್ಲಿ ಬಯಕೆ, ಆತುರ. ದೂರ್ವಾಸರೊಡನೆ ಆದಾಗ ತಿಳಿವಳಿಕೆಯೇ ಇಲ್ಲದ ಕುತೂಹಲವಿತ್ತು. ಈಗ ತಿಳಿವಳಿಕೆಯಿದೆ. ಆಶೆಯಿದೆ. ಗುರಿ ಗೊತ್ತಿದೆ. ಇಷ್ಟು ದಿನ ಸೊರಗಿ ನರಳಿರುವ ನೆನಪಿದೆ. ಆದರೆ ಈಗ ನನ್ನ ಪತಿಯ ಪ್ರಾರ್ಥನೆಯಂತೆ ಬಂದಿರುವ ಯಮನಲ್ಲಿ ಆತುರವೇನೂ ಕಾಣಲಿಲ್ಲ. ಆತ ನಿತ್ಯತೃಪ್ತ. ಹೊಸ ಹೆಂಗಸೆಂಬ ವಿಶೇಷವೂ ಅವನಿಗೆ ಇದ್ದಂತಿಲ್ಲ. ಅವನ ಗಣದಲ್ಲಿ ಎಷ್ಟು ಹೆಂಗಸರನ್ನು ಅವನು ಇದುವರೆಗೂ ರಮಿಸಿದ್ದಾನೋ!

ಕೇಳಿದ: 'ಮಹಾರಾಜ, ನಿಯೋಗ ಅನ್ನುತೀರಲ್ಲ, ಅದಕ್ಕೆ ಯಾವ ಶಾಸ್ತ್ರಾಧಾರವಿದೆ?'

'ಪತಿಯು ಅಶಕ್ತನಾದರೆ, ಅಥವಾ ಮಕ್ಕಳಿಲ್ಲದೆ ಸತ್ತರೆ ಅವನ ವಂಶಾಭಿವೃದ್ಧಿಗಾಗಿ ಅವನ ಹೆಂಡತಿಗೆ....'

'ಓಹೋ ಹೋ ಹೋ!' ಆಕಾಶವೆಲ್ಲೆಲ್ಲ ಹರಡುವಂತೆ ನಕ್ಕು ಅವನು ಹೇಳಿದ: 'ಮೂಲ ಧರ್ಮವನ್ನು ನೀವು ಹೇಗೆ ಹೇಗೋ ಬಳಸಿ ಎಲ್ಲೆಲ್ಲಿಗೊ ಒಯ್ದಿದ್ದೀರ. ಗಣದಲ್ಲಿ ಒಬ್ಬ ಸತ್ತರೆ ಉಳಿದ ನೂರಾರು ಜನ ಇರುವುದಿಲ್ಲವೆ? ನಮ್ಮಲ್ಲಿ ಇಂಥ ಪದ್ಧತಿಯೂ ಇಲ್ಲ, ಅದರ ಅಗತ್ಯವೂ ಇಲ್ಲ. ಧರ್ಮದ ಜ್ಞಾನ ನನಗೆ ಸ್ಪಷ್ಟವಾಗಿದೆ. ಅದಕ್ಕೇ ನನ್ನನ್ನು ಧರ್ಮಾಧಿಕಾರಿಯಾಗಿ ನೇಮಿಸಿರುವುದು.'

'ಧರ್ಮರಾಜ, ಧರ್ಮಕ್ಕೆ ದೇಶಾಚಾರ ಅಂತ ಬೇರೆ ಒಂದು ಮುಖವುಂಟು. ನಮ್ಮ ಕಡೆಯ ಆಚಾರ ಹೀಗೆ. ಒಬ್ಬನಿಗೆ ಒಬ್ಬಳೇ ಪಟ್ಟಮಹಿಷಿ. ಇನ್ನೆಷ್ಟು ಜನರೂ ಇರಬಹುದು. ಆದರೆ ಒಬ್ಬ ಹೆಂಗಸಿಗೆ ಒಬ್ಬನೇ ಗಂಡ. ಹಲವು ಜನ ಸಾಧ್ಯವಿಲ್ಲ. ನಮ್ಮ ಪದ್ಧತಿಗೆ ಅನುಗುಣವಾಗಿ ನೀನು ನಿಯೋಗ ಮಾಡಬೇಕೆಂದು ನನ್ನ ಪ್ರಾರ್ಥನೆ' -- ಮಹಾರಾಜ ವಿನೀತನಾಗಿ ಕೇಳಿಕೊಂಡ.

'ಆಗಬಹುದು. ಪದ್ಧತಿಯೇ ಇಲ್ಲವಾದ್ದರಿಂದ ನಮ್ಮ ಆಚಾರದಲ್ಲಿ ನಿಷೇಧವನ್ನೇನೂ ಹೇಳಿಲ್ಲ. ಹೆಂಡತಿ ಅಂದರೆ ಪೂರ್ತಿ ಸ್ವಂತದ, ವೈಯಕ್ತಿಕ ಆಸ್ತಿ ಎಂದು ಭಾವಿಸುವುದು ಅಧರ್ಮ ಅಂತ ಮಾತ್ರ ನಮ್ಮ ಧರ್ಮ. ಇವಳನ್ನು ನಾನೇನು ಮದುವೆಯಾಗುವುದಿಲ್ಲವಾದ್ದರಿಂದ ನಿನ್ನ ಕೋರಿಕೆ ನನಗೆ ನಿಷಿದ್ಧವಲ್ಲ.'

ಪಾಂಡು ಮಹಾರಾಜ ನನ್ನಿಂದ ಪ್ರಮಾಣ ಮಾಡಿಸಿಕೊಂಡ: ಈ ಪುರುಷನೊಡನೆ ನಾನು ಮೋಹಗೊಳ್ಳುವುದಿಲ್ಲ. ಅವನು ಸಮೀಪಸ್ಥನಾಗಿರುವಾಗ ನನ್ನ ಮನಸ್ಸೆಲ್ಲ ಪತಿಯಲ್ಲಿ ಲೀನವಾಗಿರುತ್ತದೆ. ಸಂತಾನಾಪೇಕ್ಷೆಯ ವಿನಾ ನನ್ನಲ್ಲಿ ಬೇರೆ ಬಯಕೆ ಇರುವುದಿಲ್ಲ. ಗರ್ಭ

ಕಟ್ಟಿದುದು ಖಚಿತವಾದ ತಕ್ಷಣ ನಾನು ಈತನನ್ನು ಪಿತೃಸಮಾನನೆಂದು ಭಾವಿಸಿ ದೂರವಾಗುತ್ತೇನೆ....

ಪ್ರಮಾಣ ಮಾಡಿದೆ, ಗರ್ಭ ಕಟ್ಟಿದುದು ಖಚಿತವಾದ ತಕ್ಷಣ ನಾನು ಆತನಿಂದ ದೂರವಾದೆ ಎಂಬ ಭಾಗದ ಪ್ರಮಾಣ ಉಳಿಯಿತು. ಪಾಂಡುವಿಗೆ ಅನ್ಯಾಯ ಮಾಡುವ ಮನಸ್ಸು ಇರಲಿಲ್ಲ. ಆದರೆ ಪ್ರಮಾಣವು ಅಸಾಧ್ಯವಾದುದನ್ನು ಬೇಡಿತ್ತು. ಇದುವರೆಗೆ ನಿಯೋಗ ಮಾಡಿಸಿಕೊಂಡ ಯಾವ ಹೆಂಗಸು ತಾನೆ, ನಮ್ಮತ್ತೆ ಅಂಬಾಲಿಕಾ ಅಂಬಿಕೆಯರು ಕೂಡ, ನಿಯೋಗಿಯನ್ನು ಪಿತೃವೆಂದು ಭಾವಿಸಿದ್ದರು? ಕೃಷ್ಣದ್ವೈಪಾಯನನು ಕೂಡ ಇವರನ್ನು ಪುತ್ರಿಯರೆಂದು ಭಾವಿಸಿದ್ದನೊ? ಆ ಭಾವನೆ ಬಂದರೆ ನಿಯೋಗ ಕ್ರಿಯೆಯೇ ಅಸಾಧ್ಯವಲ್ಲವೆ? ಆ ದಿನದಿಂದ ಪಾಂಡುರಾಜ ಹಿಂಬದಿಯ ಮಾದ್ರಿಯ ಗುಡಿಸಿಲಿನಲ್ಲಿರುತ್ತಿದ್ದ. ದೇವಧರ್ಮಾಧಿಕಾರಿ ನಮ್ಮ ಗುಡಿಸಿಲಿನ ಪಾಂಡುರಾಜನ ಸ್ಥಾನದಲ್ಲಿ. ನಾನು ಅವನ ಸೇವೆಮಾಡುತ್ತಿದ್ದೆ. ಬಿಸಿ ಬಿಸಿ ಕಾಯಿಸಿದ ನೀರಿನಲ್ಲಿ ಎರೆದು ಮೈ ಒರೆಸಿ ಬಟ್ಟೆಗೆ ತೊಡಿಸುತ್ತಿದ್ದೆ. ಮೃಷ್ಟಾನ್ನ ಮಾಡಿ ಸ್ವತಃ ಕೈಗಳಿಂದ ಇಕ್ಕಿ ಉಣ್ಣಿಸುತ್ತಿದ್ದೆ. ಅಗ್ನಿಗೆ ಹಾಕುವುದಕ್ಕಿಂತ ಹೆಚ್ಚು ತುಪ್ಪವನ್ನು ಅವನ ಬಿಸಿ ಅನ್ನದ ಮೇಲೆ ಹರಿಯುವಂತೆ ಹಾಕುತ್ತಿದ್ದೆ. ರಾಜಕುಮಾರಿಯಾಗಿ ಹುಟ್ಟಿದ್ದ ನಾನು ಸೇವೆ ಮಾಡಿಸಿಕೊಂಡೇ ಬೆಳೆದಿದ್ದೆ. ನಾನೇ ಮಾಡಿದ್ದುದು ದೂರ್ವಾಸ ಮುನಿಗೆ ಮಾತ್ರ. ಗಂಡ ಪಾಂಡುರಾಜನಿಗೆ ಮಾಡುವ ಬಯಕೆಯಿತ್ತು. ಆದರೆ ಅವನು ಎಂದೂ ಅರ್ಹನಾಗಲಿಲ್ಲ. ಅವನ ಬಗೆಗೆ ಅನುಕಂಪ ಬೆಳೆದಿತ್ತು. ಕರುಣೆಯಿತ್ತು. ಆದರೆ ಪಾದ ಒತ್ತಿ ದಾಸಿಯಂತೆ ಎಲ್ಲವನ್ನೂ ಮಾಡುವ ಸ್ವಯಂಪ್ರೇರಣೆ ಎಂದೂ ಆಗಲಿಲ್ಲ. ಈ ದೇವಧರ್ಮಾಧಿಕಾರಿಗೆ ಹೀಗೆ ಮಾಡುವ ಮನಸ್ಸು ತನಗೆ ತಾನೇ ಹುಟ್ಟಿತು. ಅವನು ಕೇಳಿದ್ದಲ್ಲ. ಬಯಸಿದ್ದೂ ಅಲ್ಲ.

ಒಂದು ದಿನ ಅವನೇ ಎಂದ: 'ಕುಂತೀ, ನಿಮ್ಮ ಲೋಕದಲ್ಲಿ ಎಲ್ಲ ಹೆಂಡತಿಯರೂ ಗಂಡನಿಗೆ ಹೀಗೆಯೇ ಮಾಡುತ್ತಾರೆಯೆ?'

'ನಿಮ್ಮಲ್ಲಿ?'

'ಒಬ್ಬನೇ ಗಂಡ ಅಂತ ನೀವು ಹೀಗೆ ಮಾಡುತ್ತೀರಿ ಅಲ್ಲವೆ? ರಾತ್ರಿಗೆ ತನಗೆ ಯಾವ ಗಂಡ ಬರುತ್ತಾನೊ. ಯಾವ ಹೆಂಡತಿ ಬರುತ್ತಾಳೋ ನಮ್ಮಲ್ಲಿ ಯಾರಿಗೂ ಗೊತ್ತಿರುವುದಿಲ್ಲ. ನಮ್ಮ ಹೆಂಗಸರು ಸುಖಕ್ಕೆ ತಗಾದೆ ಮಾಡುತ್ತಾರೆ. ನಿನ್ನ ಹಾಗೆ ಸೇವೆ ಮಾಡುವುದಿಲ್ಲ' ಅಂದ. ಬರೀ ಅಂದದ್ದಲ್ಲ. ಅವನ ಪ್ರೀತಿ ಉತ್ಕಟವಾಯಿತು. 'ನಿನ್ನ ಜೊತೆ ಇರುವಷ್ಟು ದಿನ ಮಾತ್ರ ನನ್ನ ಜೀವನದ ಪುಣ್ಯಕಾಲ' ಎಂದು ಪ್ರತಿ ಸಲ್ಲಿಸಿದ.

ಓಕರಿಕೆ ಶುರುವಾಯಿತು. ಎಷ್ಟು ಹಿಗ್ಗು ನನಗೆ. ಒಂದು ಬೆಳಗಿನ ಜಾವವೇ ಹಾಗಾಯಿತು.

ಡಾ. ಭೈರಪ್ಪನವರ ಕಾದಂಬರಿಗಳು

ಧರ್ಮಶ್ರೀ
ದೂರ ಸರಿದರು
ವಂಶವೃಕ್ಷ
ಮತದಾನ
ಜಲಪಾತ
ನಾಯಿ ನೆರಳು
ತಬ್ಬಲಿಯು ನೀನಾದೆ ಮಗನೆ
ಗೃಹಭಂಗ
ನಿರಾಕರಣ
ಗ್ರಹಣ
ದಾಟು
ಅನ್ವೇಷಣೆ
ಪರ್ವ
ನೆಲೆ
ಸಾಕ್ಷಿ
ಅಂಚು
ತಂತು
ಸಾರ್ಥ

ಏಕಮೇವ ಪ್ರಕಾಶಕರು
ಸಾಹಿತ್ಯ ಭಂಡಾರ
ಜಂಗಮ ಮೇಸ್ತ್ರಿ ಗಲ್ಲಿ,
ಬಳೇಪೇಟೆ,
ಬೆಂಗಳೂರು – 560053.

ಈ ಸಂಕಲನದ ವಿಶೇಷತೆಗಳು:

- ಭೈರಪ್ಪನವರ ಐದು ಸುಪ್ರಸಿದ್ಧ ಕಾದಂಬರಿಗಳಿಂದ ಆಯ್ದ ರಸವತ್ತಾದ ಕಥಾನಕಗಳಿವೆ:
  ವಂಶವೃಕ್ಷ, ಸಾಕ್ಷಿ, ತಂತು, ದಾಟು, ಪರ್ವ

- ವಂಶಪರಂಪರೆಯ ಮರ್ಮ, ಕಾಲೇಜುಗಳಲ್ಲಿಯ ರ್‍ಯಾಗಿಂಗ್, ಹರಿಜನ ಸಮಸ್ಯೆ, ವ್ಯವಸಾಯ ಮನೋವೃತ್ತಿ, ಮಹಾಭಾರತ ಕಾಲದ ದಾಂಪತ್ಯ ಶಿಥಿಲತೆ - ಇಲ್ಲಿಯ ಕಥನ ವಸ್ತುಗಳು.

- ಕಥಾ ಸಂದರ್ಭ, ಸನ್ನಿವೇಶ ಮತ್ತು ಪಾತ್ರ, ಇವುಗಳಲ್ಲಿ ವೈವಿಧ್ಯ ಇರುವುದು ಇದರ ಇನ್ನೊಂದು ವೈಶಿಷ್ಟ್ಯ.

- ಒಂದೊಂದು ಕಥಾನಕವೂ ತನ್ನಷ್ಟಕ್ಕೆ ಪರಿಪೂರ್ಣ.

- ಭೈರಪ್ಪನವರ ಸೃಜನಶೀಲತೆಯನ್ನು ಅರಿಯಲು ಇದೊಂದು ಸದವಕಾಶ.